ವಿಶ್ವವಾಣಿ
ವಿಶ್ವಾಸವೇ ವಿಶ್ವ

ಪಹಲ್ಗಾಮ್ ದಾಳಿಯಲ್ಲಿ ಮಡಿದವರ ಆತ್ಮಕ್ಕೆ ಶಾಂತಿ
ಶುರುವಾಯ್ತು 2ನೇ ಸುತ್ತಿನ ಕ್ರಾಂತಿ

ಕಳೆದ 4 ದಿನಗಳಿಂದ ನಡೆಯುತ್ತಿದ್ದ ಅಘೋಷಿತ ಕದನಕ್ಕೆ ಸಂಜೆ 5 ಗಂಟೆ ವೇಳೆ ವಿರಾಮ ಘೋಷಣೆ
ಮೂರೇ ಗಂಟೆಗಳಲ್ಲಿ ಗಡಿಯುದ್ದಕ್ಕೂ ಡ್ರೋನ್ ದಾಳಿ ಮೂಲಕ ಉದ್ದಟತನ ಮೆರೆದ ಪಾಕಿಸ್ತಾನ

ವಿರಾಮ ಇಲ್ಲ ಆರಾಮ

ದೆಹಲಿ: ಭಾರತ-ಪಾಕಿಸ್ತಾನ ನಡುವೆ ಕಳೆದ ನಾಲ್ಕು ದಿನಗಳಿಂದ ನಡೆಯುತ್ತಿದ್ದ ಅಘೋಷಿತ ಯುದ್ಧಕ್ಕೆ ಕದನ ವಿರಾಮ ಘೋಷಿಸಿ, ಮೂರು ಗಂಟೆ ಕಳೆಯುವ ಮೊದಲೇ ಪಾಕಿಸ್ತಾನ ಈ ವಿರಾಮ ಉಲ್ಲಂಘನೆ ಮಾಡಿ ಗಡಿಯುದ್ದಕ್ಕೂ ಡ್ರೋನ್ ದಾಳಿ ನಡೆಸಿ ಉದ್ದಟತನ ಮೆರೆದಿದೆ.

ಶುಕ್ರವಾರ ರಾತ್ರಿ ಹಾಗೂ ಶನಿವಾರ ಮುಂಜಾನೆ ಭಾರತ ವಾಯು ಸೇನೆಯಿಂದ ಭಾರಿ ದಾಳಿಗೆ ಬೆಚ್ಚಿ, ಅಮೆರಿಕ ಮೂಲಕ ಕದನ ವಿರಾಮದ ಪ್ರಸ್ತಾಪಕ್ಕೆ ಒತ್ತಡವನ್ನು ಪಾಕಿಸ್ತಾನ ಹೇರಿತ್ತು. ಇದರೊಂದಿಗೆ ಭಾರತದ ಸೇನೆಯೊಂದಿಗೆ ಪಾಕಿಸ್ತಾನದ ಸೇನಾಧಿಕಾರಿಗಳು ಚರ್ಚಿಸಿ, ಉಭಯ ದೇಶಗಳಿಂದ ವಾಯು, ಜಲ ಹಾಗೂ ಭೂಮಾರ್ಗದಿಂದ ಯಾವುದೇ ದಾಳಿ ಮಾಡದಂತೆ ಕದನ ವಿರಾಮವನ್ನು ಘೋಷಿಸಿತ್ತು. ಮೇ 12ಕ್ಕೆ ಸೇನಾಧಿಕಾರಿಗಳ ಸಭೆಗೆ ಒಪ್ಪಿಗೆ, ಭಾರತ ಕದನ ವಿರಾಮಕ್ಕೆ ಒಪ್ಪಿತ್ತು. ಆದರೆ ಕದನ ವಿರಾಮ ಘೋಷಣೆಯಾದ ಮೂರು ಗಂಟೆ ಕಳೆಯುವ ಮೊದಲೇ ಜಮ್ಮು, ರಾಜಸ್ಥಾನ, ಪಂಜಾಬ್‌ನ ಹಲವು ನಗರಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುವ ಮೂಲಕ ಕದನ ವಿರಾಮವನ್ನು ಉಲ್ಲಂಘಿಸಿದೆ. ಕದನ ವಿರಾಮದ ಹೊರತಾಗಿಯೂ ಭಾರತೀಯ ಸೇನೆ ಕ್ಷಿಪಣಿ ರಕ್ಷಣಾ ದಾಳಿ ವ್ಯವಸ್ಥೆಯನ್ನು ಸಕ್ರಿಯವಾಗಿರಿಸಿಕೊಂಡಿದ್ದರಿಂದ ಪಾಕಿಸ್ತಾನದಿಂದ ಬಂದಿರುವ ಡ್ರೋನ್ ಹಾಗೂ ಕ್ಷಿಪಣಿಗಳನ್ನು ಆಗಸದಲ್ಲಿಯೇ ಹೊಡೆದುರುಳಿಸಿವೆ.

ಸಂಜೆ 5ಕ್ಕೆ ಕದನ ವಿರಾಮ

ಇದಕ್ಕೂ ಮೊದಲು ವಿದೇಶಾಂಗ ಇಲಾಖೆ ಕಾರ್ಯದರ್ಶಿ ವಿಕ್ರಮ ಮಿಸ್ರಿ ಸುದ್ದಿಗೋಷ್ಠಿ ನಡೆಸಿ, ಭಾರತ ಮತ್ತು ಪಾಕಿಸ್ತಾನ ಪರಸ್ಪರ ಒಪ್ಪಿಗೆ ಮೇರೆಗೆ ಶನಿವಾರ ಮಧ್ಯಾಹ್ನ 5 ರಿಂದ ಎಲ್ಲ ರೀತಿಯ ದಾಳಿಗಳನ್ನು ಸ್ಥಗಿತಗೊಳಿಸುತ್ತಿದ್ದೇವೆ. ಪಾಕಿಸ್ತಾನ ಸೇನೆಯ ಮಹಾನಿರ್ದೇಶಕರು ಭಾರತದ ಮಹಾನಿರ್ದೇಶಕರಿಗೆ ಮಧ್ಯಾಹ್ನ 3.35ಕ್ಕೆ ಕರೆ ಮಾಡಿ ಮಾತನಾಡಿದ್ದು, ಇಬ್ಬರು ಎಲ್ಲ ರೀತಿಯ ದಾಳಿ ಹಾಗೂ ಸೇನಾ ಕಾರ್ಯಾಚರಣೆ ನಿಲ್ಲಿಸಲು ಒಪ್ಪಿಕೊಂಡಿದ್ದಾರೆ. ಸಂಜೆ 5 ಗಂಟೆಯಿಂದ ಭೂಮಿ, ವಾಯು ಮತ್ತು ಸಾಗರದ ಮೂಲಕ ಯಾವುದೇ ರೀತಿಯ ದಾಳಿ ನಡೆಸದಿರಲು ಎರಡೂ ದೇಶಗಳು ಒಪ್ಪಿಕೊಂಡಿವೆ. ಉಭಯ ದೇಶಗಳ ಸೇನಾ ಮಹಾ ನಿರ್ದೇಶಕರು ಮೇ 12ರಂದು ಮಧ್ಯಾಹ್ನ 12ಕ್ಕೆ ಮಾತುಕತೆ ನಡೆಸಲಿದ್ದಾರೆ ಎಂದು ತಿಳಿಸಿದ್ದರು.

ಭಾರತ ಮತ್ತು ಪಾಕಿಸ್ತಾನ ಗುಂಡಿನ ಚಕಮಕಿ ಮತ್ತು ಮಿಲಿಟರಿ ಕ್ರಮಗಳನ್ನು ನಿಲ್ಲಿಸಲು ಒಪ್ಪಿಕೊಂಡಿವೆ. ಆದರೆ ಭಾರತವು ಭಯೋತ್ಪಾದನೆಯ ವಿರುದ್ಧ ಕಠಿಣ ನಿಲುವು ಹೊಂದಿದೆ. ಭಯೋತ್ಪಾದನೆ ವಿರುದ್ಧದ ನಿಲುವು ಬದಲಾಗುವುದಿಲ್ಲ.

- ಡಾ.ಎಸ್.ಜೈಶಂಕರ್, ವಿದೇಶಾಂಗ ಸಚಿವ

ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷಕ್ಕೆ ವಿರಾಮ ಘೋಷಣೆಯ ನಂತರವೂ ಕಾಶ್ಮೀರದಲ್ಲಿ ಸ್ಫೋಟದ ಶಬ್ದ ಕೇಳಿಬಂದಿದೆ. ಶ್ರೀನಗರದ ಸುತ್ತಮುತ್ತ ಸ್ಫೋಟದ ಶಬ್ದಗಳು ಮೊಳಗುತ್ತಲೇ ಇವೆ. ಇದೆಂಥ ಅವಸ್ಥೆ.

-ಒಮರ್ ಅಬ್ದುಲ್ಲಾ, ಸಿಎಂ ಜಮ್ಮು-ಕಾಶ್ಮೀರ

ಯಾವುದೇ ಷರತ್ತುಗಳಿಲ್ಲ

ಕದನ ವಿರಾಮಕ್ಕೆ ಪೂರ್ವ ಅಥವಾ ನಂತರದ ಯಾವುದೇ ಷರತ್ತುಗಳಿಲ್ಲ. ಬದಲಿಗೆ ಪಾಕಿಸ್ತಾನದಿಂದಲೇ ಈ ಕದನ ವಿರಾಮಕ್ಕೆ ಕರೆ ಬಂದಿದೆ ಎಂದು ವಿದೇಶಾಂಗ ಇಲಾಖೆ ಸ್ಪಷ್ಟಪಡಿಸಿದೆ. ಅಲ್ಲದೆ, ಸೇನಾ ಸಂಘರ್ಷಕ್ಕೂ ಮುನ್ನ ಅಂದರೆ ಪಹಲ್ಗಾಮ್ ಉಗ್ರ ದಾಳಿ ಬಳಿಕ ಭಾರತ ಘೋಷಿಸಿದ್ದ ಸಿಂಧೂ ಜಲ ಒಪ್ಪಂದ ಅಮಾನತು ಮುಂದುವರಿಯಲಿದೆ ಎಂದೂ ಸ್ಪಷ್ಟಪಡಿಸಿದೆ.

ಬಾಲ ಬಿಚ್ಚಿದರೆ ಸುಮ್ಮಿರಲ್ಲ

ಕದನ ವಿರಾಮದ ಬೆನ್ನಲ್ಲೇ ಕಮಾಂಡೋ ರಘು ಆರ್. ನಾಯರ್, ಕರ್ನಲ್ ಸೋಫಿಯಾ ಖುರೇಷಿ, ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ್ದು, ಪಾಕಿಸ್ತಾನ ಬಾಲ ಬಿಚ್ಚಿದರೆ ನಾವು ಸುಮ್ಮನಿರಲ್ಲ. ನಮ್ಮ 3 ಪಡೆಗಳು ಕಾರ್ಯಾಚರಣೆಗೆ ರೆಡಿಯಾಗಿರುತ್ತವೆ ಎಂದು ಪಾಕಿಸ್ತಾನಕ್ಕೆ ನೇರ ಎಚ್ಚರಿಕೆ ನೀಡ್ದಾರೆ.

ಮಾತುಕತೆಗೆ ಬಂದ ಪಾಕಿಸ್ತಾನ

ಕದನ ವಿರಾಮಕ್ಕೆ ಒಲವು ತೋರಿಸಿ ಮೊದಲು ಮಾತುಕತೆಗೆ ಬಂದಿದ್ದು ಪಾಕಿಸ್ತಾನ. ಪಾಕ್‌ನ ಡಿಜಿಎಂಒ (ಸೇನಾ ಕಾರ್ಯಾಚರಣೆಗಳ ಮಹಾನಿರ್ದೇಶಕರು) ಭಾರತದ ಡಿಜಿಎಂಒಗೆ ಮಧ್ಯಾಹ್ನ 3.35ಕ್ಕೆ ಕರೆ ಮಾಡಿ ಕದನ ವಿರಾಮಕ್ಕೆ ಮನವಿ ಮಾಡಿದರು. ಈ ವೇಳೆ ಎರಡೂ ಕಡೆಯವರು ಮಾತುಕತೆ ನಡೆಸಿ, ಯುದ್ಧವನ್ನು ನಿಲ್ಲಿಸುವ ನಿರ್ಧಾರಕ್ಕೆ ಬಂದಿದ್ದರು.

ಪಾಕ್ ಮೆತ್ತಗಾಗಲು 5 ಕಾರಣಗಳು

1. ಮೇ 9ರಂದು ತಡರಾತ್ರಿ, ಭಾರತದ ಏರ್‌ಫೋರ್ಸ್ ನಡೆಸಿದ ವೈಮಾನಿಕ ದಾಳಿಯು ಪಾಕಿಸ್ತಾನವನ್ನು ಬೆಚ್ಚಿ ಬೀಳಿಸುವಂತೆ ಮಾಡಿತು. ಪಾಕಿಸ್ತಾನದ ಡ್ರೋನ್ ಅಥವಾ ಕ್ಷಿಪಣಿಗಳು, ಸರಿಯಾಗಿ ಭಾರತದ ಗಡಿಯನ್ನು ದಾಟಲು ಆಗಿರಲಿಲ್ಲ. ಆದರೆ, ಭಾರತದ ಮಿಲಿಟರಿಗಳು ಪಾಕ್ ನೆಲದಲ್ಲಿ ಸಾಕಷ್ಟು ಡ್ಯಾಮೇಜ್ ಮಾಡಿದ್ದವು.

2. ರಾಜಧಾನಿ ಇಸ್ಲಾಮಾಬಾದ್ ಬಳಿಯ ಪ್ರಮುಖ ವಾಯುನೆಲೆ ಸೇರಿದಂತೆ, ಪಾಕಿಸ್ತಾನದ ನಾಲ್ಕು ಕಡೆ ಕ್ಷಿಪಣಿ ದಾಳಿಯನ್ನು ಭಾರತದ ವಾಯುಪಡೆ ನಡೆಸಿತ್ತು. ನೂರ್ ಖಾನ್ , ಮುರಿಯಾ ಮತ್ತು ರಫೀಕಿ ವಾಯುನೆಲೆಗಳನ್ನು ಗುರಿಯಾಗಿಸಿ ಭಾರತ ದಾಳಿ ನಡೆಸಿತ್ತು. ಇದನ್ನು, ಪಾಕ್ ಸೇನೆಯು ಕೂಡ ಒಪ್ಪಿಕೊಂಡಿತ್ತು. ಈ ವಿದ್ಯಮಾನ, ಪಾಕಿಸ್ತಾನ ಸರಕಾರ ಮತ್ತು ಸೇನೆಯನ್ನು ಬೆಚ್ಚಿ ಬೀಳಿಸುವಂತೆ ಮಾಡಿತ್ತು.

3. ನಮ್ಮ ನೆಲದ ಮೇಲೆ ನಡೆಯುವ ಒಂದು ದಾಳಿಯೂ ಯುದ್ಧಕ್ಕೆ ನಾಂದಿ ಎಂದು ಭಾರತ ಸರಕಾರ, ನೇರವಾಗಿ ಪಾಕಿಸ್ತಾನ ಸರಕಾರಕ್ಕೆ ಎಚ್ಚರಿಕೆಯನ್ನು ನೀಡಿತು. ಜತೆಗೆ, ಮುಂದಿನ ದಿನಗಳಲ್ಲಿ ಭಾರತದ ನೆಲದಲ್ಲಿ ನಡೆಯುವ ಯಾವುದೇ ಉಗ್ರ ಚಟುವಟಿಕೆಗಳು, ನಮ್ಮ ವಿರುದ್ಧದ ಯುದ್ಧದ ಕೃತ್ಯ ಎಂದು ಪರಿಗಣಿಸಲಾಗುವುದು ಎಂದು ಭಾರತ ಸರಕಾರ ಎಚ್ಚರಿಕೆ ನೀಡಿತ್ತು.

4. ಪಾಕಿಸ್ತಾನ ಆಂತರಿಕವಾಗಿ ಹಲವು ಸಮಸ್ಯೆಗಳನ್ನು ಎದುರಿಸುತ್ತಿದೆ. ಅಲ್ಲಿನ ಬಹುದೊಡ್ಡ ಪ್ರಾಂತ್ಯವಾದ ಬಲೂಚಿಸ್ತಾನ ಭಾಗದ ಬಂಡುಕೋರರು, ಪಾಕ್ ಸರಕಾರಕ್ಕೆ ದಿನದಿಂದ ದಿನಕ್ಕೆ ದೊಡ್ಡ ತಲೆನೋವು ಆಗುತ್ತಿದ್ದಾರೆ. ಭಾರತ ಮತ್ತು ಪಾಕಿಸ್ತಾನದ ಸಂಘರ್ಷದ ನಡುವೆ, ಸೇನೆಯ ಮೇಲೆ ಬಲೂಚಿ ಪಡೆಗಳು ನಡೆಸುತ್ತಿರುವ ದಾಳಿಯಿಂದ ಪಾಕ್ ಸರಕಾರ ಬೆಚ್ಚಿಬೀಳುತ್ತಿದೆ.

5. ತಾಲಿಬಾನ್ ಸರಕಾರವೂ ಪಾಕಿಸ್ತಾನದ ವಿರುದ್ಧ ಕಾಲುಕರೆದು ಜಗಳಕ್ಕೆ ಬರುತ್ತಿದೆ. ಬಲೂಚಿ ಲಿಬರೇಶನ್ ಆರ್ಮಿ ಮತ್ತು ತಾಲಿಬಾನ್ ಸರಕಾರ, ಭಾರತದ ಜತೆಗೆ ಉತ್ತಮ ಬಾಂಧವ್ಯ ಹೊಂದಿದೆ ಎನ್ನಲಾಗಿದೆ. ಇದಕ್ಕಿಂತ ಹೆಚ್ಚಾಗಿ, ಅಲ್ಲಿನ ಆರ್ಥಿಕತೆ ತೀರಾ ಹದಗೆಟ್ಟಿದೆ ಎಂದು ಅಲ್ಲಿನ ಸರಕಾರವೇ ಒಪ್ಪಿಕೊಂಡಿದೆ. ಇಂತಹ ಸಮಯದಲ್ಲಿ ಪಾಕಿಸ್ತಾನಕ್ಕೆ, ಭಾರತದ ಜತೆ ಯಾವುದೇ ಮನಸ್ತಾಪ ಬೇಕಿರಲಿಲ್ಲ.

ಸೊಂಪಾದ ಪುಟಗಳು

ಜಪಾನಿನ ಯಶಸ್ಸಿಗೆ ನೈತಿಕ ಬೋಧೆಯೇ ಮುಖ್ಯ ಕಾರಣ – ಇದೇ ಅಂತರಂಗ ಸುದ್ದಿ, ವಿಶ್ವೇಶ್ವರ ಭಟ್ 6
ನರೆದಲೆಗ ಮತ್ತು ವ್ರಿಹಿಗಳಲ್ಲಿ ಶ್ರೇಷ್ಠರು ಯಾರು? – ವಿದ್ಯಮಾನ, ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ 7



ದಾರಿದೀಪೋಕ್ತಿ

ಪ್ರತಿಯೊಬ್ಬರ ಮಾತುಗಳನ್ನೂ ಕೇಳಬೇಕು. ಪ್ರತಿಯೊಬ್ಬರಿಂದಲೂ ಕಲಿಯಬೇಕು. ನಮಗೆ ಎಲ್ಲ ಸಂಗತಿಗಳೂ ಗೊತ್ತಿರುವುದಿಲ್ಲ. ಪ್ರತಿಯೊಬ್ಬರಿಗೂ ನಮಗೆ ಗೊತ್ತಿಲ್ಲದ ಕೆಲವು ವಿಷಯಗಳಾದರೂ ಗೊತ್ತಿರುತ್ತವೆ. ಕೇಳುವುದರಿಂದ ಮತ್ತು ಮಾತಾಡುವುದರಿಂದ ಹೊಸ ಸಂಗತಿಗಳನ್ನು ತಿಳಿದುಕೊಳ್ಳಬಹುದು.

ವಕ್ರತುಂಡೋಕ್ತಿ

ಆತ್ಮವಿಶ್ವಾಸ ಮತ್ತು ಮೂರ್ಖತನ ಅಪಾಯಕಾರಿ ಜತೆಗಾರರು. ಹೆಚ್ಚಿನ ಸಂದರ್ಭಗಳಲ್ಲಿ ಇವೆರಡೂ ಜತೆಯಲ್ಲಿಯೇ ಇರುತ್ತವೆ.

ಫನ್‌ತರಂಗ

- ರಘುಪತಿ ಶೃಂಗೇರಿ -

ರಫೆಲ್‌ನ ಆಟಿಕೆಗೆ ಮಣಸು ನಿಂಬೆ ಕಟ್ಟಿ ಭಾರತೀಯ ವಾಯುಸೇನೆಯನ್ನು ತಮಾಷೆ ಮಾಡಿದ್ದ ಕಾಂಗ್ರೆಸ್ ಮುಖಂಡ



ಯೂಸುಫ್ ಅಜರ್ ಹತ್ಯೆ

ದೆಹಲಿ: ಪಾಕಿಸ್ತಾನದ ಗಡಿಯಲ್ಲಿ ನೆಲೆಯೂರಿದ್ದ ಭಯೋತ್ಪಾದಕ ಸಂಘಟನೆಗಳನ್ನು ಗುರಿಯಾಗಿಸಿ ಭಾರತೀಯ ಸೇನೆ ನಡೆಸಿದ ಕಾರ್ಯಾಚರಣೆಯಲ್ಲಿ 1999ರ ಡಿಸೆಂಬರ್‌ನಲ್ಲಿ ನಡೆದಿದ್ದ ಐಸಿ-814 ವಿಮಾನ ಅಪಹರಣ ಪ್ರಕರಣದ ರೂವಾರಿಯೂ ಆದ ಜೈಷ್ ಎ ಮೊಹಮದ್ ಸಂಘಟನೆಯ ಮುಖ್ಯಸ್ಥ ಮಸೂದ್ ಅಜರ್ ಸೋದರ ಯೂಸುಫ್ ಅಜರ್ (50) ಹತನಾಗಿದ್ದಾನೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ವಿಮಾನ ಅಪಹರಣಕ್ಕೂ ಒಂದು ವರ್ಷ ಮುಂಚೆ 1998ರಲ್ಲಿ ನಕಲಿ ಪಾಸ್‌ಪೋರ್ಟ್ ಪಡೆದಿದ್ದ ಈತ ವಿಮಾನ ಅಪಹರಿಸಿದ್ದ. ಇದಕ್ಕೆ ಅಬ್ದುಲ್ ಲತೀಫ್ ಎಂಬಾತ ನೆರವಾಗಿದ್ದ. ಯೂಸುಫ್ ವಿರುದ್ಧ ಇಂಟರ್‌ಪೋಲ್ 2002ರಲ್ಲಿ ರೆಡ್ ನೋಟಿಸ್ ಜಾರಿ ಮಾಡಿತ್ತು. ಪಾಕಿಸ್ತಾನಕ್ಕೆ ಭಾರತ ನೀಡಿದ್ದ ಮೋಸ್ಟ್ ವಾಂಟೆಡ್ ಭಯೋತ್ಪಾದಕರ ಪಟ್ಟಿಯಲ್ಲಿ ಈತನ ಹೆಸರು ಸೇರಿಸಲಾಗಿತ್ತು. ವಿಮಾನ ಅಪಹರಣ ನಡೆದ 26 ವರ್ಷಗಳ ನಂತರ ಯೂಸುಫ ಅಜರ್ ಸೇನಾ ಕಾರ್ಯಾಚರಣೆಯಲ್ಲಿ ಹತನಾಗಿದ್ದಾನೆ.

ಉಗ್ರ ಕೃತ್ಯ ಯುದ್ಧಕ್ಕೆ ಸಮ

ದೆಹಲಿ: ಯುದ್ಧ ವಿರಾಮ ಘೋಷಣೆಗೂ ಮುನ್ನ ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋಬಾಲ್, ಮೂರೂ ಪಡೆಗಳು ಮುಖ್ಯಸ್ಥರು ಮತ್ತು ಸೇನಾ ಪಡೆಗಳ ಮುಖ್ಯಸ್ಥ ಅನಿಲ್ ಚೌಹಾಣ್ ಅವರೊಂದಿಗೆ ಪ್ರಧಾನಿ ನರೇಂದ್ರ ಮೋದಿ ಚರ್ಚೆ ನಡೆಸಿದ್ದು, ಭಾರತದಲ್ಲಿ ಭವಿಷ್ಯದಲ್ಲಿ ನಡೆಯುವ ಯಾವುದೇ ಭಯೋತ್ಪಾದಕ ಕೃತ್ಯವನ್ನು ದೇಶದ ವಿರುದ್ಧದ ಯುದ್ಧ ಕೃತ್ಯ ಎಂದು ಪರಿಗಣಿಸಲಾಗುತ್ತದೆ ಮತ್ತು ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಲಾಗುತ್ತದೆ ಎಂಬ ನಿರ್ಧಾರ ಕೈಗೊಳ್ಳಲಾಗಿದೆ.

ಐಪಿಎಲ್ ಮುಂದುವರಿಕೆ

ದೆಹಲಿ: ಭಾರತ ಮತ್ತು ಪಾಕಿಸ್ತಾನ ನಡುವಿನ ಯುದ್ಧದ ಸನ್ನಿವೇಶದ ಹಿನ್ನೆಲೆಯಲ್ಲಿ ವಾರದ ಮಟ್ಟಿಗೆ ಸ್ಥಗಿತಗೊಂಡಿದ್ದ ಐಪಿಎಲ್ ಪಂದ್ಯಗಳನ್ನು ಪುನರಾರಂಭಿಸಲು ಐಪಿಎಲ್ ಆಡಳಿತ ಮಂಡಳಿ ಹಾಗೂ ಬಿಸಿಸಿಐ ಸಜ್ಜಾಗಿವೆ. ಉಳಿದ ಪಂದ್ಯಗಳಿಗಾಗಿ ಬೆಂಗಳೂರು, ಚೆನ್ನೈ ಮತ್ತು ಹೈದರಾಬಾದ್ ನಗರಗಳನ್ನು ಆಯ್ಕೆ ಮಾಡಿದೆ. ಒಟ್ಟು 12 ಲೀಗ್ ಪಂದ್ಯಗಳು ಮತ್ತು ನಾಲ್ಕು ಪ್ಲೇಆಫ್‌ಗಳು ಉಳಿದಿವೆ.

ಡ್ರೋನ್ ಉರುಳಿಸಿದ ಭಾರತೀಯ ಸೇನೆ

ಅಮೃತಸರ: ಅಮೃತಸರ ಮತ್ತು ದೆಹಲಿಯನ್ನು ಗುರಿಯಾಗಿಸಿಕೊಂಡು ಅಂತಾರಾಷ್ಟ್ರೀಯ ಗಡಿಯಲ್ಲಿ ಪಾಕಿಸ್ತಾನ ಹಾರಿಸಿದ ಕಾಮಿಕೇಜ್ ಡ್ರೋನ್‌ಗಳನ್ನು ಭಾರತೀಯ ಸೇನೆಯ ವಾಯು ರಕ್ಷಣಾ (ಎಡಿ) ಪಡೆ ಶನಿವಾರ ಬೆಳಗಿನ ಜಾವ ಯಶಸ್ವಿಯಾಗಿ ಹೊಡೆದುರುಳಿಸಿದೆ ಎಂದು ರಕ್ಷಣಾ ಮೂಲಗಳು ತಿಳಿಸಿವೆ. ಜನನಿಬಿಡ ಪ್ರದೇಶಗಳನ್ನು ಗುರಿಯಾಗಿಸಿ, ಬೈಕರ್ ಯಿಹಾ ಐಐಐ ಮಾದರಿಗಳೆಂದು ಗುರುತಿಸಲಾದ ಡ್ರೋನ್‌ಗಳನ್ನು ಬೆಳಗ್ಗೆ 5 ಗಂಟೆ ಸುಮಾರಿಗೆ ಪಾಕ್ ಹಾರಿಸಿತ್ತು. ತ್ವರಿತವಾಗಿ ಪ್ರತಿಕ್ರಿಯಿಸಿದ ಭಾರತೀಯ ಸೇನೆಯ ವಾಯು ರಕ್ಷಣಾ (ಎಡಿ) ಪಡೆಗಳು, ಡ್ರೋನ್‌ಗಳು ಭಾರತೀಯ ವಾಯುಪ್ರದೇಶವನ್ನು ಪ್ರವೇಶಿಸಿದ ಕೆಲವೇ ಸೆಕೆಂಡುಗಳಲ್ಲಿ ಅವುಗಳನ್ನು ಪತ್ತೆಹಚ್ಚಿ ನಾಶಪಡಿಸಿತು ಎಂದು ಮೂಲಗಳು ತಿಳಿಸಿವೆ. ಹೆಚ್ಚಿನ ಸ್ಫೋಟಕ ಪೇಲೋಡ್‌ಗಳನ್ನು ಹೊತ್ತ ಡ್ರೋನ್‌ಗಳನ್ನು ಹೊಡೆದುರುಳಿಸಲಾಗಿದೆ. ಇದರಿಂದ ಯಾವುದೇ ಸಾವುನೋವುಗಳು ಅಥವಾ ನಾಗರಿಕ ಆಸ್ತಿಗೆ ಹಾನಿಯಾಗಿಲ್ಲ ಎಂದು ಮೂಲಗಳು ತಿಳಿಸಿವೆ.

ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಭದ್ರತೆಗೆ ಕ್ರಮ: ಪರಮೇಶ್ವರ

ರಾಜ್ಯದಲ್ಲಿ ಕಟ್ಟೆಚ್ಚರ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತ-ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಿಸಿದ ಮೂರು ಗಂಟೆಗಳಲ್ಲೇ ಮತ್ತೆ ಕದನ ವಿರಾಮ ಉಲ್ಲಂಘನೆಯಾದ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಕಟ್ಟೆಚ್ಚರ ವಹಿಸುವಂತೆ ಪೊಲೀಸರಿಗೆ ಸೂಚನೆ ನೀಡಲಾಗಿದೆ.

ಈ ಬಗ್ಗೆ ಶನಿವಾರ ಬೆಳಗ್ಗೆ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಭಾರತ- ಪಾಕಿಸ್ತಾನ ಉದ್ವಿಗ್ನ ಪರಿಸ್ಥಿತಿ ಹಿನ್ನೆಲೆ ರಾಜ್ಯದ ಸೂಕ್ಷ್ಮ ಪ್ರದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ಭದ್ರತಾ ಸಿಬ್ಬಂದಿ ಯನ್ನು ನಿಯೋಜಿಸುವ ಮೂಲಕ ಸುರಕ್ಷತೆ ಕೈಗೊಂಡಿದ್ದೇವೆ. ಕಾನೂನು ಸುವ್ಯವಸ್ಥೆಗಿಂತ ಹೆಚ್ಚಾಗಿ, ಯುದ್ಧ ಭೀತಿ ಇದೆ. ಗಡಿ ಪ್ರದೇಶದಲ್ಲಿ ಆಗುತ್ತಿರುವ ಚಟುವಟಿಕೆ ಗಳು, ಉಗ್ರರ ವಿರುದ್ಧ ಸೇನಾ ಪಡೆ ಕ್ರಮ ತೆಗೆದು ಕೊಂಡಿದೆ. ಈ ಪರಿಸ್ಥಿತಿ ಹೆಚ್ಚಾದರೆ ಯುದ್ಧದ ಪರಿಸ್ಥಿತಿ ಬರಬಹುದು ಎಂಬುದನ್ನು ಕೇಂದ್ರ ಸರಕಾರ ಎಲ್ಲ ರಾಜ್ಯ ಸರಕಾರಗಳಿಗೆ ಸೂಚನೆ ನೀಡಿದೆ. ಆ ಹಿನ್ನೆಲೆಯಲ್ಲಿ ಈಗಾಗಲೇ ಮುನ್ನೆಚ್ಚರಿಕೆ ಕ್ರಮ ಕೈಗೊಂಡಿದ್ದೇವೆ. ಯುದ್ಧದ ಸನ್ನಿವೇಶ ಎದುರಾಗುವ ಮುನ್ನ ಅಗತ್ಯವಾದ ಆಹಾರ, ಧಾನ್ಯ, ನೀರು, ಆಸ್ಪತ್ರೆಗಳನ್ನು ಸಜ್ಜು ಮಾಡಿಕೊಂಡಿದ್ದೇವೆ. ಅಂತಹ ಘಟನೆಗಳು ನಡೆದರೆ ಎದುರಿಸಲು ನಾವು ಸಿದ್ಧವಾಗಿರಬೇಕು ಎಂಬುದನ್ನು ಹೊರತುಪಡಿಸಿದರೆ ಅಂತಹ ಸನ್ನಿವೇಶ ಇಲ್ಲ ಎಂದರು.

→ 4

ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ (ರಿ)
KARNATAKA RAJYA CHALAVADI MAHASABHA (R)
ನೋಂದಣಿ ಸಂಖ್ಯೆ : 108/2000-2001
ನಂ. 12, 1ನೇ ಮಹಡಿ, ಮಾರುತಿ ನಿಲಯ, ಆರ್.ವಿ. ಲೇಔಟ್, ಕುಮಾರಕೃಪಾ ಪಶ್ಚಿಮ, ಬೆಂಗಳೂರು - 560 020
KCMS

ಸಮೀಕ್ಷೆಯಲ್ಲಿ ತಪ್ಪದೇ ಭಾಗವಹಿಸಿ

ಸಾಮಾಜಿಕ ನ್ಯಾಯದ ಹರಿಕಾರ, ಮಾನ್ಯ ಮುಖ್ಯಮಂತ್ರಿ ಶ್ರೀ ಸಿದ್ಧರಾಮಯ್ಯ ಅವರ ನೇತೃತ್ವದ ಸರ್ಕಾರವು ಒಳಮೀಸಲಾತಿ ವರ್ಗೀಕರಣಕ್ಕಾಗಿ ಅವಶ್ಯವಿರುವ ದತ್ತಾಂಶಗಳನ್ನು ಸಂಗ್ರಹಿಸಲು ಸಂಬಂಧಪಟ್ಟ ಜಾತಿಗಳ ಸಮೀಕ್ಷೆ ಮಾಡಲು ಆದೇಶಿಸಿರುವುದು ಸಂತೋಷದ ಸಂಗತಿ.

ಬಂಧುಗಳೇ, ಐತಿಹಾಸಿಕವಾಗಿ ಆದಿ ಕರ್ನಾಟಕ, ಆದಿ ದ್ರಾವಿಡ ಮತ್ತು ಆದಿ ಅಂದ್ರ ಇವು ಜಾತಿಗಳ ಹೆಸರುಗಳಲ್ಲ ಅನೇಕ ಜಾತಿಗಳ ಗುಂಪುಗಳಿಗೆ ನೀಡಿದ ಹೆಸರುಗಳಾಗಿರುತ್ತವೆ. ಅದ್ದರಿಂದ ಬಲಗೈ ಗುಂಪಿಗೆ ಸಂಬಂಧಿಸಿದ ನಿಮ್ಮ ಮೂಲ ಜಾತಿಯಾದ ಬಲಗೈ/ಛಲವಾದಿ/ಹೊಲಯ/ಮಹರ್/ಪರಯ್ಯ/ಮಾಲಾ/ಚನ್ನದಾಸರ, ಆದಿ ಆಂಧ್ರ, ಆದಿ, ದ್ರಾವಿಡ, ಆದಿ, ಕರ್ನಾಟಕ, ಆಡಿಯಾ (ಕೊಡಗು ಜಿಲ್ಲೆಯಲ್ಲಿ), ಅರೇ ಮಾಲಾ, ಅರ್ವಾ, ಮಾಲಾ, ಬೈರಾ, ಬಕುಡ, ಬಂಡಿ, ಬ್ಯಾಗಾರ, ಚಲ್‌ವಾದಿ, ಚನ್ನಯ್ಯ, ದಾಸರ್, ಹಳ್ಳೀರ್, ಹೋಲರ್, ವಲ್ಲಾರ್, ಹೊಲೇರ್, ಹೊಲೆಯ, ಹೊಲೆಯ ದಾಸರಿ, ತರಲ್, ದೇಗುಮೇಗು, ಮಾಲಾ ಮೈಲಾ, ಮಾಲಾ ದಾಸರಿ, ಮಾಲಾ ಹನ್ನೈ, ಮಾಲಾ ಜಂಗಮ, ಮಾಲಾ ಮಾಸ್ತಿ / ಮಾಸ್ತಿ, ಮಾಲಾ ಸಾಲೆ, ನೆಟ್ಕಣಿ, ಮಾಲಾ ಸನ್ಯಾಸಿ, ಮೇಘವಾಲ್, ಮೆಂಘಾವರ್, ಪರಾಯನ್, ವಳ್ಳುವಲನ್, ಪಲ್ಲಾರ್, ಮೊಗೇರ್, ಮುಕ್ರಿ, ಹಗೇರು, ಹಲ್‌ಸಾರ್/ ಹುಸ್‌ಲಾರ್/ ಹಲ್‌ಸವಾರ್, ಮಾರಿಲಾನ್ ಎಂದು ನಮೂದಿಸಿ.

ಮುಂದೆ ಸರ್ಕಾರವು ಒಳಮೀಸಲಾತಿಯನ್ನು ಜಾತಿ ಸಮೀಕ್ಷೆಯಲ್ಲಿ ದೊರಕಿದ ಜನಸಂಖ್ಯೆಗೆ ಅನುಗುಣವಾಗಿ ನೀಡುವುದರಿಂದ, ಸಮುದಾಯಕ್ಕೆ ಸೇರಿದ ಪ್ರತಿ ವ್ಯಕ್ತಿ ಮತ್ತು ಕುಟುಂಬವನ್ನು ಸಮೀಕ್ಷೆಗೆ ಒಳಪಡಿಸುವ ಜವಾಬ್ದಾರಿ ಇಡೀ ಸಮುದಾಯದ ಮೇಲಿದೆ.

ಒಂದು ವೇಳೆ ಮೂಲ ಜಾತಿ/ಉಪ ಜಾತಿಯನ್ನು ನಮೂದಿಸದ್ದಿದರೇ, ಬಲಗೈ ಗುಂಪಿಗೆ ಸಂಬಂಧಿಸಿದ ಜಾತಿಗಳ ಜನಸಂಖ್ಯೆಯಲ್ಲಿ ವ್ಯತ್ಯಾಸವಾಗಿ ನಮಗೆ ವಾಸ್ತವಿಕವಾಗಿ ದೊರಕಬೇಕಿರುವ ಮೀಸಲಾತಿ ಪ್ರಮಾಣದಲ್ಲಿ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಸರ್ಕಾರದಿಂದ ದೊರೆಯುತ್ತಿರುವ ಸೌಲಭ್ಯಗಳಾದ ಶಿಕ್ಷಣ, ಉದ್ಯೋಗ, ರಾಜಕೀಯ ಪ್ರಾತಿನಿಧ್ಯ, ಆರೋಗ್ಯ, ಕೃಷಿ, ತೋಟಗಾರಿಕೆ, ಕೈಗಾರಿಕೆ, ವಾಣಿಜ್ಯ, ಪಶುಸಂಗೋಪನೆ ಹಾಗೂ ಇನ್ನಿತರೆ ಕ್ಷೇತ್ರಗಳಲ್ಲಿ ಸಿಗುವ ಸೌಲಭ್ಯಗಳಿಂದ ನಾವು ಶಾಶ್ವತವಾಗಿ ವಂಚಿತರಾಗಬೇಕಾಗುತ್ತದೆ. ಇದರ ಪರಿಣಾಮದಿಂದ ನಮ್ಮ ಸಮುದಾಯದ ಮುಂದಿನ ಪೀಳಿಗೆ ಶತಶತಮಾನಗಳ ವರೆಗೆ ನಷ್ಟವನ್ನು ಅನುಭವಿಸಬೇಕಾಗುತ್ತದೆ. ಎಚ್ಚರವಿರಲಿ.....! ಆದ್ದರಿಂದ, ಕಡ್ಡಾಯವಾಗಿ ಸಮೀಕ್ಷೆಯಲ್ಲಿ ನಿಮ್ಮ ಮೂಲ ಜಾತಿಯನ್ನು ನಮೂದಿಸಿ.

ವಂದನೆಗಳೊಂದಿಗೆ,
ಸಿದ್ಧಯ್ಯ (IAS Rtd) ಅಧ್ಯಕ್ಷರು; ಶಿವರಾಮ್ ಟಿ.ಆರ್ ಕಾರ್ಯಕಾರಿ ಸಮಿತಿ ಸದಸ್ಯರು; ಹೆಚ್. ಎಸ್. ಲಂಗೇಶ್ ಕಾರ್ಯಕಾರಿ ಸಮಿತಿ ಸದಸ್ಯರು; ಮಹಾದೇವಯ್ಯ ಕಾರ್ಯಕಾರಿ ಸಮಿತಿ ಸದಸ್ಯರು; ಶಿವಣ್ಣ ಬಿ. ಕಾರ್ಯಕಾರಿ ಸಮಿತಿ ಸದಸ್ಯರು; ಶೀತಲ್ ಕಾಂಬ್ಳೆ ಕಾರ್ಯಕಾರಿ ಸಮಿತಿ ಸದಸ್ಯರು

ಹಂತಗಳು	ಸ್ವರೂಪ	ದಿನಾಂಕ
1	ಮನೆ ಮನೆಗೆ ಭೇಟಿ ನೀಡಿ ಗಣತಿ	ಮೇ 5 ರಿಂದ 17
2	ಮತಗಟ್ಟೆಗಳಲ್ಲಿ ವಿಶೇಷ ಶಿಬಿರ	ಮೇ 19 ರಿಂದ 21
3	ಆನ್‌ಲೈನ್ ಗಣತಿ/ಸ್ವಯಂಘೋಷಣೆ ಜಾತಿ ಪ್ರಮಾಣ ಪತ್ರದ ಆರ್.ಡಿ. ನಂ. ಕಡ್ಡಾಯ	ಮೇ 19 ರಿಂದ 23

ಪ್ರಕಟಣೆ: ಕರ್ನಾಟಕ ರಾಜ್ಯ ಛಲವಾದಿ ಮಹಾಸಭಾ (ರಿ). ರಾಮನಗರ ಜಿಲ್ಲಾ ಘಟಕ

ಆಪರೇಷನ್ ಸಿಂದೂರ

ಪಹಲ್ಗಾಮ್ ದಾಳಿಯಲ್ಲಿ ಮಡಿದವರ ಆತ್ಮಕ್ಕೆ ಶಾಂತಿ

ಶುರುವಾಯ್ತು 2ನೇ ಸುತ್ತಿನ ಕ್ರಾಂತಿ

ಭಾರತದ ರಕ್ಷಣಾ ಶಸ್ತ್ರಾಸ್ತ್ರಗಳ ಅಭಿವೃದ್ಧಿ ಕ್ಷೇತ್ರದ ವಿಜ್ಞಾನಿಗಳು ಸ್ವದೇಶದಲ್ಲೇ ಅಭಿವೃದ್ಧಿಪಡಿಸಿದ ಭಾರತದ ರಕ್ಷಣಾ ಪಡೆಗಳ ಪಾಲಿನ ಶಕ್ತಿಶಾಲಿ ಅಸ್ತ್ರ 'ಡ್ರೋನ್ ಪತ್ತೆ, ತಡೆ ಮತ್ತು ನಾಶ' ಚಟುವಟಿಕೆ ನಡೆಸುವ ಡಿ4 ವ್ಯವಸ್ಥೆ ಪಾಕಿಸ್ತಾನದ ಸೇನಾಪಡೆಗಳ ಪಾಲಿಗೆ ದೊಡ್ಡ ದುಃಸ್ವಪ್ನವಾಗಿದೆ. ಡಿ4 ಸಿಸ್ಟಂ ಅನ್ನು ಪ್ರಸ್ತುತ ಪಾಕಿಸ್ತಾನ ವಿರುದ್ಧದ ಯುದ್ಧದಲ್ಲಿ ಭಾರತದ ಸೇನಾಪಡೆಗಳು ಸಮರ್ಥವಾಗಿ ಬಳಸಿಕೊಳ್ಳುತ್ತಿವೆ. 'ಡ್ರೋನ್-ಡಿಟೆಕ್ಟ್, ಡಿಟರ್ ಮತ್ತು ಡೆಸ್ಟ್ರಾಯ್' ಎನ್ನುವುದರ ಸಂಕ್ಷಿಪ್ತ ರೂಪವಾಗಿ 'ಡಿ4' ಸಿಸ್ಟಂ ಎಂದು ಹೆಸರಿಡಲಾಗಿದೆ. ಡಿ4 ಅನ್ನು ಭಾರತದ ಮೂರೂ ಸಶಸ್ತ್ರ ಪಡೆಗಳಲ್ಲಿ ಯಶಸ್ವಿಯಾಗಿ ಬಳಸಲಾಗುತ್ತಿದೆ. ಡಿ4 ಸಾಧನವು 360-ಡಿಗ್ರಿ ಕೋನದಲ್ಲಿ ಕೆಲಸ ಮಾಡುತ್ತದೆ. ಸಣ್ಣ ಗಾತ್ರದ ಡ್ರೋನ್‌ಗಳನ್ನೂ ಗುರುತಿಸಿ ನಾಶಪಡಿಸಬಲ್ಲದಾಗಿದೆ.

ಡಿಆರ್‌ಡಿಒ ನಿರ್ಮಿತ ಡ್ರೋನ್ ವಿನಾಶದ ಡಿ4 ಸಿಸ್ಟಂ

ಪಾಕ್ ಪಾಲಿಗೆ ದುಃಸ್ವಪ್ನ...

● ಡಿಆರ್‌ಡಿಒ ಡಿ4 ವ್ಯವಸ್ಥೆ

'ರಕ್ಷಣಾ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆ' (ಡಿಆರ್‌ಡಿಒ) ದೇಶೀಯವಾಗಿಯೇ ಅಭಿವೃದ್ಧಿಪಡಿಸಿರುವ ಡ್ರೋನ್ ನಾಶಕ ರಕ್ಷಣಾ ವ್ಯವಸ್ಥೆ(ಡಿ4 ಸಿಸ್ಟಂ) ಪ್ರಸ್ತುತ ನಡೆದಿರುವ ಯುದ್ಧದಲ್ಲಿ ಪಾಕಿಸ್ತಾನ ಪ್ರಯೋಗಿಸುತ್ತಿರುವ ಡ್ರೋನ್ ದಾಳಿಯನ್ನು ಸಮರ್ಥವಾಗಿ ತಡೆಯಲು ನೆರವಾಗುತ್ತಿದೆ. ಡಿಆರ್‌ಡಿಒ ಅಭಿವೃದ್ಧಿಪಡಿಸಿರುವ 'ಡಿ4' ಡ್ರೋನ್ ವಿನಾಶಕ ಸಾಧನ, ಇಸ್ರೇಲ್‌ನ ಗಾಜಾದಲ್ಲಿನ ಹಮಾಸ್ ಉಗ್ರರು ಮತ್ತು ಯೆಮೆನ್‌ನ ಹೌತಿ ಉಗ್ರರ ಕ್ಷಿಪಣಿ, ಡ್ರೋನ್ ದಾಳಿಗಳನ್ನು ಸಮರ್ಥವಾಗಿ ತಡೆಯಲು ಇಸ್ರೇಲ್ ಸೇನಾಪಡೆಯು ಬಳಸುತ್ತಿರುವ ಅತಿ ವಿಶಿಷ್ಟವಾದ 'ಐರನ್ ಡೋಮ್ ಶೀಲ್ಡ್' ರೀತಿಯಲ್ಲೇ ಡ್ರೋನ್‌ಗಳನ್ನು ನಾಶಪಡಿಸುತ್ತದೆ ಎಂಬ ಹೆಗ್ಗಳಿಕೆ ಹೊಂದಿದೆ.

ಡ್ರೋನ್ ಸೇರಿದಂತೆ ಮಾನವ ರಹಿತ ವೈಮಾನಿಕ ವಾಹನಗಳ ಪತ್ತೆ, ತಡೆ ಮತ್ತು ವಿನಾಶ ಪಡಿಸುವಷ್ಟು ಸಾಮರ್ಥ್ಯದ ಯುದ್ಧ ಸಾಧನಗಳನ್ನು ಅಭಿವೃದ್ಧಿಪಡಿಸುವಲ್ಲಿ ಪರಿಣತಿ ಹೊಂದಿರುವ 4 ಪ್ರಯೋಗಾಲಯಗಳನ್ನು ಒಗ್ಗೂಡಿಸಿ ಈ ಬಹು ಸಂವೇದಕ ಸಾಧನವಾದ 'ಡಿ4' ಅನ್ನು ಡಿಆರ್‌ಡಿಒ ಮೂಲಕ ಅಭಿವೃದ್ಧಿಪಡಿಸಲಾಗಿದೆ. ಭಾರತದ 'ಡಿ4' ಸಾಧನ ಅತ್ಯಾಧುನಿಕ ವ್ಯವಸ್ಥೆಯಾಗಿದ್ದು, ಹಾರಾಟದಲ್ಲಿರುವಾಗಲೇ ಡ್ರೋನ್‌ಗಳನ್ನು ನಾಶಮಾಡಬಲ್ಲದಾಗಿದೆ.

● ಅತ್ಯಾಧುನಿಕ ವ್ಯವಸ್ಥೆ

ಶತ್ರು ರಾಷ್ಟ್ರಗಳನ್ನು ಗುರಿಯಾಗಿಸಿ ದಾಳಿ ನಡೆಸಲು, ರಾಡಾರ್ ಮತ್ತು ವಾಯು ರಕ್ಷಣಾ ಸಾಮರ್ಥ್ಯ ನಿರ್ಣಯಿಸಲು ಡ್ರೋನ್‌ಗಳು ಕಡಿಮೆ ವೆಚ್ಚದ ಮತ್ತು ಸುಲಭದ ಸಾಧನವಾಗಿವೆ. ಹಾಗಾಗಿಯೇ ಪಾಕಿಸ್ತಾನ, ಟರ್ಕಿಯಿಂದ ಪಡೆದಿರುವ ಡ್ರೋನ್‌ಗಳನ್ನೇ ಈಗಿನ ಯುದ್ಧದಲ್ಲಿ ಹೆಚ್ಚಾಗಿ ಬಳಸುತ್ತಿದೆ. ಆ ಮೂಲಕ ಭಾರತದ ವಾಯು ರಕ್ಷಣಾ ಶಸ್ತ್ರಾಸ್ತ್ರಗಳ ಸಂಗ್ರಹವನ್ನು ಖಾಲಿ ಮಾಡಿಸಲು ಸಂಚು ನಡೆಸಿದೆ ಎಂದೇ ವಿಶ್ಲೇಷಿಸಲಾಗುತ್ತಿದೆ. ಡಿ4 ವ್ಯವಸ್ಥೆಯಲ್ಲಿ ರಾಡಾರ್ ಮತ್ತು ರೇಡಿಯೊ ಆವರ್ತನ ಪತ್ತೆ ವ್ಯವಸ್ಥೆಗಳು ಮತ್ತು ಎಲೆಕ್ಟ್ರೋ-ಆಪ್ಟಿಕ್ ಐಡೆಂಟಿಫಿಕೇಶನ್ ಸಿಸ್ಟಮ್‌ಗಳ ಒಳಹರಿವಿನ ಸಂಯೋಜನೆಯಿದೆ. ಇವುಗಳಿಂದಲೇ ಡ್ರೋನ್‌ಗಳ ಪತ್ತೆ ಮತ್ತು ಗುರುತಿಸುವಿಕೆ ಸಾಧ್ಯವಾಗುತ್ತದೆ. ಡ್ರೋನ್‌ಗಳು ಮಾನವರಹಿತ ದಾಳಿ ಸಾಧನಗಳಾಗಿವೆ.

● ಪಾಕ್ ಸತತ ಡ್ರೋನ್ ದಾಳಿ

ಟರ್ಕಿ ದೇಶ ತಯಾರಿಸಿದ ಡ್ರೋನ್‌ಗಳನ್ನು ಬಳಸಿಕೊಂಡು ಪಾಕಿಸ್ತಾನದ ಸೇನಾಪಡೆಗಳು, ಭಾರತದ ಮೇಲೆ ದಾಳಿ ಮಾಡುತ್ತಿವೆ. ಮೇ 8ರಿಂದ 10ರವರೆಗೂ ಭಾರತದ ಗಡಿ ಸಮೀಪದ ಪ್ರದೇಶಗಳು, ರಾಜ್ಯಗಳ ಮೇಲೆ ಟರ್ಕಿಯ ಈ ಡ್ರೋನ್‌ಗಳನ್ನು ಬಳಸಿಕೊಂಡು ಪಾಕ್ ಸೇನೆ ದಾಳಿ ನಡೆಸುತ್ತಿದೆ. ಶನಿವಾರ ಕೂಡಾ ಟರ್ಕಿಯ ಈ ಡ್ರೋನ್‌ಗಳನ್ನು ಬಳಸಿಕೊಂಡು ಪಾಕ್ ದಾಳಿ ಮುಂದುವರಿಸಿದೆ.

● ಗಡಿ ರಾಜ್ಯಗಳಿಗೆ ಡ್ರೋನ್ ದಾಳಿ

ಪಾಕಿಸ್ತಾನ ಗಡಿ ಭಾಗದ ಹಲವು ರಾಜ್ಯಗಳ ಮೇಲೆ ಡ್ರೋನ್‌ಗಳನ್ನು ಬಳಸಿಕೊಂಡು ದಾಳಿ ನಡೆಸುವುದನ್ನೇ ಮುಖ್ಯ ಯುದ್ಧ ತಂತ್ರವಾಗಿ ರೂಢಿಸಿಕೊಂಡಿದೆ. ಜಮ್ಮು-ಕಾಶ್ಮೀರ, ರಾಜಸ್ತಾನ, ಪಂಜಾಬ್, ಗುಜರಾತ್, ಹರಿಯಾಣದ ವಿವಿಧ ಸ್ಥಳಿಗೆ ಶಸ್ತ್ರಸಜ್ಜಿತ ಡ್ರೋನ್‌ಗಳನ್ನು ರವಾನಿಸುತ್ತಿರುವ ಪಾಕ್ ಸೇನೆ, ಜನವಸತಿ ಪ್ರದೇಶಗಳು, ಆಸ್ಪತ್ರೆಗಳನ್ನು ಗುರಿಯಾಗಿಸಿ ದಾಳಿಗೆ ಹೊಂಚು ಹಾಕಿದೆ. ಆದರೆ, ಭಾರತದ ಸೇನಾಪಡೆಯಲ್ಲಿ ಡಿಆರ್‌ಡಿಒದ 'ಡಿ4' ಸಿಸ್ಟಂ ಇರುವುದರಿಂದ ಪಾಕ್ ಬಹುತೇಕ ಡ್ರೋನ್ ದಾಳಿಗಳನ್ನು ಅವು ಆಕಾಶದಲ್ಲಿ ಇರುವಾಗಲೇ ಕಂಡುಕೊಂಡು, ತಡೆದು, ಗುರಿಯಿಟ್ಟು ನಾಶಪಡಿಸಲಾಗುತ್ತಿದೆ.

● ಹಲವು ಲ್ಯಾಬ್‌ಗಳ ನೆರವು

'ಮೇಕ್ ಇನ್ ಇಂಡಿಯ' ಪರಿಕಲ್ಪನೆಯಡಿ ಭಾರತ್ ಎಲೆಕ್ಟ್ರಾನಿಕ್ಸ್ ಲಿ.(ಬಿಇಎಲ್) ಜತೆಗೂಡಿ

ದೇಶೀಯವಾಗಿಯೇ ತಯಾರಿಸಲಾಗುತ್ತಿದೆ. ಹೈದರಾಬಾದಿನ ಸೆಂಟರ್ ಫಾರ್ ಹೈ ಎನರ್ಜಿ ಸಿಸ್ಟಮ್ ಸೈನ್ಸಸ್ 'ಡಿ4' ಅಭಿವೃದ್ಧಿ ಕಾರ್ಯದಲ್ಲಿ ಡಿಆರ್‌ಡಿಒ ಜತೆಗೂಡಿ ಶ್ರಮಿಸಿದೆ. ಅಲ್ಲದೇ ಹಲವು ಲ್ಯಾಬ್‌ಗಳು ಡ್ರೋನ್ ವಿನಾಶಕಾರಿ ಸಾಧನದ ಅಭಿವೃದ್ಧಿಗೆ ಸಹಾಯ ಮಾಡಿವೆ. ಬೆಂಗಳೂರಿನ ಎಲೆಕ್ಟ್ರಾನಿಕ್ಸ್ ಮತ್ತು ರಾಡಾರ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್ಮೆಂಟ್, ಹೈದರಾಬಾದಿನ 'ಡಿಫೆನ್ಸ್ ಎಲೆಕ್ಟ್ರಾನಿಕ್ಸ್ ರಿಸರ್ಚ್ ಲ್ಯಾಬೊರೇಟರಿ' ಮತ್ತು 'ಹೈ ಎನರ್ಜಿ ಸಿಸ್ಟಮ್ಸ್ ಅಂಡ್ ಸೈನ್ಸಸ್ ಸೆಂಟರ್ ಹಾಗೂ ಡೆಹ್ರಾಡೂನ್‌ನ ಇನ್‌ಸ್ಟ್ರುಮೆಂಟ್ಸ್ ರಿಸರ್ಚ್ ಅಂಡ್ ಡೆವಲಪ್‌ಮೆಂಟ್ ಎಸ್ಟಾಬ್ಲಿಷ್‌ಮೆಂಟ್ ಸೇರಿವೆ.

● ರೇಡಿಯೊ ಫ್ರೀಕ್ವೆನ್ಸಿ ಜಾಮಿಂಗ್ ತಂತ್ರಜ್ಞಾನ

ಬಳಸಿಕೊಂಡು ಡ್ರೋನ್‌ಗಳನ್ನು ಗುರುತಿಸಿ ನಾಶಪಡಿಸುವ ವಿಧಾನವನ್ನು 'ಡಿ4' ಸಾಧನದಲ್ಲಿ ಅಳವಡಿಸಲಾಗಿದೆ. ಅಲ್ಲದೇ, 'ಗ್ಲೋಬಲ್ ನ್ಯಾವಿಗೇಷನ್ ಸ್ಯಾಟಲೈಟ್ ಸಿಸ್ಟಂ'(ಜಿಎನ್‌ಎಸ್‌ಎಸ್) ಬಳಸಿಕೊಂಡು ಜಾಮಿಂಗ್ ಪ್ರಕ್ರಿಯೆ ನಡೆಸಲಾಗುತ್ತದೆ. ಡ್ರೋನ್‌ಗಳನ್ನು ಗುರುತಿಸಲು 'ಗ್ಲೋಬಲ್ ಪೊಸಿಷನಿಂಗ್ ಸಿಸ್ಟಂ'(ಜಿಪಿಎಸ್) ಆಧರಿಸಿದ ಸ್ಪೂಫಿಂಗ್ ತಂತ್ರಜ್ಞಾನ ಬಳಸಲಾಗಿದೆ.

ಯುದ್ಧ: ಪ್ರಧಾನಿ ಮೋದಿ ನಿವಾಸದಲ್ಲಿ ಮಹತ್ವದ ಸಭೆ

ದೆಹಲಿ: ಭಾರತದ ಸೇನಾಪಡೆಗಳು ಶನಿವಾರ ನಸುಕಿನಲ್ಲೇ ಕ್ಷಿಪಣಿ ದಾಳಿ ನಡೆಸಿ ಪಾಕಿಸ್ತಾನದ 4 ವಾಯು ನೆಲೆಗಳನ್ನು ನಾಶಪಡಿಸಿವೆ. ಆ ಬಳಿಕ ಪ್ರಧಾನಿ ನರೇಂದ್ರ ಮೋದಿ ಅವರ ಅಧಿಕೃತ ದೆಹಲಿ ನಿವಾಸದಲ್ಲಿ ಸೇನಾಪಡೆಗಳ ಉನ್ನತ ಮಟ್ಟದ ಸಭೆ ನಡೆದಿದೆ.

ಭಾರತದ 26 ಸ್ಥಳಗಳ ಮೇಲೆ ಪಾಕಿಸ್ತಾನ ಶುಕ್ರವಾರ ರಾತ್ರಿ ದಾಳಿ ನಡೆಸಲು ಯತ್ನಿಸಿ ವಿಫಲವಾಗಿದೆ. ಆ ಬಳಿಕ ಭಾರತದ ಸೇನಾಪಡೆ ಶನಿವಾರ ನಸುಕಿನಲ್ಲೇ ಪಾಕ್‌ಗೆ ತಿರುಗೇಟು ನೀಡಿದೆ. ಪಾಕ್‌ನ ಪ್ರಮುಖ 8 ವಾಯುನೆಲೆಗಳ ಮೇಲೆ ಕ್ಷಿಪಣಿ, ಬಾಂಬ್ ದಾಳಿ ನಡೆಸಿ ಧ್ವಂಸಗೊಳಿಸಿದೆ. ಶನಿವಾರ ಮಧ್ಯಾಹ್ನ ಪಾಕ್‌ನ ಇತರೆ 3 ವಾಯುನೆಲೆಗಳ ಮೇಲೆಯೂ ಭಾರತ ದಾಳಿ ನಡೆಸಿ ಧ್ವಂಸಗೊಳಿಸಿದೆ. ಶನಿವಾರ ಒಂದೇ ದಿನದಲ್ಲಿ ಪಾಕ್‌ನ ಒಟ್ಟು 8 ವಾಯುನೆಲೆಗಳನ್ನು ಭಾರತ ನಾಶಪಡಿಸಿದೆ. ಪರಿಣಾಮ, ಪಾಕ್ ವಾಯುಪಡೆಯ ರೆಕ್ಕೆ ಪುಕ್ಕ ಕಿತ್ತು ಹಾಕಿದಂತಾಗಿದೆ. ಅಂದರೆ, ಪಾಕ್‌ಗೆ ಯುದ್ಧ ವಿಮಾನಗಳ ಹಾರಾಟದ ಆರಂಭ ಮತ್ತು ಲ್ಯಾಂಡಿಂಗ್‌ಗೆ ಅವಕಾಶಗಳು ಕಡಿಮೆಯಾಗಿವೆ.

ಈ ಪ್ರಬಲ ಕಾರ್ಯಾಚರಣೆ ಬಗ್ಗೆ ಚರ್ಚಿಸಲೆಂದೇ ಪ್ರಧಾನಿ ನಿವಾಸದಲ್ಲಿ ಉನ್ನತ ಮಟ್ಟದ ಸಭೆ ಕರೆಯಲಾಗಿತ್ತು. ರಕ್ಷಣಾ ಸಚಿವ ರಾಜನಾಥ್ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಸಶಸ್ತ್ರ ಪಡೆಗಳ ಸಿಬ್ಬಂದಿ ಮುಖ್ಯಸ್ಥ(ಸಿಡಿಎಸ್) ಅನಿಲ್ ಚೌಹಾಣ್ ಹಾಗೂ ಮೂರೂ ಸೇನಾಪಡೆಗಳ ಮುಖ್ಯಸ್ಥರು ಸಭೆಯಲ್ಲಿದ್ದರು.

ಈವರೆಗಿನ ಕಾರ್ಯಾಚರಣೆಗಳ ಅವಲೋಕನ ಮತ್ತು ಭವಿಷ್ಯದ ಕಾರ್ಯತಂತ್ರದ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಗಿದೆ. ಅಲ್ಲದೇ, ಪಾಕಿಸ್ತಾನ ತನ್ನ ಸೇನೆಯನ್ನು ಗಡಿ ಭಾಗದತ್ತ ಕಳುಹಿಸುತ್ತಿದೆ. ಭಾರತದ ಗಡಿಗೆ ಸಮೀಪದಲ್ಲಿ ಜಮಾವಣೆ ಮಾಡಲು ಮುಂದಾಗಿದೆ ಎಂಬ ಸಂಗತಿ ಬಗೆಗೂ ಪ್ರಧಾನಿ ನೇತೃತ್ವದ ಸಭೆಯಲ್ಲಿ ಚರ್ಚಿಸಲಾಯಿತು ಎಂದು ಮೂಲಗಳು ತಿಳಿಸಿವೆ.

ಆಪರೇಷನ್ ಸಿಂದೂರ: ಹತ 100 ಉಗ್ರರಲ್ಲಿ 5 ಉಗ್ರರ ಗುರುತು ಪತ್ತೆ

ವಿಮಾನ ಅಪಹರಿಸಿದ್ದ ಅಜರ್ ಖತಮ್

ದೆಹಲಿ: ಏ.22ರ ಪಹಲ್ಗಾಮ್ ದಾಳಿಗೆ ಪ್ರತಿಕಾರವಾಗಿ ಭಾರತ ಮೇ 7ರಂದು ನಡೆಸಿದ 'ಆಪರೇಷನ್ ಸಿಂದೂರ್' ಸೇನಾ ಕಾರ್ಯಾಚರಣೆಯಲ್ಲಿ ಹತರಾದ 100ಕ್ಕೂ ಅಧಿಕ ಭಯೋತ್ಪಾದಕರಲ್ಲಿ ಪ್ರಮುಖ ಐವರು ಉಗ್ರರ ಹೆಸರನ್ನು ಕೇಂದ್ರ ಸರಕಾರ ಶನಿವಾರ ಬಹಿರಂಗಪಡಿಸಿದೆ. ಇವರಲ್ಲಿ ಏರ್ ಇಂಡಿಯ ವಿಮಾನವನ್ನು ನೇಪಾಳದ ಕಠ್ಮಂಡುವಿನಿಂದ ಹೈಜಾಕ್ ಮಾಡಿದ್ದ ತಂಡದಲ್ಲಿದ್ದ ಮೊಹಮ್ಮದ್ ಯೂಸುಫ್ ಅಜರ್ ಸೇರಿದ್ದಾನೆ. ಉಗ್ರ ನಾಯಕ ಮೌಲಾನಾ ಮಸೂದ್ ಅಜರ್‌ನ ಸೋದರಳಿಯ ಹಫೀಜ್ ಮುಹಮ್ಮದ್ ಜಮೀಲ್ ಕೂಡಾ ಹತನಾಗಿದ್ದಾನೆ. ಉಳಿದಂತೆ ಮುದಸ್ಸರ್ ಖಾದಿಯನ್ ಖಾಸ್ ಅಲಿಯಾಸ್ ಮುದಸ್ಸರ್ ಅಬು, ಖಾಲಿದ್ ಅಬು ಅಕಾಷಾ, ಮೊಹಮ್ಮದ್ ಹಸನ್ ಖಾನ್ ಹತರಾದ ಪ್ರಮುಖ ಉಗ್ರರು ಎಂದು ಪ್ರಕಟಣೆ ತಿಳಿಸಿದೆ.

● ಮೊಹಮ್ಮದ್ ಯೂಸುಫ್ ಅಜರ್ ಅಲಿ ಯಾಸ್ ಮೊಹಮ್ಮದ್ ಸಲೀಮ್ ಘೋಸಿ ಸಾಹೆಬ್

ಈತ ಜೈಷ್-ಎ-ಮೊಹಮ್ಮದ್ ಉಗ್ರ ಸಂಘಟನೆ ಪ್ರಮುಖ ಸದಸ್ಯ. ಮೌಲಾನಾ ಮಸೂದ್ ಅಜರ್‌ನ ಬಾವ ಮೈದುನನಾದ ಈತ ಜೆಇಎಂ ಉಗ್ರರಿಗೆ ಶಸ್ತ್ರಾಸ್ತ್ರ ತರಬೇತಿ ನೀಡುತ್ತಿದ್ದ. ಜಮ್ಮು-ಕಾಶ್ಮೀರದಲ್ಲಿ ಹಲವು ಭಯೋತ್ಪಾದಕ ದಾಳಿಗಳಿಗೆ ಕಾರಣವಾಗಿದ್ದ. ಅಲ್ಲದೇ, ಈತ ಇಂಡಿಯನ್ ಏರಲೈನ್ಸ್ ವಿಮಾನ ಐಸಿ-814 ಅಪಹರಣ ಪ್ರಕರಣದಲ್ಲಿ ಭಾಗಿಯಾಗಿದ್ದ. ಈತ ಭಾರತಕ್ಕೆ ಬೇಕಾಗಿದ್ದ ಅಪರಾಧಿಯಾಗಿದ್ದ. ಭಾರತದ ಕೋರಿಕೆ ಮೇರೆಗೆ ಈತನ ವಿರುದ್ಧ ಇಂಟರ್‌ಪೋಲ್ ರೆಡ್ ಕಾರ್ನರ್ ನೋಟಿಸ್ ಹೊರಡಿಸಿತ್ತು.

● ಹಫೀಜ್ ಮುಹಮ್ಮದ್ ಜಮೀಲ್

ಈತ ಜೈಷ್-ಎ-ಮೊಹಮ್ಮದ್(ಜೆಇಎಂ) ಉಗ್ರ ಸಂಘಟನೆಯ ಪ್ರಮುಖ ಸದಸ್ಯ. ಭಯೋತ್ಪಾದಕ ಮೌಲಾನಾ ಮಸೂದ್ ಅಜರ್ ಈತನಿಗೆ ಮಾವನಾಗಬೇಕು. ಜಮೀಲ್, ಬಹಾವಲ್‌ಪುರದಲ್ಲಿನ ಮಾರ್ಕಝ್ ಸುಭಾನ್ ಅಲ್ಲಾಹ್ ಮುನ್ನಡೆಸುತ್ತಿದ್ದ. ಯುವಕರನ್ನು ಉಗ್ರವಾದದ ದಿಕ್ಕಿನಲ್ಲಿ ಪ್ರೇರೇಪಿಸುತ್ತಿದ್ದ. ಜೆಇಎಂಗೆ ನಿಧಿ ಸಂಗ್ರಹಿಸುತ್ತಿದ್ದ.

● ಮುದಸ್ಸರ್ ಖಾದಿಯನ್ ಖಾಸ್ ಅಲಿಯಾಸ್ ಮುದಸ್ಸರ್ ಅಬು

ಈತ ಲಷ್ಕರ್-ಎ-ತಯ್ಯಬಾ(ಎಲ್‌ಇಟಿ) ಉಗ್ರ ಸಂಘಟನೆಯ ಸದಸ್ಯ. ಮುರೀಡ್ಕೆಯಲ್ಲಿರುವ ಮರ್ಕಝ್ ತಯ್ಯಬಾ ಉಗ್ರ ಸಂಘಟನೆಯ ನೇತೃತ್ವ ವಹಿಸಿದ್ದ. ಈತನ ಅಂತಿಮ ಸಂಸ್ಕಾರದಲ್ಲಿ ಪಾಕಿಸ್ತಾನ ಸೇನೆ ಗಾರ್ಡ್ ಆಫ್ ಹಾನರ್ ಗೌರವ ನೀಡಿದೆ. ಪಂಜಾಬ್ ಸಿಎಂ ಮರಿಯಂ ನವಾಜ್, ಸೇನಾ ಮುಖ್ಯಸ್ಥ, ಸೇನೆಯ ಲೆಫ್ಟಿನೆಂಟ್ ಜನರಲ್ ಮತ್ತು ಪಂಜಾಬ್ ಪೊಲೀಸ್ ಮಹಾನಿರ್ದೇಶಕ ಹಾಜರಿದ್ದು ಶ್ರದ್ಧಾಂಜಲಿ ಅರ್ಪಿಸಿದ್ದಾರೆ.

● ಖಾಲಿದ್ ಅಬು ಅಕಾಷಾ

ಈ ಲಷ್ಕರ್-ಎ-ತಯ್ಯಬಾ ಸದಸ್ಯ. ಜಮ್ಮು-ಕಾಶ್ಮೀರದಲ್ಲಿನ ಹಲವು ದಾಳಿಗಳಲ್ಲಿ ಪಾಲ್ಗೊಂಡಿದ್ದ. ಅಫ್ಘಾನಿಸ್ತಾನದಿಂದ ಶಸ್ತ್ರಾಸ್ತ್ರ ಕಳ್ಳಸಾಗಣೆ ಮಾಡುತ್ತಿದ್ದ. ಈತನ ಅಂತ್ಯಸಂಸ್ಕಾರ ಫೈಸಲಾಬಾದ್‌ನಲ್ಲಿ ಜರುಗಿದ್ದು, ಪಾಕ್ ಸೇನೆಯ ಹಿರಿಯ ಅಧಿಕಾರಿಗಳು, ಫೈಸಲಾಬಾದ್ ಉಪ ಆಯುಕ್ತ ಭಾಗವಹಿಸಿದ್ದರು.

● ಮೊಹಮ್ಮದ್ ಹಸನ್ ಖಾನ್

ಮೌಫ್ತಿ ಅಸ್ಗರ್ ಖಾನ್ ಕಾಶ್ಮೀರಿಯ ಪುತ್ರನಾದ ಈತ ಜೈಷ್-ಎ-ಮೊಹಮ್ಮದ್ ಉಗ್ರ ಸಂಘಟನೆ ಸದಸ್ಯ. ಪಾಕ್ ಆಕ್ರಮಿತ ಕಾಶ್ಮೀರದಲ್ಲಿ ಜೆಇಎಂ ಕಾರ್ಯಾಚರಣೆ ಉಸ್ತುವಾರಿ ಹೊತ್ತಿದ್ದ. ಜಮ್ಮು-ಕಾಶ್ಮೀರದಲ್ಲಿ ಉಗ್ರ ದಾಳಿಗಳನ್ನು ಸಂಯೋಜಿಸುತ್ತಿದ್ದ.

ಆಸ್ಪತ್ರೆ, ಮೂಲಸೌಕರ್ಯ ಗುರಿಯಾಗಿಸಿ ಪಾಕ್ ದಾಳಿ: ವ್ಯೋಮಿಕಾ ಸಿಂಗ್

ಪಾಕ್ ಕ್ಷಿಪಣಿ ದಾಳಿ ಯತ್ನ ವಿಫಲಗೊಳಿಸಿದ ಭಾರತ

ದೆಹಲಿ: ಭಾರತದ ಮೇಲೆ ದಾಳಿಗೆ ಯತ್ನಿಸುತ್ತಲೇ ಇರುವ ಪಾಕಿಸ್ತಾನ, ಅಮಾಯಕ ನಾಗರಿಕರನ್ನೇ ಗುರಿಯಾಗಿಸಿ ಶೆಲ್ ದಾಳಿ ನಡೆಸುತ್ತಿದೆ. ಆದರೆ, ಆ ಪ್ರಯತ್ನಗಳಲ್ಲಿ ಬಹಳಷ್ಟನ್ನು ಭಾರತೀಯ ಸೇನೆ ವಿಫಲಗೊಳಿಸಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಶನಿವಾರ ಬೆಳಗ್ಗೆ ಸುದ್ದಿಗೋಷ್ಠಿ ನಡೆಸಿದ ರಕ್ಷಣಾ ಇಲಾಖೆ ಕಾರ್ಯದರ್ಶಿ ವಿಕ್ರಂ ಮಿಸ್ರಿ, ಸೇನಾಪಡೆಯ ಕರ್ನಲ್ ಸೋಫಿಯಾ ಖುರೇಷಿ ಮತ್ತು ವಾಯುಪಡೆಯ ವಿಂಗ್ ಕಮಾಂಡರ್ ವ್ಯೂಮಿಕಾ ಸಿಂಗ್, ಪಾಕ್ ದಾಳಿ ಪ್ರಯತ್ನಗಳನ್ನು ವಿಫಲಗೊಳಿಸಿದ ಬಗ್ಗೆ ವಿವರ ನೀಡಿದರು.

ಅಮೃತಸರದ ಖಾಸಾ ಕಂಟೋನ್ಮೆಂಟ್ ಮೇಲೆ ದಾಳಿ ನಡೆಸಲು ಪಾಕಿಸ್ತಾನ ಹಾರಿಬಿಟ್ಟಿದ್ದ ಡ್ರೋನ್‌ಗಳನ್ನು ಭಾರತೀಯ ಸೇನೆ ಶನಿವಾರ ಬೆಳಗ್ಗೆ 5 ಗಂಟೆಯಲ್ಲಿ ಹೊಡೆದುರುಳಿಸಿದೆ. ಗಡಿಭಾಗದಲ್ಲಿ ಡ್ರೋನ್ ದಾಳಿಗೆ ಪಾಕಿಸ್ತಾನ ಸತತ ಪ್ರಯತ್ನ ನಡೆಸುತ್ತಲೇ ಇದೆ ಎಂದರು.

ಶನಿವಾರ ನಸುಕಿನಲ್ಲಿ ಜಮ್ಮು ವಾಯುನೆಲೆ ಮತ್ತು ಉಧಂಪುರ ಗುರಿಯಾಗಿಸಿ ಪಾಕಿಸ್ತಾನ ಕ್ಷಿಪಣಿ ದಾಳಿ



ನಡೆಸಿದೆ. ಜಮ್ಮುವಿನ ಪ್ರಸಿದ್ಧ ಶಂಭು ದೇವಾಲಯದ ಮೇಲೂ ಕ್ಷಿಪಣಿ ದಾಳಿಗೆ ಪಾಕ್ ಯತ್ನಿಸಿದೆ. ಈ ದಾಳಿಗಳನ್ನು ಭಾರತದ ಸೇನೆ ವಿಫಲಗೊಳಿಸಿದೆ. ಉಧಂಪುರದಲ್ಲಿ ಪಾಕಿಸ್ತಾನದ ಕ್ಷಿಪಣಿ ನೆಲಕ್ಕೆ ಬಿದ್ದಿದ್ದು, ಅದರ ಅವಶೇಷಗಳನ್ನು ಹೊರತೆಗೆಯಲಾಗಿದೆ ಎಂದು ವಿವರಿಸಿದರು.

ಪಾಕಿಸ್ತಾನ ಜಮ್ಮು-ಕಾಶ್ಮೀರದ ಶ್ರೀನಗರ, ಅವಂತಿಪುರ ಹಾಗೂ ಉಧಂಪುರದ ಆಸ್ಪತ್ರೆ, ಶಾಲೆ, ಮತ್ತಿತರ ನಾಗರಿಕ ಮೂಲ ಸೌಕರ್ಯಗಳ ಮೇಲೆ ದಾಳಿ ಮಾಡಲು ಯತ್ನಿಸುತ್ತಿದೆ. ಭಾರತೀಯ ಸೇನಾಪಡೆಗಳು ಅದನ್ನು ವಿಫಲಗೊಳಿಸುತ್ತಿವೆ. ಇದೇ ಕಾರಣಕ್ಕಾಗಿ ಗಡಿ ಜಿಲ್ಲೆಗಳಾದ ಜಮ್ಮು-ಕಾಶ್ಮೀರ, ಪಂಜಾಬ್, ರಾಜಸ್ಥಾನ, ಹರಿಯಾಣ, ಹಿಮಾಚಲ ಪ್ರದೇಶದಲ್ಲಿ ತುರ್ತು ಪರಿಸ್ಥಿತಿ ಹೇರಲಾಗಿದೆ. ಜಮ್ಮು-ಕಾಶ್ಮೀರದಲ್ಲಿ ಶನಿವಾರ ಬೆಳಗ್ಗೆವರೆಗೂ ಬ್ಲ್ಯಾಕ್‌ಔಟ್ ಘೋಷಿಸಲಾಗಿತ್ತು ಎಂದು ವಿವರಿಸಿದರು.

ಪಾಕ್ ಸೇನೆ ಜಮಾವಣೆ?

ಇದಲ್ಲದೇ ಭಾರತದೊಳಕ್ಕೆ ನುಗ್ಗಿ ದಾಳಿ ನಡೆಸಲು ಪಾಕಿಸ್ತಾನ ತನ್ನ ಸೈನ್ಯವನ್ನು ಮುಂದಕ್ಕೆ ಸಾಗಿಸುತ್ತಿದೆ. ಇದು ಪರಿಸ್ಥಿತಿಯನ್ನ ಮತ್ತಷ್ಟು ಉಲ್ಬಣಗೊಳಿಸುವ ಆಕ್ರಮಣಕಾರಿ ಉದ್ದೇಶವನ್ನ ಸೂಚಿಸುತ್ತದೆ ಎಂದು ಖುರೇಷಿ ಸುದ್ದಿಗೋಷ್ಠಿಯಲ್ಲಿ ಹೇಳಿದರು. ಭಾರತೀಯ ಸಶಸ್ತ್ರ ಪಡೆಗಳು ಕೂಡಾ ಹೆಚ್ಚಿನ ಪ್ರಮಾಣದ ಕಾರ್ಯಾಚರಣೆಗೆ ಸನ್ನದ್ಧವಾಗಿವೆ. ಎಲ್ಲಾ ಪ್ರತಿಕೂಲ ಕ್ರಮಗಳನ್ನು ಪರಿಣಾಮಕಾರಿಯಾಗಿ ಎದುರಿಸಿ ಪಾಕ್‌ನ ದಾಳಿಗೆ ದಿಟ್ಟ ಉತ್ತರ ಸಹ ನೀಡಲಾಗಿದೆ. ಪಾಕಿಸ್ತಾನ ಮತ್ತಷ್ಟು ದಾಳಿಗೆ ಯತ್ನಿಸಿದರೆ ಭಾರತೀಯ ಸೇನಾಪಡೆಗಳು ತಕ್ಕ ಉತ್ತರ ನೀಡಲಿವೆ ಎಂದು ಕರ್ನಲ್ ಸೋಫಿಯಾ ಖುರೇಷಿ ಎಚ್ಚರಿಕೆ ಸಂದೇಶ ರವಾನಿಸಿದರು.

ರಾಜಸ್ಥಾನದ ಪೋಖ್ರಾನ್ ಗುರಿಯಾಗಿಸಿ ಬೃಹತ್ ಕ್ಷಿಪಣಿ ಮೂಲಕ ದಾಳಿಗೆ ಪಾಕಿಸ್ತಾನ ಶನಿವಾರ ಬೆಳಗ್ಗೆ ಯತ್ನಿಸಿದ್ದು, ಭಾರತೀಯ ವಾಯುಪಡೆಯ ಕ್ಷಿಪಣಿ ನಾಶ ವ್ಯವಸ್ಥೆಯು ಪಾಕ್‌ನ ಕ್ಷಿಪಣಿ ಆಕಾಶದಲ್ಲಿ ಇರುವಾಗಲೇ ಹೊಡೆದುಹಾಕಿದೆ. ಪಾಕ್‌ನ ಕ್ಷಿಪಣಿ ದಾಳಿ ಯತ್ನ ವಿಫಲವಾಗಿದೆ.

ಐಎಎಫ್ ಸಾರ್ಜೆಂಟ್ ಸುರೇಂದ್ರ ಹುತಾತ್ಮ

ಉದಂಪುರ: ಜಮ್ಮು-ಕಾಶ್ಮೀರದ ಉದಂಪುರದಲ್ಲಿನ ವಾಯುನೆಲೆ ಮೇಲೆ ಪಾಕಿಸ್ತಾನ ಶನಿವಾರ ಕ್ಷಿಪಣಿ ದಾಳಿ ನಡೆಸಿದ್ದು, ಭಾರತೀಯ ವಾಯುಪಡೆಯ ವೈದ್ಯಕೀಯ ವಿಭಾಗದ ಸಾರ್ಜೆಂಟ್ ಸುರೇಂದ್ರ ಕುಮಾರ್ ಮೋಗಾ(36) ಹುತಾತ್ಮರಾಗಿದ್ದಾರೆ.

ಅವರು ಐಎಎಫ್‌ನ ಉದಂಪುರ ಏರ್‌ಬೇಸ್‌ನಲ್ಲಿ ಅಸಿಸ್ಟೆಂಟ್ ಮೆಡಿಕಲ್ ಸಾರ್ಜೆಂಟ್ ಆಗಿ 14 ವರ್ಷಗಳಿಂದ ಸೇವೆ ಸಲ್ಲಿಸುತ್ತಿದ್ದರು. ಈ ಮೊದಲು ಲಖನೌನಲ್ಲಿನ ವಾಯುನೆಲೆಯಲ್ಲಿ ಕರ್ತವ್ಯದಲ್ಲಿದ್ದರು. ಜಮ್ಮು-ಕಾಶ್ಮೀರದ ಉದಂಪುರಕ್ಕೆ 2 ತಿಂಗಳ ಹಿಂದೆಯಷ್ಟೇ ವರ್ಗಾವಣೆಯಾಗಿ ಬಂದಿದ್ದರು. ಶನಿವಾರ ನಸುಕಿನಲ್ಲೇ ಪಾಕ್ ನಡೆಸಿ ಏರ್‌ಸ್ಟ್ರೈಕ್‌ನಲ್ಲಿ ಸುರೇಂದ್ರ ಹುತಾತ್ಮರಾದರು.

ಸಾರ್ಜೆಂಟ್ ಸುರೇಂದ್ರ ಕುಮಾರ್ ರಾಜಸ್ಥಾನ ಝುಂಝುನು ಜಿಲ್ಲೆಯ ಮಾಂಡವಾ ಪಟ್ಟಣದವರು. ಪತ್ನಿ ಸೀಮಾ(34) ಅವರನ್ನು ಸುರೇಂದ್ರ ಅಗಲಿದ್ದಾರೆ. ಸುರೇಂದ್ರ ಅವರ ಸೋದರ ಸಂಬಂಧಿಯಾದ ಕುಲದೀಪ್ ಕುಮಾರ ಮೋಗಾ ಕೂಡಾ ಭಾರತೀಯ ಸೇನೆಯಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.

ಪಾಕ್ ಲಾಂಚ್ ಪ್ಯಾಡ್ ಧ್ವಂಸ

ದೆಹಲಿ: ಗಡಿ ನಿಯಂತ್ರಣ ರೇಖೆ (ಎಲ್‌ಒಸಿ) ಬಳಿಯಿದ್ದ ಪಾಕಿಸ್ತಾನದ ಲಾಂಚ್‌ಪ್ಯಾಡ್‌ಗಳನ್ನು ಭಾರತದ ಸೇನಾಪಡೆಗಳು ಮೇ 8 ಮತ್ತು 9ರ ರಾತ್ರಿ ಧ್ವಂಸಗೊಳಿಸಿವೆ. ಇದರ ವೀಡಿಯೋವನ್ನು 'ಎಡಿಜಿಪಿಐ ಇಂಡಿಯನ್ ಆರ್ಮಿ' ಎಕ್ಸ್ ಖಾತೆಯಲ್ಲಿ ಶನಿವಾರ ಹಂಚಿಕೊಳ್ಳಲಾಗಿದೆ.

ಗಡಿ ನಿಯಂತ್ರಣ ರೇಖೆ ಸಮೀಪದ ಲಾಂಚ್‌ಪ್ಯಾಡ್‌ಗಳ ಮೂಲಕವೇ ಪಾಕ್ ಉಗ್ರರು ಭಾರತದ ಭದ್ರತಾ ಪಡೆಗಳು ಮತ್ತು ನಾಗರಿಕ ಪ್ರದೇಶಗಳ ಮೇಲೆ ದಾಳಿ ನಡೆಸುತ್ತಿದ್ದರು. ಹಾಗಾಗಿ ಭಾರತದ ಸೇನೆ ಉಗ್ರರಿಗೆ ಅನುಕೂಲಕಾರಿಯಾಗಿದ್ದ ಈ ನೆಲೆಗಳೆಲ್ಲವನ್ನೂ ಕ್ಷಿಪಣಿ ದಾಳಿ ಮೂಲಕ ನಾಶಪಡಿಸಿದೆ.

ತ್ವರಿತ ಮತ್ತು ನಿರ್ಣಾಯಕ ಕ್ರಮ ಕೈಗೊಂಡು ಭಯೋತ್ಪಾದಕರ ಮೂಲಸೌಕರ್ಯ ಮತ್ತು ಸಾಮರ್ಥ್ಯಗಳನ್ನು ನಾಶಪಡಿಸಲಾಗಿದೆ. ಗಡಿಯಂಚಿನಲ್ಲಿದ್ದ ಭಯೋತ್ಪಾದಕ ಉಡಾವಣಾ ನೆಲೆಗಳನ್ನು ಪುಡಿಪುಡಿ ಮಾಡಿಡಲಾಗಿದೆ ಎಂದು ಭಾರತೀಯ ಸೇನೆ 'ಎಕ್ಸ್' ಖಾತೆಯಲ್ಲಿ ಬರೆದಿದೆ.

ಫ್ಯಾಕ್ಟ್ ಚೆಕ್



ಸುಳ್ಳೇನು?

ಪಾಕಿಸ್ತಾನದ ನೆಲದಲ್ಲಿ ಜಾಗ್ವಾರ್, ರಫೇಲ್ ಯುದ್ಧ ವಿಮಾನ ಪತನ

ಸತ್ಯವೇನು?

ಭಾರತ ಯಾವುದೇ ಯುದ್ಧ ವಿಮಾನಗಳು ಪಾಕಿಸ್ತಾನದಲ್ಲಿ ಪತನವಾಗಿಲ್ಲ

ಉದ್ವಿಗ್ನತೆ ಶಮನಕ್ಕೆ ನೇರ ಮಾತು

ವಾಷಿಂಗ್ಟನ್: ಭಾರತ-ಪಾಕಿಸ್ತಾನದ ನಡುವಿನ ಉದ್ವಿಗ್ನತೆ ತಗ್ಗಿಸುವಂತೆ ಮಾಡಲು ಅಮೆರಿಕ ಮುಂದಾಗಿದ್ದು, ಎರಡೂ ದೇಶಗಳ ವಿದೇಶಾಂಗ ಸಚಿವರಿಗೆ ಕರೆ ಮಾಡಿ ಮಾತನಾಡಿದೆ. ಅಮೆರಿಕದ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಶನಿವಾರ ಪಾಕ್‌ನ ವಿದೇಶಾಂಗ ಸಚಿವ ಇಶಾಕ್ ದರ್‌ಗೆ ಕರೆ ಮಾಡಿದ್ದು, ಭಾರತದ ಜತೆ ನೇರ ಸಂವಹನ ನಡೆಸಿ ಉದ್ವಿಗ್ನತೆ ತಗ್ಗಿಸಲು ಯತ್ನಿಸುವಂತೆ ಸಲಹೆ ನೀಡಿದ್ದಾರೆ. ಬಳಿಕ ಭಾರತದ ವಿದೇಶಾಂಗ ಸಚಿವ ಜೈಶಂಕರ್ ಅವರಿಗೂ ಕರೆ ಮಾಡಿ ಮಾತನಾಡಿದ್ದಾರೆ. ಅಮೆರಿಕದ ವಿದೇಶಾಂಗ ಸಚಿವಾಲಯ ಈ ಕುರಿತು ಪತ್ರಿಕಾ ಹೇಳಿಕೆ ಬಿಡುಗಡೆ ಮಾಡಿದೆ. ಎರಡೂ ದೇಶಗಳು ಸದ್ಯದ ಉದ್ವಿಗ್ನತೆ ಶಮನಕ್ಕೆ ಯತ್ನಿಸಬೇಕು, ತಪ್ಪು ತಿಳಿವಳಿಕೆಗಳನ್ನು ಸರಿಹೋಗಿಸಿಕೊಳ್ಳಬೇಕು. ಅದಕ್ಕಾಗಿ ನೇರ ಸಂವಹನ ಮಾಡಬೇಕಿದೆ ಎಂದು ರುಬಿಯೊ ಸಲಹೆ ನೀಡಿದ್ದಾರೆ. ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರೂ ಭಾರತ-ಪಾಕ್ ನಡುವಿನ ಉದ್ವಿಗ್ನತೆ ಆದಷ್ಟು ಬೇಗ ಕಡಿಮೆ ಆಗಲಿ ಎಂದೇ ಬಯಸಿದ್ದಾರೆ. ಭವಿಷ್ಯದ ಸಂಘರ್ಷ ತಪ್ಪಿಸಲು, ಎರಡೂ ದೇಶಗಳ ನಡುವೆ ರಚನಾತ್ಮಕ ಮಾತುಕತೆ ಆರಂಭವಾಗುವಂತೆ ಮಾಡಲು ಅಮೆರಿಕ ಸಹಾಯ ಮಾಡಲು ಸಿದ್ಧವಿದೆ ಎಂದೂ ರುಬಿಯೊ ಹೇಳಿದ್ದಾರೆ.



ಪಾಕ್ ಷೆಲ್ ದಾಳಿಗೆ ರಜೌರಿ ಎಡಿಸಿ ಸಾವು

ಶ್ರೀನಗರ: ಪಾಕಿಸ್ತಾನ ಶನಿವಾರ ನಡೆಸಿದ ಷೆಲ್ ದಾಳಿಯಲ್ಲಿ ಜಮ್ಮು-ಕಾಶ್ಮೀರದ ರಜೌರಿ ಜಿಲ್ಲೆಯ ಹೆಚ್ಚುವರಿ ಜಿಲ್ಲಾಧಿಕಾರಿ ರಾಜಕುಮಾರ್ ಥಾಪಾ ಮತ್ತು ನಾಲ್ವರು ನಾಗರಿಕರು ಮೃತಪಟ್ಟಿದ್ದಾರೆ. ರಜೌರಿಯ ಕೈಗಾರಿಕಾ ಪ್ರದೇಶದಲ್ಲಿರುವ ಹೆಚ್ಚುವರಿ ಜಿಲ್ಲಾಧಿಕಾರಿ ನಿವಾಸಕ್ಕೆ ಪಾಕ್ ಸಿಡಿಸಿದ ಷೆಲ್ ಅಪ್ಪಳಿಸಿದ್ದರಿಂದ ಥಾಪಾ ಗಂಭೀರ ಗಾಯ ಗೊಂಡಿದ್ದರು. ಅವರನ್ನು ಆಸ್ಪತ್ರೆಗೆ ಕರೆದೊಯ್ದರೂ ಬದುಕುಳಿಯಲಿಲ್ಲ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ಈ ಸುದ್ದಿಯನ್ನು ಸಿಎಂ ಒಮರ್ ಅಬ್ದುಲ್ಲಾ ಅವರೂ 'ಎಕ್ಸ್' ಖಾತೆಯಲ್ಲಿ ಹಂಚಿಕೊಂಡು ಸಂತಾಪ ಸೂಚಿಸಿದ್ದಾರೆ.

ಫಿರೋಜ್‌ಪುರ-ಮೂವರಿಗೆ ಗಾಯ: ಪಾಕ್‌ನ ಶೆಲ್ ದಾಳಿ ಪರಿಣಾಮ ಚಂಡೀಗಢ ಸಮೀಪದ ಫಿರೋಜ್‌ಪುರದಲ್ಲಿ ಒಂದೇ ಕುಟುಂಬದ ಮೂವರು ಗಾಯಗೊಂಡಿದ್ದಾರೆ. ಒಬ್ಬನ ಸ್ಥಿತಿ ಗಂಭೀರವಾಗಿದೆ. ಫಿರೋಜ್‌ಪುರದಿಂದ 12ಕಿ.ಮೀ ದೂರದ ಖೈ ಫೆಮೆ ಕಿ ಗ್ರಾಮದ ಮನೆಗೆ ಡ್ರೋನ್ ಅಪ್ಪಳಿಸಿ ಸ್ಫೋಟಗೊಂಡಿದೆ. ಪರಿಣಾಮ ಬೆಂಕಿ ಹೊತ್ತಿ ಉರಿದು ಮೂವರು ಗಾಯಗೊಂಡರು. ಮನೆ ಮುಂದೆ ಇದ್ದ ಕಾರು ಭಸ್ಮವಾಗಿದೆ. ಮನೆಯಲ್ಲಿ ದೀಪ ಬೆಳಗುತ್ತಿದ್ದುದರಿಂದ ಡ್ರೋನ್ ದಾಳಿಯಾಗಿದೆ ಎನ್ನಲಾಗಿದೆ.

ದೆಹಲಿ: ದೇಶೀಯ 60 ವಿಮಾನಯಾನ ರದ್ದು

ದೆಹಲಿ: ಭಾರತ-ಪಾಕಿಸ್ತಾನ ನಡುವಿನ ಯುದ್ಧ ಶನಿವಾರ ತೀವ್ರಗೊಂಡು ಖಂಡಾಂತರ ಕ್ಷಿಪಣಿಗಳನ್ನು ಪಾಕ್ ಸೇನೆ ಬಳಸಿದೆ. ಭಾರತೀಯ ಸೇನಾಪಡೆಯೂ ಪಾಕ್ ಬಹುತೇಕ ಕ್ಷಿಪಣಿಗಳನ್ನು ಆಗಸದಲ್ಲೇ ನಾಶಪಡಿಸಿದೆ. ಯುದ್ಧ ತೀವ್ರಗೊಂಡ ಹಿನ್ನೆಲೆಯಲ್ಲಿ ದೆಹಲಿಯ ವಿಮಾನ ನಿಲ್ದಾಣದಿಂದ ಸಂಚಾರ ನಡೆಸಬೇಕಿದ್ದ ದೇಶೀ ಮಾರ್ಗದಲ್ಲಿನ 60 ವಿಮಾನಗಳನ್ನು ಶನಿವಾರದ ಮಟ್ಟಿಗೆ ರದ್ದುಗೊಳಿಸಲಾಗಿತ್ತು. ದೆಹಲಿ ವಿಮಾನ ನಿಲ್ದಾಣದಿಂದ ಬೆಳಗ್ಗೆ 5ರಿಂದ ಮಧ್ಯಾಹ್ನ 2.30ರವರೆಗಿನ ದೇಶೀ ಮಾರ್ಗದ ವಿಮಾನಗಳ ಸಂಚಾರ ರದ್ದುಗೊಳಿಸಲಾಗಿತ್ತು. ದೆಹಲಿ ವಿಮಾನ ನಿಲ್ದಾಣದಿಂದ ನಿರ್ಗಮಿಸುವ 30 ಮತ್ತು ಆಗಮಿಸುವ 30 ವಿಮಾನಗಳ ಸಂಚಾರ ರದ್ದಾಗಿದ್ದಿತು ಎಂದು ದೆಹಲಿ ವಿಮಾನ ನಿಲ್ದಾಣದ ಮೂಲಗಳು ತಿಳಿಸಿವೆ.

32 ವಿಮಾನ ನಿಲ್ದಾಣ ಸ್ಥಗಿತ: ಇದೇ ವೇಳೆ, ನಾಗರಿಕ ವಿಮಾನಯಾನ ಮಹಾ ನಿರ್ದೇಶನಾಲಯ(ಡಿಜಿಸಿಎ) ದೇಶದ ಉತ್ತರ ಮತ್ತು ಪಶ್ಚಿಮ ಭಾಗಗಳಲ್ಲಿನ 32 ವಿಮಾನ ನಿಲ್ದಾಣಗಳಲ್ಲಿ ನಾಗರಿಕ ವಿಮಾನಯಾನ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದೆ. ಮೇ 15ರ ಬೆಳಗ್ಗೆವರೆಗೂ ಈ 32 ವಿಮಾನ ನಿಲ್ದಾಣಗಳಲ್ಲಿ ನಾಗರಿಕ ಪ್ರಯಾಣಿಕರ ವಿಮಾನಗಳ ಸಂಚಾರ ಬಂದ್ ಆಗಿರಲಿದೆ ಎಂದು ಡಿಜಿಸಿಎ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ಆಪರೇಷನ್

ಸಿಂಧೂರ

ಪಾಕ್ ಸೇನೆ ಮೇಲೆ ಬಿಎಲ್ಎ 39 ದಾಳಿ

ಬಲೂಚಿಸ್ತಾನ: ಪಾಕಿಸ್ತಾನದ ಸೇನೆಯ ಮೇಲೆ ಬಲೂಚಿಸ್ತಾನದ ಸ್ವಾತಂತ್ರ್ಯಕ್ಕಾಗಿ ಹೋರಾಡುತ್ತಿರುವ 'ಬಲೂಚ್ ಲಿಬರೇಶನ್ ಆರ್ಮಿ'(ಬಿಎಲ್ಎ) ಶನಿವಾರ ತೀವ್ರ ಸ್ವರೂಪದ ದಾಳಿ ನಡೆಸಿದೆ. ಬಲೂಚಿಸ್ತಾನದ 39 ಸ್ಥಳಗಳಲ್ಲಿ ಪಾಕ್ ಸೈನಿಕರನ್ನು ಗುರಿಯಾಗಿಸಿಕೊಂಡು 'ಬಿಎಲ್ಎ' ದಾಳಿ ಮಾಡಿದೆ.

ಬಲೂಚಿಸ್ತಾನ ಭಾಗದಲ್ಲಿನ ಪ್ರಮುಖ ಹೆದ್ದಾರಿಗಳನ್ನು ಗುರಿಯಾಗಿಸಿಕೊಂಡು ಪಾಕ್ ಸೇನೆಯ ವಿರುದ್ಧ ದಾಳಿ ಸಂಘಟಿಸಲಾಗಿದೆ. ಪಾಕಿಸ್ತಾನಿ ಪೊಲೀಸ್ ಠಾಣೆಗಳ ಮೇಲೇಯೂ

ದಾಳಿ ನಡೆಸಿ ಠಾಣೆಯಿಂದ ಶಸ್ತ್ರಾಸ್ತ್ರಗಳನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಬಲೂಚ್ ಲಿಬರೇಶನ್ ಆರ್ಮಿ ವಕ್ತಾರ ಜಿಯಾಂಡ್ ಬಲೂಚ್ ಶನಿವಾರ ಅಧಿಕೃತ ಪತ್ರಿಕಾ ಹೇಳಿಕೆ ನೀಡಿದ್ದಾರೆ. ಆದರೆ, ಸಾವು ನೋವಿನ ಬಗ್ಗೆ ಮಾಹಿತಿ ಹಂಚಿಕೊಂಡಿಲ್ಲ.

ಪಾಕಿಸ್ತಾನಿ ಪೊಲೀಸ್ ಠಾಣೆಗಳು, ಪ್ರಮುಖ ಹೆದ್ದಾರಿಗಳು, ಸೇನಾ ಗೂಢಚಾರರು, ಪಾಕಿಸ್ತಾನಿ ಸೇನಾ ಶಸ್ತ್ರಾಸ್ತ್ರಗಳು ಮತ್ತು ಅವರ ಬೆಂಗಾವಲು ಪಡೆಗಳನ್ನು ನಾವು ಗುರಿಯಾಗಿಸಿಕೊಂಡಿದ್ದೇವೆ. ಪಾಕ್ ಸೇನೆಗೆ ಭಾರೀ ನಷ್ಟವಾಗಿದೆ ಎದು ಜಿಯಾಂಡ್ ಹೇಳಿದ್ದಾರೆ.

ಫ್ಯಾಕ್ಟ್ ಚೆಕ್

ಸುಳ್ಳೇನು?

ಭಾರತೀಯ ಮಹಿಳಾ ಪೈಲಟ್ ಒಬ್ಬರು ಪಾಕಿಸ್ತಾನ ನೆಲೆಯಲ್ಲಿ ಸೆರೆಸಿಕ್ಕಿದ್ದಾರೆ

ಸತ್ಯವೇನು?

ಯಾವುದೇ ಪೈಲಟ್ ಪಾಕಿಸ್ತಾನದಲ್ಲಿ ಸಿಕ್ಕಿಲ್ಲ. ವೈರಲ್ ಆಗುತ್ತಿರುವ ಫೋಟೋ 2023ರ ಫೋಟೋ

ವಾಸ್ತಾವಾಂಶ ಪ್ರಕಟಿಸಿ: ಅಶ್ವಿನಿ ವೈಷ್ಣವ್ ಮನವಿ

ದೆಹಲಿ: ಭಾರತ-ಪಾಕಿಸ್ತಾನ ನಡುವಣ ಸೇನಾ ಸಂಘರ್ಷ ಸಂದರ್ಭ ವಾಸ್ತವ ವರದಿಗಳನ್ನು ಮಾತ್ರವೇ ಪ್ರಕಟಿಸುವಂತೆ ಕೇಂದ್ರ ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅಶ್ವಿನಿ ವೈಷ್ಣವ್, ಮನವಿ ಮಾಡಿದ್ದಾರೆ. ಮಾಧ್ಯಮ ಸಂಸ್ಥೆಗಳ ಸಂಪಾದಕರು, ಪ್ರತಿನಿಧಿಗಳ ಜತೆ ಸಂವಹನ ನಡೆಸಿರುವ ಸಚಿವರು, ಜವಾಬ್ದಾರಿಯುತ ವರದಿಗಾರಿಕೆಯ ಮಹತ್ವವನ್ನು ಪ್ರತಿಪಾದಿಸಿದ್ದಾರೆ. ಸಂಘರ್ಷಕ್ಕೆ ಸಂಬಂಧಿಸಿದ ಸುದ್ದಿಗಳನ್ನು ಪ್ರಕಟಣೆಗೂ ಮುನ್ನ ಮಾಹಿತಿ ಪರಿಶೀಲಿಸಬೇಕು ಎಂದು ಒತ್ತಾಯಿಸಿದ್ದಾರೆ. ರಕ್ಷಣಾ ಕಾರ್ಯಾಚರಣೆ ಹಾಗೂ ಭದ್ರತಾ ಪಡೆಗಳ ಚಲನವಲನಗಳ ನೇರ ಪ್ರಸಾರವನ್ನು ವಿದ್ಯುನ್ಮಾನ ಮಾಧ್ಯಮಗಳು ನಿಲ್ಲಿಸಬೇಕು. ಕೇಂದ್ರ ಮಾಹಿತಿ ಮತ್ತು ಪ್ರಸಾರ ಸಚಿವಾಲಯ ಹೊರಡಿಸಿರುವ ಮಾರ್ಗಸೂಚಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಎಂದು ಮನವಿ ಮಾಡಿದ್ದಾರೆ.

ಸದ್ಯಕ್ಕೆ ಅಣ್ವಸ್ತ್ರ ಬಳಕೆ ಇಲ್ಲ: ಪಾಕ್ ರಕ್ಷಣಾ ಸಚಿವ ಖ್ವಾಜಾ

ಇಸ್ಲಾಮಾಬಾದ್: ಭಾರತ ವಿರುದ್ಧದ ಯುದ್ಧದಲ್ಲಿ ಸದ್ಯಕ್ಕೆ ಅಣ್ವಸ್ತ್ರಗಳನ್ನು ಬಳಸುವುದಿಲ್ಲ ಎಂದು ಪಾಕಿಸ್ತಾನದ ರಕ್ಷಣಾ ಸಚಿವ ಖ್ವಾಜಾ ಆಸಿಫ್ ಶನಿವಾರ

ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 'ಭಾರತ-ಪಾಕ್ ನಡುವಿನ ಸೇನಾ ಸಂಘರ್ಷ ಈಗಾಗಲೇ ಗಂಭೀರ ಮಟ್ಟಕ್ಕೆ ಮುಟ್ಟಿದೆ. ಹಾಗೆಂದು ಈಗ ಪರಮಾಣು ಆಯ್ಕೆಯ ಸಂದರ್ಭ ಬಂದಿಲ್ಲ ಎಂದು ಹೇಳಿದ್ದಾರೆ. 'ಅಣ್ವಸ್ತ್ರ ಕೇವಲ ಈ ಪ್ರದೇಶಕ್ಕಷ್ಟೇ ಸೀಮಿತವಾಗಿಲ್ಲ. ಅದು ಹೆಚ್ಚು ವಿಸ್ತಾರವಾಗಬಹುದು ಎಂದು ವಿಶ್ವಕ್ಕೆ ತಿಳಿಸಲು ಇಚ್ಛಿಸುವೆ. ಭಾರತ ಸೃಷ್ಟಿಸುವ ಪರಿಸ್ಥಿತಿ ಆಧರಿಸಿ ನಮ್ಮ ಆಯ್ಕೆಗಳನ್ನು ನಿರ್ಧರಿಸಲಾಗುವುದು' ಎಂದು ಪರೋಕ್ಷವಾಗಿ ಎಚ್ಚರಿಕೆ ನೀಡುವಂತೆ ಹೇಳಿದ್ದಾರೆ. ಇದಕ್ಕೂ ಮುನ್ನ, ಸಂಸತ್‌ನಲ್ಲಿ ಶುಕ್ರವಾರ ಮಾತನಾಡಿದ್ದ ಖ್ವಾಜಾ, ಈಗಿನ ಯುದ್ಧದಲ್ಲಿ ಅಗತ್ಯಬಿದ್ದರೆ ದೇಶದ ಮದರಸಾ ಮಕ್ಕಳನ್ನೂ ಬಳಸಿಕೊಳ್ಳಲಾಗುವುದು ಎಂದು ಹೇಳಿದ್ದರು.

ಸೈರನ್ ಬಳಸದಿರಿ: ಟಿವಿಗಳಿಗೆ ನಿರ್ದೇಶನ

ದೆಹಲಿ: ಭಾರತ-ಪಾಕಿಸ್ತಾನ ನಡುವೆ ಯುದ್ಧ ನಡೆದಿರುವ ಸಂದರ್ಭ ಡ್ರೋನ್, ಕ್ಷಿಪಣಿ ದಾಳಿ ವೇಳೆ ಭಾರತದ ಪಶ್ಚಿಮ ಗಡಿ ರಾಜ್ಯಗಳಲ್ಲಿ ಜನರನ್ನು ಎಚ್ಚರಿಸಿ ಸುರಕ್ಷಿತ ಸ್ಥಳಕ್ಕೆ ತೆರಳುವಂತೆ ಮಾಡಲು 'ಸೈರನ್' ಮೊಳಗಿಸಲಾಗುತ್ತಿದೆ. ಆದರೆ, 'ಸುದ್ದಿವಾಹಿನಿಗಳು' ಮತ್ತು ಕೆಲವು 'ಯೂಟ್ಯೂಬ್ ಚಾನೆಲ್'ಗಳೂ ಕೂಡಾ ಕಾರ್ಯಕ್ರಮ ಪ್ರಸಾರ ವೇಳೆ ಸೈರನ್ ಶಬ್ದವನ್ನು ಬಳಸುತ್ತಿವೆ. ಇದು ಜನರನ್ನು ಗೊಂದಲಕ್ಕೆ, ಭೀತಿಗೆ ದೂಡುತ್ತಿದೆ ಎಂಬ ಕಾರಣಕ್ಕೆ ಕೇಂದ್ರ ಸರಕಾರ, ಟಿವಿ ಮತ್ತು ಯೂ ಟ್ಯೂಬ್ ಚಾನೆಲ್‌ಗಳಲ್ಲಿ ಸೈರನ್ ಬಳಕೆ ಸಲ್ಲದು ಎಂದು ಹೇಳಿದೆ. ಟಿವಿ, ಯೂ ಟ್ಯೂಬ್ ಕಾರ್ಯಕ್ರಮಗಳ ಪ್ರಸಾರದಲ್ಲಿ ಸೈರನ್ ಸದ್ದು ಬಳಸಬಾರದು ಎಂದು ಎಲ್ಲಾ ಟಿ.ವಿ ಚಾನೆಲ್‌ಗಳು ಮತ್ತು ಯೂಟ್ಯೂಬ್‌ಗಳಿಗೆ ಶನಿವಾರ ಸ್ಪಷ್ಟ ನಿರ್ದೇಶನ ನೀಡಲಾಗಿದೆ. 1968ರ ನಾಗರಿಕಾ ರಕ್ಷಣಾ ಕಾಯ್ದೆಯಡಿ ಅಗ್ನಿಶಾಮಕ ಸೇವೆ, ನಾಗರಿಕ ರಕ್ಷಣೆ ಹಾಗೂ ಗೃಹ ರಕ್ಷಕ ದಳದ ಮಹಾನಿರ್ದೇಶಕರು ಈ ಬಗ್ಗೆ ಪ್ರಕಟಣೆ ಹೊರಡಿಸಿದ್ದಾರೆ.

ಎಸ್-400 ಧ್ವಂಸ, ಬ್ರಹ್ಮೋಸ್ ಕ್ಷಿಪಣಿ ನೆಲೆ ಹಾನಿ: ಪಾಕ್‌ನ ಸುಳ್ಳು ಬಟಾಬಯಲು

ಸುಳ್ಳಿನ ಯುದ್ಧದಲ್ಲಿ ಪಾಕ್ ಮೇಲುಗೈ

ದೆಹಲಿ: ಕದನ ವಿರಾಮ ಘೋಷಣೆಯ ನಡುವೆಯೂ ಅದನ್ನು ಉಲ್ಲಂಘಿಸುತ್ತಿರುವ ಪಾಕಿಸ್ತಾನ ಇನ್ನೊಂದೆಡೆ ಸುಳ್ಳಿನ ಯುದ್ಧವನ್ನೂ ಮುಂದುವರಿಸಿದೆ. ರಕ್ಷಣಾ ಸಚಿವಾಲಯ ಶನಿವಾರ ಸಂಜೆ ಪತ್ರಿಕಾಗೋಷ್ಠಿ ನಡೆಸಿ ಪಾಕಿಸ್ತಾನದ ಸುಳ್ಳನ್ನು ಎಳೆ ಎಳೆಯಾಗಿ ಬಿಚ್ಚಿಟ್ಟಿದೆ.

ಪಾಕಿಸ್ತಾನದ ತಪ್ಪು ಮಾಹಿತಿ ಹರಡುವ ಬಗ್ಗೆ ಮಾಹಿತಿ ನೀಡಿದ ನೌಕಾಪಡೆಯ ಕಮೋಡೋರ್ ರಘು ಆರ್ ನಾಯರ್, ಭಾರತೀಯ ಪಡೆಗಳು ಸಂಪೂರ್ಣವಾಗಿ ಜಾಗರೂಕವಾಗಿವೆ. ಮತ್ತೊಮ್ಮೆ ದಾಳಿ ನಡೆದರೆ, ನಾವು ಸೂಕ್ತ ಪ್ರತ್ಯುತ್ತರ ನೀಡುತ್ತೇವೆ ಎಂದು ತಿಳಿಸಿದರು.

ಪಾಕಿಸ್ತಾನವು ತನ್ನ ಜೆಎಫ್ 17 ಯುದ್ಧ ವಿಮಾನದ ಮೂಲಕ ನಮ್ಮ ಎಸ್ 400 ಮತ್ತು ಬ್ರಹ್ಮೋಸ್ ಕ್ಷಿಪಣಿ ನೆಲೆಯನ್ನು ಹಾನಿಗೊಳಿಸಿದೆ ಎಂದು ಹೇಳಿಕೊಂಡಿದೆ. 'ಇದು ಹಸಿ ಸುಳ್ಳು' ಎಂದು ಕರ್ನಲ್ ಸೋಫಿಯಾ ಖುರೇಷಿ ಪತ್ರಿಕಾಗೋಷ್ಠಿಯಲ್ಲಿ ಹೇಳಿದರು. ಸಿರ್ಸಾ, ಜಮ್ಮು, ಪಠಾಣ್‌ಕೋಟ್, ಭಟಿಂಡಾ, ನಲಿಯಾ ಮತ್ತು ಭುಜ್‌ನಲ್ಲಿರುವ ನಮ್ಮ ವಾಯುನೆಲೆಗಳು ಹಾನಿಗೊಳಗಾಗಿವೆ ಎಂದು ಪಾಕ್ ಹೇಳಿಕೊಂಡಿದ್ದು ಆ ಮಾಹಿತಿಯೂ ಸಂಪೂರ್ಣವಾಗಿ ಸುಳ್ಳು ಎಂದು ಅವರು ಒತ್ತಿ ಹೇಳಿದರು. ಮೂರನೆಯದಾಗಿ, ಪಾಕಿಸ್ತಾನದ ತಪ್ಪು ಮಾಹಿತಿ ಅಭಿಯಾನದ ಪ್ರಕಾರ, ಚಂಡೀಗಢ ಮತ್ತು ವ್ಯಾಸ್‌ನಲ್ಲಿರುವ ನಮ್ಮ ಯುದ್ಧಸಾಮಗ್ರಿ ಡಿಪೋಗಳು ಹಾನಿಗೊಳಗಾಗಿವೆ. ಇದು ಸಂಪೂರ್ಣವಾಗಿ ಸುಳ್ಳು ಎಂದು ಅವರು ಸ್ಪಷ್ಟಪಡಿಸಿದರು.

ಅಷ್ಟೇ ಅಲ್ಲದೆ ಭಾರತೀಯ ಸೇನೆಯು ಮಸೀದಿಗಳನ್ನು ಹಾನಿಗೊಳಿಸಿದೆ ಎಂದು ಪಾಕಿಸ್ತಾನ ಸುಳ್ಳು ಆರೋಪಗಳನ್ನು ಮಾಡಿದೆ. ಭಾರತವು ಜಾತ್ಯತೀತ ರಾಷ್ಟ್ರ ಮತ್ತು ನಮ್ಮ ಸೇನೆಯು ಭಾರತದ ಸಾಂವಿಧಾನಿಕ ಮೌಲ್ಯದ ಅತ್ಯಂತ ಸುಂದರವಾದ ಪ್ರತಿಬಿಂಬವಾಗಿದೆ ಎಂದು ನಾನು ಸ್ಪಷ್ಟಪಡಿಸಲು ಬಯಸುತ್ತೇನೆ ಎಂದು ಅವರು ಹೇಳಿದರು. ಪಹಲ್ಗಾಮ್ ಭಯೋತ್ಪಾದಕ ದಾಳಿಯ ನಂತರ ಪ್ರತೀಕಾರದ ಕಾರ್ಯಾಚರಣೆಯ ಸಮಯದಲ್ಲಿ ಭಾರತೀಯ ಸೇನೆಯು ಮಸೀದಿಗಳನ್ನು ಗುರಿಯಾಗಿಸಿಕೊಂಡಿದೆ ಎಂದು ಪಾಕಿಗಳು ಸುಳ್ಳು ಹೇಳಿಕೆಗಳನ್ನು ಹರಡಿದ್ದರು.

ವಿದೇಶಾಂಗ ಕಾರ್ಯದರ್ಶಿ ಹೇಳಿದಂತೆ, ಎಲ್ಲಾ ಮಿಲಿಟರಿ ಕಾರ್ಯಾಚರಣೆಗಳನ್ನು ನಿಲ್ಲಿಸಲು ನಾವು ಒಮ್ಮತಕ್ಕೆ ಬಂದಿದ್ದೇವೆ ಎಂದು ಕಮೋಡೋರ್ ನಾಯರ್ ಹೇಳಿದರು. ಭಾರತೀಯ ಸೇನೆ, ನೌಕಾಪಡೆ ಮತ್ತು ವಾಯುಪಡೆಗಳು ಮಾತೃಭೂಮಿಯನ್ನು ರಕ್ಷಿಸಲು ಬದ್ಧವಾಗಿವೆ ಎಂದು ನಾಯರ್ ಹೇಳಿದರು. ನಾವು ಸಂಪೂರ್ಣವಾಗಿ ಸಿದ್ಧರಾಗಿದ್ದೇವೆ ಮತ್ತು ಎಚ್ಚರವಾಗಿದ್ದೇವೆ. ಪಾಕಿಸ್ತಾನದ ಯಾವುದೇ ಧೈರ್ಯಕ್ಕೆ ಬಲವಾಗಿ ಪ್ರತಿಕ್ರಿಯಿಸಲಾಗಿದೆ. ಉದ್ವಿಗ್ನತೆಯನ್ನು ಮತ್ತಷ್ಟು ಹೆಚ್ಚಿಸಲು ಪ್ರಯತ್ನಿಸಿದರೆ ಅವರಿಗೆ ನಿರ್ಣಾಯಕ ಪ್ರತ್ಯುತ್ತರ ನೀಡಲಾಗುವುದು ಎಂದರು.

ವಿದೇಶಾಂಗ ಕಾರ್ಯದರ್ಶಿ ಮಿಶ್ರಿ ಕದನ ವಿರಾಮ ಶನಿವಾರ ಸಂಜೆ 5 ಗಂಟೆಯಿಂದ ಜಾರಿಗೆ ಬರಲಿದೆ ಎಂದು ಹೇಳಿದರು. ಈಗ ಎರಡೂ ದೇಶಗಳು ಭೂಮಿ, ಆಕಾಶ ಮತ್ತು ಸಮುದ್ರದಿಂದ ಪರಸ್ಪರ ದಾಳಿ ಮಾಡುವುದಿಲ್ಲ. ಭಾರತ-ಪಾಕಿಸ್ತಾನ ಡಿಜಿಎಂಒಗಳು ಮೇ 12 ರಂದು ಮಧ್ಯಾಹ್ನ 12 ಗಂಟೆಗೆ ಮಾತುಕತೆ ನಡೆಸಲಿದ್ದಾರೆ ಎಂದು ಹೇಳಿದರು.

ಭವಿಷ್ಯದ ಉಗ್ರ ದಾಳಿಯನ್ನು ದೇಶದ ವಿರುದ್ಧದ ಯುದ್ಧವೆಂದು ಪರಿಗಣಿಸುತ್ತೇವೆ: ಭಾರತ

ಇನ್ನುಯಾವುದೇ ಉಗ್ರ ಕೃತ್ಯ ಯುದ್ಧಕ್ಕೆ ಆಹ್ವಾನ

ದೆಹಲಿ: ಪಾಕಿಸ್ತಾನದೊಂದಿಗೆ ಸೇನಾ ಸಂಘರ್ಷ ತೀವ್ರವಾಗುತ್ತಿರುವ ನಡುವೆಯೇ ಭಾರತ ತನ್ನ ರಾಜತಾಂತ್ರಿಕ ನಿಲುವಿನಲ್ಲಿ ಮಹತ್ವದ ಬದಲಾವಣೆಯನ್ನು ಘೋಷಿಸಿದೆ. ಇನ್ನು ಮುಂದೆ ಭಾರತದ ಮೇಲೆ ನಡೆಯುವ ಯಾವುದೇ ಭಯೋತ್ಪಾದಕ ಕೃತ್ಯವನ್ನು ದೇಶದ ಮೇಲಿನ ಯುದ್ಧ ಎಂದು ಪರಿಗಣಿಸುವುದಾಗಿ ಕೇಂದ್ರ ಸರಕಾರ ತಿಳಿಸಿದೆ.

ಭಾರತದ ಭದ್ರತಾ ಪರಿಸ್ಥಿತಿ ಅವಲೋಕಿಸಲು ಪ್ರಧಾನಿ ನರೇಂದ್ರ ಮೋದಿ ನೇತೃತ್ವದಲ್ಲಿ ನಡೆದ ಸಚಿವರು ಮತ್ತು ಸೇನಾಪಡೆ ಮುಖ್ಯಸ್ಥರ ಜತೆ ಸರಣಿ ಸಭೆಯ ಬಳಿಕ ಈ ನಿರ್ಧಾರ ಪ್ರಕಟಿಸಲಾಗಿದೆ. ಈ ಸಭೆಯಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್, ರಾಷ್ಟ್ರೀಯ ಭದ್ರತಾ ಸಲಹೆಗಾರ ಅಜಿತ್ ದೋವಲ್, ಮೂರೂ ಪಡೆಗಳು ಮುಖ್ಯಸ್ಥರು, ಸೇನಾ ಪಡೆಗಳ ಮುಖ್ಯಸ್ಥ ಅನಿಲ್ ಚೌಹಾಣ್ ಹಾಜರಿದ್ದರು.

ಭಾರತದಲ್ಲಿ ಭವಿಷ್ಯದಲ್ಲಿ ನಡೆಯುವ ಯಾವುದೇ ಭಯೋತ್ಪಾದಕ ಕೃತ್ಯವನ್ನು ದೇಶದ ವಿರುದ್ಧದ ಯುದ್ಧ ಕೃತ್ಯ ಎಂದು ಪರಿಗಣಿಸಲಾಗುತ್ತದೆ ಮತ್ತು ಅದಕ್ಕೆ ತಕ್ಕಂತೆ ಪ್ರತಿಕ್ರಿಯಿಸಲಾಗುತ್ತದೆ ಎಂದು ಸರ್ಕಾರದ ಉನ್ನತ ಮೂಲಗಳು ಶನಿವಾರ ತಿಳಿಸಿವೆ.

ಈ ನಿರ್ಧಾರದೊಂದಿಗೆ, ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಸರ್ಕಾರವು ಭಯೋತ್ಪಾದಕ ಘಟನೆಗಳ ವಿರುದ್ಧ ಕೆಂಪು ಗೆರೆ (ರೆಡ್ ಲೈನ್)ಗಳನ್ನು ಎಳೆಯಲು ಪ್ರಯತ್ನಿಸುತ್ತಿದೆ. ಪಾಕ್ ಪ್ರೇರಿತ ಉಗ್ರರು ಮತ್ತು ಅಪರಾಧಿಗಳಿಗೆ ಸ್ಪಷ್ಟ ಸಂದೇಶ ನೀಡಲು ನಿರ್ಧರಿಸಿದೆ. ಇದು ಭಾರತೀಯರನ್ನು ಗುರಿಯಾಗಿಸಿಕೊಂಡು ವಿವಿಧ ಭಯೋತ್ಪಾದಕ ಗುಂಪುಗಳೊಂದಿಗೆ ಸಂಬಂಧ ಹೊಂದಿರುವ ಪಾಕಿಸ್ತಾನಕ್ಕೆ

ಸಂದೇಶವೆಂದು ಪರಿಗಣಿಸಲಾಗಿದೆ.

ಪಾಕಿಸ್ತಾನ ಮೂರು ದಿನಗಳ ಕಾಲ ಡ್ರೋನ್ ಮತ್ತು ಕ್ಷಿಪಣಿ ದಾಳಿಗೆ ಪ್ರಯತ್ನಿಸಿದ ನಂತರ ಭಾರತ ಸರ್ಕಾರ ಈ ಹೇಳಿಕೆ ನೀಡಿದ್ದು, ಪಾಕಿಸ್ತಾನದ ಡ್ರೋನ್ ದಾಳಿಯನ್ನು ಪ್ರಚೋದನಕಾರಿ ಕೃತ್ಯ ಎಂದು ವಿದೇಶಾಂಗ ಇಲಾಖೆ ಟೀಕಿಸಿದೆ. ಗಡಿ ಪ್ರದೇಶಗಳಿಗೆ ಪಾಕಿಸ್ತಾನ ತನ್ನ ಸೇನೆಯನ್ನು ಕಳುಹಿಸುತ್ತಿದೆ ಎಂದು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಹಾಗೂ ವಿದೇಶಾಂಗ ಕಾರ್ಯದರ್ಶಿ ವಿಕ್ರಮ್ ಮಿಸ್ರಿ ಅವರೊಂದಿಗೆ ನಡೆಸಿದ ಪತ್ರಿಕಾಗೋಷ್ಠಿಯಲ್ಲಿ ಸೋಫಿಯಾ ಖುರೇಷಿ ತಿಳಿಸಿದ್ದರು.

ಭಾರತದ ನೆಲೆಗಳ ಮೇಲೆ ದಾಳಿ ನಡೆಸುತ್ತಿರುವ ಪಾಕಿಸ್ತಾನಕ್ಕೆ, ಭದ್ರತಾ ಪಡೆಗಳು ಪ್ರಮಾಣಾನುಗುಣವಾಗಿ ಮತ್ತು ಸಮರ್ಪಕವಾಗಿ ತಿರುಗೇಟು ನೀಡುತ್ತಿವೆ. ಉಭಯ ರಾಷ್ಟ್ರಗಳ ನಡುವೆ ತ್ವೇಷಮಯ ವಾತಾವರಣ ಇದೆ. ಭಾರತದ ಮುಂಚೂಣಿ ನೆಲೆಗಳತ್ತ ಪಾಕಿಸ್ತಾನ ತನ್ನ ಸೇನೆಯನ್ನು ಕಳುಹಿಸುತ್ತಿದೆ ಎಂದು ಭಾರತ ಗುರುವಾರ ಹೇಳಿದೆ. ಉಭಯ ರಾಷ್ಟ್ರಗಳು ಸೇನಾ ಸೌಕರ್ಯಗಳನ್ನು ಗುರಿಯಾಗಿಸಿಕೊಂಡು ದಾಳಿ ನಡೆಸುತ್ತಿವೆ.

ಪಾಕ್‌ಗೆ ಐಎಂಎಫ್ ನೆರವು: ಸಂಸದ ಓವೈಸಿ ಆಕ್ರೋಶ

ಹೈದರಾಬಾದ್: ಪಾಕಿಸ್ತಾನಕ್ಕೆ ಆರ್ಥಿಕ ನೆರವು ಘೋಷಿಸಿರುವ ಐಎಂಎಫ್ ವಿರುದ್ಧ ಹೈದರಾಬಾದ್ ಸಂಸದ, ಎಐಎಂಐಎಂ ಮುಖ್ಯಸ್ಥ ಅಸಾದುದ್ದೀನ್ ಓವೈಸಿ ತೀವ್ರ ಆಕ್ರೋಶ ಹೊರಹಾಕಿದ್ದಾರೆ.

ಅಂತಾರಾಷ್ಟ್ರೀಯ ಹಣಕಾಸು ನಿಧಿ ಅಂತಾರಾಷ್ಟ್ರೀಯ ಭಯೋತ್ಪಾದಕ ನಿಧಿಯಾಗಿದೆ ಎಂದು ಓವೈಸಿ ಟೀಕಾಪ್ರಹಾರ ನಡೆಸಿ ದ್ದಾರೆ. ಪಾಕಿಸ್ತಾನ ಆರ್ಥಿಕ ನೆರವನ್ನು ದುರುಪಯೋಗಪ ಡಿಸಿಕೊಳ್ಳಲಿದೆ ಮತ್ತು ಐಎಂಎಫ್ ಪಾಕ್ ಗೆ ಆರ್ಥಿಕ ನೆರವು ನೀಡುವ ಮೂಲಕ ಭಯೋತ್ಪಾದನೆಗೆ ಬೆಂಬಲ ನೀಡುತ್ತಿದೆ ಎಂದು ಓವೈಸಿ ಟೀಕಿಸಿದ್ದಾರೆ.

ಇದೇ ವೇಳೆ ಪಾಕ್ ವಿರುದ್ಧದ ಹೋರಾಟದ ಸಮಯದಲ್ಲಿ ಏಕೀಕೃತ ಭಾರತಕ್ಕೆ ಭಾರತೀಯ ಮುಸ್ಲಿಮರ ಬದ್ಧತೆಯನ್ನು ಓವೈಸಿ ಪುನರುಚ್ಚರಿಸಿದ್ದಾರೆ. ಪಾಕಿಸ್ತಾನಕ್ಕೆ ಇತ್ತೀಚೆಗೆ 100 ಕೋಟಿ ಡಾಲರ್ ಪ್ಯಾಕೇಜ್ ಕುರಿತು ಪ್ರತಿಕ್ರಿಯೆ ನೀಡಿರುವ ಓವೈಸಿ ಇದು ಅಧಿಕೃತ ಭಿಕ್ಷೆ ಎಂದು ವ್ಯಂಗ್ಯವಾಡಿದ್ದಾರೆ. ಅಮೆರಿಕ, ಜರ್ಮನಿ ಮತ್ತು ಜಪಾನ್ ಪಾಕ್‌ಗೆ ನೆರವು ನೀಡಲು ಹೇಗೆ ಒಪ್ಪಿಕೊಂಡವು... ಎಂದು ಓವೈಸಿ ಪ್ರಶ್ನಿಸಿದರು. ನಾಯಕತ್ವವನ್ನು ಮರೆತುಬಿಡಿ, ಅವರಿಗೆ (ಪಾಕಿಸ್ತಾನ) ಆರ್ಥಿಕತೆಯನ್ನು ಹೇಗೆ ನಡೆಸಬೇಕೆಂದು ತಿಳಿದಿಲ್ಲ. ನೀವು ಅಲ್ಲಿ ಕುಳಿತು ಇಸ್ಲಾಂ ಎಂದರೇನು ಎಂದು ನಮಗೆ ಹೇಳುತ್ತಿದ್ದೀರಿ, ಆದರೆ ನಿಮ್ಮಲ್ಲಿರುವ ಎಲ್ಲವೂ ಇಲ್ಲಿನ ಶಾಂತಿಯನ್ನು ಹಾಳುಮಾಡಲು ಮತ್ತು ಹಿಂದೂಗಳು ಮತ್ತು ಮುಸ್ಲಿಮರ ನಡುವೆ ಸಂಘರ್ಷವನ್ನು ಸೃಷ್ಟಿಸುವ ತಪ್ಪು ನೀತಿಗಳಾಗಿವೆ ಎಂದು ಓವೈಸಿ ಪಾಕ್ ವಿರುದ್ಧವೂ ವಾಗ್ದಾಳಿ ನಡೆಸಿದರು.

ಸಂಸತ್ ನಲ್ಲೇ ಬಡಬಡಿಸಿದ ಪಾಕ್ ರಕ್ಷಣಾ ಸಚಿವ ಖವಾಜಾ ಆಸಿಫ್

ಮದರಸಾ ಮಕ್ಕಳನ್ನೂ ಯುದ್ಧಕ್ಕೆ ಬಳಸುತ್ತೇವೆ..

ಇಸ್ಲಾಮಾಬಾದ್: ಪಹಲ್ಗಾಮ್ ಉಗ್ರ ದಾಳಿ ಮತ್ತು ಅದಕ್ಕೆ ಉತ್ತರವಾಗಿ ಭಾರತದ ನಡೆಸಿದ ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಬಳಿಕ ಭಾರತ ಮತ್ತು ಪಾಕಿಸ್ತಾನ ನಡುವೆ ಸಂಘರ್ಷ ಉಲ್ಬಣಗೊಂಡಿರುವಂತೆಯೇ ಯುದ್ಧಕ್ಕೆ ಮದರಸಾ ವಿದ್ಯಾರ್ಥಿಗಳನ್ನೂ ಬಳಸಿಕೊಳ್ಳುವುದಾಗಿ ಪಾಕಿಸ್ತಾನ ಸರ್ಕಾರ ಹೇಳಿದೆ.

ಭಾರತದೊಂದಿಗಿನ ಸೇನಾ ಸಂಘರ್ಷ ವ್ಯಾಪಕವಾ ಗಿರುವಂತೆಯೇ ಭಾರತವನ್ನು ಹಣಿಯಲು ಸಕಲ ಬಲವನ್ನೂ ಪ್ರಯೋಗಿಸುತ್ತಿರುವ ಪಾಕಿಸ್ತಾನ ಇದೀಗ, ತನ್ನ ದೇಶದ ಮದರಸಾ ಮಕ್ಕಳನ್ನೂ ಕೂಡ ಯುದ್ಧದಲ್ಲಿ ಬಳಸಿಕೊಳ್ಳುವುದಾಗಿ ಹೇಳಿದೆ. ಈ ಕುರಿತು ಸ್ವತಃ ಪಾಕಿಸ್ತಾನ ರಕ್ಷಣಾ ಸಚಿವ ಖವಾಜಾ ಆಸಿಫ್ ಸಂಸತ್ತಿನಲ್ಲಿಯೇ ಹೇಳಿಕೆ ನೀಡಿದ್ದಾರೆ. 'ಮದರಸಾ ವಿದ್ಯಾರ್ಥಿಗಳು ನಮ್ಮ ಎರಡನೇ ಹಂತದ ರಕ್ಷಣಾ ಸಿಬ್ಬಂದಿಗಳು ಎಂಬುದರಲ್ಲಿ ಯಾವುದೇ ಸಂದೇಹವಿಲ್ಲ. ಅಲ್ಲಿ ಓದುತ್ತಿರುವ ಯುವಕರನ್ನು ಸಮಯ ಬಂದಾಗ

ಅಗತ್ಯವಿರುವಂತೆ ಬಳಸಿಕೊಳ್ಳಲಾಗುವುದು ಎಂದು ಆಸಿಫ್ ಹೇಳಿದರು.

ಇದೇ ವೇಳೆ, 'ನಾವು ಭಾರತದ ಡ್ರೋನ್ ದಾಳಿಯನ್ನು ತಡೆದಿಲ್ಲ. ನಮ್ಮ ಸ್ಥಳಗಳ ಬಗ್ಗೆ ಮಾಹಿತಿ ಸೋರಿಕೆಯಾಗಬಾರದು ಎಂಬ ಉದ್ದೇಶದಿಂದ ಹೀಗೆ ಮಾಡಿದೆವು. ಭಾರತವು ನಮ್ಮ ಸ್ಥಳಗಳನ್ನು ಪತ್ತೆಹಚ್ಚಲು ಡ್ರೋನ್ ದಾಳಿ ಮಾಡಿದೆ. ನಾನು ತಾಂತ್ರಿಕ ವಿಷಯಗಳನ್ನು ವಿವರಿಸಲು ಸಾಧ್ಯವಿಲ್ಲ 'ಎಂದು ಸಂಸತ್ತಿನಲ್ಲಿ ಹೇಳಿದ್ದು ನಗೆಪಾಟಲಿಗೆ ಗುರಿಯಾಗಿತ್ತು.

ಪಾಕ್ ಜೈ ಎಂದವನ ಬಂಧನ

ಲಖನೌ: ಭಾರತ-ಪಾಕಿಸ್ತಾನ ನಡುವೆ ಯುದ್ಧ ನಡೆದಿರುವಾಗ ಉತ್ತರ ಪ್ರದೇಶದ ಕೊತ್ವಾಲಿಯಲ್ಲಿನ ವ್ಯಕ್ತಿಯೊಬ್ಬ 'ಪಾಕಿಸ್ತಾನ ಜಿಂದಾಬಾದ್' ಎಂದು ಕೂಗಿದ್ದು, ಶುಕ್ರವಾರ ಸಾಮಾಜಿಕ ಮಾಧ್ಯಮಗಳಲ್ಲಿ ಆ ಸಂದರ್ಭದ ವಿಡಿಯೊ ವೈರಲ್ ಆಗಿದೆ. ಆ ಬಳಿಕ ಪೊಲೀಸರು ಆತನನ್ನು ಬಂಧಿಸಿ ಪ್ರಕರಣ ದಾಖಲಿಸಿದ್ದಾರೆ. ಬಂಧಿತನನ್ನು ಅನ್ವರ್ ಜಮೀಲ್ ಎಂದು ಗುರುತಿಸಲಾಗಿದ್ದು, ವಿಚಾರಣೆ ನಡೆಸಲಾಗುತ್ತಿದೆ ಎಂದು ಅಧಿಕಾರಿಗಳು ಶನಿವಾರ ಸುದ್ದಿಸಂಸ್ಥೆಗೆ ತಿಳಿಸಿದ್ದಾರೆ. 'ಸ್ನೇಹಿತನ ಜತೆ ಬೆಟ್ಟಿಂಗ್ ಕಟ್ಟಿದ್ದಾಗ ಈ ಘೋಷಣೆ ಕೂಗಿದ್ದೆ. ಸ್ನೇಹಿತ ವಿಡಿಯೊ ಮಾಡಿದ್ದ' ಎಂದು ಜಮೀಲ್ ಹೇಳಿಕೊಂಡಿದ್ದಾನೆ. ಅನ್ವರ್ ವಿರುದ್ಧ ಕಾನೂನು ಕ್ರಮ ಕೈಗೊಳ್ಳಬೇಕೆಂದು ಹಿಂದೂ ಸಂಘಟನೆಗಳು ಒತ್ತಾಯಿಸಿವೆ.

ಡ್ರೋನ್ ದಾಳಿ ವಿಫಲಗೊಳಿಸಲು ನಾಗರಿಕ ವಿಮಾನಗಳನ್ನು 'ರಕ್ಷಾ ಕವಚ'ವಾಗಿ ಬಳಸಿಕೊಂಡ ಪಾಕ್

ನಾಗರಿಕರ ಪ್ರಾಣ ಒತ್ತೆ ಇಟ್ಟ ಪಾಕ್

ಇಸ್ಲಾಮಾಬಾದ್: ಆಪರೇಷನ್ ಸಿಂಧೂರ ಸೇನಾ ಕಾರ್ಯಾಚರಣೆ ಬಳಿಕ ಭಾರತದ ವಿರುದ್ಧ ಅಪ್ರಚೋದಿತ ದಾಳಿ ನಡೆಸುತ್ತಿರುವ ಪಾಕಿಸ್ತಾನಕ್ಕೆ ಭಾರತೀಯ ಸೇನೆ ದಿಟ್ಟ ಉತ್ತರ ನೀಡುತ್ತಿರುವಂತೆಯೇ ಅತ್ತ 'ಪಾಪಿ'ಸ್ತಾನ ಭಾರತೀಯ ಸೇನೆಯ ದಾಳಿಯಿಂದ ತಪ್ಪಿಸಿಕೊಳ್ಳಲು ಆಗಸದಲ್ಲಿ ನಾಗರಿಕ ವಿಮಾನಗಳನ್ನು 'ರಕ್ಷಾ ಕವಚ'ದಂತೆ ಉಪಯೋಗಿಸುತ್ತಿದೆ.

ಪಾಕಿಸ್ತಾನವು ತನ್ನ ಅಪ್ರಚೋದಿತ ವೈಮಾನಿಕ ಒಳನುಸುಳುವಿಕೆಗೆ ನಾಗರಿಕ ವಿಮಾನಗಳನ್ನು ಗುರಾಣಿಯಾಗಿ ಬಳಸಿಕೊಂಡಿದೆ ಮತ್ತು ಮಿಲಿಟರಿ ಮೂಲಸೌಕರ್ಯವನ್ನು ಗುರಿಯಾಗಿಸುವ ಉದ್ದೇಶದಿಂದ ಗುರುವಾರ ಸಂಜೆ ವಿಫಲ ಡ್ರೋನ್ ಮತ್ತು ಕ್ಷಿಪಣಿ ದಾಳಿಯನ್ನು ನಡೆಸಿದೆ ಎಂದು ಭಾರತ ಆರೋಪಿಸಿದೆ.

ಮೇ 7 ರಂದು ಸಂಜೆ 8.30ಕ್ಕೆ ವಿಫಲವಾದ ಅಪ್ರಚೋದಿತ ಡ್ರೋನ್ ಮತ್ತು ಕ್ಷಿಪಣಿ ದಾಳಿಯನ್ನು ನಡೆಸಿದ್ದರೂ ಪಾಕಿಸ್ತಾನವು ತನ್ನ ನಾಗರಿಕ ವಾಯುಪ್ರದೇಶವನ್ನು ಮುಚ್ಚಲಿಲ್ಲ. ಮಾತ್ರವಲ್ಲದೇ ಕರಾಚಿ ಮತ್ತು ಲಾಹೋರ್ ವಾಯುಪ್ರದೇಶಗಳನ್ನು ನಾಗರೀಕ ವಿಮಾನಗಳಿಗೆ ಮುಚ್ಚಿದ್ದರೂ ಅಲ್ಲಿ ನಾಗರಿಕ ಪ್ರಯಾಣಿಕ ವಿಮಾನಗಳನ್ನು ನಿಯೋಜಿಸುವ ಮೂಲಕ ಭಾರತದ ವಿರುದ್ಧ ರಕ್ಷಾ ಕವಚವಾಗಿ ಬಳಸುತ್ತಿದೆ ಎಂದು ಸೇನೆ ಆರೋಪಿಸಿದೆ.

ಭಾರತದ ಮೇಲಿನ ದಾಳಿಯು ತ್ವರಿತ ವಾಯು ರಕ್ಷಣಾ ಪ್ರತಿಕ್ರಿಯೆಯನ್ನು ಉಂಟುಮಾಡುತ್ತದೆ ಎಂದು

ಸಂಪೂರ್ಣವಾಗಿ ತಿಳಿದಿದ್ದ ಪಾಕಿಸ್ತಾನವು ನಾಗರಿಕ ವಿಮಾನಗಳನ್ನು ಗುರಾಣಿಯಾಗಿ ಬಳಸಿತು. ಭಾರತೀಯ ಸೇನೆ ವಾಯುದಾಳಿ ಮುಂದುವರಿಸಿರುವಂತೆಯೇ ಅದರಿಂದ ತಪ್ಪಿಸಿಕೊಳ್ಳಲು ಮತ್ತು ಭಾರತದ ಮೇಲೆ ತನ್ನ ಡ್ರೋನ್ ದಾಳಿ ನಡೆಸಲು ನಾಗರಿಕ ವಿಮಾನಗಳನ್ನು ಗುರಾಣಿಯಾಗಿ ಬಳಸುತ್ತಿದೆ ಭಾರತೀಯ ಸೇನೆ ಆರೋಪಿಸಿದೆ.

ಸಂಘರ್ಷದ ನಡುವೆ ನಾಗರಿಕ ವಿಮಾನಗಳ ನಿಯೋಜನೆ

ಭಾರತ ಮತ್ತು ಪಾಕಿಸ್ತಾನದ ನಡುವಿನ ಅಂತಾರಾಷ್ಟ್ರೀಯ ಗಡಿ ರೇಖೆ ಬಳಿ ಹಾರಾಟ ನಡೆಸುತ್ತಿದ್ದ ಅಂತಾರಾಷ್ಟ್ರೀಯ ವಿಮಾನಗಳು ಸೇರಿದಂತೆ ಅನುಮಾನಾಸ್ಪದ ನಾಗರಿಕ ವಿಮಾನಗಳಿಗೆ ಇದು ಸುರಕ್ಷಿತವಲ್ಲ ಎಂದು ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್ ಮತ್ತು ಕರ್ನಲ್ ಸೋಫಿಯಾ ಖುರೇಷಿ ಗಡಿಯಲ್ಲಿನ ಬೆಳವಣಿಗೆಗಳ ಕುರಿತ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಭಾರತದ ವಿರುದ್ಧ ವಿಫಲವಾದ ವೈಮಾನಿಕ ದಾಳಿಯ ಸಮಯದಲ್ಲಿ ಕರಾಚಿ ಮತ್ತು ಲಾಹೋರ್ ನಡುವಿನ ವಾಯು ಮಾರ್ಗದಲ್ಲಿ ನಾಗರಿಕ ವಿಮಾನಯಾನ ಸಂಸ್ಥೆಗಳು ಹಾರಾಟ ನಡೆಸಿದ ಪುರಾವೆಗಳನ್ನು ಭಾರತ ತೋರಿಸಿದೆ.

ಭಾರತೀಯ ವಾಯುಪಡೆಯು ತನ್ನ ಪ್ರತಿಕ್ರಿಯೆಯಲ್ಲಿ ಗಣನೀಯ ಸಂಯಮವನ್ನು ಪ್ರದರ್ಶಿಸುವ ಮೂಲಕ ನಾಗರಿಕ ವಿಮಾನಗಳ ಮೇಲಿನ ದಾಳಿಯನ್ನು ತಪ್ಪಿಸಿದೆ ಎಂದವರು ತಿಳಿಸಿದರು.

ಸಿಂಧೂ ಜಲ ಒಪ್ಪಂದ ಕುರಿತು ಭಾರತದ ನಿಲುವು ಅಚಲ

ದೆಹಲಿ: ಒಂದು ವಾರದಿಂದ ನಡೆದಿದ್ದ ಭಾರತ ಮತ್ತು ಪಾಕಿಸ್ತಾನ ನಡುವಿನ ಸೇನಾ ಸಂಘರ್ಷ ಕೊನೆಗೊಳಿಸುವ ನಿರ್ಧಾರಕ್ಕೆ ಬಂದರೂ ಸಿಂಧೂನದಿ ಜಲವಿವಾದ ರದ್ದು ಸೇರಿದಂತೆ ಪಾಕಿಸ್ತಾನದ ವಿರುದ್ಧ ಪ್ರಕಟಿಸಿರುವ ರಾಜತಾಂತ್ರಿಕ ಕ್ರಮಗಳು ಮುಂದುವರಿಯಲಿವೆ ಎಂದು ಭಾರತ ಸ್ಪಷ್ಟಪಡಿಸಿದೆ.

ಕದನ ವಿರಾಮಕ್ಕೆ ಯಾವುದೇ ಷರತ್ತುಗಳಿಲ್ಲ ಎಂದು ವಿದೇಶಾಂಗ ಇಲಾಖೆ ಸ್ಪಷ್ಟಪಡಿಸಿದ್ದು, ಕದನ ವಿರಾಮಕ್ಕೆ ಪೂರ್ವ ಅಥವಾ ನಂತರದ ಯಾವುದೇ ಷರತ್ತುಗಳಿಲ್ಲ. ಬದಲಿಗೆ ಪಾಕಿಸ್ತಾನದಿಂದಲೇ ಈ ಕದನ ವಿರಾಮಕ್ಕೆ ಕರೆ ಬಂದಿದೆ ಎಂದು ಹೇಳಿದೆ. ಪಹಲ್ಗಾಮ್ ಉಗ್ರ ದಾಳಿ ಬಳಿಕ ಭಾರತ ಘೋಷಿಸಿದ್ದ ಸಿಂಧೂ ಜಲ ಒಪ್ಪಂದ ಅಮಾನತು ಮುಂದುವರೆಯಲಿದೆ ಎಂದೂ ಎಂಇಎ ಸ್ಪಷ್ಟಪಡಿಸಿದೆ. ಉಭಯ ದೇಶಗಳ ಡಿಜಿಎಂಒಗಳು ಮೇ 12ರಂದು ಮಧ್ಯಾಹ್ನ 12 ಗಂಟೆಗೆ ಮತ್ತೆ ಮಾತುಕತೆ ನಡೆಸಲಿದ್ದು, ಅಂದಿನ ಚರ್ಚೆ ಬಳಿಕ ಎಲ್ಲ ರೀತಿಯ ಗೊಂದಲಗಳಿಗೆ ತೆರೆ ಬೀಳಲಿದೆ.

ಭಾರತದ ನಿಲುವು ಬದಲಾಗಲ್ಲ:ಜೈಶಂಕರ್ : ಭಯೋತ್ಪಾದನೆ ವಿರುದ್ಧ ಭಾರತದ ನಿಲುವಿನಲ್ಲಿ ಯಾವುದೇ ರಾಜಿ ಇಲ್ಲ, ಅದು ಮುಂದುವರೆಯುತ್ತದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಶನಿವಾರ ಹೇಳಿದ್ದಾರೆ..

ಕದನ ವಿರಾಮ ಒಪ್ಪಂದದ ನಂತರ ಸಾಮಾಜಿಕ ಜಾಲತಾಣ ಎಕ್ಸ್ ನಲ್ಲಿ ಪೋಸ್ಟ್ ಮಾಡಿರುವ ಜೈಶಂಕರ್, ಭಾರತ ಮತ್ತು ಪಾಕಿಸ್ತಾನ ಇಂದು ಗುಂಡಿನ ದಾಳಿ ಮತ್ತು ಮಿಲಿಟರಿ ಕಾರ್ಯಾಚರಣೆ ನಿಲ್ಲಿಸುವ ಕುರಿತು ಪರಸ್ಪರ ಒಮ್ಮತಕ್ಕೆ ಬಂದಿವೆ. ಆದರೆ, ಭಾರತ ಯಾವುದೇ ಮಾದರಿಯ ಭಯೋತ್ಪಾದನೆ ಮತ್ತು ಸೂಚನೆಗಳ ವಿರುದ್ಧ ರಾಜಿಯಾಗದ ನಿಲುವನ್ನು ಸ್ಥಿರವಾಗಿ ನಿರ್ವಹಿಸುತ್ತಿದೆ. ಅದು ಮುಂದುವರಿಯುತ್ತದೆ ಎಂದು ಬರೆದುಕೊಂಡಿದ್ದಾರೆ.



ಸಮಾಚಾರ ಸಣ್ಣದಲ್ಲ

ಬಾವಿಗೆ ಬಿದ್ದು ಮಗು ಸಾವು



ವಿಜಯಪುರ: ಆಟವಾಡುತ್ತಿದ್ದ ಮಗು ತೆರೆದ ಬಾವಿಗೆ ಬಿದ್ದು ಸಾವನ್ನಪ್ಪಿದ ಘಟನೆ ವಿಜಯಪುರ ಜಿಲ್ಲೆಯ ಮುದ್ದೇಬಿಹಾಳ ಪಟ್ಟಣದಲ್ಲಿ ನಡೆದಿದೆ. ಮೂರು ವರ್ಷದ ಹರ್ಷಿತ್ ಪಾಟೀಲ್ ಬಾವಿಗೆ ಬಿದ್ದು ಸಾವನ್ನಪ್ಪಿರುವ ಮಗು. ಶುಕ್ರವಾರ ಮಗು ಮನೆಯಿಂದ ನಾಪತ್ತೆಯಾಗಿತ್ತು. ಮಗು ಎಲ್ಲಿದೆ ಎನ್ನುವ ಬಗ್ಗೆ ಮಾಹಿತಿ ಸಿಕ್ಕಿರಲಿಲ್ಲ. ಕಂಗಾಲಾದ ಕುಟುಂಬಸ್ಥರು ಹರ್ಷಿತ್ ಹುಡುಕಾಟದಲ್ಲಿ ತೊಡಗಿದ್ದರು. ಇಂದು ಸ್ಥಳೀಯರು ಬಾವಿಯಲ್ಲಿ ಇಳಿದು ನೋಡಿದಾಗ ಮಗುವಿನ ಮೃತದೇಹ ಪತ್ತೆಯಾಗಿದೆ. ಕುಟುಂಬಸ್ಥರು ಮಗುವನ್ನು ತೆರೆದ ಬಾವಿಯ ಆಸುಪಾಸಲ್ಲಿ ಆಡಲು ಬಿಟ್ಟಾಗ ಅನಾಹುತ ನಡೆದಿದೆ ಎನ್ನಲಾಗಿದೆ. ಘಟನೆ ಸಂಬಂಧ ಮುದ್ದೇಬಿಹಾಳ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಒಂಟಿ ಸಲಗ ಸಾವು

ಸಕಲೇಶಪುರ: ದೈತ್ಯಾಕಾರದ ಸಲಗವೊಂದು ಅನುಮಾನಾಸ್ಪದವಾಗಿ ಮೃತಪಟ್ಟಿರುವ ಘಟನೆ ತಾಲೂಕಿನ ಸುಳ್ಳಕ್ಕಿ-ಶಾಂತಪುರ ಗ್ರಾಮದ ಬಳಿ ನಡೆದಿದೆ. ರಸ್ತೆಯಲ್ಲಿಯೇ ರಕ್ತದ ಮಡುವಿನಲ್ಲಿ ಬಿದ್ದು ಸಲಗ ಸಾವನ್ನಪ್ಪಿದ್ದು, ಇದು ಹಲವು ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ವಿದ್ಯುತ್ ಕಂಬದಿಂದ ಕೇವಲ ಎರಡು ಅಡಿ ದೂರದಲ್ಲಿ ಸಲಗ ಸಾವನ್ನಪ್ಪಿದೆ. ಸಲಗನ ಸಾವು ನಾನಾ ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದ್ದು, ವಿದ್ಯುತ್ ಶಾಕ್, ಗುಂಡೇಟು ಅಥವಾ ವಾಹನ ಡಿಕ್ಕಿಯಿಂದ ಸಾವನ್ನಪ್ಪಿರುವ ಶಂಕೆ ವ್ಯಕ್ತವಾಗಿದೆ. ಬೆಳ್ಳಂಬೆಳಗ್ಗೆ ಎರಡೂ ದಂತಗಳಿರುವ ಕಾಡಾನೆ ಮೃತಪಟ್ಟಿರುವುದನ್ನು ನೋಡಲು ಜನರು ಮುಗಿಬಿದಿದ್ದರು. ಯಾರದೋ ನಿರ್ಲಕ್ಷ್ಯಕ್ಕೆ ಅಂದಾಜು 18-20 ವರ್ಷದ ಒಂಟಿಸಲಗ ಸಾವನ್ನಪ್ಪಿದೆ. ಸ್ಥಳಕ್ಕೆ ಅರಣ್ಯ ಇಲಾಖೆ, ವಿದ್ಯುತ್ ಇಲಾಖೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ಎಲ್ಲ ಕಳಂಕಗಳಿಂದ ರೆಡ್ಡಿ ಹೊರಬರುತ್ತಾರೆ

ಬಳ್ಳಾರಿ: ಜನಾರ್ದನ ರೆಡ್ಡಿ ಜೈಲಿಗೆ ಸೇರಿದ ಬಳಿಕ ಅದರ ಸಾಧಕ-ಬಾಧಕಗಳ ಬಗ್ಗೆ ಜನಾರ್ದನ ರೆಡ್ಡಿ ಮನೆಯಲ್ಲಿ ಬೆಂಬಲಿಗರು ಸಭೆ ನಡೆಸಿದ್ದಾರೆ. ಈ ವೇಳೆ ಜನಾರ್ದನ ರೆಡ್ಡಿ ಪತ್ನಿ ಲಕ್ಷ್ಮಿ ಅರುಣಾ ಅವರು ವಿಡಿಯೊ ಕಾಲ್ ಮೂಲಕ ಕಾರ್ಯಕರ್ತರಿಗೆ ಧೈರ್ಯ ತುಂಬಿದ್ದಾರೆ. ನಾನೇ ಖುದ್ದಾಗಿ ಕಾರ್ಯಕರ್ತರ ಮನೆಗೆ ಬಂದು ಭೇಟಿಯಾಗುತ್ತೇನೆ ಎಂದು ಹೇಳಿದ್ದಾರೆ. ಜನಾರ್ದನ ರೆಡ್ಡಿಯವರು ಯಾರಿಗೂ ಏನೂ ಅನ್ಯಾಯ ಮಾಡಿಲ್ಲ, ಸಾರ್ವಜನಿಕ ಜೀವನದಲ್ಲಿ ಎಲ್ಲರಿಗೂ ನ್ಯಾಯ ಒದಗಿಸಿದ್ದಾರೆ. ನಮಗೆ ದೇವರ ಮೇಲೆ ನಂಬಿಕೆ ಇದೆ. ಅವರು ಆದಷ್ಟು ಬೇಗ ಎಲ್ಲ ಕಳಂಕಗಳಿಂದ ಹೊರಬರುತ್ತಾರೆ ಎಂಬ ನಂಬಿಕೆ ನಮಗಿದೆ ಎಂದು ಹೇಳಿದ್ದಾರೆ. ಸಭೆ ಬಳಿಕ ಯಂತ್ರೋದ್ಧಾರಕ ದೇವಸ್ಥಾನದಲ್ಲಿ ಕಾರ್ಯಕರ್ತರು ಪೂಜೆ ಸಲ್ಲಿಸಿದ್ದಾರೆ.

ಸೂಸೈಡ್ ಬಾಂಬ್ ಹೇಳಿಕೆಗೆ ಬದ್ಧ

ಕಲಬುರಗಿ: ಪ್ರಧಾನಮಂತ್ರಿ ನರೇಂದ್ರ ಮೋದಿ ಹೇಳಿದರೆ, ನಾನು ಸೂಸೈಡ್ ಬಾಂಬ್ ಕಟ್ಟಿಕೊಂಡು ಪಾಕಿಸ್ತಾನಕ್ಕೆ ಹೋಗಲು ಸಿದ್ಧನಿದ್ದೇನೆ ಎಂದು ಸಚಿವ ಜಮೀರ್ ಅಹ್ಮದ್ ಖಾನ್ ಪುನರುಚ್ಚರಿಸಿದರು. ಸುದ್ದಿಗಾರರೊಂದಿಗೆ ಮಾತನಾಡಿ, ದೇಶಕ್ಕಾಗಿ ನಾನು ಏನು ಮಾಡಲು ಸಹ ಸಿದ್ಧನಿದ್ದೇನೆ. ಸೂಸೈಡ್ ಬಾಂಬ್ ಕಟ್ಟಿಕೊಂಡು ಹೋಗಲು ನಾನು ರೆಡಿ. ಪಾಕಿಸ್ತಾನ ಖಾಲಿ ಡಬ್ಬಾ ಇದ್ದಂತೆ. ಒಂದು ಠುಸ್ ಪಟಾಕಿಯಾಗಿದೆ. ಅದರಲ್ಲಿ ಏನು ಇಲ್ಲ ಎಂದು ಹೇಳಿದರು. ಪಾಕಿಸ್ತಾನ ಭಾರತದ ಎದುರು ಏನು ಅಲ್ಲ. ಎರಡೇ ದಿನದಲ್ಲಿ ಸಂಪೂರ್ಣ ಪಾಕಿಸ್ತಾನ ನಿರ್ನಾಮ ಮಾಡುವ ತಾಕತ್ತು ಭಾರತಕ್ಕಿದೆ. ಮನಸ್ಸು ಮಾಡಿದರೆ ಎರಡೇ ದಿನದಲ್ಲಿ ಪಾಕ್ ಉಡೀಸ್ ಮಾಡುತ್ತೇವೆ. ಕೇಂದ್ರ ಸರಕಾರ ಉತ್ತಮ ನಿರ್ಧಾರ ಕೈಗೊಂಡಿದೆ ಎಂದರು.

ವಿರಾಮ
ಪ್ರತಿ ಭಾನುವಾರ



ನವೋದಯ ಸ್ವಸಹಾಯ ಗುಂಪುಗಳ ರಜತ ಸಂಭ್ರಮದಲ್ಲಿ ಡಿಸಿಎಂ ಡಿ.ಕೆ.ಶಿವಕುಮಾರ್ ಹೇಳಿಕೆ

ಕರಾವಳಿಯಲ್ಲಿ ಶಿಸ್ತುಬದ್ಧ ಸಾಲ ಮರುಪಾವತಿ

ಮಂಗಳೂರು: ಕರಾವಳಿ ಭಾಗದ ಜನ ಪ್ರತಿಭಾವಂತರು, ಬುದ್ಧಿವಂತರು. ಇವರು ಇಲ್ಲೇ ಉದ್ಯೋಗ ಮಾಡುವ ವಾತಾವರಣ ನಿರ್ಮಿಸಬೇಕು. ಇಲ್ಲಿ ಮತ್ತೆ ಶಾಂತಿ ನೆಲೆಸಬೇಕು. ಜನರಲ್ಲಿ ಸಹೋದರತ್ವ ಭಾವನೆ ಮೂಡಿಸಬೇಕು. ಅಭಿವೃದ್ಧಿ ಕೆಲಸಗಳ ಮೂಲಕ ಕರಾವಳಿ ಪ್ರದೇಶದಲ್ಲಿ ಮತ್ತೆ ಇತಿಹಾಸ ಸೃಷ್ಟಿಸೋಣ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ತಿಳಿಸಿದರು.

ಮಂಗಳೂರಿನ ಬಂಗ್ರ ಕೂಳೂರುನಲ್ಲಿ ಶನಿವಾರ ನಡೆದ ನವೋದಯ ಸ್ವಸಹಾಯ ಗುಂಪುಗಳ ರಜತ ಸಂಭ್ರಮ 2025 ಕಾರ್ಯಕ್ರಮದಲ್ಲಿ ಅವರು ಮಾತನಾಡಿ, ಇಪ್ಪತ್ತೈದು ವರ್ಷದ ಹಿಂದೆ ಎಸ್ ಎಂ.ಕೃಷ್ಣ ಅವರ ಸಂಪುಟದಲ್ಲಿ ಸಹಕಾರ ಮಂತ್ರಿಯಾಗಿದ್ದ ವೇಳೆ ಈ ಕಾರ್ಯಕ್ರಮದ ಜ್ಯೋತಿ ಬೆಳಗಿಸಿದ್ದೆ. ಅಂದು ಹಚ್ಚಿದ ಹಣತೆ ಲಕ್ಷಾಂತರ ಮಹಿಳೆಯರ ಬಾಳಿನಲ್ಲಿ ಬೆಳಕು ತಂದಿದೆ, ಇನ್ನೂ ಉರಿಯುತ್ತಲೇ ಇದೆ. 'ಶುಭಂ ಕರೋತಿ ಕಲ್ಯಾಣಂ ಆರೋಗ್ಯಂ ಧನಸಂಪದಂ, ಜ್ಞಾನ ಶಕ್ತಿ ಸ್ವರೂಪಸ್ಯ ದೀಪ ಜ್ಯೋತಿ ಪ್ರಕಾಶಿತಂ' ಎಂಬಂತೆ ಎಲ್ಲರಿಗೂ ಮಂಗಳವಾಗಲಿ, ಶುಭವಾಗಲಿ, ಆರೋಗ್ಯವಂತರಾಗಲಿ, ಐಶ್ವರ್ಯವಂತರಾಗಲಿ, ನೆಮ್ಮದಿಯಿಂದ ಬದುಕಲಿ ಎಂದು ಈ ಜ್ಯೋತಿಯನ್ನು ಮತ್ತೆ ನಾವೆಲ್ಲ ಬೆಳಗಿದ್ದೇವೆ ಎಂದು ಹೇಳಿದರು.

ಹೆಣ್ಣು ಕುಟುಂಬದ ಕಣ್ಣು. ಅವರಿಗೆ ಆರ್ಥಿಕ ಶಕ್ತಿ ನೀಡಬೇಕು ಎಂದು ಕೃಷ್ಣ ಅವರ ಸರಕಾರದಲ್ಲಿ ಸ್ತ್ರೀ ಶಕ್ತಿ ಕಾರ್ಯಕ್ರಮ ರೂಪಿಸಿದ್ದೆವು. ರಾಜೇಂದ್ರ ಕುಮಾರ್ ಅವರು ಯಾವುದೇ ರಾಜಕೀಯ ಸ್ಥಾನಮಾನದ ನಿರೀಕ್ಷೆ ಇಲ್ಲದೆ ಕರಾವಳಿ ಕ್ಷೇತ್ರದಲ್ಲಿ ಸಹಕಾರಿ ಧುರೀಣರಾಗಿ ಕೆಲಸ ಮಾಡಿಕೊಂಡು ಬಂದಿದ್ದಾರೆ. ಜನರ- ತಾಯಂದಿರ ಸೇವೆ ಮಾಡಬೇಕು. ಎಲ್ಲರಿಗೂ ಆರ್ಥಿಕವಾಗಿ ಶಕ್ತಿ ಕೊಡಬೇಕೆಂದು ನವೋದಯ ಚಾರಿಟೇಬಲ್ ಟ್ರಸ್ಟ್ ಸ್ಥಾಪಿಸಿದರು ಎಂದರು.

ನಾನು ಸಹಕಾರಿ ಕ್ಷೇತ್ರದಲ್ಲಿ ತೊಡಗಿಸಿಕೊಂಡು ನನ್ನ ರಾಜಕೀಯ ಜೀವನ ಆರಂಭಿಸಿದ್ದೆ. ನಂತರ ನಾನು ಚುನಾವಣೆಯಲ್ಲಿ ಸ್ಪರ್ಧಿಸಿ ಶಾಸಕನಾಗಿ, ಸಹಕಾರಿ ಸಚಿವನಾಗಿ ಈಗ ಉಪಮುಖ್ಯಮಂತ್ರಿಯಾಗಿ ಜನರ ಮುಂದೆ ನಿಂತಿದ್ದೇನೆ ಎಂದು ಹೇಳಿದರು.



ಮಂಗಳೂರಿನ ಬಂಗ್ರ ಕೂಳೂರುನಲ್ಲಿ ನಡೆದ ನವೋದಯ ಸ್ವಸಹಾಯ ಗುಂಪುಗಳ ರಜತ ಸಂಭ್ರಮ ಕಾರ್ಯಕ್ರಮವನ್ನು ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಡಿಸಿಎಂ ಡಿ.ಕೆ. ಶಿವಕುಮಾರ ಉದ್ಘಾಟಿಸಿದರು. ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್, ಡಾ. ಎಂ.ಎನ್. ರಾಜೇಂದ್ರ ಕುಮಾರ್, ಯು.ಟಿ. ಖಾದರ್, ಧರ್ಮಸ್ಥಳ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ಇದ್ದರು.

ರಾಜ್ಯದಲ್ಲಿ ಅತಿ ಹೆಚ್ಚು ಶಿಸ್ತಿನಿಂದ ಬ್ಯಾಂಕು, ಸಹಕಾರಿ ಸಂಘಗಳಲ್ಲಿ ಸಾಲಗಳು ಮರುಪಾವತಿ ಮಾಡುತ್ತಿದ್ದಾರೆ, ಅದು ದಕ್ಷಿಣ ಕನ್ನಡ ಹಾಗೂ ಉಡುಪಿ ಜಿಲ್ಲೆಗಳಲ್ಲಿ. ಇಲ್ಲಿ ಕೊಟ್ಟ ಮಾತುಗಳನ್ನು ನಾವೂ ಉಳಿಸಿಕೊಂಡು ಬರುತ್ತಿದ್ದೇವೆ. ಈ ಜಿಲ್ಲೆ ಬಗ್ಗೆ ಅಪಾರ ವಿಶ್ವಾಸ, ನಂಬಿಕೆ ಇಟ್ಟುಕೊಂಡಿದ್ದೇನೆ. ಇಲ್ಲಿನ ಜನ ಹೆಚ್ಚು ಬುದ್ಧಿವಂತರು, ವಿದ್ಯಾವಂತರು. ಅತಿಹೆಚ್ಚು ವಿದ್ಯಾವಂತರನ್ನು ಕೊಟ್ಟ ಜಿಲ್ಲೆ ಇದು. ದೇಶದಲ್ಲಿ ಅತಿ ಹೆಚ್ಚು ಬ್ಯಾಂಕುಗಳನ್ನು ಕೊಟ್ಟ ಪುಣ್ಯಭೂಮಿ ಇದು. ಈ ಪರಂಪರೆಯನ್ನು ನೀವು ಉಳಿಸಿಕೊಳ್ಳಬೇಕು ಎಂದು ತಿಳಿಸಿದರು.

ರಾಜೇಂದ್ರಕುಮಾರ್ ಮತ್ತವರ ತಂಡ ಯಾವುದೇ ಅಧಿಕಾರ ಬಯಸದೆ ನಿಮ್ಮ ಸೇವೆ ಮಾಡುತ್ತಾ ಇತಿಹಾಸ ನಿರ್ಮಿಸಿದ್ದಾರೆ. ಜನನ ಉಚಿತ, ಮರಣ ಖಚಿತ. ಹುಟ್ಟು- ಸಾವುಗಳ ನಡುವೆ ಏನಾದರೂ ಮಾಡಬೇಕು. ರಾಜೇಂದ್ರಕುಮಾರ್ ಅವರಿಗೆ ತುಂಬು ಹೃದಯದಿಂದ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ವಿಧಾನಸಭೆ ಸಭಾಧ್ಯಕ್ಷರಾದ ಯು.ಟಿ. ಖಾದರ್ ಮಾತನಾಡಿ, ದ್ವೇಷ ಮತ್ತು ದುಶ್ಚಟ ಮುಕ್ತ ಸಮಾಜ ನಿರ್ಮಾಣಕ್ಕೆ ದೊಡ್ಡ ಕೊಡುಗೆ ನೀಡಬೇಕಾಗಿದೆ. ಕರಾವಳಿಯ ಮಹಿಳೆಯರು ಬೀಡಿ ಉದ್ಯಮ, ಹಂಚಿನ ಕಾರ್ಖಾನೆಯ ಜತೆ ಸ್ವ ಸಹಾಯ ಸಂಘಗಳ ಮೂಲಕ ಸ್ವಾಭಿಮಾನದ ಬದುಕು ಕಟ್ಟಿದವರು. ಸ್ವ ಸಹಾಯ ಸಂಘಗಳ ಮೂಲಕ ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ನೀಡಿ ಸಮಾಜಕ್ಕೆ ಕೊಡುಗೆ ನೀಡುವಂತಾಗಲಿ ಎಂದವರು ಶುಭ ಹಾರೈಸಿದರು.

ರಾಜ್ಯ ಸಹಕಾರ ಮಾರಾಟ ಮಹಾಮಂಡಳ ನಿ. ಹಾಗೂ ಡಿಸಿಸಿ ಬ್ಯಾಂಕ್ ಅಧ್ಯಕ್ಷರು, ನವೋದಯ ಗ್ರಾಮ ವಿಕಾಸ ಟ್ರಸ್ಟ್ ಸಂಸ್ಥಾಪಕರಾದ ಡಾ.ಎಂ.ಎನ್. ರಾಜೇಂದ್ರಕುಮಾರ್ ಅಧ್ಯಕ್ಷತೆ ವಹಿಸಿದ್ದರು. ಉಡುಪಿ ಪೇಜಾವರ ಮಠದ ಶ್ರೀ ವಿಶ್ವಪ್ರಸನ್ನ ತೀರ್ಥ ಸ್ವಾಮೀಜಿ ಆಶೀರ್ವಚನ ನೀಡಿದರು. ಮುಖ್ಯ ಅತಿಥಿಗಳಾಗಿ ಸಹಕಾರ ಸಚಿವರಾದ ಕೆ. ಎನ್.ರಾಜಣ್ಣ, ಜಿಲ್ಲಾ ಉಸ್ತುವಾರಿ ಸಚಿವರಾದ ದಿನೇಶ್ ಗುಂಡೂರಾವ್, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಖಾತೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಮಾತನಾಡಿದರು. ಸಮಾರಂಭದಲ್ಲಿ ವಿಧಾನ ಪರಿಷತ್ ಸದಸ್ಯರಾದ ಐವನ್ ಡಿಸೋಜ, ಡಾ.ಮಂಜುನಾಥ ಭಂಡಾರಿ, ಬೋಜೇ ಗೌಡ ,ಶಾಸಕರಾದ ಡಾ.ಭರತ್ ಶೆಟ್ಟಿ, ವೇದ ವ್ಯಾಸ ಕಾಮತ್, ಅಶೋಕ್ ಕುಮಾರ್ ರೈ, ಉಮಾನಾಥ ಕೋಟ್ಯಾನ್, ಗುರ್ಮೆ ಸುರೇಶ್ ಶೆಟ್ಟಿ, ಯಶ್ಪಾಲ್ ಸುವರ್ಣ ಉಪಸ್ಥಿತರಿದ್ದರು.

ಮಹಿಳೆಯರ ಬೆಳವಣಿಗೆಗೆ ಸುವರ್ಣ ಅವಕಾಶ

ರಾಜ್ಯಸಭಾ ಸದಸ್ಯ, ಧರ್ಮಸ್ಥಳದ ಧರ್ಮಾಧಿಕಾರಿ ಡಾ.ಡಿ.ವೀರೇಂದ್ರ ಹೆಗ್ಗಡೆ ರಜತ ಸಂಭ್ರಮದ 'ಸಂತೃಪ್ತಿ' ಸ್ಮರಣ ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡಿ, ಸ್ವಸಹಾಯ ಸಂಘ ಮಹಿಳೆಯರ ಬೆಳವಣಿಗೆಗೆ ಒಂದು ಅವಕಾಶ ನೀಡಿದಂತಾಗಿದೆ. ಸಂಘಟನೆ ಉದ್ದೇಶ ಅರಿತು ಬೆಳೆಯಬೇಕು. ಈ ಸಂಘಟನೆ ಈ ರೀತಿ ಬೆಳೆಯಲು ಕಾರಣರಾದ ಎಂ.ಎನ್. ರಾಜೇಂದ್ರ ಕುಮಾರ್ ಅವರನ್ನು ಅಭಿನಂದಿಸಿದರು.

ಬ್ಯಾಂಕ್‌ನಲ್ಲಿ ದುಡ್ಡಿದ್ದರೆ ಏನೂ ಪ್ರಯೋಜನ ಇಲ್ಲ. ದುಡ್ಡು- ಬ್ಲಡ್ ಎರಡೂ ಜಂಗಮ ಸ್ವರೂಪಿಯಾಗಿ ರಬೇಕು ಎಂದು ಸಾಯಿಬಾಬಾ ಅವರು ಹೇಳಿದ್ದರು. ಎರಡೂ ಒಂದೇ ಕಡೆ ಇದ್ದರೆ ಸಮಸ್ಯೆ ಹೆಚ್ಚು. ಹಣ ಹರಿದಾಡುತ್ತಿದ್ದರೆ ಆರ್ಥಿಕವಾಗಿ, ದೇಹದಲ್ಲಿ ರಕ್ತ ಚೆನ್ನಾಗಿ ಹರಿದಾಡುತ್ತಿದ್ದರೆ ಆರೋಗ್ಯವಾಗಿರುತ್ತೇವೆ. ಇದೇ ಸಹಕಾರಿ ತತ್ವದ ಮೂಲ. ನಾವೆಲ್ಲರೂ ಒಗ್ಗಟ್ಟಾಗಿ ಈ ಜಿಲ್ಲೆಯ ಪರಂಪರೆ. ಈ ರಾಜ್ಯದ ಭವಿಷ್ಯಕ್ಕಾಗಿ ಕೆಲಸ ಮಾಡೋಣ.

ಡಿ.ಕೆ.ಶಿವಕುಮಾರ, ಉಪಮುಖ್ಯಮಂತ್ರಿ

ಸೈನಿಕರ ಕಲ್ಯಾಣ ನಿಧಿಗೆ 3 ಕೋಟಿ ರು. ದೇಣಿಗೆ

ಡಾ. ಎಂ.ಎನ್. ರಾಜೇಂದ್ರ ಕುಮಾರ್ ಮಾತನಾಡಿ, ಭಯೋತ್ಪಾದನೆಯ ವಿರುದ್ಧದ ಸಿಂದೂರ ಕಾರ್ಯಾಚರಣೆಯಲ್ಲಿ ಭಾಗವಹಿಸುತ್ತಿರುವ ಸೈನಿಕರಿಗೆ ಶಕ್ತಿ ತುಂಬುವುದಕ್ಕಾಗಿ ನವೋದಯ ಸಂಸ್ಥೆಯಿಂದ ಮತ್ತು ತನ್ನ ವೈಯಕ್ತಿಕ ನೆಲೆಯಲ್ಲಿ 3 ಕೋಟಿ ರು. ಸೈನಿಕರ ಕಲ್ಯಾಣ ನಿಧಿಗೆ ನೀಡಲಾಗುವುದು. ಮಾಜಿ ಸಚಿವ ಎಸ್.ಎಸ್. ಪಾಟೀಲ್ ಪ್ರೇರಣೆಯಿಂದ ನಾನು ಮಹಿಳೆಯರಿಗೆ ಶಕ್ತಿ ನೀಡಬೇಕೆಂದು 25 ವರ್ಷಗಳ ಹಿಂದೆ ನವೋದಯ ಸ್ವ-ಸಹಾಯ ಸಂಘ ಆರಂಭಿಸಿದ್ದೆ. ಮಹಿಳೆಯರ ಶಕ್ತಿ ಎಷ್ಟಿದೆ, ಸ್ವಾವಲಂಬನೆ ಸಾಧಿಸಿದ್ದಾರೆ ಎನ್ನುವುದನ್ನು ತೋರಿಸಲು ಈ ಸಮಾವೇಶ. ಈಗಾಗಲೇ 8 ಜಿಲ್ಲೆಗಳಲ್ಲಿದ್ದು, ಸಾಧ್ಯವಾದರೆ ಇನ್ನೆರಡು ಜಿಲ್ಲೆಗಳಿಗೆ ವಿಸ್ತರಿಸಲಾಗುವುದು ಎಂದರು.

ಸ್ವ ಸಹಾಯ ಸಂಘಗಳಿಂದ ಮಹಿಳಾ ಸಶಕ್ತತೆ ಸಾಧ್ಯ

ಸ್ವ ಸಹಾಯ ಸಂಘಗಳ ಮೂಲಕ ಮಹಿಳಾ ಸಶಕ್ತತೆಯೊಂದಿಗೆ ದೇಶದ ಅಭಿವೃದ್ಧಿಗೆ ಕೊಡುಗೆ ನೀಡುವಂತಾಗಲಿ ಎಂದು ಕರ್ನಾಟಕದ ರಾಜ್ಯಪಾಲ ಥಾವರ್ ಚಂದ್ ಗೆಹ್ಲೋಥ್ ಹೇಳಿದರು. 'ನವೋದಯ 'ರಜತ ಸಂಭ್ರಮ' ಸಮಾರಂಭದಲ್ಲಿ ಸಹಕಾರಿ ಲಾಂಛನ ಬಿಡುಗಡೆಗೊಳಿಸಿ ಮಾತನಾಡಿ, ಮಹಿಳೆಯರ ಆರ್ಥಿಕ ಸ್ವಾವಲಂಬನೆಗಾಗಿ ಸ್ಥಾಪನೆಯಾದ ನವೋದಯ ಸ್ವ ಸಹಾಯ ಗುಂಪುಗಳು ಸಮಾಜದಲ್ಲಿ ಸಕಾರಾತ್ಮಕ ಬದಲಾವಣೆಗೆ ಕಾರಣವಾಗಿದೆ. ದೇಶದ ಯೋಧರ ಕಲ್ಯಾಣ ನಿಧಿಗೆ ರಾಜೇಂದ್ರ ಕುಮಾರ್ ಅವರು 3 ಕೋಟಿ ರು. ದೇಣಿಗೆ ನೀಡಿರುವುದಕ್ಕೆ ಕೃತಜ್ಞತೆ ಸಲ್ಲಿಸುತ್ತಾ, ನವೋದಯ ಸ್ವ ಸಹಾಯ ಸಂಘಗಳ ಮೂಲಕ ಲಕ್ಷಾಂತರ ಗ್ರಾಮೀಣ ಮಹಿಳೆಯರ ಬದುಕಿನಲ್ಲಿ ಆರ್ಥಿಕ ಬದಲಾವಣೆ ಜತೆ ಸಾಮಾಜಿಕ ಅಭಿವೃದ್ಧಿಯಲ್ಲಿ ಮಹತ್ವದ ಹೆಜ್ಜೆಯಾಗಿದೆ ಎಂದರು.

ಬಾಗೇಪಲ್ಲಿ ಮಾರ್ಗವಾಗಿ ಸ್ವಗ್ರಾಮ ಕಲ್ಲಿ ತಾಂಡದತ್ತ ಸಾಗಿದ ಸೇನಾ ವಾಹನ

ವೀರಯೋಧ ಮುರಳಿ ನಾಯಕ್‌ಗೆ ಅಂತಿಮ ನಮನ

ಬೆಂಗಳೂರು/ಚಿಕ್ಕಬಳ್ಳಾಪುರ: ಜಮ್ಮು ಮತ್ತು ಕಾಶ್ಮೀರದ ಗಡಿ ನಿಯಂತ್ರಣ ರೇಖೆಯಲ್ಲಿ ನಡೆದ ಗುಂಡಿನ ಚಕಮಕಿಯಲ್ಲಿ ಹುತಾತ್ಮರಾಗಿದ್ದ ಆಂಧ್ರಪ್ರದೇಶ ಮೂಲದ ಯೋಧ ಮುರುಳಿ ನಾಯಕ್ ಅವರ ಪಾರ್ಥಿವ ಶರೀರ ದೆಹಲಿಯಿಂದ ಬೆಂಗಳೂರಿನ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಆಗಮಿಸಿತು. ಈ ವೇಳೆ ಹುತಾತ್ಮ ಯೋಧನಿಗೆ ಸೇನಾಧಿಕಾರಿಗಳು ಅಂತಿಮ ನಮನ ಸಲ್ಲಿಸಿದರು.

ಇಂಡಿಗೋ ವಿಮಾನದ ಮೂಲಕ ದೆಹಲಿಯಿಂದ ದೇವನಹಳ್ಳಿ ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ ಕಾರ್ಗೋ ಟರ್ಮಿನಲ್‌ಗೆ ಯೋಧನ ಪಾರ್ಥಿವ ಶರೀರ ಆಗಮಿಸಿತು. ಅಲ್ಲಿಂದ ಯೋಧನ ಸ್ವಗ್ರಾಮ ಆಂಧ್ರಪ್ರದೇಶದ ಸತ್ಯಸಾಯಿ ಜಿಲ್ಲೆಯ ಗೋರಂಟ್ಲ ಮಂಡಲದ ಕಲ್ಲಿತಾಂಡ ಗ್ರಾಮಕ್ಕೆ ಕಳುಹಿಸಲಾಯಿತು.

ದಾರಿ ನಡುವೆ ವೀರ ಯೋಧ ಮುರಳಿ ನಾಯಕ್ ಅವರಿಗೆ ಬಾಗೇಪಲ್ಲಿ ಗಡಿಯಲ್ಲಿ ಸಾರ್ವಜನಿಕರು ಅಂತಿಮ ನಮನ ಸಲ್ಲಿಸಿದರು. ಬಾಗೇಪಲ್ಲಿ ಮಾರ್ಗವಾಗಿ ಸ್ವಗ್ರಾಮದತ್ತ ಅವರ ಪಾರ್ಥಿವ ಶರೀರವನ್ನು ಶನಿವಾರ ಸೇನಾ ವಾಹನದ ಸಾರಥಿಯೊಂದಿಗೆ ಅಂಬುಲೆನ್ಸ್‌ನಲ್ಲಿ ತರಲಾಯಿತು. ಬಾಗೇಪಲ್ಲಿ ಪಟ್ಟಣದ ಟೋಲ್ ಪ್ಲಾಜಾ ಬಳಿ ನೂರಾರು ನಾಗರಿಕರು ಪಕ್ಷಾತೀತವಾಗಿ, ಧರ್ಮಾತೀತವಾಗಿ ಜಮಾಯಿಸಿದ್ದಾರೆ. ಅವರ ಪಾರ್ಥಿವ ಶರೀರ ಹೊತ್ತ ವಾಹನ ಬರುತ್ತಿದ್ದಂತೆ ಭಾವುಕರಾಗಿ, ಮುರಳಿ ನಾಯಕ್ ಅಮರ್ ರಹೇ ಹೈ ಎಂದು ಜೈ ಘೋಷಣೆಗಳನ್ನು ಕೂಗಿದರು.



ವೀರ ಯೋಧ ಮುರಳಿ ನಾಯಕ್ ಅವರಿಗೆ ಬಾಗೇಪಲ್ಲಿ ಗಡಿಯಲ್ಲಿ ಸಾರ್ವಜನಿಕರು ಅಂತಿಮ ನಮನ ಸಲ್ಲಿಸಿದರು.

ಗುಂಡಿನ ಚಕಮಕಿಯಲ್ಲಿ ವೀರ ಮರಣ

ಭಾರತ ಮತ್ತು ಪಾಕಿಸ್ತಾನದ ಗಡಿ ಭಾಗದಲ್ಲಿ ನಡೆದ ಗುಂಡಿನ ಚಕಮಕಿ ಬಾಗೇಪಲ್ಲಿ ಸಮೀಪದ ಆಂಧ್ರಪ್ರದೇಶದ ಗೋರಂಟ್ಲ ಮಂಡಲದ ಕಲ್ಲಿತಾಂಡಾ ಗ್ರಾಮದ ಯೋಧ ಮುರಳಿ ನಾಯಕ್ ಹುತಾತ್ಮರಾಗಿದ್ದಾರೆ. ಕಲ್ಲಿತಾಂಡ ಗ್ರಾಮದ ರಾಮುಲು ನಾಯಕ್ ಹಾಗೂ ಜ್ಯೋತಿಬಾಯಿ ಅವರ ಏಕೈಕ ಪುತ್ರ ಮುರಳಿ ನಾಯಕ್ ದೇಶಕ್ಕಾಗಿ ಹೋರಾಡಿ ವೀರಮರಣ ಹೊಂದಿದ್ದಾರೆ. ಅವರು ಹುತಾತ್ಮರಾದ ಸುದ್ದಿ ತಿಳಿಯುತ್ತಿದ್ದಂತೆಯೇ ಕುಟುಂಬಸ್ಥರ ಆಕ್ರಂದನ ಮುಗಿಲುಮುಟ್ಟಿತ್ತು. ಹಾಗೇ ಅಮರ್ ರಹೆ ಮುರಳಿ ನಾಯಕ್ ಎಂಬ ಘೋಷಣೆ ಮೊಳಗಿದವು.

ರಾಜ್ಯದಲ್ಲಿ ಕಟ್ಟೆಚ್ಚರ

← ಮೊದಲಪುಟದಿಂದ

ಕರಾವಳಿ ಭಾಗದಲ್ಲಿ ಕಟ್ಟೆಚ್ಚರ: ರಾಜ್ಯದ ಕರಾವಳಿ ಭಾಗ ಹೆಚ್ಚು ಸೂಕ್ಷ್ಮ ಪ್ರದೇಶವಾಗಿದ್ದು, ಅಲ್ಲಿ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾಗುತ್ತದೆ. ಕರಾವಳಿಯಲ್ಲಿ ಬಿಗಿ ಭದ್ರತೆ ವಹಿಸಿದ್ದೇವೆ. ಮಂಗಳೂರು, ಉತ್ತರ ಕನ್ನಡದಲ್ಲಿ ಪೊಲೀಸ್ ಇಲಾಖೆ ನಿಗಾ ವಹಿಸಿದೆ. ನೇವಿ ಅವರು ಕೂಡ ಭದ್ರತೆ ವಹಿಸಿದ್ದಾರೆ. ನಮ್ಮ ಗಡಿಯಲ್ಲಿಯೂ ರಕ್ಷಣೆಯಿದೆ. ಯುದ್ಧದ ಸಂದರ್ಭದಲ್ಲಿ ಎಲ್ಲ ರೀತಿಯ ಕಟ್ಟೆಚ್ಚರ ವಹಿಸುವಂತೆ ಕೇಂದ್ರ ಸರಕಾರ ಸೂಚಿಸಿದೆ. ಅವರ ಸೂಚನೆಯಂತೆ ರಾಜ್ಯದ ಸೂಕ್ಷ್ಮ ಪ್ರದೇಶದಲ್ಲಿ ಅವಶ್ಯವಿರುವ ಎಲ್ಲ ಕ್ರಮ ಕೈಗೊಳ್ಳುವಂತೆ ಪೊಲೀಸ್ ಇಲಾಖೆಗೆ ಸೂಚಿಸಲಾಗಿದೆ. ಒಂದು ವೇಳೆ ಯುದ್ಧದ ತೀವ್ರತೆ ಹೆಚ್ಚಿದರೆ ಅವಶ್ಯಕ ದಾಸ್ತಾನು, ಆಸ್ಪತ್ರೆಗಳನ್ನು ಕೂಡ ಸಜ್ಜುಗೊಳಿಸಲಾಗಿದೆ. ಜನರು ಯಾವುದೇ ರೀತಿಯ ಸುಳ್ಳು ಸುದ್ದಿಗಳಿಗೆ ಕಿವಿಕೊಟ್ಟು ಆತಂಕಕ್ಕೆ ಒಳಗಾಗುವ ಅವಶ್ಯಕತೆಯಿಲ್ಲ ಎಂದು ಸ್ಪಷ್ಟಪಡಿಸಿದರು.

ರಾಜ್ಯದಲ್ಲಿ ಫೇಕ್ ನ್ಯೂಸ್ ಹೆಚ್ಚಾಗಿ ಹರಡುತ್ತಿರುವ ಕುರಿತಂತೆ ಐಎಸ್‌ಡಿಯೊಂದಿಗೆ ಸಭೆ ನಡೆಸಲಾಗುತ್ತಿದೆ. ಸಾಮಾಜಿಕ ಜಾಲತಾಣದಲ್ಲಿ ಫೇಕ್ ನ್ಯೂಸ್ ಹೆಚ್ಚಾಗಿ ಹರಿದಾಡುತ್ತಿವೆ. ಹಳೇ ವಿಡಿಯೊಗಳನ್ನು ತೆಗೆದು ಪೋಸ್ಟ್ ಮಾಡಲಾಗುತ್ತಿದೆ. ಪ್ರಚೋದನಾಕಾರಿ ವಿಷಯಗಳನ್ನು ಪೋಸ್ಟ್ ಮಾಡುವ ಮೂಲಕ ಸುಳ್ಳು ಮಾಹಿತಿ ಹಂಚಿಕೊಳ್ಳುತ್ತಿದ್ದಾರೆ. ಈ ಬಗ್ಗೆ ತಾಂತ್ರಿಕವಾಗಿ ಏನು ಕ್ರಮ ತೆಗೆದುಕೊಳ್ಳಬೇಕು ಎಂಬುದನ್ನು ಚರ್ಚಿಸಲಾಗುವುದು.

- ಡಾ.ಜಿ.ಪರಮೇಶ್ವರ
ಗೃಹ ಸಚಿವ

ಮಂಗಗಳಿಗೆ ಪುಣ್ಯಾರಾಧನೆ

ಹುಬ್ಬಳ್ಳಿ: ಅನಾರೋಗ್ಯದಿಂದ ಸಾವನ್ನಪ್ಪಿದ ಮಂಗಗಳಿಗೆ ಕುಂದಗೋಳ ತಾಲೂಕಿನ ಗುಡೇನಕಟ್ಟಿ ಗ್ರಾಮದ ಗ್ರಾಮಸ್ಥರು 9ನೇ ದಿನದ ಪುಣ್ಯಾರಾಧನೆ ಮಾಡಿದ್ದಾರೆ. ಮೂಕ ಪ್ರಾಣಿಗಳಾದ್ರೂ ಕೂಡ ಅವುಗಳಿಗೂ ಮಾನವನಂತೆ ಪುಣ್ಯಾರಾಧನೆ ಮಾಡುವ ಮೂಲಕ ಪ್ರಾಣಿ ಪ್ರೀತಿಯನ್ನು ಮೆರೆದಿದ್ದಾರೆ.

ಕಳೆದ 10-15 ದಿನಗಳ ಹಿಂದೆ ಗುಡೇನಕಟ್ಟಿ ಗ್ರಾಮದಲ್ಲಿ ಮಂಗಗಳಿಗೆ ಅನಾರೋಗ್ಯ ಕಾಣಿಸಿಕೊಂಡಿತ್ತು. ದಿನಕ್ಕೆ ಒಂದು ಎರಡು ಅಂತ ಸುಮಾರು ಏಳು ಮಂಗಗಳು ಸಾವನ್ನಪ್ಪಿವೆ. ಅನಾರೋಗ್ಯದಿಂದ ಬಳಲುತ್ತಿದ್ದ ಮಂಗಗಳಿಗೆ ಕುಂದಗೋಳ ತಾಲೂಕು ಪಶು ವೈದ್ಯಾಧಿಕಾರಿಗಳಿಂದ ಚಿಕಿತ್ಸೆ ಕೊಡಿಸಲಾಗಿತ್ತು. ಆದರೆ ಚಿಕಿತ್ಸೆ ಫಲಿಸಿದೇ ಏಳು ಮಂಗಗಳು

ಮೃತಪಟ್ಟಿವೆ. ಇದೀಗ ಗ್ರಾಮದ ಮಾರುತಿ ದೇವಸ್ಥಾನದ ಎದುರು ಗ್ರಾಮಸ್ಥರು ಅವುಗಳ ಅಂತ್ಯಕ್ರಿಯೆ ನಡೆಸಿದ್ದಾರೆ. ಮಂಗಗಳು ಮೃತಪಟ್ಟು 9 ದಿನಗಳು ಕಳೆದಿವೆ. ಹೀಗಾಗಿ, ಗ್ರಾಮಸ್ಥರೆಲ್ಲ ಸೇರಿ ಮಂಗಗಳಿಗೆ ಸಮಾಧಿ ಕಟ್ಟಿ ಪುಣ್ಯಾರಾಧನೆ ನೆರವೇರಿಸಿದ್ದಾರೆ. ಈ ಮಂಗಗಳನ್ನು ದೇವರ ರೂಪದಲ್ಲಿ ಕಂಡು ಗ್ರಾಮಸ್ಥರೆಲ್ಲರೂ ಸೇರಿಕೊಂಡು ವಿಧಿ - ವಿಧಾನ ಪೂರ್ವಕವಾಗಿ ಪುಣ್ಯಾರಾಧನೆ ಮಾಡಿದ್ದಾರೆ.

ಮೈಸೂರು, ಹೊಸಪೇಟೆಯಲ್ಲಿ ಅಣಕು ಪ್ರದರ್ಶನ

ಮೈಸೂರು/ವಿಜಯನಗರ: ಕೇಂದ್ರ ಗೃಹ ಸಚಿವಾಲಯದ ಸೂಚನೆ ಮೇರೆಗೆ ಮೈಸೂರಿನ ಅರಮನೆಯಲ್ಲಿ ಶನಿವಾರ ತುರ್ತು ಪರಿಸ್ಥಿತಿ ಎಚ್ಚರಿಕೆಯ ಸೈರನ್ ಮೊಳಗಿಸಲಾಯಿತು.

ಮೈಸೂರು ಅರಮನೆ ಆವರಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪೊಲೀಸ್ ಇಲಾಖೆ, ಸಿ.ಐ.ಎಸ್.ಎಫ್, ಅಗ್ನಿಶಾಮಕ, ಆರೋಗ್ಯ ಇಲಾಖೆ, ಹೋಮ್ ಗಾರ್ಡ್ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಳ್ಳಲಾಗಿದ್ದ ನಾಗರಿಕ ರಕ್ಷಣಾ ಅಣಕು ಪ್ರದರ್ಶನ ಕಾರ್ಯಕ್ರಮದಲ್ಲಿ ಮೂರು ವಿಧದ ಸೈರನ್‌ಗಳು ಕೇಳಿಸಿದವು. ತುರ್ತು ಪರಿಸ್ಥಿತಿಯಲ್ಲಿ ಮೊದಲ ಸೈರನ್, ಎರಡನೇ ಸೈರನ್, ಮೂರನೇ ಸೈರನ್ ಸಂದರ್ಭದ ಬಗ್ಗೆ ತಿಳಿಸಲಾಯಿತು.

ಈ ವೇಳೆ ಸೈರನ್‌ಗೆ ಹೇಗೆ ಪ್ರತಿಕ್ರಿಯಿಸಬೇಕು, ಬಾಂಬ್ ಸ್ಫೋಟ ಆದರೆ ಏನು ಮಾಡಬೇಕು, ಬೆಂಕಿ ಹತ್ತಿಕೊಂಡಾಗ ರಕ್ಷಣಾ ಕಾರ್ಯಾಚರಣೆ ಕೈಗೊಳ್ಳುವುದು ಹೇಗೆ, ಅವಶೇಷಗಳ ಅಡಿ ಸಿಲುಕಿದವರನ್ನು ಹೇಗೆ ರಕ್ಷಿಸಬೇಕು, ವೈದ್ಯಕೀಯ ತುರ್ತು ಸೇವೆಗಳನ್ನು ಒದಗಿಸುವುದು ಹೇಗೆ ಎಂಬುದನ್ನು ಕಲಿಸಲಾಯಿತು.ಸೈರನ್ ಮೊಳಗಿದ ಕೂಡಲೇ ನಾಗರಿಕರು ಕೈಗೊಳ್ಳಬೇಕಾದ ಎಚ್ಚರಿಕೆ ಹಾಗೂ ದುರ್ಘಟನೆಯಿಂದ ಬೆಂಕಿಯಲ್ಲಿ ಸಿಲುಕಿರುವ ನಾಗರಿಕರನ್ನು ರಕ್ಷಣೆ ಮಾಡುವುದನ್ನು ಅಗ್ನಿಶಾಮಕ ಮತ್ತು ತುರ್ತುಸೇವೆಗಳ ಸಿಬ್ಬಂದಿ ಪ್ರದರ್ಶಿಸಿದರು.

ವಿಜಯನಗರ ಜಿಲ್ಲೆಯ ಹೊಸಪೇಟೆ ತಾಲೂಕಿನ ಹೊರವಲಯದಲ್ಲಿರುವ ತುಂಗಭದ್ರಾ ಜಲಾಶಯದ ಬಳಿ ಅಣಕು ಪ್ರದರ್ಶನ ಮಾಡಲಾಯಿತು. ತುಂಗಭದ್ರಾ ಜಲಾಶಯಕ್ಕೆ ಭದ್ರತೆ ನೀಡಿರೋ ಕರ್ನಾಟಕ ಕೈಗಾರಿಕಾ ಪಡೆಯಿಂದ ಮಾಕ್ ಡ್ರಿಲ್ ನಡೆದಿದೆ. ಟಿಬಿ ಡ್ಯಾಂಗೆ ಕಳೆದ ಎರಡು ಮೂರು ದಿನಗಳಿಗಿಂತ ಹೆಚ್ಚಿನ ರೀತಿಯ ಭದ್ರತೆ ಒದಗಿಸಲಾಗಿದ್ದು, ಜಲಾಶಯದ ಬಳಿಯೇ ಮಾಕ್ ಡ್ರಿಲ್ ನಡೆಸಿ ಜನರಿಗೆ ಸೈರನ್ ಬಳಿಕ ರಕ್ಷಣೆ ಮಾಡಿಕೊಳ್ಳೋದು ಹೇಗೆ? ಅನ್ನೋದರ ಬಗ್ಗೆ ಮುನ್ನೆಚ್ಚರಿಕಾ ಕ್ರಮಗಳ ಬಗ್ಗೆ ಮಾಹಿತಿ ನೀಡಲಾಯಿತು.

ಮೈಸೂರು ಅರಮನೆ ಆವರಣದಲ್ಲಿ ಅಣಕು ಪ್ರದರ್ಶನ ಮಾಡಲಾಯಿತು.

ಚಾಮರಾಜನಗರ ಜಿಲ್ಲೆಯ ಪ್ರಸಿದ್ಧ ಯಾತ್ರಾಸ್ಥಳ ಯಳಂದೂರು ತಾಲೂಕಿನ ಬಿಳಿಗಿರಿರಂಗನಬೆಟ್ಟದ ಶ್ರೀ ಬಿಳಿಗಿರಿರಂಗನಾಥಸ್ವಾಮಿ ಬ್ರಹ್ಮರಥೋತ್ಸವ ಅಪಾರ ಭಕ್ತಾದಿಗಳ ಸಮ್ಮುಖದಲ್ಲಿ ಜರುಗಿತು.

ರಾಜ್ಯಾದ್ಯಂತ ಮುಂದಿನ 6 ದಿನ ಮಳೆ

ಬೆಂಗಳೂರು: ರಾಜ್ಯದಲ್ಲಿ ಮುಂದಿನ ಕೆಲ ದಿನಗಳ ಕಾಲ ಮಳೆಯಾಗುವ ಸಾಧ್ಯತೆಯಿದ್ದು, ಮೇ.13ರಂದು ನೈಋತ್ಯ ಮಾನ್ಸೂನ್ ದಕ್ಷಿಣ ಅಂಡಮಾನ್ ಸಮುದ್ರ, ಆಗ್ನೇಯ ಬಂಗಾಳ ಕೊಲ್ಲಿಯ ಕೆಲವು ಭಾಗಗಳು ಮತ್ತು ನಿಕೋಬಾರ್ ದ್ವೀಪಗಳಿಗೆ ಪ್ರವೇಶಿಸುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಈ ಹಿನ್ನೆಲೆ ರಾಜ್ಯಾದ್ಯಂತ ವರುಣಾಗಮನವಾಗಲಿದ್ದು, ಕರಾವಳಿ ಮಾತ್ರವಲ್ಲದೆ ಉತ್ತರ ಒಳನಾಡು, ದಕ್ಷಿಣ ಒಳನಾಡು ಭಾಗಗಳಲ್ಲಿಯೂ ಮಳೆಯಾಗುವ ಸಾಧ್ಯತೆ ಇದೆ. ಇಂದು ಕರಾವಳಿ ಕರ್ನಾಟಕದ ದಕ್ಷಿಣ ಕನ್ನಡ, ಉಡುಪಿ ಮತ್ತು ಉತ್ತರ ಕನ್ನಡ ಜಿಲ್ಲೆಗಳ ಕೆಲವು ಸ್ಥಳಗಳಲ್ಲಿ ಹಗುರದಿಂದ ಮಧ್ಯಮ ಪ್ರಮಾಣದ ಮಳೆಯಾಗಲಿದೆ. ಕೆಲವೆಡೆ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಹೇಳಿದೆ.

ಉತ್ತರ ಒಳನಾಡಿನ ಬೆಳಗಾವಿ, ಧಾರವಾಡ, ಹಾವೇರಿ, ಗದಗ, ಬಾಗಲಕೋಟೆ, ವಿಜಯಪುರ, ಕಲಬುರಗಿ, ಕೊಪ್ಪಳ ಮತ್ತು ರಾಯಚೂರು ಜಿಲ್ಲೆಗಳ ಒಂದು ಅಥವಾ ಎರಡು ಸ್ಥಳಗಳಲ್ಲಿ ಬಿರುಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ. ಇದೇ ವೇಳೆ ಬೀದರ್ ಮತ್ತು ಯಾದಗಿರಿ ಜಿಲ್ಲೆಗಳಲ್ಲಿ ಒಣ ಹವಾಮಾನ ಮುಂದುವರಿಯುವ ಸಾಧ್ಯತೆ ಇದೆ. ದಕ್ಷಿಣ ಒಳನಾಡಿನ ಬಳ್ಳಾರಿ, ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ವಿಜಯನಗರ, ಮೈಸೂರು, ಕೋಲಾರ, ಮಂಡ್ಯ, ವಿಜಯನಗರ, ಮೈಸೂರು ಸೇರಿದಂತೆ ಕೆಲವು ಕಡೆ ಗುಡುಗು ಹಾಗೂ ಗಾಳಿ ಸಹಿತ ಮಳೆಯಾಗುವ ಸಾಧ್ಯತೆ ಇದೆ ಎಂದು ಬೆಂಗಳೂರು ಹವಾಮಾನ ಕೇಂದ್ರ ಮಾಹಿತಿ ನೀಡಿದೆ.

ಗರಿಷ್ಠ ತಾಪಮಾನದಲ್ಲಿ ತುಸು ಇಳಿಕೆ

ಮೇ 13 ರಿಂದ 16ರವರೆಗೂ ರಾಜ್ಯಾದ್ಯಂತ ಅಲ್ಲಲ್ಲಿ ಮಳೆಯಾಗುವ ನಿರೀಕ್ಷೆ ಇದೆ. ಇಂದಿನಿಂದ ಮುಂದಿನ 5 ದಿನಗಳವರೆಗೆ ಕರ್ನಾಟಕದಾದ್ಯಂತ ಗರಿಷ್ಠ ತಾಪಮಾನದಲ್ಲಿ ತುಸು ಇಳಿಕೆ ಪ್ರವೃತ್ತಿ ಕಾಣಲಿದ್ದು. ದೊಡ್ಡ ಬದಲಾವಣೆಗಳಿಲ್ಲ ಎಂದು ಹೇಳಿದ್ದು, ರಾಜಧಾನಿ ಬೆಂಗಳೂರು ಸುತ್ತಮುತ್ತ ಮುಂದಿನ 24 ಗಂಟೆಗಳ ಕಾಲ ಭಾಗಶಃ ಮೋಡ ಕವಿದ ವಾತಾವರಣ ಮುಂದುವರಿಯಲಿದೆ. ಬಿರುಗಾಳಿಯೊಂದಿಗೆ ಹಗುರ ಅಥವಾ ಗುಡುಗು ಸಹಿತ ಮಳೆಯಾಗುವ ಸಾಧ್ಯತೆ ಇದೆ. ಗರಿಷ್ಠ ತಾಪಮಾನ 33 ಡಿಗ್ರಿ ಇರಲಿದ್ದು, ಕನಿಷ್ಠ ತಾಪಮಾನ 22 ಡಿಗ್ರಿ ಸೆಲ್ಸಿಯಸ್ ಆಗುವ ಸಾಧ್ಯತೆ ಇದೆ ಎಂದು ಹೇಳಿದೆ.

ಸಮಾಚಾರ ಸಣ್ಣದಲ್ಲ

ಪ್ರಚೋದನಾಕಾರಿ ಬರಹ: ಕೇಸ್ ದಾಖಲು

ಉಡುಪಿ: ಜಿಲ್ಲೆಯ ಪ್ರತಿಷ್ಠಿತ ಎಂಜಿನಿಯರಿಂಗ್ ಕಾಲೇಜಿನ ಕ್ಯಾಂಪಸ್‌ನಲ್ಲಿರುವ ಮಹಿಳಾ ಹಾಸ್ಟೆಲ್ ಸ್ನಾನಗೃಹದ ಗೋಡೆ ಮೇಲೆ ಧಾರ್ಮಿಕ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಪ್ರಚೋದನಾಕಾರಿ ಮತ್ತು ಅಶ್ಲೀಲ ಬರಹಗಳು ಕಂಡುಬಂದಿದ್ದು, ಪ್ರಕರಣ ದಾಖಲಾಗಿದೆ ಎಂದು ಪೊಲೀಸರು ಶನಿವಾರ ತಿಳಿಸಿದ್ದಾರೆ. ಕಾರ್ಕಳ ತಾಲೂಕಿನ ನಿಟ್ಟೆಯಲ್ಲಿರುವ ಮಹಿಳಾ ಹಾಸ್ಟೆಲ್‌ನ ಮುಖ್ಯ ಬ್ಲಾಕ್‌ನ ಸ್ನಾನಗೃಹದ ಗೋಡೆಯ ಮೇಲೆ ಇಂಗ್ಲಿಷ್‌ನಲ್ಲಿ ಬರೆಯಲಾದ ಪ್ರಚೋದನಕಾರಿ ಘೋಷಣೆಗಳು ಪತ್ತೆಯಾಗಿವೆ. ಪೊಲೀಸ್ ಹೇಳಿಕೆಯ ಪ್ರಕಾರ, ಎರಡು ಸಮುದಾಯಗಳ ನಡುವೆ ಸಾಮರಸ್ಯವನ್ನು ಕೆರಳಿಸುವ ಉದ್ದೇಶದಿಂದ ಘೋಷಣೆಗಳನ್ನು ಬರೆಯಲಾಗಿದೆ ಎನ್ನಲಾಗಿದೆ. ಆಕ್ಷೇಪಾರ್ಹ ರೀತಿಯಲ್ಲಿ ಬರೆದಿರುವುದನ್ನು ಗಮನಿಸಿದ ಹಾಸ್ಟೆಲ್ ವ್ಯವಸ್ಥಾಪಕರು ಪೊಲೀಸರಿಗೆ ದೂರು ನೀಡಿದ್ದಾರೆ. ದೂರಿನ ಆಧಾರದ ಮೇಲೆ, ಕಾರ್ಕಳ ಗ್ರಾಮೀಣ ಪೊಲೀಸರು ಭಾರತೀಯ ನ್ಯಾಯ ಸಂಹಿತೆಯ ಸೆಕ್ಷನ್ 353(2) ಅಡಿಯಲ್ಲಿ ಪ್ರಕರಣ ದಾಖಲಿಸಿದ್ದಾರೆ. ಪ್ರಕರಣ ದಾಖಲಾಗಿದ್ದು, ನಾವು ಆರೋಪಿಗಳನ್ನು ಗುರುತಿಸುವ ಪ್ರಕ್ರಿಯೆಯಲ್ಲಿದ್ದೇವೆ' ಎಂದು ಉಡುಪಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಅರುಣ್ ಕೆ ಹೇಳಿದ್ದಾರೆ.

ಮಂಗಳೂರು: ಡ್ರೋನ್ ಹಾರಾಟ ನಿಷೇಧ

ಮಂಗಳೂರು: ಮಂಗಳೂರು ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಮುಂದಿನ ನಾಲ್ಕು ದಿನಗಳ ಕಾಲ ಡ್ರೋನ್ ಹಾರಾಟ ಮತ್ತು ಡ್ರೋನ್

ಚಿತ್ರೀಕರಣ ನಡೆಸುವುದನ್ನು ನಿಷೇಧಿಸಿ ಮಂಗಳೂರು ನಗರ ಪೊಲೀಸ್ ಕಮಿಷನರ್ ಅನುಪಮ್ ಅಗರ್ವಾಲ್ ಅವರು ಶನಿವಾರ ಆದೇಶ ಹೊರಡಿಸಿದ್ದಾರೆ. ಸಾರ್ವಜನಿಕ ಶಾಂತಿ ಮತ್ತು ಕಾನೂನು ಸುವ್ಯವಸ್ಥೆಗೆ ಧಕ್ಕೆ ಬರುವಂತಹ ಯಾವುದೇ ಘಟನೆಗಳು ನಡೆಯದಂತೆ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಈ ಆದೇಶ ಹೊರಡಿಸಿದ್ದಾರೆ. ಮೇ 10ರ ಸಂಜೆ 4 ಗಂಟೆಯಿಂದ ಮೇ 14ರ ಸಂಜೆ 4 ಗಂಟೆಯವರೆಗೆ ಡ್ರೋನ್ ನಿಯಮ 2021ರ ರೂಲ್ಸ್ 24ರ ಅಡಿಯಲ್ಲಿ ಕಮಿಷನರೇಟ್ ವ್ಯಾಪ್ತಿಯಲ್ಲಿ ಯಾವುದೇ ರೀತಿಯ ಡ್ರೋನ್ ಬಳಕೆ ಹಾರಾಟ ಮತ್ತು ಡ್ರೋನ್ ಮೂಲಕ ಚಿತ್ರೀಕರಣ ನಡೆಸುವುದನ್ನು ನಿಷೇಧಿಸಲಾಗಿದೆ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಹಾಸನ**

ಸಮಸ್ಯೆಯೇನು..? : ಅರಸೀಕೆರೆ ತಾಲೂಕಿನ ಕಾಚೀಘಟ್ಟ ಗ್ರಾಪಂನ ಬೇವಿನಹಳ್ಳಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆ ಬಗ್ಗೆ.

- **ಪರಿಹಾರ:** ಅರಸೀಕೆರೆ ತಾಲೂಕಿನ ಕಾಚೀಘಟ್ಟ ಗ್ರಾಪಂನ ಬೇವಿನಹಳ್ಳಿ ಗ್ರಾಮಕ್ಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸಿದ್ದು, ಓವರ್ ಹೆಡ್ ಟ್ಯಾಂಕ್ ಸಣ್ಣ ಸಣ್ಣದಾಗಿ ಕಿತ್ತು ಹೋಗಿದೆ. ಶೀಘ್ರ ಸರಿಪಡಿಸಲು ಕ್ರಮಕೈಗೊಂಡು, ಸದರಿ ಗ್ರಾಮದಲ್ಲಿ ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮವಹಿಸಲಾಗುತ್ತದೆ.

ಟ್ವೀಟೂ-ಖಾರಾ

ಛಲವಾದಿ ನಾರಾಯಣಸ್ವಾಮಿ, ವಿಪ ವಿಪಕ್ಷ ನಾಯಕ

ತುಕ್ಕು ಹಿಡಿದ ಟ್ಯಾಂಕರ್‌ಗಳಲ್ಲಿ ಅಶುದ್ಧ ನೀರು? – ಕಾಂಗ್ರೆಸ್ ಸರಕಾರದ 8ನೇ ಗ್ಯಾರಂಟಿ. ಮನೆ ಬಾಗಿಲಿಗೆ ಶುದ್ಧ ನೀರನ್ನು ತಲುಪಿಸುವ ಹೆಸರಿನಲ್ಲಿ ತುಕ್ಕು ಹಿಡಿದ ಹಳೆಯ ಟ್ಯಾಂಕರ್‌ಗಳಿಗೆ ಬಣ್ಣ ಬಳಿದು ನವೀಕರಿಸಿದಂತೆ ತೋರಿಸಿ, ಸಂಚಾರಿ ಕಾವೇರಿ ಎಂಬ ಯೋಜನೆಯನ್ನು ವಿಧಾನಸೌಧ ದಿಂದ ಆರಂಭಿಸಿದ INCKarnataka ಸರಕಾರದ ಈ ನಿರ್ಧಾರವನ್ನು ಖಂಡಿಸುತ್ತೇವೆ. ಜನಪರ ಯೋಜನೆ ಎಂಬ ಮಂತ್ರ ಜಪಿಸುತ್ತಲೇ, ಸರಕಾರ ನಿಜವಾದ ಜನಪರತೆಯಿಂದ ದೂರವಾಗಿ, ಟ್ಯಾಂಕರ್‌ಗಳ ಮೇಲ್ಮೈ ಬಣ್ಣವನ್ನು ಬದಲಾಯಿಸುವ ಮೂಲಕ ಜನರ ಆರೋಗ್ಯಕ್ಕೆ ಬಣ್ಣದ ಲೇಪನವನ್ನು ಹಾಕುತ್ತಿದೆ. ಈ ಯೋಜನೆಯ ರೂವಾರಿಯಾದ ಮಂತ್ರಿಗಳ ಚಿಂತನೆಗೂ ಈಗಾಗಲೇ ತುಕ್ಕು ಹಿಡಿದಿದೆ ಎಂಬುದು ಸ್ಪಷ್ಟ.

ಸ್ವಾಭಿಮಾನಿ ಹಿಂದೂ

ಮಾನ್ಯ ಮುಖ್ಯಮಂತ್ರಿಗಳೇ siddaramaiah ಸರ್ ಏನ್ ಸರ್ ಎಂಥ ದುರಂತಾ ಸರ್, ನಮ್ಮ ಜನ ಏನ್ ಪಾಪ ಮಾಡವರೇ ಸ್ವಾಮಿ, DKShivakumar ಸರ್ ಕನಿಷ್ಠ ನಿಮಗೆ ಯಾರಿಗೂ ಆತ್ಮಸಾಕ್ಷಿ ಇಲ್ವೇ, ಈ ರಾಜ್ಯದ ಜನರ ದುರ್ಗತಿ ಸರ್ ಇದು. ಈ ಸರಕಾರ ಖಾಲಿ ಖಜಾನೆ ಸರಕಾರ.ಅಧಿಕಾರಕ್ಕಾಗಿ ಅಷ್ಟೇ ನಿಮ್ಮ ಈ ಯೋಜನೆ.

ಗಡಿಯಲ್ಲಿ ಮುಂದುವರಿದ ಉದ್ವಿಗ್ನತೆ ; ರಾಜ್ಯದ ರಕ್ಷಣೆ ಸಂಬಂಧ ಸಭೆ | ಎಲ್ಲ ಜಿಲ್ಲೆಯ ಎಸ್‌ಪಿ, ಡಿಸಿಗಳೊಂದಿಗೆ ವಿಡಿಯೊ ಕಾನ್ಫರೆನ್ಸ್ ನಡೆಸಿದ ಸಿದ್ದು | ಯಾವುದೇ ಆತಂಕವಿಲ್ಲದಿದ್ದರೂ ಎಚ್ಚರಿಕೆವಹಿಸಿ | ಜನರ ಆತ್ಮಸ್ಥೈರ್ಯ ತುಂಬುವ ಕೆಲಸ ಮಾಡಿ

ಸುಳ್ಳು ಸುದ್ದಿ ವಿರುದ್ಧ ಹೋರಾಟ ಮುಂದುವರಿಸಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತ-ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಯಾದರೂ, ಸುಳ್ಳು ಸುದ್ದಿಗಳ ವಿರುದ್ಧದ ಹೋರಾಟವನ್ನು ಮುಂದುವರಿಸಲು ತೀರ್ಮಾನಿಸಿರುವ ರಾಜ್ಯ ಸರಕಾರ ಸುಳ್ಳು ಸುದ್ದಿಗಳಿಗೆ ಬ್ರೇಕ್ ಹಾಕಲು ಕಠಿಣ ಕ್ರಮಕ್ಕೆ ಸೂಚನೆ ನೀಡಿದೆ.

ಆಪರೇಷನ್ ಸಿಂದೂರ ಹಾಗೂ ಬಳಿಕ ನಡೆದ ಯುದ್ಧದ ಸಮಯದಲ್ಲಿ ಹಲವಾರು ಫೇಕ್ ಸುದ್ದಿ, ಫೋಟೊ ಹಾಗೂ ವಿಡಿಯೊಗಳು ಹರಿದಾಡಿದವು. ಈ ಸುಳ್ಳು ಸುದ್ದಿಗಳೇ ಜನರನ್ನು ಆತಂಕಕ್ಕೆ ಒಳಪಡಿಸಿದ್ದರಿಂದ ಕೇಂದ್ರ ಸರಕಾರ ಈ ಎಲ್ಲ ರಾಜ್ಯಗಳಿಗೆ ಫೇಕ್ ನ್ಯೂಸ್ ವಿರುದ್ಧ ಕ್ರಮವಹಿಸುವಂತೆ ಸೂಚನೆ ನೀಡಿದ್ದರು. ಇದರ ಬೆನ್ನಲ್ಲೇ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದಲ್ಲಿ ಶನಿವಾರ ನಡೆದ ಮಹತ್ವದ ಸಭೆಯಲ್ಲಿ, ಸುಳ್ಳು ಸುದ್ದಿಗಳಿಗೆ ಕಡಿವಾಣ ಹಾಕಲು ಸೂಚನೆ ನೀಡಿದ್ದಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ನೇತೃತ್ವದಲ್ಲಿ ನಡೆದ ವಿಡಿಯೊ ಕಾನ್ಫರೆನ್ಸ್ ಸಭೆಯಲ್ಲಿ ರಾಜ್ಯದ ಹಿರಿಯ ಪೊಲೀಸ್ ಅಧಿಕಾರಿಗಳು, ಎಲ್ಲ ಮಹಾನಗರಗಳ ಆಯುಕ್ತರು, ಜಿಲ್ಲಾಧಿಕಾರಿಗಳು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳು ಭಾಗವಹಿಸಿದ್ದರು. ಈ ವೇಳೆ ರಾಜ್ಯದಲ್ಲಿ ಸುಳ್ಳು ಸುದ್ದಿಗಳಿಗೆ ಕಡ್ಡಾಯವಾಗಿ ಕಡಿವಾಣ ಹಾಕಬೇಕು. ಅನಿವಾರ್ಯವಾದರೆ ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಿ ಎಂದು ಪೊಲೀಸ್ ಅಧಿಕಾರಿಗಳಿಗೆ ಸಿಎಂ ಸಿದ್ದರಾಮಯ್ಯ ಖಡಕ್ ಸೂಚನೆ ನೀಡಿದ್ದಾರೆ. ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿ ಹರಡುವುದನ್ನು ತಪ್ಪಿಸಲು ಕಟ್ಟೆಚ್ಚರ ವಹಿಸಬೇಕು. ರಾಜ್ಯದ ಕಾನೂನು ಸುವ್ಯವಸ್ಥೆಗಿಂತ ಯಾವುದೂ ದೊಡ್ಡದಲ್ಲ. ರಾಜ್ಯದ ಜನರ ರಕ್ಷಣೆಗೆ ಮೊದಲ ಆದ್ಯತೆ ನೀಡಿ ಎಂದು ಸೂಚನೆ ನೀಡಿದರು. ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಂಡು ವರದಿ ನೀಡಿ ಎಂದು ಅಧಿಕಾರಿಗಳಿಗೆ ಖಡಕ್ ಆಗಿ ಸೂಚನೆ ನೀಡಿದ್ದಾರೆ.

ಇನ್ನು ಸಭೆಯ ಸಮಯದಲ್ಲಿ ಕದನ ವಿರಾಮ ಘೋಷಣೆಯಾಗಿರದ ಕಾರಣ ಕೇಂದ್ರ ಸರಕಾರದ ಸೂಚನೆಯಂತೆ ಮಾಕ್ ಡ್ರಿಲ್‌ಗಳನ್ನು ನಡೆಸುವಂತೆ ಹಾಗೂ ಕೇಂದ್ರ ಸೂಚಿಸಿರುವ ಸ್ಥಳಗಳ ಹೊರತಾಗಿಯೂ ಪ್ರಮುಖ ಸ್ಥಳಗಳಲ್ಲಿ ಮಾಕ್ ಡ್ರಿಲ್‌ಗಳನ್ನು ಮುಂದುವರಿಸುವಂತೆ ಸೂಚನೆ ನೀಡಿದರು. ಈ ರೀತಿ ಮಾಕ್ ಡ್ರಿಲ್ ಮಾಡಿರುವ ಬಗ್ಗೆ ದಿನನಿತ್ಯದ ಆಧಾರದಲ್ಲಿ ಗೃಹ ಇಲಾಖೆಗೆ ಮಾಹಿತಿ ನೀಡುವಂತೆ ಸೂಚನೆ ನೀಡಿದರು. ಇದರೊಂದಿಗೆ ಅಕ್ರಮ ದಾಸ್ತಾನು ಮತ್ತು ಕಾಳಸಂತೆಯ ಮೇಲೆ ನಿರಂತರ ನಿಗಾವಹಿಸಿ, ಅನಗತ್ಯವಾಗಿ ಸಾಮಗ್ರಿಗಳ ಬೆಲೆ ಹೆಚ್ಚು ಮಾಡುವ ಪ್ರಯತ್ನಗಳನ್ನು ತಡೆಯಬೇಕು ಎಂದು ಸೂಚನೆ ನೀಡಿದ್ದರು.

ಸಭೆಯಲ್ಲಿ ಗೃಹ ಸಚಿವ ಡಾ. ಜಿ ಪರಮೇಶ್ವರ, ಗ್ರಾಮೀಣಾಭಿವೃದ್ಧಿ ಸಚಿವರಾದ ಪ್ರಿಯಾಂಕ ಖರ್ಗೆ, ಕಂದಾಯ ಸಚಿವ ಕೃಷ್ಣಬೈರೇಗೌಡ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಪ್ರಾಧಿಕಾರ ಅಧ್ಯಕ್ಷ ಎಚ್.ಎಂ. ರೇವಣ್ಣ, ಮುಖ್ಯ ಕಾರ್ಯದರ್ಶಿ ಡಾ ಶಾಲಿನಿ ರಜನೀಶ್, ಅಪರ ಮುಖ್ಯ ಕಾರ್ಯದರ್ಶಿ ಎಲ್ ಕೆ ಅತೀಕ್, ಪೊಲೀಸ್ ಮಹಾ ನಿರ್ದೇಶಕ ಅಲೋಕ್ ಮೋಹನ್ , ಎಡಿಜಿಪಿ ಹಿತೇಂದ್ರ, ನಗರ ಪೊಲೀಸ್ ಆಯುಕ್ತ ದಯಾನಂದ ಹಾಗೂ ಪೊಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಉಪಸ್ಥಿತರಿದ್ದರು.

ಎಲ್ಲ ಜಿಲ್ಲೆಯ ಎಸ್‌ಪಿ, ಡಿಸಿಗಳೊಂದಿಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ವಿಡಿಯೊ ಕಾನ್ಫರೆನ್ಸ್ ನಡೆಸಿದರು. ಪರಮೇಶ್ವರ್ ಸಿಎಂ ಮಾಧ್ಯಮ ಸಲಹೆಗಾರ ಕೆ.ವಿ ಪ್ರಭಾಕರ್ ಇದ್ದರು.

ಕೋಮು ಗೂಂಡಾಗಳ ಬಗ್ಗೆ ಎಚ್ಚರ: ಸಿಎಂ

ಸದ್ಯದ ಪರಿಸ್ಥಿತಿಯನ್ನುಬಳಸಿಕೊಂಡು ದೇಶದ, ರಾಜ್ಯದ ಸಹಭಾಳ್ವೆಗೆ ಧಕ್ಕೆ ತರುವ, ಕೋಮು ಭಾವನೆ ಕೆರಳಿಸಿ, ಕೋಮು ವಿಭಜನೆ ತರಲು, ದೇಶದ ಭದ್ರತೆಗೆ ಅಪಾಯ ತರಲು ಷಡ್ಯಂತ್ರ ನಡೆಸುತ್ತಿರುವ ಎಲ್ಲರ ಪಟ್ಟಿ ಸಿದ್ಧಪಡಿಸಿ ಅಗತ್ಯ ಕ್ರಮವಹಿಸಲು ಸೂಚನೆ ನೀಡಿದ ಅವರು, ಕೋಮು ಸಾಮರಸ್ಯ ಕದಡುವ ಪ್ರಯತ್ನಗಳ ಮೇಲೆ ನಿಗಾ ಇರಿಸಿ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು ಎಂದು ಸಿಎಂ ಸೂಚನೆ ನೀಡಿದರು.

> ಯುದ್ಧ ವಿರಾಮ ಘೋಷಣೆಯಾಗಿದೆ ಎಂದು ಸರಕಾರ ಕೈಕಟ್ಟಿ ಕೂರುವುದಿಲ್ಲ. ಭಯೋತ್ಪಾದನೆಯನ್ನು ನಿರ್ಮೂಲನೆ ಮಾಡುವುದು ನಮ್ಮ ಗುರಿ. ಕರ್ನಾಟಕದಲ್ಲಿದ್ದ ಎಲ್ಲ ಪಾಕಿಸ್ತಾನೀಯರನ್ನು ವಾಪಸ್ಸು ಕಳಿಸಲಾಗಿದೆ. ಆದರೆ ಮೈಸೂರಲ್ಲಿ ಆರು ವರ್ಷದೊಳಗಿನ ಮೂರು ಮಕ್ಕಳು ಉಳಿದುಕೊಂಡು ಬಿಟ್ಟಿವೆ. ಅವರ ತಂದೆ ಪಾಕಿಸ್ತಾನಿ ಮತ್ತು ತಾಯಿ ಮೈಸೂರಿನವರು. ಅವರನ್ನು ಗಡಿವರೆಗೆ ಕರೆದುಕೊಂಡು ಹೋಗಲಾಗಿತ್ತು. ಆದರೆ ಪಾಕಿಸ್ತಾನದೊಳಗೆ ಕರೆದುಕೊಂಡು ಹೋಗಲು ಯಾರೂ ಬಾರದ ಕಾರಣ ವಾಪಸ್ಸು ತರಲಾಗಿದೆ.
>
> – ಸಿದ್ದರಾಮಯ್ಯ, ಮುಖ್ಯಮಂತ್ರಿ

ಸಭೆಯಲ್ಲಿ ಸಿಎಂ ನೀಡಿದ ಇತರ ಸೂಚನೆಗಳು

- ಯಾವುದೇ ಪರಿಸ್ಥಿತಿಯನ್ನು ಎದುರಿಸಲು ಸನ್ನದ್ಧರಾಗಿರಬೇಕು. ಈ ಬಗ್ಗೆ ರಾಜ್ಯ ಹಾಗೂ ಜಿಲ್ಲಾ ಮಟ್ಟದಲ್ಲಿ ಮಾರ್ಗಸೂಚಿ ಸಿದ್ಧಪಡಿಸಬೇಕು.
- ಪ್ರಮುಖ ಸ್ಥಳಗಳಲ್ಲಿ ಮಾಕ್‌ಡ್ರಿಲ್‌ಗಳನ್ನು ಸೂಕ್ತ ರೀತಿಯಲ್ಲಿ ಮಾಡಲು ಸೂಚನೆ
- ರಾಷ್ಟ್ರೀಯ ಪ್ರಮುಖ ಸ್ಥಳಗಳಲ್ಲಿ ಹೆಚ್ಚಿನ ಭದ್ರತೆಯನ್ನು ಕಾಪಾಡಲು ಸೂಚನೆ.
- ಮಾಧ್ಯಮಗಳು ಮತ್ತು ಸಾಮಾಜಿಕ ಜಾಲತಾಣಗಳಲ್ಲಿ ಸುಳ್ಳು ಸುದ್ದಿಯನ್ನು ಹರಡುವುದನ್ನು ತಪ್ಪಿಸಲು ಕಟ್ಟೆಚ್ಚರ ವಹಿಸಬೇಕು.
- ಸಾಮಾಜಿಕ ಜಾಲತಾಣಗಳ ಮೇಲೆ ನಿರಂತರ ನಿಗಾ ವಹಿಸಬೇಕು. ವದಂತಿ ಹರಡುವವರ ವಿರುದ್ಧ ಕ್ರಮ ಕೈಗೊಳ್ಳಬೇಕು.
- ಸುಳ್ಳು ಸುದ್ದಿ ಹರಡುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು.
- ಫ್ಯಾಕ್ಟ್ ಚೆಕ್ ನಿರಂತರವಾಗಿ ಮಾಡಬೇಕು. ಸುಳ್ಳು ಸುದ್ದಿ ಬಗ್ಗೆ ಮೂಲದಲ್ಲೇ ಅಧಿಕೃತ ಸ್ಪಷ್ಟೀಕರಣ ನೀಡಬೇಕು.
- ಗುಪ್ತಚರ ವ್ಯವಸ್ಥೆಯನ್ನು ಇನ್ನಷ್ಟು ಬಲಪಡಿಸಬೇಕು.
- ಸಾರ್ವಜನಿಕ ಸೇವೆ ಒದಗಿಸುವ ತಾಣಗಳಲ್ಲಿ ಹೆಚ್ಚಿನ ಸುರಕ್ಷತೆಯನ್ನು ಖಾತ್ರಿಪಡಿಸಬೇಕು.

ಬಿಜೆಪಿ ಟೀಕೆಗೆ ದಿನೇಶ್ ಗುಂಡೂರಾವ್ ಹೇಳಿಕೆ

ಕೊಲೆಯಾದ ಪ್ರತಿಯೊಬ್ಬರ ಮನೆಗಳಿಗೆ ಹೋಗಬೇಕಿಲ್ಲ

ಮಂಗಳೂರು: ಕೊಲೆಗಳು ಆಗುತ್ತಲೇ ಇರುತ್ತವೆ. ಕೊಲೆಯಾದ ಪ್ರತಿಯೊಬ್ಬರ ಮನೆಗೆ ಸಚಿವರು ಹೋಗಲೇಬೇಕು ಎಂದೇನೂ ಇಲ್ಲ. ಕೊಲೆ ಏಕೆ ಆಗಿದೆ ಎಂಬುದೂ ಮುಖ್ಯವಾಗುತ್ತದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ

ದಿನೇಶ್ ಗುಂಡೂರಾವ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸುಹಾಸ್ ಶೆಟ್ಟಿ ಕೊಲೆ ಏಕೆ ಆಗಿದೆ ಎಂಬುದನ್ನು ತಿಳಿದುಕೊಂಡಿರುವ ಸರಕಾರ, ತಪ್ಪಿತಸ್ಥರನ್ನು ಬಂಧಿಸುವ ಮೂಲಕ ತನ್ನ ಜವಾಬ್ದಾರಿ ನಿರ್ವಹಿಸಿದೆ. ಯಾರಿಗೂ ರಕ್ಷಣೆ ಕೊಡುವ ಪ್ರಶ್ನೆಯೇ ಇಲ್ಲ' ಎಂದರು.

ಕೊಲೆ ಯಾರು ಮಾಡಿದ್ದಾರೆ ಅವರನ್ನು ಬಂಧಿಸಿದ್ದೇವೆ. ತನಿಖೆ ನಿಷ್ಪಕ್ಷಪಾತವಾಗಿ ನಡೆಯುತ್ತಿದೆ. ಪ್ರಕರಣದ ತನಿಖೆಯನ್ನು ಎನ್‌ಐಎಗೆ ವಹಿಸಬೇಕು ಎಂಬ ಬಿಜೆಪಿಯವರ ಕಪೋಲಕಲ್ಪಿತ ಆರೋಪಗಳಿಗೆ ಉತ್ತರ ಕೊಡುವುದಕ್ಕೆ ಆಗುವುದಿಲ್ಲ. ಊಹಾಪೋಹದ ಹೇಳಿಕೆ ನೀಡುವುದನ್ನು ಬಿಟ್ಟು ಬಿಜೆಪಿಯವರು ತಮ್ಮ ಬಳಿ ಸ್ಪಷ್ಟ ಮಾಹಿತಿ ಇದ್ದರೆ ತಿಳಿಸಲಿ ಎಂದು ಹೇಳಿದರು.

ಹರೀಶ್ ಪೂಂಜಾ ಹೇಳಿಕೆಗೆ ಕಿಡಿ

ಕೋಮುಪ್ರಚೋದನಕಾರಿ ಹೇಳಿಕೆ ನೀಡಿರುವ ಬೆಳ್ತಂಗಡಿ ಶಾಸಕ ಹರೀಶ್ ಪೂಂಜಾ ವಿರುದ್ಧ ಪ್ರಕರಣ ದಾಖಲಾಗಿದ್ದು, ಮುಂದಿನ ಕಾನೂನು ಕ್ರಮ ಆಗಬೇಕಾಗುತ್ತದೆ. ಅವರು ಮಾಡಿರುವ ವೈಯಕ್ತಿಕ ಟೀಕೆ ಕೀಳು ಅಭಿರುಚಿಯಿಂದ ಕೂಡಿದೆ. ಅವರ ಮಾತುಗಳು ಅವರ ವ್ಯಕ್ತಿತ್ವಕ್ಕೆ ಹಿಡಿದ ಕೈಗನ್ನಡಿ. ಹೀಗಾಗಿ ಪ್ರತ್ಯುತ್ತರ ಕೊಡುವ ಅವಶ್ಯಕತೆ ಇಲ್ಲ ಎಂದು ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

ಶೇ.7ರಷ್ಟು ಹೆಚ್ಚಳಕ್ಕೆ ಸರಕಾರ ಸಮ್ಮತಿಸುವ ಸಾಧ್ಯತೆ

ಎಂಜಿನಿಯರಿಂಗ್ ಕೋರ್ಸ್ ಶುಲ್ಕದಲ್ಲೂ ಏರಿಕೆಯ ಬಿಸಿ?

ಬೆಂಗಳೂರು: ದರ ಏರಿಕೆಯಿಂದ ಬೆಸ್ತಾಗಿರುವ ಜನರಿಗೆ ಇದೀಗ ಎಂಜಿನಿಯರಿಂಗ್ ಕೋರ್ಸ್‌ನ ಶುಲ್ಕದಲ್ಲಿಯೂ ಏರಿಕೆಯ ಬಿಸಿಯಾಗುವುದು ನಿಶ್ಚಿತವಾಗಿದೆ.

ಪ್ರಸಕ್ತ ಶೈಕ್ಷಣಿಕ ಸಾಲಿನಲ್ಲೂ ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳು ಬೇಡಿಕೆ ಸಲ್ಲಿಸಿದ್ದು, ಶೇ 7ರಷ್ಟು ಹೆಚ್ಚಳಕ್ಕೆ ಸರಕಾರ ಸಮ್ಮತಿಸುವ ಸಾಧ್ಯತೆ ಇದೆ. ಉನ್ನತ ಶಿಕ್ಷಣ ಸಚಿವ ಎಂ.ಸಿ. ಸುಧಾಕರ್, ವೈದ್ಯಕೀಯ ಶಿಕ್ಷಣ ಸಚಿವ ಶರಣ ಪ್ರಕಾಶ ಪಾಟೀಲ ನೇತೃತ್ವದಲ್ಲಿ ವಿವಿಧ ವೃತ್ತಿಪರ ಶಿಕ್ಷಣ ಸಂಸ್ಥೆಗಳ ಪ್ರತಿನಿಧಿಗಳ ಜತೆ ಸಭೆ ನಡೆಸಿದ ನಂತರ ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳ ಶುಲ್ಕವನ್ನು 2024–25ನೇ ಶೈಕ್ಷಣಿಕ ಸಾಲಿನಲ್ಲಿ ಶೇ 10ರಷ್ಟು ಹೆಚ್ಚಳ ಮಾಡಲಾಗಿತ್ತು.

ಅಧ್ಯಾಪಕರ ವೇತನ ಹೆಚ್ಚಳ, ಕಾಲೇಜುಗಳ ಮೂಲಸೌಕರ್ಯ ಸುಧಾರಣೆ, ನಿರ್ವಹಣೆ ಮತ್ತು ಗುಣಮಟ್ಟವನ್ನು ಪರಿಗಣಿಸಿ 2025–26ನೇ ಸಾಲಿನಲ್ಲೂ ಶೇ 10ರಷ್ಟು ಹೆಚ್ಚಳಕ್ಕೆ ಅವಕಾಶ ನೀಡಬೇಕು ಎಂದು ಕರ್ನಾಟಕ ಅನುದಾನರಹಿತ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘ ಮನವಿ ಸಲ್ಲಿಸಿದೆ. ಶೇ 10ರಷ್ಟು ಶುಲ್ಕ ಹೆಚ್ಚಳಕ್ಕೆ ಖಾಸಗಿ ಎಂಜಿನಿಯರಿಂಗ್ ಕಾಲೇಜುಗಳ ಸಂಘ ಮನವಿ ಮಾಡಿದೆ. ಈ ಕುರಿತು ನಡೆದ ಪೂರ್ವಭಾವಿ ಸಭೆಯಲ್ಲಿ ಚರ್ಚೆ ಮಾಡಿದ್ದೇವೆ. ಶೇ 7ರಷ್ಟು ಹೆಚ್ಚಳ ಮಾಡಲು ಅವಕಾಶ ನೀಡುವುದಾಗಿ ಹೇಳಿದ್ದೇವೆ' ಎಂದು ಉನ್ನತ ಶಿಕ್ಷಣ ಸಚಿವ ಸುಧಾಕರ್ ತಿಳಿಸಿದರು. ಪ್ರಸ್ತುತ ಸರಕಾರಿ ಕೋಟಾದ ಸೀಟುಗಳಿಗೆ ಖಾಸಗಿ ಕಾಲೇಜುಗಳ ಶುಲ್ಕ 1.06 ಲಕ್ಷ, ಕಾಮೆಡ್-ಕೆ (ಟೈಪ್-1) ಶುಲ್ಕ 1.86 ಲಕ್ಷ ಹಾಗೂ (ಟೈಪ್-2) ₹2.61 ಲಕ್ಷ ಇದೆ.

ಜಮ್ಮು ವಿದ್ಯಾರ್ಥಿಗಳಿಗೆ ಮತ್ತೊಂದು ಅವಕಾಶ

ಬೆಂಗಳೂರು: ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗೆ ನಡೆದಿದ್ದ ಸಿಇಟಿ ಪರೀಕ್ಷೆ ಬರೆದಿದ್ದ ಜಮ್ಮು-ಕಾಶ್ಮೀರದ ವಿದ್ಯಾರ್ಥಿಗಳಿಗೆ ದಾಖಲೆ ಸಲ್ಲಿಸಲು ಹೆಚ್ಚುವರಿ ಸಮಯಾವಕಾಶ ನೀಡಲು ಕೆಇಎ ತೀರ್ಮಾನಿಸಿದೆ.

ಈ ಬಗ್ಗೆ ಮಾತನಾಡಿರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕ ಎಚ್.ಪ್ರಸನ್ನ, ಭಾರತ- ಪಾಕಿಸ್ತಾನ ಗಡಿ ಭಾಗದಲ್ಲಿನ ಸೇನಾ ಉದ್ವಿಗ್ನತೆಯಿಂದ ಜಮ್ಮು ಮತ್ತು ಕಾಶ್ಮೀರದ ವಿದ್ಯಾರ್ಥಿಗಳಿಗೆ ಸಿಇಟಿ-25 ಪ್ರವೇಶಕ್ಕೆ ಸಂಬಂಧಿಸಿದಂತೆ ನಡೆಯುವ ಮೂಲ ದಾಖಲೆಗಳ ಪರಿಶೀಲನೆಗೆ ಮತ್ತೊಮ್ಮೆ ಅವಕಾಶ ನೀಡಲಾಗು ವುದು. ಈ ವಿಷಯದಲ್ಲಿ ಆತಂಕ ಬೇಡ ಎಂದು ಸ್ಪಷ್ಟಪಡಿಸಿದ್ದಾರೆ. ಪ್ರಸಕ್ತ ಸಾಲಿನ ಸಿಇಟಿ ಪರೀಕ್ಷೆಯನ್ನು ಜಮ್ಮು ಮತ್ತು ಕಾಶ್ಮೀರದ 204 ಅಭ್ಯರ್ಥಿಗಳು ಬರೆದಿದ್ದು, ಅವರಲ್ಲಿ ಇದುವರೆಗೂ ಕೇವಲ 52 ಮಂದಿ ಮಾತ್ರ ದಾಖಲೆ ಪರಿಶೀಲನೆ ಮಾಡಿಸಿಕೊಂಡಿದ್ದಾರೆ. ಗಡಿ ಭಾಗದಲ್ಲಿ ಉದ್ವಿಗ್ನ ಪರಿಸ್ಥಿತಿಯಿರುವುದರಿಂದ ಅವರಿಗೆ ಮತ್ತೊಂದು ಅವಕಾಶ ನೀಡಲಾಗುವುದು. ಒಂದು ವೇಳೆ 10-15 ದಿನಗಳ ನಂತರವೂ ಪರಿಸ್ಥಿತಿ ಸುಧಾರಿಸದೇ ಇದ್ದರೆ ವಿಡಿಯೊ ಸಂವಾದದ ಮೂಲಕವೇ ದಾಖಲೆಗಳ ಪರಿಶೀಲನೆ ಮಾಡಲಾಗುವುದು. ಒಟ್ಟಿನಲ್ಲಿ ವಿದ್ಯಾರ್ಥಿಗಳಿಗೆ ಅನಾನುಕೂಲ ಆಗದಂತೆ ನೋಡಿಕೊಳ್ಳಲಾಗುವುದು ಎಂದು ಅವರು ಸ್ಪಷ್ಟಪಡಿಸಿದ್ದಾರೆ. ಈ ಕುರಿತು ಈ ಎಲ್ಲ ಅಭ್ಯರ್ಥಿಗಳಿಗೆ ಪ್ರತ್ಯೇಕ ಸಂದೇಶ ಕಳುಹಿಸಲಾಗಿದೆ ಎಂದು ತಿಳಿಸಿದ್ದಾರೆ.

ವಿರೋಧಿಗಳನ್ನು ಒಟ್ಟಾಗಿ ಎದುರಿಸುತ್ತೇವೆ

ಹುಬ್ಬಳ್ಳಿ: ಶಾಂತಿ ಕಾಪಾಡುವ ಎಲ್ಲ ಕಾರ್ಯಕ್ರಮಗಳನ್ನು ಮಾಡುತ್ತೇವೆ . ಭಾರತ ದೇಶ 140 ಕೋಟಿ ಜನಸಂಖ್ಯೆ ಹೊಂದಿದ್ದು, ಎಲ್ಲರೂ ಒಗ್ಗಟ್ಟಾಗಿ ವಿರೋಧಿಗಳನ್ನು ಎದುರುಸುತ್ತಾ ಇದ್ದೇವೆ.

ಈ ನಿಟ್ಟಿನಲ್ಲಿ ಎಲ್ಲರ ಮನಸ್ಸು ಉದ್ದೇಶ ಒಂದಾಗಿದೆ ಎಂದು ಕಾನೂನು ಸಚಿವ ಎಚ್.ಕೆ. ಪಾಟೀಲ್ ಹೇಳಿದರು.

ಯುದ್ಧಕ್ಕೆ ಸಂದರ್ಭದಲ್ಲಿ ಕೋಮು ಸೌಹಾರ್ದತೆಗೆ ಧಕ್ಕೆ ತರುವ ವಿಚಾರ ಸಾಮಾಜಿಕ ಜಾಲತಾಣಗಳಲ್ಲಿ ಪೋಸ್ಟ್ ವಿಚಾರವಾಗಿ ಮಾತನಾಡಿದ ಅವರು, ಇದೊಂದು ದೇಶದ್ರೋಹ ವಿಚಾರ ಸಚಿವ ಸಂಪುಟದಲ್ಲಿ ಜಾತಿ ಗಣತಿ ವರದಿ ಜಾರಿ ಹಿನ್ನೆಲೆ ಹಿಂದುಳಿದ ವರ್ಗಗಳ ಆಯೋಗ ನೀಡಿರುವ ವರದಿಗೆ ಸುದೀರ್ಘವಾದ ಚರ್ಚೆ ಆಗಿದೆ. ಮುಖ್ಯಮಂತ್ರಿಗಳು ಮತ್ತೇ ಚರ್ಚೆಗೆ ತೆಗೆದುಕೊಂಡಿದ್ದರು. ಈಗಾಗಲೇ ಕೆಲ ಸಚಿವರು ಲಿಖಿತವಾಗಿ ಅಭಿಪ್ರಾಯ ತಿಳಿಸಿದ್ದಾರೆ. ಇನ್ನೂ ಹಲವಾರು ಸಚಿವ ಸಂಪುಟದ ಸದಸ್ಯರು ಅಭಿಪ್ರಾಯ ಕೊಡಬೇಕಾಗಿದೆ ಹಿಂದುಳಿದ ವರ್ಗಗಳ ಆಯೋಗಕ್ಕೆ ಏನೆಲ್ಲಾ ಆಗಿದೆ ಎಂಬ ಮಾಹಿತಿ ಕೊಡಲಾಗಿದೆ. ಈಗ ಏನೇನು ಆಗಬೇಕು ಎಂಬ ಕುರಿತು ಸಹ ಮುಂದಿನ ಸಚಿವ ಸಂಪುಟದಲ್ಲಿ ಚರ್ಚೆ ಮಾಡಲಾಗುವುದು ಎಂದು ತಿಳಿಸಿದರು.

ಕಲಬುರಗಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಸಸಿ ನಾಟಿ

ಕಲಬುರಗಿ: ಕಲ್ಯಾಣ ಕರ್ನಾಟಕದ ಎಲ್ಲಾ ಜಿಲ್ಲೆಗಳಲ್ಲಿ ಹಸಿರು ಹೊದಿಕೆ ಕೇವಲ 10% ರಷ್ಟು ಮಾತ್ರ ಇದ್ದು, ಹಸಿರು ಹೊದಿಕೆ ಹೆಚ್ಚಿಸಲು, ಪರಿಸರ ಸಂರಕ್ಷಿಸಲು ಕಲ

ಬುರಗಿಯಲ್ಲಿ ಎತ್ತರದ ಗಿಡ-ಮರಗಳ ಬೆಳಸುವ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಅರಣ್ಯ ಸಚಿವ ಈಶ್ವರ್ ಖಂಡ್ರೆ ತಿಳಿಸಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಕಲ್ಯಾಣ ಕರ್ನಾಟಕದ ಜಿಲ್ಲೆಗಳಾದ ಬೀದರ್ ನಲ್ಲಿ ಶೇ. 7%, ಕಲಬುರಗಿಯಲ್ಲಿ ಶೇ.3%, ಯಾದಗಿರಿಯಲ್ಲಿ ಶೇ.5% ಹಾಗೂ ರಾಯಚೂರಿನಲ್ಲಿ ಶೇ.2% ಅರಣ್ಯ ಪ್ರದೇಶ ಇದ್ದು, ಈ ಭಾಗದಲ್ಲಿ ಹಸಿರು ಪ್ರದೇಶ ಹೆಚ್ಚಳಕ್ಕೆ ಜೂನ್ ತಿಂಗಳಿಂದ ರಸ್ತೆಬದಿಯಲ್ಲಿ 1 ಲಕ್ಷಕ್ಕೂ ಹೆಚ್ಚು ಎತ್ತರದ ಮರಗಳನ್ನು ನೆಡುವ ಯೋಜನೆ ರೂಪಿಸಲಾಗಿದೆ ಎಂದು ತಿಳಿಸಿದರು.

ಈಗಾಗಲೇ, ರಾಜ್ಯದಲ್ಲಿ 8.5 ಕೋಟಿ ಗಿಡಗಳನ್ನು ನೆಡಲಾಗಿದೆ. ಈಗ ಕಲ್ಯಾಣ ಕರ್ನಾಟಕ ಭಾಗದಲ್ಲೂ ಆ ಕೆಲಸ ನಡೆಯಲಿದೆ. ಹಸಿರು ಹೊದಿಕೆ ಹೆಚ್ಚಳಕ್ಕೆ ಕರ್ನಾಟಕ, ರಾಜಾಮಂಡ್ರಿಯಿಂದ ಗುಣಮಟ್ಟದ ಎತ್ತರದ ಸಸಿಗಳನ್ನು ತರಸಲಾಗುತ್ತಿದೆ. ಸಸಿಗಳಿಗೆ ಜಿಐ ಟ್ಯಾಗ್ ಮಾಡಲಾಗುತ್ತದೆ. ಜತೆಗೆ ಕೆಕೆಆರ್‌ಡಿಬಿ 100 ಕೋಟಿ ಅನುದಾನ ನೀಡಿದರೆ, ಅರಣ್ಯ ಇಲಾಖೆಯಿಂದ 100 ಕೋಟಿ ರು. ಅನುದಾನ ನೀಡಿ, 200 ಕೋಟಿ ರು. ವೆಚ್ಚದಲ್ಲಿ ಕಲ್ಯಾಣ ಕರ್ನಾಟಕ ಭಾಗದಲ್ಲಿ ಹಸಿರು ಹೊದಿಕೆ ಪೂರ್ಣ ಆಗಲಿದೆ. ಮುಂದಿನ ಹತ್ತು ವರ್ಷದಲ್ಲಿ ಶೇ.15% ಹಸಿರು ಹೊದಿಕೆ ತಲುಪುವ ಗುರಿ ಹೊಂದಲಾಗಿದೆ ಎಂದು ಮಾಹಿತಿ ನೀಡಿದರು. ಇನ್ನೂ, ಜಿಲ್ಲೆಯ ಚಿತ್ತಾಪುರ ತಾಲೂಕಿನಲ್ಲಿ ಸುಮಾರು 45 ಎಕರೆ ಪ್ರದೇಶದಲ್ಲಿ 50 ರಿಂದ 60 ಕೋಟಿ ರು. ವೆಚ್ಚದಲ್ಲಿ ಪ್ರಾಣಿ ಸಂಗ್ರಾಲಯ ನಿರ್ಮಾಣ ಕಾಮಗಾರಿ ಕೆಲಸ ನಡೆಯುತ್ತಿದ್ದು, ಡಿಸೆಂಬರ್ ವೇಳೆಗೆ ಲೋಕಾರ್ಪಣೆಗೊಳ್ಳಲಿದೆ. ಸಚಿವ ಪ್ರಿಯಾಂಕ್ ಖರ್ಗೆ ಅವರ ತವರು ಕ್ಷೇತ್ರದಲ್ಲಿ ಹುಲಿ, ಸಿಂಹ ಸೇರಿ ಹಲವಾರು ಕಾಡು ಪ್ರಾಣಿಗಳನ್ನು ಒಳಗೊಂಡ ಜೂ (ಪ್ರಾಣಿ ಸಂಗ್ರಾಲಯ) ಕೆಲಸ ನಡೆಯುತ್ತಿದೆ. ಜೂ ನಲ್ಲಿ ಕೆಲಸ ನಿರ್ವಹಣೆ ಮಾಡುವವರಿಗೆ, ಪ್ರಾಣಿಗಳ ಸಂರಕ್ಷಣೆ ಮಾಡುವವರಿಗೆ ಈಗಾಗಲೇ, ಮೈಸೂರು ಹಾಗೂ ಬನ್ನೇರುಘಟ್ಟ ಜೂನಲ್ಲಿ ತರಬೇತಿ ನೀಡಲಾಗುತ್ತಿದೆ ಎಂದರು.

ಎರಡನೇ ವರ್ಷದ ಸಂಭ್ರಮಾಚರಣೆ ಮಾಡುವ ಬಗ್ಗೆ ಸಿಗದ ಸ್ಪಷ್ಟನೆ

ಸಾಧನಾ ಸಮಾವೇಶ; ಕೈ ಪಡೆ ಗೊಂದಲ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತ-ಪಾಕಿಸ್ತಾನದ ನಡುವಿನ ಯುದ್ಧದ ಕಾರಣಕ್ಕೆ ಸಾಧನಾ ಸಮಾವೇಶವನ್ನು ಕೈಬಿಟ್ಟ ರಾಜ್ಯ ಸರಕಾರ ಇದೀಗ, ಸಮಾವೇಶ ಮಾಡಬೇಕೇ ಬೇಡವೇ ಎನ್ನುವ ಗೊಂದಲಕ್ಕೆ ಸಿಲುಕಿದ್ದು, ಪಕ್ಷದ ಹೈಕಮಾಂಡ್‌ನ 'ಸೂಚನೆ' ಕಾಯುವ ಪರಿಸ್ಥಿತಿ ನಿರ್ಮಾಣಗೊಂಡಿದೆ.

ಕರ್ನಾಟಕದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ನೇತೃತ್ವದ ಕಾಂಗ್ರೆಸ್ ಸರಕಾರ ಅಧಿಕಾರಕ್ಕೆ ಬಂದು ಮೇ.20ಕ್ಕೆ ಎರಡು ವರ್ಷ ಪೂರೈಸಲಿದೆ. ಆದ್ದರಿಂದ ಈ ಬಾರಿ 20ರಂದು ಹೊಸಪೇಟೆಯಲ್ಲಿ ಅದ್ದೂರಿ ಕಾರ್ಯಕ್ರಮವನ್ನು ಆಯೋಜಿಸಲು ತೀರ್ಮಾನಿಸಲಾಗಿತ್ತು. ಆಪರೇಷನ್ ಸಿಂದೂರ ಮೂಲಕ ಆರಂಭಗೊಂಡ ಗಡಿ ಉದ್ವಿಗ್ನತೆ ಬಳಿಕ ಪೂರ್ಣ ಪ್ರಮಾಣದ ಯುದ್ಧವಾಗಿ ಪರಿವರ್ತನೆಯಾಗಿದ್ದರಿಂದ ಸಮಾವೇಶವನ್ನು ಮುಂದೂಡಲು ತೀರ್ಮಾನಿಸಲಾಗಿತ್ತು. ಆದರೀಗ ಕದನ ವಿರಾಮ ಘೋಷಣೆಯಾಗಿರುವುದರಿಂದ ಏನು ಮಾಡಬೇಕು ಎನ್ನುವ ಗೊಂದಲ ನಾಯಕರಲ್ಲಿ ಶುರುವಾಗಿದೆ.

ಶನಿವಾರ ಭಾರತ-ಪಾಕಿಸ್ತಾನ ನಡುವೆ ಕದನ ವಿರಾಮ ಘೋಷಣೆಯಾಗಿದ್ದರೂ 12ರಂದು ಎರಡು ದೇಶದ ಸೇನಾ ಮುಖ್ಯಸ್ಥರು ಮತ್ತೊಂದು ಸುತ್ತಿನ ಸಭೆ ನಡೆಸಲಿದ್ದಾರೆ. ಇದಾದ ಬಳಿಕವೂ ಗಡಿಯಲ್ಲಿ ಉದ್ವಿಗ್ನತೆ ಇರುವ ಸಾಧ್ಯತೆಯಿದೆ. ಇದರೊಂದಿಗೆ ಕಳೆದ ನಾಲ್ಕು ದಿನದ ಅವಧಿಯಲ್ಲಿ ಸೇನಾಪಡೆಯ ನಾಲ್ಕು ಮಂದಿ ಹಾಗೂ 12ಕ್ಕೂ ಹೆಚ್ಚು ನಾಗರಿಕರು ಮೃತಪಟ್ಟಿದ್ದಾರೆ. ಇದಕ್ಕೂ ಮೊದಲು ಪಹಲ್ಗಾಮ್ ಉಗ್ರ ದಾಳಿಯಲ್ಲಿ ಕರ್ನಾಟಕದ ಇಬ್ಬರು ಹತರಾಗಿದ್ದಾರೆ. ಹೀಗಿರುವಾಗ, ಈ ಸಮಯದಲ್ಲಿ ಸಂಭ್ರಮಾಚರಣೆ ಮಾಡುವುದು ಸರಿಯೇ ಎನ್ನುವ ದ್ವಂದ್ವದಲ್ಲಿ ಹಲವು ನಾಯಕರಿದ್ದಾರೆ ಎನ್ನಲಾಗಿದೆ.

ಸಮಾವೇಶ ಕೈಬಿಡಲು ತೀರ್ಮಾನಿಸಿದ್ದ ನಾಯಕರು

ಗಡಿಯಲ್ಲಿ ಪರಿಸ್ಥಿತಿ ವಿಕೋಪಕ್ಕೆ ಹೋಗಿದ್ದರಿಂದ ಸಂಭ್ರಮಾಚರಣೆ ಮಾಡುವುದು ಬೇಡ ಎನ್ನುವ ತೀರ್ಮಾನಕ್ಕೆ ಬಹುತೇಕ ನಾಯಕರು ಬಂದಿದ್ದರು. ಗೃಹ ಸಚಿವ ಡಾ.ಜಿ. ಪರಮೇಶ್ವರ ಅವರು, ದೇಶದಲ್ಲಿ ಬಿಗುವಿನ ಪರಿಸ್ಥಿತಿಯಿರುವುದರಿಂದ ಸರಕಾರ ತನ್ನ ಎರಡು ವರ್ಷದ ಸಾಧನಾ ಸಮಾವೇಶವನ್ನು ಮುಂದೂಡಿದೆ. ಕಂದಾಯ ಇಲಾಖೆಯಿಂದ ಹಕ್ಕುಪತ್ರಗಳ ವಿತರಣೆ ಕಾರ್ಯಕ್ರಮವಿದ್ದು, ಸನ್ನಿವೇಶ ಸಮರ್ಪಕವಾಗಿಲ್ಲದ ಕಾರಣ ಮುಂದಿನ ದಿನಗಳಲ್ಲಿ ಕಾರ್ಯಕ್ರಮ ಆಯೋಜಿಸಲಾಗುವುದು' ಎಂದು ಪ್ರಕಟಿಸಿದ್ದರು. ಆದರೀಗ ಕದನ ವಿರಾಮ ಘೋಷಣೆಯಾಗಿರುವುದರಿಂದ ಮುಂದೇನು ಮಾಡಲಿದ್ದಾರೆ ಎನ್ನುವ ಗೊಂದಲವಿದೆ.

ಹೈಕಮಾಂಡ್ ಸಲಹೆ ಕೇಳಲು ತೀರ್ಮಾನ

ಯುದ್ಧ ನಿಂತಿದ್ದರೂ ಆಗಿರುವ ನಷ್ಟ ಹಾಗೂ ಗಡಿಯಲ್ಲಿ ಈಗಿರುವ ಪ್ರಕ್ಷುಬ್ಧ ವಾತಾವರಣದ ನಡುವೆ ಸಂಭ್ರಮಾಚರಣೆ ಮಾಡುವುದು ಎಷ್ಟು ಸರಿ ಎನ್ನುವ ಗೊಂದಲವಿರುವುದರಿಂದ, ಪಕ್ಷದ ಹೈಕಮಾಂಡ್ ಬಳಿ ಈ ವಿಷಯದ ಬಗ್ಗೆ ಸ್ಪಷ್ಟನೆ ಪಡೆಯಲು ರಾಜ್ಯ ನಾಯಕರು ತೀರ್ಮಾನಿಸಿದ್ದಾರೆ. ಈ ಸಂಬಂಧ ರಾಜ್ಯ ಕಾಂಗ್ರೆಸ್ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಹಾಗೂ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೊಂದಿಗೆ ಚರ್ಚಿಸಿ ಅಂತಿಮ ತೀರ್ಮಾನ ಮಾಡುವ ಸಾಧ್ಯತೆಯಿದೆ ಎನ್ನಲಾಗಿದೆ.

ಭಾರತೀಯ ಸೈನಿಕರ ಶಕ್ತಿ ಎದುರು ಪಾಕ್ ಲೆಕ್ಕಕ್ಕಿಲ್ಲ

ಪಾಕ್ ಭೂಪಟದಲ್ಲೇ ಇರಲ್ಲ

ಕಲಬುರಗಿ: ಭಾರತೀಯ ಸೈನಿಕರ ಶಕ್ತಿಯ ಎದುರಿಗೆ ಪಾಕಿಸ್ತಾನ ಲೆಕ್ಕಕ್ಕಿಲ್ಲ. ಭಾರತ ಗಟ್ಟಿಯಾಗಿ ನಾಲ್ಕು ದಿನ ಯುದ್ಧ ಮಾಡಿದರೆ

ಪಾಕಿಸ್ತಾನ ವಿಶ್ವದ ಭೂಪಟದಲ್ಲೇ ಇರಲ್ಲ ಎಂದು ಸಚಿವ ಶಿವರಾಜ್ ತಂಗಡಗಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ಭಾರತೀಯ ಸೈನಿಕರ ಶಕ್ತಿ ಅಪಾರವಾಗಿದೆ. ಹಿಂದೇಯಿಂದಲೂ ನಮ್ಮ ಸೈನಿಕರ ಶಕ್ತಿ ವಿಶ್ವಕ್ಕೆ ತಿಳಿದಿದೆ. ನಮ್ಮ ನಾಗರೀಕರ ಮೇಲೆ ದಾಳಿ ನಡೆಸಿದೆ ಪಾಕ್‌ಗೆ ತಕ್ಕ ಉತ್ತರ ನೀಡಬೇಕಿದೆ. ಯುದ್ಧದಲ್ಲಿ ಹೊರಡುವ ಸೈನಿಕರಿಗೆ ದೇವರು ಶಕ್ತಿ ನೀಡಲಿ, ಯುದ್ಧದಲ್ಲಿ ವಿಜಯಶಾಲಿ ಯಾಗಿ ಬರಲಿ ಎಂದು ಶುಭ ಹಾರೈಸಿದರು. ಜಾತಿ ಗಣತಿ ಕುರಿತು ಪ್ರಕ್ರಿಯೆ ನೀಡಿದ ಅವರು, ರಾಜ್ಯದಲ್ಲಿ ಸದ್ಯ ಒಳಮೀಸಲಾತಿ ಸಮೀಕ್ಷೆ ನಡೆಯುತ್ತಿದೆ. ಮೇ 5ರಿಂದ ಗಣತಿ ಪ್ರಕ್ರಿಯೆ ಪ್ರಾರಂಭವಾಗಿದೆ. ಮೂರು ಹಂತದಲ್ಲಿ ಸಮೀಕ್ಷೆ ನಡೆಯಲಿದೆ. ಗಣತಿ ಮುಗಿದಮೇಲೆ ನ್ಯಾ. ನಾಗಮೋಹನ್ ದಾಸ್ ವರದಿ ಪರಿಶೀಲಿಸಿ ಸರಕಾರ ಮುಂದಿನ ಕ್ರಮ ಕೈಗೊಳ್ಳಲಿದೆ ಎಂದರು.

> ರಾಜ್ಯದ ಬಹುತೇಕ ಬಿಸಿಎಂ ಹಾಸ್ಟೆಲ್ ಗಳಲ್ಲಿ ಗುಣಮಟ್ಟ ಆಹಾರ ನೀಡಲಾಗುತ್ತಿದೆ.ಆಹಾರ ಸಾಮಗ್ರಿಗಳು ಶೇಖರಣೆ ಮಾಡಲು ಅನುಕೂಲವಾಗುವ ನಿಟ್ಟನಲ್ಲಿ ಜಿಲ್ಲೆಗೊಂದು ಗೋದಾಮು ಸ್ಥಾಪಿಸಲಾಗುವುದು. ಬಿಸಿಎಂ ಹಾಸ್ಟೆಲ್ ಗಳಲ್ಲಿ ಗುಣಮಟ್ಟ ಕಾಪಾಡಲು ಕ್ರಮ ಕೈಗೊಳ್ಳಲಾಗಿದೆ.
>
> – ಶಿವರಾಜ್ ತಂಗಡಗಿ, ಸಚಿವ

ಶೈಕ್ಷಣಿಕ ಗುಣಮಟ್ಟ ಹಂತ ಹಂತವಾಗಿ ಸುಧಾರಣೆ

371 (ಜೆ) ಅನುಷ್ಠಾನದಿಂದ ಕಲ್ಯಾಣ ಕರ್ನಾಟಕ ಭಾಗದ ಜನರಿಗೆ ಶೈಕ್ಷಣಿಕ, ಸಾಮಾಜಿಕ ಹಾಗೂ ಆರ್ಥಿಕವಾಗಿ ಅನುಕೂಲವಾಗಿದೆ. ಎಸ್‌ಎಸ್‌ಎಲ್ ಸಿ ಹಾಗೂ ಪಿಯುಸಿ ಫಲಿತಾಂಶ ಸುಧಾರಣೆಯಲ್ಲಿ ಹಂತ ಹಂತವಾಗಿ ಕ್ರಮಕೈಗೊಳ್ಳುತ್ತೇವೆ. ಅಕ್ಷರ ಆವಿಷ್ಕಾರ ಇನ್ನಷ್ಟು ಪರಿಣಾಮಕಾರಿಯಾಗಿ ಜಾರಿಗೊಳಿಸಬೇಕಿದೆ. ಶಿಕ್ಷಣ ಹಾಗೂ ಉದ್ಯೋಗ ಕ್ಷೇತ್ರದಲ್ಲಿ ಅತಿ ಹೆಚ್ಚು ಗಮನ ಹರಿಸಿ, ಕ್ರಮ ಕೈಗೊಳ್ಳುತ್ತೇವೆ. ಕಲ್ಯಾಣ ಕರ್ನಾಟಕ ಭಾಗಕ್ಕೆ 371 (ಜೆ) ಪ್ರಕಾರ ಅತಿ ಹೆಚ್ಚು ಅನುದಾನ ಸಿಗುತ್ತಿದೆ. ಸರಕಾರ ಹೆಚ್ಚು ಮುತುವರ್ಜಿ ವಹಿಸಿ ಈ ಭಾಗದಲ್ಲಿ ಕೆಲಸ ಮಾಡುತ್ತಿದೆ. ಮಲ್ಲಿಕಾರ್ಜುನ ಖರ್ಗೆ ಹಾಗೂ ಧರ್ಮಸಿಂಗ್ ಅವರ ಹೋರಾಟ, 371 ಜೆ ಕಾಯ್ದೆ ಅನುಷ್ಠಾನಹೋಲಿಸಿದ ಸಿಎಂ ಸಿದ್ದರಾಮಯ್ಯ ನೇತೃತ್ವದ ಸರಕಾರ ಹಾಗೂ ಯುಪಿಎ ಸರಕಾರದಲ್ಲಿ ಅನುಷ್ಠಾನಗೊಳ್ಳಲು ಸಹಕಾರ ನೀಡಿದ ರಾಹುಲ್ ಗಾಂಧಿ ಅವರಿಗೆ ಸಂಪೂರ್ಣ ಶ್ರೇಯ ಸಲ್ಲುತ್ತದೆ ಎಂದು ಸಚಿವ ತಂಗಡಗಿ ಹೇಳಿದರು.

ಜಪಾನಿನ ಯಶಸ್ಸಿಗೆ ನೈತಿಕ ಬೋಧನೆಯೇ ಮುಖ್ಯ ಕಾರಣ

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ನೈತಿಕ ಶಿಕ್ಷಣಕ್ಕೆ ಒತ್ತು ನೀಡಿದ ದೇಶಗಳಲ್ಲಿ ಜಪಾನ್ ಸಹ ಒಂದು. ಒಂದರಿಂದ ಆರನೇ ತರಗತಿವರೆಗೆ ಜಪಾನಿನ ವಿದ್ಯಾರ್ಥಿಗಳು ನೈತಿಕ ಶಿಕ್ಷಣವನ್ನು ಕಡ್ಡಾಯವಾಗಿ ಕಲಿಯಲೇಬೇಕು. ಒಂದನೇ ಹಂತದಿಂದ ಮೂರನೇ ಪ್ರಾಥಮಿಕ ಹಂತದವರೆಗೆ ಯಾವುದೇ ಪರೀಕ್ಷೆ ಇಲ್ಲ. ಏಕೆಂದರೆ ಈ ಅವಧಿಯಲ್ಲಿ ಶಿಕ್ಷಣದ ಗುರಿಯು ಮಕ್ಕಳಲ್ಲಿ ಚಾರಿತ್ರ್ಯ ನಿರ್ಮಾಣ ಮಾಡುವುದಾಗಿದೆ.

ಜಪಾನಿನಲ್ಲಿ ನೈತಿಕ ಶಿಕ್ಷಣವು ನಾಗರಿಕರಲ್ಲಿ ಉತ್ತಮ ಚಾರಿತ್ರ್ಯ, ಜವಾಬ್ದಾರಿ, ದೇಶಪ್ರೇಮ ಮತ್ತು ನಾಗರಿಕ ಹೊಣೆಗಾರಿಕೆಯನ್ನು ಬೆಳೆಸುವ ಗುರಿಯನ್ನು ಹೊಂದಿದೆ. ಗೌರವ, ಜವಾಬ್ದಾರಿ ಮತ್ತು ಸಾರ್ವಜನಿಕ ಹಿತದೃಷ್ಟಿಯಿಂದ ಬದ್ಧತೆಯಂಥ ಗುಣಲಕ್ಷಣಗಳನ್ನು ಅದು ಒತ್ತಿಹೇಳುತ್ತದೆ. ಇದು ಜಪಾನಿನ ಶಿಕ್ಷಣ ವ್ಯವಸ್ಥೆಯ ಒಂದು ಪ್ರಮುಖ ಭಾಗವಾಗಿದ್ದು, ಜ್ಞಾನವುಳ್ಳ ವ್ಯಕ್ತಿಗಳನ್ನು ಮಾತ್ರವಲ್ಲದೇ, ಸಮಾಜದ ನೈತಿಕ ಮತ್ತು ಕೊಡುಗೆ ನೀಡುವ ಸದಸ್ಯರನ್ನಾಗಿಯೂ ಬೆಳೆಸುವ ಗುರಿಯನ್ನು ಹೊಂದಿದೆ.

ಶಿಕ್ಷಣ, ಸಂಸ್ಕೃತಿ, ಕ್ರೀಡೆ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವಾಲಯವು ಪಠ್ಯಪುಸ್ತಕಗಳು ಮತ್ತು ಪಠ್ಯಕ್ರಮದ ಸಾಮಗ್ರಿಗಳಲ್ಲಿ ಪ್ರತಿಫಲಿಸುವ ನೈತಿಕ ಶಿಕ್ಷಣಕ್ಕಾಗಿ ಮಾರ್ಗಸೂಚಿಗಳನ್ನು ನಿಗದಿಪಡಿಸುತ್ತದೆ. ನೈತಿಕ ಶಿಕ್ಷಣವು ಸಾಮಾನ್ಯವಾಗಿ ಇತರರಿಗೆ ಗೌರವ, ಸ್ವಯಂ ನಿಯಂತ್ರಣ, ಪ್ರಾಮಾಣಿಕತೆ, ಧೈರ್ಯ, ಸೌಜನ್ಯ, ನ್ಯಾಯ, ಕುಟುಂಬ ಮತ್ತು ಶಾಲೆಯ ಮೇಲಿನ ಪ್ರೀತಿ ಹಾಗೂ ದೇಶಭಕ್ತಿಯ ಅಂಶಗಳನ್ನು ಒಳಗೊಂಡಿರುತ್ತದೆ. ಬೋಧನಾ ವಿಧಾನಗಳು ಚರ್ಚೆ, ಪಾತ್ರಾಭಿನಯ, ನಿಜ ಜೀವನದ ಉದಾಹರಣೆಗಳು ಮತ್ತು ಐತಿಹಾಸಿಕ ವ್ಯಕ್ತಿಗಳ ಅಧ್ಯಯನವನ್ನು ಒಳಗೊಂಡಿರಬಹುದು. ಇದರ ಜತೆಗೆ ನೈತಿಕ ತತ್ವಗಳ ಜ್ಞಾನವನ್ನು ನೀಡುವುದು ಮಾತ್ರವಲ್ಲದೇ ನೈತಿಕ ನಡವಳಿಕೆಯನ್ನು ಬೆಳೆಸುವುದು ಗುರಿಯಾಗಿದೆ.

ನೈತಿಕ ಶಿಕ್ಷಣಕ್ಕೆ ಅಲ್ಲಿ 'ಡೋಟೋಕು' ಅಂತ ಕರೆಯುತ್ತಾರೆ. ಇದು ಮಕ್ಕಳಿಗೆ ಅಥವಾ ಜನರಿಗೆ ಸಾಮಾಜಿಕ, ನೈತಿಕ ಮೌಲ್ಯಗಳನ್ನು ಬೋಧಿಸುವ ಶಿಕ್ಷಣ ಪ್ರಕ್ರಿಯೆಯ ಭಾಗವಾಗಿದೆ. ಡೋಟೋಕುಗೆ ನೈತಿಕತೆ ಮತ್ತು ಧರ್ಮನೀತಿಯ ಬೋಧನೆ ಎಂಬ ಅರ್ಥವೂ ಇದೆ. ಡೋಟೋಕು ಎಂದರೆ ಸತ್ಕರ್ಮ ಮತ್ತು ನೈತಿಕ ಮಾರ್ಗ. ಇದನ್ನು ಪ್ರಾಥಮಿಕ ಮತ್ತು ಪ್ರೌಢಶಾಲಾ ಪಠ್ಯಕ್ರಮದಲ್ಲಿ ಸೇರಿಸಿದ್ದಾರೆ. ಡೋಟೋಕು ಶಿಕ್ಷಣವು ಶತಮಾನಗಳಿಂದ ಆಚರಣೆಯಲ್ಲಿದೆ. ಅಚ್ಚರಿಯ ಸಂಗತಿಯೆಂದರೆ, ಅದನ್ನು ಈಗಲೂ ಚಾಚೂತಪ್ಪದೇ ಕಲಿಸುತ್ತಿರುವುದು. ಪ್ರಾಥಮಿಕ ಮತ್ತು ಪ್ರೌಢಶಾಲೆಗಳಲ್ಲಿ ನೈತಿಕ ಶಿಕ್ಷಣ ಕಲಿಕೆ ಕಡ್ಡಾಯ.

ಈ ಪಾಠಗಳಲ್ಲಿ ಮಕ್ಕಳಿಗೆ ನೈತಿಕ ಮೌಲ್ಯಗಳನ್ನು ಕಲಿಸುವ ವಿಷಯಗಳು ಸರಳ ಮತ್ತು ಸುಲಭವಾಗಿವೆ. ಉದಾಹರಣೆಗೆ,

1. **ಪೋಷಕರಿಗೆ ಗೌರವ:** ಮಕ್ಕಳಿಗೆ ತಮ್ಮ ತಂದೆ-ತಾಯಿ, ಹಿರಿಯರು, ಗುರುಗಳು ಮತ್ತು ಸಮಾಜದ ಹಿರಿಯ ವ್ಯಕ್ತಿಗಳಿಗೆ ಗೌರವ ನೀಡುವುದನ್ನು ಕಲಿಸಲಾಗುತ್ತದೆ. ಇದು ಜಪಾನಿ ಸಂಸ್ಕೃತಿಯ ಬಹುಮುಖ್ಯ ಅಂಶವಾಗಿದೆ.
2. **ಪ್ರಾಮಾಣಿಕತೆ:** ಸತ್ಯವನ್ನೇ ಹೇಳುವುದು, ಮೋಸ, ವಂಚನೆ ಮಾಡದಿರುವುದು ಮತ್ತು ಪಾರದರ್ಶಕ ನಡವಳಿಕೆ ಇವುಗಳನ್ನು ಬೋಧಿಸಲಾಗುತ್ತದೆ.
3. **ಶಿಸ್ತಿನಿಂದ ನಡೆದುಕೊಳ್ಳುವುದು:** ಜಪಾನಿನಲ್ಲಿ ಸಾರ್ವಜನಿಕ ಜೀವನದಲ್ಲಿ ಶಿಸ್ತಿಗೆ ಬಹುಮಾನ ನೀಡಲಾಗುತ್ತದೆ. ಶಾಲೆಯ ಮಕ್ಕಳು ಶ್ರಮಿಕ ಶಿಸ್ತನ್ನು ಪಾಲಿಸುವಂತೆ, ಸಮಯ ಪಾಲನೆ ಮಾಡುವುದು, ನಿಗದಿತ ಕಾರ್ಯಗಳನ್ನು ಸಮಯಕ್ಕೆ ಮುಗಿಸುವುದನ್ನು ಕಲಿಯುತ್ತಾರೆ.
4. **ಸಹಾನುಭೂತಿ ಮತ್ತು ಪರೋಪಕಾರ:** ಇತರರ ನೋವನ್ನು ಅರ್ಥಮಾಡಿಕೊಳ್ಳುವುದು, ಸಹಾಯ ಮಾಡುವುದು, ಸಹಾನುಭೂತಿ ಪ್ರದರ್ಶಿಸುವುದು ಇವನ್ನು ಸಹ ಮುಖ್ಯ ಮೌಲ್ಯಗಳಾಗಿ ಕಲಿಸಲಾಗುತ್ತದೆ.
5. **ಪರಿಶ್ರಮ ಮತ್ತು ಆತ್ಮವಿಶ್ವಾಸ:** ಹೆಚ್ಚಿನ ಪ್ರಯತ್ನದಿಂದ ಯಶಸ್ಸು ಸಾಧ್ಯವೆಂಬ ನಂಬಿಕೆ, ಕಾಯಕಪ್ರೀತಿ, ಶ್ರದ್ಧೆ ಮತ್ತು ಒಂದು ವಸ್ತುವಿನ ಮಹತ್ವ ಮತ್ತು ಬೆಲೆಯನ್ನು ತಿಳಿದುಕೊಳ್ಳುವುದು ಈ ಪಾಠಗಳಲ್ಲಿದೆ.

ಹಾಗಾದರೆ ಡೋಟೋಕು ಪಾಠಗಳು ಹೇಗೆ ನಡೆಯುತ್ತವೆ? ಈ ಪಾಠಗಳು ಸಾಮಾನ್ಯವಾಗಿ ವಾರದಲ್ಲಿ ಎರಡು ಅಥವಾ ಮೂರು ನಡೆಯುತ್ತವೆ. ಇವು ಸಾಮಾನ್ಯ ಪಠ್ಯ ವಿಷಯಗಳಂತೆ ಪರೀಕ್ಷಾ ಆಧರಿತವಾಗಿಲ್ಲ. ಆದರೆ ವಿವಿಧ ಕಥೆಗಳು, ನೈತಿಕ ಬೋಧನೆಗಳ ಜತೆಗೆ ಚರ್ಚೆಗಳು ನಡೆಯುತ್ತವೆ. ಪಾಠದ ಕ್ರಮದಲ್ಲಿ ಕಥೆ ಹೇಳುವುದು, ಕೇಳುವುದು, ಚರ್ಚೆ, ಸಂವಾದ, ಗುಂಪು ಚರ್ಚೆ, ನಾಟಕ, ಮಕ್ಕಳಿಂದ ಪಾಠದ ಸಾರಾಂಶ ಪುನರಾವರ್ತನೆ ಮುಂತಾದವು ಸೇರಿರುತ್ತವೆ.

ಘಟನೆ ಆಧಾರಿತ ಕಲಿಕೆಗೆ ಹೆಚ್ಚಿನ ಪ್ರಾಧಾನ್ಯ ನೀಡಲಾಗಿದೆ. ಮಕ್ಕಳಿಗೆ ನೈತಿಕ ಸನ್ನಿವೇಶವನ್ನು ನೀಡುವಾಗ ಅವರು ಹೇಗೆ ಪ್ರತಿಸ್ಪಂದಿಸುತ್ತಾರೆ ಎಂಬುದನ್ನು ಚರ್ಚಿಸಲಾಗುತ್ತದೆ. ಮಕ್ಕಳು ವಿವಿಧ ಪಾತ್ರಗಳನ್ನು ನೈತಿಕ ನಿರ್ಣಯಗಳ (ರೋಲ್ ಪ್ಲೇಯಿಂಗ್- Role-playing) ಮೂಲಕ ತೆಗೆದುಕೊಳ್ಳುತ್ತಾರೆ. ಪಾಠದ ಬಳಿಕ ತಮ್ಮ ನಡವಳಿಕೆಯನ್ನು ವಿಮರ್ಶಿಸುವ ಅಭ್ಯಾಸ (ಆತ್ಮಪರಿಶೀಲನೆ) ಸಹ ಇರುತ್ತದೆ.

ನೈತಿಕ ಶಿಕ್ಷಣದ ತಳಹದಿಯಿಲ್ಲದೆ ಯಾವ ದೇಶವನ್ನೂ ಕಟ್ಟಲು ಆಗುವುದಿಲ್ಲ ಎಂಬುದು ಜಪಾನಿ ಸರಕಾರದ ಬಲವಾದ ನಂಬಿಕೆ. ಸರಕಾರ ಬದಲಾದರೂ, ಅವುಗಳ ಸಿದ್ಧಾಂತ ಬದಲಾದರೂ, ಆ ದೇಶದಲ್ಲಿ ನೈತಿಕ ಶಿಕ್ಷಣದ ಸ್ವರೂಪ ಮಾತ್ರ ಬದಲಾಗಿಲ್ಲ. ಯಾವ ಸರಕಾರ ಅಥವಾ ಮಂತ್ರಿಯೂ ಈ ವಿಷಯದಲ್ಲಿ ರಾಜಕೀಯ ಮಾಡುವುದಿಲ್ಲ. ಶಾಲಾ ಶಿಕ್ಷಣದ ಜತೆಗೆ ಆಟ ಆಡುವುದಿಲ್ಲ. ಹಠಾತ್ ಪಠ್ಯಕ್ರಮಗಳನ್ನು ಬದಲಿಸುವುದಿಲ್ಲ.

ಇಡೀ ದೇಶ ಸ್ವಚ್ಛವಾಗಿರುವುದಕ್ಕೆ, ಇಡೀ ದೇಶದಲ್ಲಿ ಯಾರೂ ಉಗಳದಿರುವುದಕ್ಕೆ, ಸಾರ್ವಜನಿಕ ಸ್ಥಳಗಳಲ್ಲಿ ಮೂರಕ್ಕಿಂತ ಹೆಚ್ಚು ಜನ ಸೇರಿದಾಗ ಸರತಿ ಸಾಲು (ಕ್ಯೂ) ಪಾಲಿಸುವುದಕ್ಕೆ, ರೈಲಿನಲ್ಲಿ ಮೌನವನ್ನು ಪಾಲಿಸುವುದಕ್ಕೆ ಈ ನೈತಿಕ ಶಿಕ್ಷಣವೇ ಕಾರಣ. ನೈತಿಕ ಶಿಕ್ಷಣವಿಲ್ಲದ ಉನ್ನತ ಶಿಕ್ಷಣಕ್ಕೆ ಅರ್ಥವೇ ಇಲ್ಲ ಎಂದು ಈಗಲೂ ಬಲವಾಗಿ ಪ್ರತಿಪಾದಿಸುವ ಜಪಾನ್, ಉಳಿದೆಲ್ಲ ದೇಶಗಳಿಗಿಂತ ವಿಭಿನ್ನವಾಗಿ ಕಾಣುವುದಕ್ಕೂ ಇದೇ ಕಾರಣ. ಜಪಾನಿಗೆ ಭೇಟಿ ನೀಡುವ ಅಮೆರಿಕನ್ನರಿಗೂ ಸಾಂಸ್ಕೃತಿಕ ಆಘಾತ (Cultural Shock) ಉಂಟಾಗಲು ಇದೇ ಕಾರಣ.

ಜಪಾನಿನ ಮನೆಗಳು

ನೀವು ಜಪಾನಿನಲ್ಲಿ ನಡೆಯುವಾಗ ಗಣನೆಗೆ ತೆಗೆದುಕೊಳ್ಳಬೇಕಾದ ಒಂದು ಅಂಶವೆಂದರೆ, ಸರಾಸರಿ ಮನೆಗಳು ಮತ್ತು ಕಟ್ಟಡಗಳು 25 ವರ್ಷಗಳ ನಂತರ ನೆಲಸಮವಾಗುತ್ತವೆ. ಇದು ನಗರಗಳ ನಿರಂತರ ರೂಪಾಂತರಕ್ಕೆ ಸಹಾಯ ಮಾಡುತ್ತದೆ. ಆದರೆ ಇದು ಅವ್ಯವಸ್ಥೆಗೆ ಮತ್ತೊಂದು ಕಾರಣವೂ ಆಗಿದೆ. ಟೋಕಿಯೋದ ಮಧ್ಯಭಾಗದಲ್ಲಿ ಹತ್ತು ವರ್ಷಗಳ ಹಳೆಯ ಇಟ್ಟಿಗೆ ಮನೆಯ ಪಕ್ಕದಲ್ಲಿ, ಹೊಸದಾಗಿ ನಿರ್ಮಿಸಲಾದ ಮೂರು ಅಂತಸ್ತಿನ ಪೂರ್ವ-ತಯಾರಿಸಿದ ಮನೆಯ ಪಕ್ಕದಲ್ಲಿ, ಇಪ್ಪತ್ತು ವರ್ಷಗಳ ಒಂದೇ ಅಂತಸ್ತಿನ ಮರದ ಮನೆಯನ್ನು ನೋಡುವುದು ಅಲ್ಲಿ ಮಾತ್ರವೇ ಸಾಧ್ಯವೇನೋ? ಒಂದೇ ದೃಶ್ಯದಲ್ಲಿ ಇಂಥ ಮಿಶ್ರಣವನ್ನು ಕಾಣಬಹುದು.

ಇದಕ್ಕೆ ವ್ಯತಿರಿಕ್ತವಾಗಿ, ಲಂಡನ್, ನ್ಯೂಯಾರ್ಕ್‌ನಲ್ಲಿ ಮನೆಗಳು ಸರಾಸರಿ 100 ವರ್ಷಗಳಿಗಿಂತ ಹೆಚ್ಚು ಕಾಲ ಬಾಳಿಕೆ ಬರುವಂತೆ ಕಟ್ಟುವುದನ್ನು ನೋಡಬಹುದು. ಅಲ್ಲಿ ಬೀದಿಗಳು ಹೆಚ್ಚು ಏಕರೂಪವಾಗಿರುತ್ತವೆ ಮತ್ತು ನೆರೆಹೊರೆಯ ಎಲ್ಲ ಮನೆಗಳನ್ನು ನಿರ್ಮಿಸಿದ ಅವಧಿಯನ್ನು ನೀವು ಊಹಿಸಬಹುದು. ಪ್ಯಾರಿಸ್ ಅಥವಾ ಬಾರ್ಸಿಲೋನಾದ ಮಧ್ಯಭಾಗದಲ್ಲಿ ಅಡ್ಡಾಡುವುದು ನಿಮಗೆ ಸಾಮರಸ್ಯದ ಭಾವನೆಯನ್ನು ನೀಡುತ್ತದೆ. ಏಕೆಂದರೆ ಮನೆಗಳು ಮತ್ತು ಪಕ್ಕದ ಕಟ್ಟಡಗಳು ವಾಸ್ತುಶಿಲ್ಪಕ್ಕೆ ಹೊಂದಿಕೆಯಾಗುತ್ತವೆ.

ಜಪಾನ್ ಬಗ್ಗೆ ಸಾಕಷ್ಟು ಕೃತಿಗಳನ್ನು ಬರೆದಿರುವ ಹೆಕ್ಟರ್ ಗಾರ್ಸಿಯಾ ಒಂದೆಡೆ ಹೀಗೆ ಹೇಳಿದ್ದಾನೆ- ''ಟೋಕಿಯೊದಲ್ಲಿರುವ ನನ್ನ ಕೆಲಸದ ಸ್ಥಳಕ್ಕೆ ಹೋಗಲು, ಎರಡು ವರ್ಷಗಳ ಕಾಲ ನಾನು ಪ್ರತಿದಿನ ಅದೇ 800 ಮೀಟರ್ ಉದ್ದದ ಬೀದಿಯಲ್ಲಿ ನಡೆದಿದ್ದೇನೆ. ಆ ಅವಧಿಯಲ್ಲಿ ಆರು ಕಟ್ಟಡಗಳನ್ನು ಕೆಡವಿರುವುದನ್ನು ಮತ್ತು 15 ಮನೆಗಳನ್ನು ಬಹುತೇಕ ಒಂದೇ ರೀತಿಯ ಹೊಸ ಮನೆಗಳಿಂದ ಬದಲಿಸಿದ್ದನ್ನು ನೋಡಿದ್ದೇನೆ. ಅಲ್ಲಿನ ಬೀದಿಗಳಲ್ಲಿ ನಿರಂತರ ಬದಲಾವಣೆಗಳಾಗುತ್ತಿರುತ್ತವೆ''.

ವಸತಿ ಅಭಿವೃದ್ಧಿ ನಿಯಮಗಳು ಸಾಮಾನ್ಯವಾಗಿ ಉತ್ತರ ಅಮೆರಿಕ ಅಥವಾ ಯುರೋಪಿನ ನಗರಗಳಲ್ಲಿ ಬಳಸುವ ನಿಯಮಗಳಿಗಿಂತ ಸ್ವಲ್ಪ ಭಿನ್ನವಾಗಿವೆ. ಸಾಮಾನ್ಯವಾಗಿ, ನಿಯಮಗಳು ಹೆಚ್ಚು ಸೌಮ್ಯವಾಗಿರುತ್ತವೆ ಮತ್ತು ನಮ್ಮ ದೇಶದಲ್ಲಿ ಯೋಚಿಸಲಾಗದಂಥ ವಿಷಯಗಳಿಗೆ ಅನುಮತಿ ನೀಡಲಾಗಿದೆ. ಉದಾಹರಣೆಗೆ, ನಗರ ಪ್ರದೇಶವನ್ನು ನೀವು ಇಷ್ಟಪಡುವಷ್ಟು ವಿಭಜಿಸಬಹುದು, ಇದರಿಂದಾಗಿ ನೀವು ನಗರದ ಮಧ್ಯಭಾಗದಲ್ಲಿ ಕೆಲವೇ ಚದರ ಅಡಿಗಳ ಪ್ಲಾಟ್‌ಗಳನ್ನು ಕಾಣಬಹುದು, ಅಲ್ಲಿ ಮಾಲೀಕರಿಗೆ ಒಂದೆರಡು ವೆಂಡಿಂಗ್ ಮಷೀನ್‌ಗಳನ್ನು ಹಾಕಲು ಸಾಕಾಗುವಷ್ಟು ಸ್ಥಳಾವಕಾಶವಿರುತ್ತದೆ.

ಭೂಮಿಯನ್ನು ವಿಭಜಿಸುವ ವಿಷಯದಲ್ಲಿ ಈ ಸಣ್ಣ ವ್ಯತ್ಯಾಸವು ಕ್ಷುಲ್ಲಕವೆಂದು ತೋರಬಹುದು. ಆದರೆ 13 ಅಡಿ (4 ಮೀ) ಗಿಂತ ಹೆಚ್ಚು ಅಗಲವಿಲ್ಲದ ಐದು ಅಥವಾ ಆರು ಅಂತಸ್ತಿನ ಕಟ್ಟಡಗಳು ಅಥವಾ 50 ಅಂತಸ್ತಿನ ಗಗನಚುಂಬಿ ಕಟ್ಟಡಗಳ ನಡುವೆ ಇರುವ ಮನೆಗಳನ್ನು ನೋಡಿದಾಗ, ವಸತಿ ಅಭಿವೃದ್ಧಿ ನಿಯಂತ್ರಣದ ಅನುಷ್ಠಾನವು ಎಷ್ಟು ಸರಳವಾಗಿದೆ ಎಂದು ತೋರುತ್ತದೆ. ಅದಲ್ಲದೇ, ತ್ರಿಕೋನ, ಪಂಚಭುಜಾಕೃತಿಯ ಪ್ಲಾಟ್‌ಗಳು ಸಹ ಇವೆ, ಇದು ಅತ್ಯಂತ ವಿಚಿತ್ರವಾದ ಆಕಾರಗಳನ್ನು ಹೊಂದಿರುವ ಕಟ್ಟಡಗಳಿಗೂ ಕಾರಣವಾಗಿವೆ.

ಜಪಾನಿನ ನಗರಗಳಲ್ಲಿನ ವಾಸ್ತುಶಿಲ್ಪದ ವೈವಿಧ್ಯವು, ಕೆಲವು ನಿಮಿಷಗಳ ಕಾಲ ನಡೆದ ನಂತರ, ನೀವು ಇನ್ನೊಂದು ಸಂಪೂರ್ಣವಾಗಿ ವಿಭಿನ್ನವಾದ ನಗರದಲ್ಲಿದ್ದಂತೆ ಭಾಸವಾಗುತ್ತದೆ.

ಜಪಾನಿಗೆ ಹೋದಾಗ, ನೀವು ಕಲಿಯುವ ಮೊದಲ ವಿಷಯವೆಂದರೆ, ನೀವು ಯಾವಾಗಲೂ ಮನೆಗೆ ಪ್ರವೇಶಿಸುವ ಮೊದಲು, ನಿಮ್ಮ ಬೂಟುಗಳನ್ನು ತೆಗೆಯಬೇಕೆಂಬುದು. ಅಲ್ಲಿ ನೀವು ಯಾರೊಬ್ಬರ ಮನೆಗೆ ಹೋದಾಗ ಮಾತ್ರವಲ್ಲ, ಕೆಲವು ರೆಸ್ಟೋರೆಂಟ್‌ಗಳಲ್ಲಿ ಅಥವಾ ಕಂಪನಿಯ ಕಚೇರಿಗಳಲ್ಲಿಯೂ ಚಪ್ಪಲಿ ಅಥವಾ ಬೂಟುಗಳನ್ನು ತೆಗೆದಿಡುವುದು ತುಂಬಾ ಸಾಮಾನ್ಯ. ಜಪಾನಿನಲ್ಲಿ ನೆಲವನ್ನು ಅತ್ಯಂತ ಪವಿತ್ರ ಎಂದು ಭಾವಿಸಲಾಗಿದೆ ಮತ್ತು ಅದರ ಹೆಚ್ಚಿನ ವಾಸ್ತುಶೈಲಿಯು ಈ ಸಂಗತಿಯಿಂದ ಪ್ರಭಾವಿತವಾಗಿದೆ. ಜಪಾನಿನ ಜೀವನವು ನೆಲದ ಸುತ್ತ ಸುತ್ತುತ್ತದೆ. ಇತ್ತೀಚಿನ ದಿನಗಳಲ್ಲಿ, ಮನೆಯಲ್ಲಿ ತಿನ್ನುವಾಗ, 90 ಪ್ರತಿಶತದಷ್ಟು ಜಪಾನಿಯರು 12-16 ಅಂಗುಲಗಳಷ್ಟು (30-40 ಸೆಮೀ) ಎತ್ತರದ ಮೇಜಿನ ಮೇಲೆ ಕುಳಿತುಕೊಳ್ಳುತ್ತಾರೆ.

ಮನೆಯ ಮಹಡಿಗಳು ಮರದ ಅಥವಾ ಟಟಾಮಿ ಮ್ಯಾಟಿಂಗ್‌ನಿಂದ ಮಾಡಲ್ಪಟ್ಟಿರುತ್ತವೆ. ಜಪಾನಿಯರು ಸಾಮಾನ್ಯವಾಗಿ ನೆಲದ ಮೇಲೆ ಕುಳಿತುಕೊಳ್ಳುವುದನ್ನು ಇಷ್ಟಪಡುತ್ತಾರೆ. ಜಪಾನಿನ ವಾಸ್ತುಶೈಲಿಯಲ್ಲಿ, ನೆಲವು ಗೋಡೆ ಅಥವಾ ಚಾವಣಿಗಿಂತ ಹೆಚ್ಚು ಮುಖ್ಯವಾಗಿದೆ. ಆದರೆ ಪಶ್ಚಿಮದ ದೇಶಗಳಲ್ಲಿ ಚಾವಣಿ ಮತ್ತು ಗೋಡೆಗಳು ಸಾಮಾನ್ಯವಾಗಿ ಆದ್ಯತೆಯನ್ನು ತೆಗೆದುಕೊಳ್ಳುತ್ತವೆ. ವಾಸ್ತವವಾಗಿ, ಜಪಾನಿನ ಮನೆಗಳಲ್ಲಿ ಕೋಣೆಗಳನ್ನು ವಿಭಜಿಸುವ ಗೋಡೆಗಳು ಮುಖ್ಯವಲ್ಲ ಅಥವಾ ಅನಗತ್ಯವಾಗಿರುತ್ತವೆ. ಅವುಗಳ ಬದಲು ಸ್ಲೈಡಿಂಗ್ ಪ್ಯಾನೆಲ್‌ಗಳನ್ನು ಹೆಚ್ಚಾಗಿ ಬಳಸಲಾಗುತ್ತದೆ.

ಈ ಎಲ್ಲ ಅಂಶಗಳು ನೆಲದ ಮೇಲೆ ಜೀವನವನ್ನು ಸುಲಭಗೊಳಿಸುತ್ತವೆ. ನೀವು ಬರಿಗಾಲಿನಲ್ಲಿ ನಡೆಯಬಹುದು, ನೆಲದ ಮೇಲೆ ಟಟಾಮಿ ಚಾಪೆ ಮೇಲೆ ಮಲಗಬಹುದು ಅಥವಾ ನೆಲದ ಮೇಲೆ ಕುಳಿತುಕೊಳ್ಳಬಹುದು. ಫುಟಾನ್ ಅಥವಾ ಭಾರವಾದ ಜಮಖಾನದಿಂದ ಮುಚ್ಚಿದ ಕಡಿಮೆ ಮರದ ಟೇಬಲ್ ಮೇಲೆ ಕುಳಿತುಕೊಳ್ಳಬಹುದು.

ಸ್ಪೇನಿನ ಪ್ರವಾಸಿಯ ಅನುಭವ

ಇತ್ತೀಚೆಗೆ ಜಪಾನಿಗೆ ಭೇಟಿ ನೀಡಿದ ಸ್ಪೇನಿನ ಪ್ರವಾಸಿಗನೊಬ್ಬ ಫೇಸ್‌ಬುಕ್‌ನಲ್ಲಿ ಬರೆದುಕೊಂಡಿದ್ದನ್ನು ಆತನ ಪದಗಳಲ್ಲಿಯೇ ಇಡುತ್ತಿದ್ದೇನೆ: ಜಪಾನಿನ ರೈಲುಗಳೇ ಒಂದು ಬೇರೆ ಪ್ರಪಂಚ. ಹೌದು, ಜಪಾನಿನಲ್ಲಿ ರೈಲುಗಳೇ ಒಂದು ವಿದ್ಯಮಾನ. ಎಲ್ಲೆಡೆ ರೈಲುಗಳಿವೆ, ಸಾವಿರ ವಿಭಿನ್ನ ಪ್ರಕಾರಗಳಿವೆ. ಮಂತ್ರವಾದಿ ಝೂನ್‌ಗಳು, ರೈಲುಗಳ ಬಗ್ಗೆ ಪುಸ್ತಕಗಳು ಮತ್ತು ರೈಲಿಗೆ ಸಂಬಂಧಿಸಿದ ಉತ್ಪನ್ನಗಳನ್ನು ಮಾತ್ರ ಮಾರಾಟ ಮಾಡುವಲ್ಲಿ ಪರಿಣತಿ ಹೊಂದಿರುವ ಮಳಿಗೆಗಳಿವೆ.

ಜಪಾನಿ ರೈಲುಗಳಲ್ಲಿ ನಾನು ಹೆಚ್ಚು ಇಷ್ಟಪಡುವ ಒಂದು ಅಪರೂಪದ ಸಂಗತಿ ಅಂದ್ರೆ, ಅಲ್ಲಿ ಹರಡಿಕೊಂಡಿರುವ ಮೌನ. ರೈಲಿನ ಸಪ್ಪಳವೂ ಕೇಳಿಸುವುದಿಲ್ಲ. ಒಳಗಿದ್ದವರಂತೂ ಮಾತಾಡುವುದಿಲ್ಲ. ಯುರೋಪ್ ಅಥವಾ ಅಮೆರಿಕದಲ್ಲಿ ಹತ್ತು ನಿಮಿಷಗಳ ವಿಳಂಬವನ್ನು ವಿಳಂಬವೆಂದು ಪರಿಗಣಿಸಲಾಗುವುದಿಲ್ಲ, ಇಲ್ಲಿ ಎರಡು ನಿಮಿಷಗಳ ವಿಳಂಬವು ಹಾನಿಕಾರಕ. ಉದಾಹರಣೆಗೆ, ಕಳೆದ ಇಪ್ಪತ್ತು ವರ್ಷಗಳಲ್ಲಿ ಶಿಂಕನ್ಸೆನ್ ರೈಲುಗಳ ಸರಾಸರಿ ವಿಳಂಬವು ಕೇವಲ 54 ಸೆಕೆಂಡುಗಳಂತೆ!

ಟೋಕಿಯೋದ ಮಧ್ಯಭಾಗವನ್ನು ತಲುಪಲು ಸುಮಾರು ಒಂದೂವರೆ ಗಂಟೆ ಬೇಕು. ಇಲ್ಲಿ ರೈಲುಗಳು ಸಾಕಷ್ಟು ವೇಗವಾಗಿರುತ್ತವೆ, ಆದರೆ ಟೋಕಿಯೋ ದೊಡ್ಡದಾಗಿದೆ ಮತ್ತು ಪರಿಕಲ್ಪನೆಯಲ್ಲಿ ಅಸ್ಪಷ್ಟವಾಗಿದೆ. ಈ ಸಂಗತಿ ಅಲ್ಲಿಗೆ ಭೇಟಿ ನೀಡಿದ ಕೆಲವೇ ಗಂಟೆಗಳಲ್ಲಿ ಗೊತ್ತಾಗುತ್ತದೆ. ಟೋಕಿಯೋ ಬಗ್ಗೆ ಮಾತನಾಡುವಾಗ, ನನ್ನ ಮುಂದೆ ನನ್ನ ದೇಶವಾದ ಸ್ಪೇನ್ ಕಣ್ಮುಂದೆ ಬರುತ್ತದೆ. ಸ್ಪೇನಿನ ಜನಸಂಖ್ಯೆಯಷ್ಟು ಜನ ಟೋಕಿಯೋದಲ್ಲಿದ್ದಾರೆ.

ಇಡೀ ದೇಶ ಒಂದೇ ಆದೇಶಕ್ಕೆ ಸಿಲುಕಿದ ಸಿಪಾಯಿಯಂತೆ ಕೆಲಸ ಮಾಡುತ್ತಿರುತ್ತದೆ. ಇಲ್ಲಿ ಭೂಕಂಪ ಸಾಮಾನ್ಯ. ಆದರೂ ಯಾರೂ ತಲೆ ಕೆಡಿಸಿಕೊಳ್ಳುವುದಿಲ್ಲ. ಭಾರತದಂಥ ದೇಶದಲ್ಲಿ ಏಕಾಏಕಿ ಪಟಾಕಿ ಹೊಡೆದರೆ ಹತ್ತಾರು ಜನ ಸೇರುತ್ತಾರೆ. ಕಚೇರಿಯಲ್ಲಿದ್ದವರು ಹೊರಬಂದು ನೋಡುತ್ತಾರೆ. ಆದರೆ ಜಪಾನಿನಲ್ಲಿ ಭೂಕಂಪವಾದರೆ, ಯಾರೂ ಗಲಿಬಿಲಿಯಾಗುವುದಿಲ್ಲ. ತಮ್ಮ ಪಾಡಿಗೆ ತಾವಿರುತ್ತಾರೆ.

ಜಪಾನಿಯರು ರೈಲಿನಲ್ಲಿ ತಮ್ಮ ಮೊಬೈಲ್ ಫೋನ್‌ಗಳನ್ನು ಇಮೇಲ್‌ಗಳನ್ನು ಕಳುಹಿಸಲು ಮತ್ತು ಇಂಟರ್ನೆಟ್‌ಗೆ ಸಂಪರ್ಕಿಸಲು ಹುಚ್ಚರಂತೆ ಬಳಸುವುದನ್ನು ನೀವು ನೋಡುತ್ತೀರಿ, ಆದರೆ ಇತರರು ಮಾಂಗವನ್ನು ಓದುತ್ತಾರೆ ಮತ್ತು ಅವರಲ್ಲಿ ಹೆಚ್ಚಿನವರು ನಿದ್ರಿಸುತ್ತಿರುತ್ತಾರೆ. ಇಲ್ಲಿಗೆ ಬಂದ ಕೆಲವೇ ಗಂಟೆಗಳಲ್ಲಿ ನೀವು ಬೇರೆ ಜಗತ್ತಿನಲ್ಲಿ ಇದ್ದೀರಿ ಎಂದು ನೀವು ಭಾವಿಸಲು ಪ್ರಾರಂಭಿಸುತ್ತೀರಿ.

ನಾನು ಟೋಕಿಯೋ ವಿಮಾನವನ್ನು ಹತ್ತಿದಾಗ, ನನ್ನ ಸುತ್ತ ಅನೇಕ ಸಂಗತಿಗಳು ತನ್ನಷ್ಟಕ್ಕೆ ಹೇಗೆ ಬದಲಾಗುತ್ತಿವೆ ಎಂದು ನನಗೆ ಅನಿಸಲಾರಂಭಿಸಿತು. ವಿಮಾನವು ಜಪಾನಿಯರಿಂದಲೇ ತುಂಬಿತ್ತು, ಅವರು ನಮಗಿಂತ ಭಿನ್ನವಾಗಿರುವುದರ ಜತೆಗೆ ದೈಹಿಕವಾಗಿಯೂ ಭಿನ್ನರಾಗಿದ್ದರು. ವಿಮಾನದಲ್ಲಿ ಮೌನವು ಆಳ್ವಿಕೆ ನಡೆಸಿದಂತೆ ಭಾಸವಾಗುತ್ತಿತ್ತು. ಎಲ್ಲರೂ ಒಂದೇ ಆದೇಶಕ್ಕೆ ಒಳಗಾದವರಂತಿದ್ದರು. ಉದಾಹರಣೆಗೆ, ವಿಮಾನದಲ್ಲಿ ಆಸೀನರಾಗುತ್ತಿದ್ದಂತೆ, ಹೆಚ್ಚಿನವರು ತಮ್ಮ ತಮ್ಮ ಶೂಗಳನ್ನು ತೆಗೆದಿಟ್ಟರು.

ಜಪಾನಿನ ಫ್ಲೈಟ್ ಅಟೆಂಡೆಂಟ್‌ಗಳು ಸಹ ವಿಭಿನ್ನವಾಗಿ ವರ್ತಿಸುತ್ತಾರೆ. ಜಪಾನಿಯರು ತಮ್ಮ ಗ್ರಾಹಕರನ್ನು ಹೇಗೆ ನಡೆಸಿಕೊಳ್ಳುತ್ತಾರೆ ಎಂಬುದರ ಕುರಿತು ಅವರು ನಮ್ಮ ಮೊದಲ ಅನುಭವವನ್ನು ಒದಗಿಸುತ್ತಾರೆ. ನಿಮ್ಮನ್ನು ರಾಜ ಅಥವಾ ದೇವರಂತೆ ತುಂಬಾ ಚೆನ್ನಾಗಿ, ವಿಶೇಷವಾಗಿ ನೋಡಿಕೊಳ್ಳುತ್ತಾರೆ. ಜಪಾನಿಯರಿಗೆ, ಗ್ರಾಹಕರು ಬಹಳ ಮುಖ್ಯ, ಅವರನ್ನು ಹೆಚ್ಚು ಔಪಚಾರಿಕ ಭಾಷೆಯಲ್ಲಿ ಸಂಬೋಧಿಸುತ್ತಾರೆ. ಎಲ್ಲ ಸಮಯದಲ್ಲೂ ಅವರಿಗೆ ಗಮನ ಕೊಡುತ್ತಾರೆ.

ವಿಮಾನದಲ್ಲಿ, ಜಪಾನಿನ ಆಹಾರವನ್ನು ರುಚಿ ಮತ್ತು ಚಾಪ್‌ಸ್ಟಿಕ್‌ಗಳೊಂದಿಗೆ ಅಭ್ಯಾಸ ಮಾಡಲು ನಮಗೆ ಅವಕಾಶವಿದೆ ಮತ್ತು ನಮಗೆ ನೀಡಲಾಗುವ ದಿನಪತ್ರಿಕೆಗಳಲ್ಲಿ ಮುದ್ರಿತ ಜಪಾನೀಸ್ ಅನ್ನು ನೋಡಬಹುದು. ನಮಗೆ ಭಾಷೆ ಅರ್ಥವಾಗದಿದ್ದರೂ, ಪತ್ರಿಕೆಗಳು ಎಷ್ಟು ವಿಭಿನ್ನವಾಗಿವೆ ಅಥವಾ ಹೋಲುತ್ತವೆ ಎಂಬುದನ್ನು ನಾವು ನೋಡಬಹುದು. ಉದಾಹರಣೆಗೆ, ಅಮೆರಿಕದ ಪ್ರಭಾವದಿಂದಾಗಿ ಜಪಾನಿನಲ್ಲಿ ಜನಪ್ರಿಯ ಕ್ರೀಡೆಯಾದ ಬೇಸ್‌ಬಾಲ್ ಅನ್ನು ಅವರು ಎಷ್ಟು ಇಷ್ಟಪಡುತ್ತಾರೆ ಎಂಬುದನ್ನು ಕ್ರೀಡಾ ವಿಭಾಗವು ತೋರಿಸುತ್ತದೆ. ಕುದುರೆ ಓಟವು ಜಪಾನಿಯರನ್ನು ಆಕರ್ಷಿಸುವ ಮತ್ತೊಂದು ಕ್ರೀಡೆಯಾಗಿದೆ. ಅಂತಿಮವಾಗಿ, ನನ್ನ ಗಮನವನ್ನು ಸೆಳೆದ ವಿವರವೆಂದರೆ, ಪದಬಂಧ ಅಥವಾ ಚೆಸ್ ಸವಾಲನ್ನು ಹೊಂದುವ ಬದಲು, ಅಲ್ಲಿನ ಪತ್ರಿಕೆಗಳು ಜಪಾನ್ ಮತ್ತು ಚೀನಾ ಎರಡರಲ್ಲೂ ಅನೇಕ ಉತ್ಸಾಹಿಗಳೊಂದಿಗೆ ಗೋ-ಆಟವನ್ನು ಹೊಂದಿದ್ದು ಅದು ಪ್ರಪಂಚದಾದ್ಯಂತ ಹರಡಲು ಕಾರಣವಾಗಿದೆ.

ಮದರ್ಸ್ ಡೇ ಆರಂಭಿಸಿದವಳೇ ಅದನ್ನು ನಿಲ್ಲಿಸಲಿಕ್ಕೂ ಹೋರಾಡಿದ್ದಳು!

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅನ್ನಾ ಜಾರ್ವಿಸ್‌ಳನ್ನು ಪ್ರತಿವರ್ಷ ಅಮ್ಮಂದಿರ ದಿನದಂದು ನೆನಪಿಸಿಕೊಳ್ಳಲಾಗುತ್ತದೆ, ಆಕೆಯ ಸತತ ಪ್ರಯತ್ನಗಳಿಂದಲೇ ಅಂಥದೊಂದು ಆಚರಣೆಗೆ 1914ರಲ್ಲಿ ಆಗಿನ ಅಮೆರಿಕಾಧ್ಯಕ್ಷ ವುಡ್ರೋ ವಿಲ್ಸನ್‌ರಿಂದ ಒಪ್ಪಿಗೆಯ ಮೊಹರು ಬಿದ್ದದ್ದೆಂಬ ಕಾರಣಕ್ಕೆ. ಅನ್ನಾ ಜಾರ್ವಿಸ್‌ಳ ತಾಯಿ ಆ್ಯನ್ ಜಾರ್ವಿಸ್ ಆ ಕಾಲದಲ್ಲಿ ಅಮೆರಿಕದಲ್ಲಿ ನಡೆಯುತ್ತಿದ್ದ ಪೌರದಂಗೆಗಳ ವೇಳೆ ಎರಡೂ ಕಡೆಯ ಗಾಯಾಳು ಸೈನಿಕರಿಗೆ ಆರೈಕೆ ಮಾಡಿದವಳು. ಮಡಿದ ಯೋಧರ ಮಾತೆಯರಿಗೆ ಸಾಂತ್ವನ ನೀಡಿದವಳು. ಉಭಯ ಪಕ್ಷಗಳಲ್ಲಿದ್ದ ಕರುಣಾಮಯಿ ತಾಯಂದಿರನ್ನು ಒಟ್ಟುಗೂಡಿಸಿ 'ಮದರ್ಸ್ ಫ್ರೆಂಡ್‌ಶಿಪ್ ಡೇ' ಎಂಬ ಸಂಪ್ರದಾಯವನ್ನು ಆರಂಭಿಸಿದವಳು. 1905ರಲ್ಲಿ ಆ್ಯನ್ ಜಾರ್ವಿಸ್ ನಿಧನಳಾದಾಗ ಮಗಳು ಅನ್ನಾ ಜಾರ್ವಿಸ್ ಒಂದೊಮ್ಮೆ ತೀವ್ರವಾಗಿ ಧೃತಿಗೆಟ್ಟರೂ ಅಮ್ಮನ ಆದರ್ಶಗಳನ್ನು ತಾನು ಮುಂದುವರಿಸಬೇಕು ಎಂದು ಪಣ ತೊಟ್ಟಳು. ಅಮ್ಮನಿಗೆ ಶ್ರದ್ಧಾಂಜಲಿ ರೂಪದಲ್ಲಿ ಬಂದಿದ್ದ ಪತ್ರಗಳನ್ನು, ಅದರಲ್ಲಿ ಸಜ್ಜನರೆಲ್ಲರೂ ಅಮ್ಮನ ಬಗ್ಗೆ ಬರೆದಿದ್ದನ್ನು ಎರಡೆರಡು ಸಲ ಓದಿದಳು. ಸಮಾಜಕ್ಕೆಲ್ಲ ಮಾತೃವಾತ್ಸಲ್ಯದ ಸಿಂಚನ ಮಾಡಿದ್ದ ಅಮ್ಮನ ಬಗೆಗಿನ ಉಲ್ಲೇಖಗಳಿಗೆ ಅಡಿಗೆರೆ ಹಾಕಿಟ್ಟಳು. ಇದಕ್ಕೊಂದು ಅರ್ಥಪೂರ್ಣ ರೂಪ ಕೊಡಬೇಕೆಂದುಕೊಂಡಳು. ರಾಷ್ಟ್ರವ್ಯಾಪಿಯಾಗಿ ಮದರ್ಸ್ ಡೇ ಎಂಬೊಂದು ಆಚರಣೆಯನ್ನು ಆರಂಭಿಸುವುದಕ್ಕೆ ಯೋಜನೆ ಸಿದ್ಧಪಡಿಸಿದಳು.

ಮೇ 10, 1908ರಂದು ಭಾನುವಾರ ವೆಸ್ಟ್ ವರ್ಜೀನಿಯಾ ಸಂಸ್ಥಾನದ ಗ್ರಾಫ್ಟನ್ ಎಂಬ ಚಿಕ್ಕ ಪಟ್ಟಣದಲ್ಲಿ, ಆ್ಯನ್ ಜಾರ್ವಿಸ್ ಶಿಕ್ಷಕಿಯಾಗಿ ಸೇವೆ ಸಲ್ಲಿಸಿದ್ದ ಚರ್ಚ್‌ನಲ್ಲಿ ಮೊತ್ತಮೊದಲ ಮದರ್ಸ್ ಡೇ ಸಮಾರಂಭ ನಡೆಯಿತು. ಅವತ್ತೇ ಫಿಲಡೆಲ್ಫಿಯಾ ನಗರದ ಒಂದು ಡಿಪಾರ್ಟ್‌ಮೆಂಟಲ್ ಸ್ಟೋರ್‌ನ ಆಡಿಟೋರಿಯಂನಲ್ಲೂ ಒಂದು ಸಮಾರಂಭ ಇಟ್ಟುಕೊಳ್ಳಲಾಗಿತ್ತು. ಅನ್ನಾ ಜಾರ್ವಿಸ್ ಆಗ ಫಿಲಡೆಲ್ಫಿಯಾದಲ್ಲಿದ್ದಳು ಆದ್ದರಿಂದ ಗ್ರಾಫ್ಟನ್‌ನಲ್ಲಿ ನಡೆದ ಸಮಾರಂಭದಲ್ಲಿ ಭಾಗವಹಿಸಲಿಕ್ಕಾಗಲಿಲ್ಲ, ಆದರೆ ಅಲ್ಲಿಗೆ ಒಂದು ಬುಟ್ಟಿ ತುಂಬ ಬಿಳಿ ಕಾರ್ನೇಷನ್ ಹೂವುಗಳನ್ನು ಕಳುಹಿಸಿದಳು. ಅವು ಆಕೆಯ ಅಮ್ಮನ ನೆಚ್ಚಿನ ಹೂವುಗಳು. ಸಮಾರಂಭದಲ್ಲಿ ಭಾಗವಹಿಸಿದ್ದವರೆಲ್ಲರೂ ತಮ್ಮತಮ್ಮ ಅಮ್ಮಂದಿರ ಗೌರವಾರ್ಥ, ನಿಷ್ಕಲ್ಮಷ ಪ್ರೀತಿಗೆ ಕೃತಜ್ಞತೆಯ ದ್ಯೋತಕವಾಗಿ, ಒಂದೊಂದು ಹೂವನ್ನು ಮುಡಿದುಕೊಳ್ಳಬೇಕು ಎಂಬುದು ಅನ್ನಾಳ ಆಶಯವಾಗಿತ್ತು. ಅಲ್ಲಿ ಯಾವುದೇ ತೆರನಾದ ಆಡಂಬರ ಪ್ರದರ್ಶನ ವಿರಲಿಲ್ಲ, ಅನವಶ್ಯಕ ಗೌಜಿ-ಗದ್ದಲಗಳಿರಲಿಲ್ಲ, ಕೃತಕತೆಯ ಲವಲೇಶವೂ ಇರಲಿಲ್ಲ.

ಅಂಥದೊಂದು ಶುದ್ಧಹೃದಯದ ಮಧುರಭಾವದ ಆಚರಣೆಯ ವಿಚಾರ ಅಮೆರಿಕದ ಬೇರೆ ಊರುಗಳಿಗೂ ಪಸರಿಸಿತು. ಅದರ ಪ್ರಾಮುಖ್ಯವನ್ನು ವಿವರಿಸುತ್ತ ಅನ್ನಾ ಜಾರ್ವಿಸ್ ಉದ್ದುದ್ದ ಪತ್ರಗಳನ್ನು ಬರೆದು ದೇಶ-ವಿದೇಶಗಳ ಸಂಘ-ಸಂಸ್ಥೆಗಳಿಗೆ ಕಳುಹಿಸಿದಳು. ಸಾಧ್ಯವಿದ್ದಲ್ಲೆಲ್ಲ ತಾನೇ ಹೋಗಿ ಪ್ರಚಾರ ನಡೆಸಿದಳು. ಫಿಲಡೆಲ್ಫಿಯಾದ ಜಾನ್ ವಾನಾಮೇಕರ್ ಮತ್ತು ಎಚ್.ಜೆ. ಹೈನ್ಜ್ ಮೊದಲಾದ ಧನಿಕ ದಾನಿಗಳು ಆಕೆಗೆ ನೆರವಾದರು. ಮದರ್ಸ್ ಡೇ ಮಹತ್ವವನ್ನು ಜನರಿಗೆ ತಿಳಿಸುವ ಕೆಲಸವನ್ನೇ ತನ್ನ ಪೂರ್ಣಾವಧಿ ವ್ಯಾಪ್ತಿಯಾಗಿಸಿಕೊಂಡಳು ಅನ್ನಾ ಜಾರ್ವಿಸ್. ಅಮೆರಿಕದ ಬೇರೆಬೇರೆ ಸಂಸ್ಥಾನಗಳ ಸೆನೇಟರ್‌ಗಳು ಮತ್ತಿತರ ಜನಪ್ರತಿನಿಧಿಗಳ ಗಮನಕ್ಕೂ ತಂದಳು. ಅವರಲ್ಲಿ ಕೆಲವರು ಆಕೆಗೆ ಛೀಮಾರಿ ಹಾಕಿದ್ದೂ ಉಂಟು. ಹೆನ್ರಿ ಮೂರ್ ಟೆಲ್ಲರ್ ಎಂಬ ಸೆನೇಟರನಂತೂ ಅದೊಂದು ಅರ್ಥಹೀನ ಪ್ರಸ್ತಾವ, ಪ್ರತಿದಿನವೂ ನಾವು ತಾಯಿಯನ್ನು ಪ್ರೀತ್ಯಾದರಗಳಿಂದ ಕಾಣಬೇಕು, ವರ್ಷದಲ್ಲೊಂದು ದಿನ ಮಾತ್ರ ಎಂದರೆ ಅದರಂಥ ಮೂರ್ಖತನ ಇನ್ನೊಂದಿಲ್ಲ ಎಂದನು. ಜೇಕಬ್ ಗಾಲ್ಲಿಂಗರ್ ಎಂಬ ಇನ್ನೊಬ್ಬ ಸೆನೇಟರನ ಅಭಿಪ್ರಾಯವೂ ಅದೇ ರೀತಿಯದಾಗಿತ್ತು. ಗತಿಸಿಹೋಗಿರುವ ನನ್ನ ಅಮ್ಮನನ್ನು ಮೇ ತಿಂಗಳ ಒಂದು ಭಾನುವಾರದಂದು ಮಾತ್ರ ನೆನಪು ಮಾಡಿಕೊಳ್ಳುತ್ತೇನೆ ಎಂಬ ಆಲೋಚನೆ ಆಕೆಗೆ ಗೌರವವಲ್ಲ ಅವಮಾನ ಮಾಡಿದಂತೆ ಎಂದುಬಿಟ್ಟನು. ಅನ್ನಾ ಜಾರ್ವಿಸ್ ಮಾತ್ರ ಅದಕ್ಕೆಲ್ಲ ಜಗ್ಗಲಿಲ್ಲ. ತಾನು ಮಾಡುತ್ತಿರುವುದು ಒಳ್ಳೆಯ ಉದ್ದೇಶದ ಒಳ್ಳೆಯ ಕೆಲಸ ಎಂಬ ಆತ್ಮವಿಶ್ವಾಸ ಅವಳಲ್ಲಿತ್ತು. ಸಂಡೇ ಸ್ಕೂಲ್ ಅಸೋಸಿಯೇಷನ್ ಮುಂತಾದ ಸಂಘಟನೆಗಳ ಬೆಂಬಲವೂ ಸಿಕ್ಕಿತ್ತು. ಅಂತೂ 1914ರಲ್ಲಿ ರಾಷ್ಟ್ರಾಧ್ಯಕ್ಷರ ಸಹಿ ಪಡೆಯುವಲ್ಲಿವರೆಗೆ ಅಭಿಯಾನ ಮುಂದುವರಿದು ಯಶಸ್ವಿಯಾಯಿತು.

ಈ ನಡುವೆ ಅಮೆರಿಕದ ಪುಷ್ಪೋದ್ಯಮವು ಅನ್ನಾ ಜಾರ್ವಿಸ್‌ಳ ಅಭಿಯಾನವನ್ನು ಚಾಣಾಕ್ಷತನದಿಂದ ಬೆಂಬಲಿಸಿತು. ಆಕೆಗೆ ನೆರವಾಗಲೆಂದು ಅಷ್ಟಿಷ್ಟು ದೇಣಿಗೆಯನ್ನೂ ನೀಡಿತು. ಆಕೆಯೂ ಪುಷ್ಪೋದ್ಯಮಿಗಳ ವಾರ್ಷಿಕ ಅಧಿವೇಶನಗಳಲ್ಲಿ ಭಾಗವಹಿಸಿ ಭಾಷಣಗಳನ್ನಿತ್ತಳು. ಮದರ್ಸ್ ಡೇಯಂದು ಕಾರ್ನೇಷನ್ ಹೂವುಗಳನ್ನು ಉಡುಗೊರೆ ಕೊಡುವ, ಅಲಂಕಾರಕ್ಕೆ ಬಳಸುವ ಸಂಪ್ರದಾಯ ಗಟ್ಟಿಯಾಯಿತು. ವರ್ಷವರ್ಷವೂ ಮದರ್ಸ್ ಡೇ ಆಸುಪಾಸಿನಲ್ಲಿ ಹೂವುಗಳ ಮಾರಾಟ, ಅದರಲ್ಲೂ ಬಿಳಿ ಕಾರ್ನೇಷನ್ ಹೂವುಗಳ ಮಾರಾಟ ಹೆಚ್ಚತೊಡಗಿತು. ಎಲ್ಲಿಯವರೆಗೆಂದರೆ, ಕಾಳಸಂತೆಯಲ್ಲಿ ಕಾರ್ನೇಷನ್ ಹೂವುಗಳ ಮಾರಾಟ, ಅಕ್ರಮ ದಾಸ್ತಾನು ಮುಂತಾದ ವಾಮಮಾರ್ಗಗಳನ್ನೂ ಕೆಲ ಲೋಭಿಗಳು ಅನುಸರಿಸಿದರು. ಅದು ಪತ್ರಿಕೆಗಳಲ್ಲಿ ಸುದ್ದಿಯಾಯ್ತು. ವ್ಯಾಪಾರವನ್ನು ಇನ್ನಷ್ಟು ಹೆಚ್ಚಿಸಲಿಕ್ಕೆ ಕೆಂಪು ಅಥವಾ ಮತ್ತಾವುದೇ ಗಾಢ ಬಣ್ಣದ ಹೂವುಗಳನ್ನು ಜೀವಂತ ಅಮ್ಮಂದಿರ ಗೌರವಾರ್ಥವೂ, ಬಿಳಿ ಬಣ್ಣದ ಹೂವುಗಳನ್ನು ಗತಿಸಿರುವ ತಾಯಂದಿರ ಗೌರವಾರ್ಥವೂ ಬಳಸುವ, ಮುಡಿದುಕೊಳ್ಳುವ, ಕೊಟ್ಟುಕೊಳ್ಳುವ ರಿವಾಜನ್ನು ಪುಷ್ಪೋದ್ಯಮಿಗಳೇ ಜನರಲ್ಲಿ ಬಿತ್ತಿದರು. ಯೇಸುಕ್ರಿಸ್ತನನ್ನು ಶಿಲುಬೆಗೇರಿಸಿದಾಗಿನ ಮಾತೆಮೇರಿಯ ಕಣ್ಣೀರಹನಿಗಳೇ ಕಾರ್ನೇಷನ್ ಹೂವುಗಳೆಂದು ಅದಕ್ಕೊಂದು ರಿಲೀಜನ್ ಬಣ್ಣ ಬಳಿದವರೂ ಇದ್ದರು.

ಇದನ್ನೆಲ್ಲ ಗಮನಿಸುತ್ತಿದ್ದ ಅನ್ನಾ ಜಾರ್ವಿಸ್‌ಗೆ ಕಸಿವಿಸಿಯೆನಿಸಿತು. ತಾನು ಕಲ್ಪಿಸಿದ ಮದರ್ಸ್ ಡೇ ಕೇವಲ ಭಾವುಕತೆಯ ಅಭಿವ್ಯಕ್ತಿಯದೇ ಹೊರತು ಅದೀಗ ವಾಣಿಜ್ಯಮಯವಾಗಿ, ಆಡಂಬರದ ಪ್ರದರ್ಶನವಾಗಿ ಬದಲಾದದ್ದು ಆಕೆಗೆ ಸ್ವಲ್ಪವೂ ಇಷ್ಟವಾಗಲಿಲ್ಲ. 1920ರ ಸುಮಾರಿಗೆ ಆಕೆ ಮದರ್ಸ್ ಡೇಗೆಂದು ಹೂವುಗಳನ್ನೂ ಉಡುಗೊರೆಗಳನ್ನೂ ಕೊಡು-ಕೊಳ್ಳುವ ಜನರನ್ನು ಹಾಗೆ ಮಾಡದಂತೆ ಎಚ್ಚರಿಸತೊಡಗಿದಳು. ಈ ಹಿಂದೆ ತನಗೆ ಪ್ರೋತ್ಸಾಹ ಮತ್ತು ಧನಸಹಾಯ ಮಾಡಿದ್ದ ವಾಣಿಜ್ಯೋದ್ಯಮಿಗಳನ್ನೂ ಎದುರುಹಾಕಿಕೊಂಡಳು. ಗ್ರೀಟಿಂಗ್ ಕಾರ್ಡ್‌ಗಳ ಮಾರಾಟಗಾರರನ್ನು, ಚಾಕೊಲೇಟ್ ಮತ್ತಿತರ ಸಿಹಿತಿನಿಸುಗಳ ತಯಾರಕ/ವಿತರಕರನ್ನು, ಪುಷ್ಪೋದ್ಯಮಿಗಳನ್ನು- ಇವರೆಲ್ಲ ಹಗಲುದರೋಡೆ ಮಾಡುವವರು, ಡಕಾಯಿತರು, ಸ್ವಾರ್ಥಿ ಲೋಭಿಗಳು, ಗೆದ್ದಲು ಹುಳಗಳು- ಎಂದು ಜರಿದಳು. ಮಾನವೀಯ ನೆಲೆಯಲ್ಲಿ ಉದಾತ್ತ ಆಶಯದಿಂದ ಆರಂಭಿಸಿದ್ದ ಆಚರಣೆಯನ್ನು ಕೆಲವು ಸ್ವಹಿತಾಸಕ್ತ ಶಕ್ತಿಗಳು ದುಡ್ಡು ಮಾಡುವ ದಂಧೆಯಾಗಿ ಪರಿವರ್ತಿಸಿದ್ದು ಅನ್ನಾಗೆ ಬಹಳವೇ ಬೇಸರವಾಗಿತ್ತು. ಕಾರ್ನೇಷನ್ ಹೂವುಗಳ ಬದಲಿಗೆ ಸಾಂಕೇತಿಕವಾಗಿ ಹೂವುಗಳದೇ ಚಿತ್ರವಿರುವ ಒಂದು ಪುಟ್ಟ ಬಿಲ್ಲೆಯನ್ನು ಧರಿಸುವಂತೆ, ಉಡುಗೊರೆ ಕೊಡುವಂತೆ ಜನರಿಗೆ ಮನದಟ್ಟು ಮಾಡಬಹುದೆಂದು ಆಲೋಚಿಸಿದಳು. ಅದರಂತೆಯೇ ಸಾವಿರ ಗಟ್ಟಲೆ ಬಿಲ್ಲೆಗಳನ್ನು ಮುದ್ರಿಸಿ ಮಹಿಳೆಯರಿಗೆ, ಶಾಲೆಗಳಿಗೆ, ಚರ್ಚ್ ಗ್ರೂಪ್‌ಗಳಿಗೆ ಉಚಿತವಾಗಿ ಹಂಚಿದಳು. ಪುಷ್ಪೋದ್ಯಮದ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವುದಕ್ಕೆ ಮುಂದಾದಳು. ಕಾರ್ನೇಷನ್ ಹೂವುಗಳ ಜತೆ ಮದರ್ಸ್ ಡೇ ಎಂದು ಬರೆದ ವಿನ್ಯಾಸಕ್ಕೆ ಪೇಟೆಂಟ್ ಅರ್ಜಿ ಸಲ್ಲಿಸಿದಳು(ಆ ಪೇಟೆಂಟ್ ಆಕೆಗೆ ಸಿಗಲಿಲ್ಲ). ತಮ್ಮ ವಿರುದ್ಧ ಅನ್ನಾ ಜಾರ್ವಿಸ್ ಅಷ್ಟೊಂದು ವ್ಯಗ್ರಳಾಗಿರುವುದನ್ನು ಕಂಡ ಫ್ಲೋರಿಸ್ಟ್ ಟೆಲಿಗ್ರಾಫ್ ಡೆಲಿವರಿ ಎಂಬ ಸಂಘಟನೆಯು ಪರಿಸ್ಥಿತಿಯನ್ನು ತಿಳಿಗೊಳಿಸುವುದಕ್ಕಾಗಿ ಮದರ್ಸ್ ಡೇ ದಿನ ಕಾರ್ನೇಷನ್ ಹೂವುಗಳಿಂದ ಬರುವ ಲಾಭದಲ್ಲಿ ಒಂದಿಷ್ಟು ಕಮಿಷನ್ ಅನ್ನು ಅನ್ನಾಗೆ ಕೊಡುವುದಕ್ಕೆ ಮುಂದಾಯಿತು. ಅದು ಅವಳನ್ನು ಇನ್ನಷ್ಟು ಕೆರಳಿಸಿತು!

ಮದರ್ಸ್ ಡೇಯನ್ನು ವಾಣಿಜ್ಯೀಕರಿಸುವುದರ ವಿರುದ್ಧ ಅನ್ನಾಳ ಸಂಗ್ರಾಮ ಮುಂದುವರಿಯಿತು. 1934ರಲ್ಲಿ ಅಮೆರಿಕದ ಅಂಚೆ ಇಲಾಖೆಯು ಮದರ್ಸ್ ಡೇ ಗೌರವಾರ್ಥ ಒಂದು ಅಂಚೆಚೀಟಿ

ಬಿಡುಗಡೆ ಮಾಡಿತು. ದುರದೃಷ್ಟಕ್ಕೆ ಅದು ಕೂಡ ಅನ್ನಾಳ ಕೆಂಗಣ್ಣಿಗೆ ಗುರಿಯಾಯ್ತು. ಆ ಅಂಚೆಚೀಟಿಯಲ್ಲಿದ್ದದ್ದು ಕಲಾವಿದ ಜೇಮ್ಸ್ ವ್ಹಿಸ್ಲರ್ ಎಂಬಾತ ಅವನದೇ ಅಮ್ಮನನ್ನು ರೂಪದರ್ಶಿಯಾಗಿಸಿ ರಚಿಸಿದ್ದ ಒಬ್ಬಳು ತಾಯಿಯ ಚಿತ್ರ. ಅನ್ನಾಳ ಸಿಟ್ಟಿಗೆ ಕಾರಣ ಅದರಲ್ಲಿ ಆ ತಾಯಿಯ ಪಕ್ಕದಲ್ಲೊಂದು ಹೂದಾನಿಯಲ್ಲಿ ಕಾರ್ನೇಷನ್ ಹೂವುಗಳಿದ್ದದ್ದು! ಅದು ಪುಷ್ಪೋದ್ಯಮಕ್ಕೆ ಜಾಹೀರಾತಿನಂತಾಯ್ತು ಎಂದು ಅವಳ ಗ್ರಹಿಕೆ. ಒಮ್ಮೆ ಫಿಲಡೆಲ್ಫಿಯಾದಲ್ಲಿ ವಾನಾಮೇಕರ್ ಡಿಪಾರ್ಟ್‌ಮೆಂಟಲ್ ಸ್ಟೋರ್‌ಗೆ ಟೀ ಕುಡಿಯಲಿಕ್ಕೆಂದು ಹೋಗಿದ್ದ ಅನ್ನಾಗೆ ಅಲ್ಲಿ ಮದರ್ಸ್ ಡೇ ಸ್ಪೆಷಲ್ ಎಂದು ಸಲಾಡ್ ಮಾರುತ್ತಿದ್ದದ್ದು ಕಣ್ಣಿಗೆ ಬಿತ್ತು. ವ್ಯಗ್ರಳಾದ ಆಕೆ ಒಂದು ಸಲಾಡ್ ಆರ್ಡರ್ ಮಾಡಿ ವೇಟರ್ ಅದನ್ನು ತಂದುಕೊಟ್ಟಾಗ ತಟ್ಟೆಯನ್ನು ನೆಲಕ್ಕೆ ಕುಕ್ಕಿ, ಬಿಲ್ ಪಾವತಿಸಿ, ಸಿಟ್ಟು ತೋರಿಸುತ್ತ ಅಲ್ಲಿಂದೆದ್ದು ಹೋಗಿದ್ದಳಂತೆ.

ನಿಜವಾಗಿ ಮದರ್ಸ್ ಡೇ ಆಚರಣೆಯೆಂದರೆ ತಾಯಿಯನ್ನು ಭೇಟಿ ಮಾಡಿ ಕುಶಲ ವಿಚಾರಿಸಿ ಸ್ವಲ್ಪ ಹೊತ್ತು ಆಕೆಯೊಂದಿಗೆ ಕಳೆಯುವುದು; ಸಾಧ್ಯವಾಗದಿದ್ದರೆ, ಬಿಚ್ಚುಮನಸ್ಸಿನಿಂದ ಕೈಬರಹದಲ್ಲೇ ತಾಯಿಗೊಂದು ಪತ್ರ ಬರೆಯುವುದು; ಅದುಬಿಟ್ಟು ಹೂವುಗಳನ್ನೋ ಗ್ರೀಟಿಂಗ್ ಕಾರ್ಡ್‌ಗಳನ್ನೋ ಕಾಟಾಚಾರಕ್ಕೆಂಬಂತೆ ಕಳುಹಿಸುವ ರೀತಿಯ ಆಚರಣೆಗಳು ಅನ್ನಾಗೆ ಸುತರಾಂ ಒಪ್ಪಿಗೆಯಿರಲಿಲ್ಲ. ನವಮಾಸಗಳ ಕಾಲ ಹೊತ್ತು, ಹೆತ್ತು, ಸಾಕಿ ಸಲಹಿದ ಅಮ್ಮನಿಗೆ ಯಾವುದೋ ಪೂರ್ವಮುದ್ರಿತ ಒಂದೆರಡು ವಾಕ್ಯಗಳಿರುವ ಗ್ರೀಟಿಂಗ್ ಕಾರ್ಡ್ ಕಳುಹಿಸುವುದೆಂದರೆ ಸೋಮಾರಿತನದ ಪರಮಾವಧಿ; ಅದಕ್ಕಿಂತ ಒಂದೆರಡು ಸಾಲುಗಳಾದರೂ ಸರಿಯೇ, ಸೊಟ್ಟ ಅಕ್ಷರಗಳಾದರೂ ಸರಿಯೇ, ಮಗ ಅಥವಾ ಮಗಳು ಕೈಬರಹದಲ್ಲಿ ಬರೆದ ಪತ್ರವನ್ನು ಓದಿದ ತಾಯಿಯೊಬ್ಬಳ ಹೃದಯ ಬೆಚ್ಚಗಾಗದಿರಲು ಸಾಧ್ಯವೇ ಇಲ್ಲ ಎಂದು ಅನ್ನಾಳ ಅಂಬೋಣ.

ದತ್ತಿನಿಧಿ ಸಂಗ್ರಹದ ಉದ್ದೇಶಕ್ಕೆ ಮದರ್ಸ್ ಡೇಯನ್ನು ಬಳಸುವುದಕ್ಕೂ ಅನ್ನಾ ಜಾರ್ವಿಸ್‌ಳ ತೀವ್ರ ವಿರೋಧವಿತ್ತು. ಫಿಲಡೆಲ್ಫಿಯಾದಲ್ಲಿ ಒಮ್ಮೆ ಅಮೆರಿಕನ್ ವಾರ್ ಮದರ್ಸ್ ಎಂಬ ಸಂಘಟನೆಯೊಂದು ಮದರ್ಸ್ ಡೇ ದಿನ ದೇಣಿಗೆ ಸಂಗ್ರಹಕ್ಕಾಗಿ ಸಭೆ ನಡೆಸಿದ್ದಾಗ ಅನ್ನಾ ಅಲ್ಲಿಗೆ ಹೋಗಿ ಪ್ರತಿರೋಧ ವ್ಯಕ್ತಪಡಿಸಿದಳು. ಘೋಷಣೆ ಕೂಗಿದಳು. ಕಾರ್ನೇಷನ್ ಹೂವುಗಳ ಮಾರಾಟವನ್ನು ತಡೆಯಲೆತ್ನಿಸಿದಳು. ಅಲ್ಲಿ ಶಾಂತಿಭಂಗ ಮಾಡಿದ್ದಕ್ಕಾಗಿ ಆಕೆಯನ್ನು ಪೊಲೀಸರು ಬಂಧಿಸಿ ಹೊರಸಾಗಿಸಿದ ಘಟನೆಯೂ ನಡೆಯಿತು! ಅನ್ನಾ ಅದ್ಯಾವುದರಿಂದಲೂ ವಿಚಲಿತಳಾಗಲಿಲ್ಲ. ಆಕೆಯ ಧೈರ್ಯ, ದೃಢಸಂಕಲ್ಪ ಮತ್ತು ಮನಸಿನ ಸ್ಪಷ್ಟತೆ ಎಷ್ಟಿತ್ತೆಂದರೆ ಪ್ರಥಮ ಮಹಿಳೆ (ಆಗಿನ ರಾಷ್ಟ್ರಾಧ್ಯಕ್ಷರ ಪತ್ನಿ) ಎಲನಾರ್ ರೂಸ್‌ವೆಲ್ಟ್ ನೇತೃತ್ವದಲ್ಲೊಮ್ಮೆ ಮದರ್ಸ್ ಡೇ ಫಂಡ್ ರೈಸಿಂಗ್ ನಡೆದಾಗ ಅದನ್ನು ವಿರೋಧಿಸಿ ಉದ್ದುದ್ದ ಪತ್ರ ಬರೆದಿದ್ದಳು. ವಿಪರ್ಯಾಸವೆಂದರೆ ಅಲ್ಲಿ ದೇಣಿಗೆ ಸಂಗ್ರಹ ನಡೆದದ್ದು ಗ್ರಾಮೀಣ ಪ್ರದೇಶಗಳಲ್ಲಿ ನವಜಾತ ಶಿಶುಗಳ ಮತ್ತು ಬಾಣಂತಿಯರ ಸಾವುಗಳನ್ನು ಕಡಿಮೆ ಮಾಡುವ ಯೋಜನೆಗಳಿಗೆಂದೇ. ಈಹಿಂದೆ ಅನ್ನಾಳ ತಾಯಿ ಆ್ಯನ್ ಜಾರ್ವಿಸ್ ಸಹ ಅಂಥದ್ದೇ ಸೇವೆಯನ್ನು ಮಾಡುತ್ತಿದ್ದದ್ದು. ವ್ಯತ್ಯಾಸವೆಂದರೆ ಆಕೆ ಮದರ್ಸ್ ಡೇ ಎಂಬ ಸೆಂಟಿಮೆಂಟ್ ಬಳಸಿ ದುಡ್ಡು ಸಂಗ್ರಹಿಸುತ್ತಿರಲಿಲ್ಲ. ಹಡೆದ 13 ಮಕ್ಕಳ ಪೈಕಿ ಒಂಬತ್ತನ್ನು ಕಳೆದುಕೊಂಡ ನೋವು, ಬೇರೆ ಯಾವ ತಾಯಿಯೂ ಅಂಥ ಸಂಕಟವನ್ನು ಅನುಭವಿಸದಿರಲಿ ಎಂಬ ತುಡಿತಗಳೇ ಆಕೆಗಿದ್ದ ಪ್ರೇರಣೆ. ಅದನ್ನು ಅನ್ನಾ ಸಹ ಅರಿತಿದ್ದಳು.

ಆದರೆ ಅನ್ನಾಳ ಆದರ್ಶಗಳೆಲ್ಲ ಅರಣ್ಯರೋದನವಷ್ಟೇ ಆಯಿತು. ಜನರು ಮದರ್ಸ್ ಡೇಯನ್ನು ತಮಗೆ ಬೇಕಾದ ರೀತಿಯಲ್ಲಿ ಬಳಸಿಕೊಳ್ಳುವುದು ಅವ್ಯಾಹತವಾಗಿ ಮುಂದುವರಿಯಿತು. ಮತ್ತೊಮ್ಮೆ ಸಂಸತ್ತಿನಲ್ಲಿ ವಿಧೇಯಕ ಮಂಡಿಸಿ ಮದರ್ಸ್ ಡೇ ಆಚರಣೆಯನ್ನು ನಿಷೇಧಗೊಳಿಸುವುದಕ್ಕಾದೀತೇ ಎಂದುಕೊಂಡು ಅನ್ನಾ ಜಾರ್ವಿಸ್ ಫಿಲಡೆಲ್ಫಿಯಾದಲ್ಲಿ ಮನೆಮನೆಗೆ ಹೋಗಿ ಸಹಿ ಸಂಗ್ರಹ ಅಭಿಯಾನ ಸಹ ಮಾಡಿದ್ದಳಂತೆ. ಅಷ್ಟರಲ್ಲಿ ಆಕೆ ದೈಹಿಕವಾಗಿಯೂ ಮಾನಸಿಕವಾಗಿಯೂ ಸಾಕಷ್ಟು ಜರ್ಜರಿತಳಾಗಿದ್ದಳು. ಸಂಪಾದನೆಯೇನೂ ಇಲ್ಲದೆ ಬಡತನದ ಬೇಗುದಿ ಬೇರೆ. ಸಾಲದೆಂಬಂತೆ ಡಿಮೆನ್ಷಿಯಾ ಕಾಯಿಲೆಯೂ ಅವಳನ್ನು ಆವರಿಸಿಕೊಂಡಿತು. ಫಿಲಡೆಲ್ಫಿಯಾದ ವೆಸ್ಟ್ ಚೆಸ್ಟರ್‌ನಲ್ಲಿದ್ದ ಮಾನಸಿಕ ಚಿಕಿತ್ಸಾಲಯವೊಂದಕ್ಕೆ ಆಕೆಯನ್ನು ಸೇರಿಸಲಾಯ್ತು. ವಿಪರ್ಯಾಸವೆಂದರೆ ಯಾವ ಪುಷ್ಪೋದ್ಯಮಿಗಳನ್ನು ಡಕಾಯಿತರು, ಪರಮಲೋಭಿಗಳು ಎಂದು ಆಕೆ ಜರಿದಿದ್ದಳೋ ಅವರಲ್ಲೇ ಕೆಲವರು ಆಕೆಯ ವೃದ್ಧಾಪ್ಯಕಾಲದ ಆಸ್ಪತ್ರೆ-ಔಷಧ ಖರ್ಚುಗಳನ್ನು ನೋಡಿಕೊಂಡಿದ್ದರು. ಅದನ್ನು ಅವಳಿಂದ ಗೋಪ್ಯವಾಗಿ ಇಡಲಾಗಿತ್ತು ಅಷ್ಟೇ. ಅಂಥ ವಿಶಿಷ್ಟ ಮಹಿಳೆ ಅನ್ನಾ ಜಾರ್ವಿಸ್ ನವೆಂಬರ್ 24, 1948ರಂದು ಕೊನೆಯುಸಿರೆಳೆದಳು. ಜೀವನದುದ್ದಕ್ಕೂ ಆಕೆ ಮದುವೆ ಮಾಡಿಕೊಂಡಿರಲಿಲ್ಲ, ಹಾಗಾಗಿ ಅವಳಿಗೆ ಮಕ್ಕಳಿರಲಿಲ್ಲ. ಅಂದರೆ ಮದರ್ಸ್ ಡೇ ಮಹತ್ವವನ್ನು ಜಗತ್ತಿಗೆಲ್ಲ ತಿಳಿಸಬಯಸಿದ್ದ, ತಾಯಂದಿರನ್ನೆಲ್ಲ ಪ್ರೀತಿಯಿಂದ ಗೌರವಿಸಬಯಸಿದ್ದ ಅನ್ನಾ ಜಾರ್ವಿಸ್ ಸ್ವತಃ ತಾಯಿ ಆಗಿರಲಿಲ್ಲ!

ಇತ್ತ ಸಂಪೂರ್ಣವಾಗಿ ವಾಣಿಜ್ಯೀಕರಣಗೊಂಡಿರುವ ಮದರ್ಸ್ ಡೇ ಪ್ರತಿವರ್ಷ ಮೇ ತಿಂಗಳ ಎರಡನೆಯ ಭಾನುವಾರದಂದು ಆಚರಣೆಯಾಗುತ್ತದೆ. ವರ್ಷದ ಬೇರೆಲ್ಲ ದಿನಗಳಿಗಿಂತ ಹೆಚ್ಚು ಅವತ್ತು ದೂರವಾಣಿ ಸಂಭಾಷಣೆ ನಡೆಯುತ್ತದೆಂದು ಟೆಲಿಫೋನ್ ಕಂಪನಿಗಳ ಅಂಕಿ-ಅಂಶಗಳು ತಿಳಿಸುತ್ತವೆ. ರೆಸ್ಟೋರೆಂಟ್‌ಗಳಿಗೂ ಅವತ್ತು ಭರ್ಜರಿ ವ್ಯಾಪಾರ, ವ್ಯಾಲೆಂಟೈನ್ಸ್ ಡೇಗಿಂತಲೂ ಹೆಚ್ಚು. ಆಭರಣಗಳು, ಬಟ್ಟೆಬರೆ ಮತ್ತು ಇಲೆಕ್ಟ್ರಾನಿಕ್ ಉಪಕರಣಗಳಿಗೆ, ಸ್ಪಾ ಮತ್ತಿತರ ಆರೋಗ್ಯವರ್ಧಕ ಸೇವೆಗಳಿಗೆ ಹೆಚ್ಚು ಡಿಮ್ಯಾಂಡ್. ಗ್ರೀಟಿಂಗ್ ಕಾರ್ಡ್ ಮತ್ತು ಹೂವುಗಳನ್ನಂತೂ ಪ್ರತಿ ನಾಲ್ಕರಲ್ಲಿ ಮೂವರು ಮಾತೆಯರು ಅಂದು ಪಡೆದೇಪಡೆಯುತ್ತಾರೆ. ಸಾಮಾಜಿಕ ಮಾಧ್ಯಮಗಳ ಮೂಲಕ ರಾಶಿರಾಶಿ ಇಮೋಜಿಗಳನ್ನೂ! ಆದರೆ ಈಗಿನ ದಿನಗಳಲ್ಲಿ ಕೈಬರಹದ ಪತ್ರಗಳನ್ನು ಪಡೆಯುವ ತಾಯಿಯರಿದ್ದರೆ ಅಂಥವರನ್ನು ದುರ್ಬೀನು ಹಿಡಿದು ಹುಡುಕಬೇಕೇನೋ. ಒಟ್ಟಿನಲ್ಲಿ ಮದರ್ಸ್ ಡೇ ಆಚರಣೆ ಹೇಗಿರಬೇಕೆಂದು ಅನ್ನಾ ಜಾರ್ವಿಸ್ ಬಯಸಿದ್ದಳೋ ಆ ರೀತಿಯೊಂದನ್ನು ಬಿಟ್ಟು ಬೇರೆಲ್ಲ ರೀತಿಗಳಲ್ಲಿ 'ಧೂಂ ಧೂಂ' ಆಗಿ ನಡೆಯುತ್ತಿದೆ. ಬಿಲಿಯನ್ ಡಾಲರ್ ವಹಿವಾಟಿನದು ಎನಿಸಿಕೊಂಡಿದೆ.

ಅನ್ನಾ ಜಾರ್ವಿಸ್‌ಳ ಕಥೆಯನ್ನೋದುವಾಗ ನನಗೆ ಕೆಲವು ವಿಚಾರಗಳು ನೆನಪಿಗೆ ಬರುತ್ತವೆ. ಪರಶಿವನು ಭಸ್ಮಾಸುರನನ್ನು ಸೃಷ್ಟಿಸಿದಾಗ ಆ ದೈತ್ಯನು ಶಿವನ ನಿಯಂತ್ರಣವನ್ನೂ ಮೀರಿ ಅಟಾಟೋಪ ಮೆರೆದ ಕಥೆ. ಹೋಗಲಿ, ಅದಾದರೂ ಪುರಾಣಕಥೆಯ ಒಂದು ಹೋಲಿಕೆ ಅಷ್ಟೇ. ಆದರೆ ಉದಾತ್ತ ಚಿಂತನೆಯ ನಮ್ಮ ಕೆಲವು ಹಬ್ಬ-ಹರಿದಿನಗಳು, ಮದುವೆ-ಮುಂಜಿ-ಗೃಹಪ್ರವೇಶಾದಿ ಸಮಾರಂಭಗಳೂ ತೀರಾ ವ್ಯಾಪಾರಪ್ರಚೋದಕ ಆಗಿ ಕಮರ್ಷಿಯಲ್ ಕಮಟು ವಾಸನೆ ಹೊಡೆಯುತ್ತಿರುವುದು ಬೇಸರವೆನಿಸುತ್ತದೆ. ಉದಾಹರಣೆಗೆ, ಅಕ್ಷಯತದಿಗೆಯ ಮೂಲ ಅರ್ಥವಿರುವುದು ಕೊಡುವ (ದಾನ ಮಾಡುವ) ನಮ್ಮ ಶಕ್ತಿ ಅಕ್ಷಯವಾಗಲೆಂದು. ಈಗ ಅದು ಚಿನ್ನದ ವ್ಯಾಮೋಹಪರ್ವವಾಗಿ ಪರಿವರ್ತಿತವಾಗಿದೆ. ಆ ದಿನ ಬಂಗಾರದೊಡವೆ ಖರೀದಿ ಮಾಡದಿದ್ದರೆ ಜನ್ಮವೇ ವ್ಯರ್ಥ ಎಂಬ ಕೀಳರಿಮೆ, ಭ್ರಮೆ ಹರಡಲಾಗಿದೆ. ನವರಾತ್ರಿಯಲ್ಲಿ ಶೈಲಪುತ್ರಿ, ಬ್ರಹ್ಮಚಾರಿಣಿ, ಚಂದ್ರಘಂಟಾ, ಸ್ಕಂದಮಾತಾ ಅಂತೆಲ್ಲ ದೇವಿಯ ಹೆಸರುಗಳನ್ನು ಹೇಳಿ, ಹಳದಿ, ಹಸಿರು, ಬೂದು, ಕೇಸರಿ... ಎಂದು ಒಂದೊಂದು ದಿನಕ್ಕೆ ಒಂದೊಂದು ಬಣ್ಣ ಎಂಬ ಹೊಸದೊಂದು ಸಂಪ್ರದಾಯ ಹುಟ್ಟಿಕೊಂಡಿದೆ; ಸೀರೆ ವ್ಯಾಪಾರ ಹೆಚ್ಚಿದೆ. ಶರನ್ನವರಾತ್ರಿಗಷ್ಟೇ ಅಲ್ಲ ಈಗೀಗ ಚೈತ್ರನವರಾತ್ರಿಯಲ್ಲೂ ಈ ಕಲರ್‌ಚಾರ್ಟ್ ಹರಿದಾಡುತ್ತದೆ! ಇನ್ನು ರಾಜ್ಯೋತ್ಸವ, ಸಾರ್ವಜನಿಕ ಗಣೇಶೋತ್ಸವ ಸಂದರ್ಭಗಳ ದಂಧೆಯ ಬಗ್ಗೆಯಂತೂ ಕೇಳುವುದೇ ಬೇಡ.

ಅದೇನೇ ಇರಲಿ, ಇಂದು ಈ ಅಂಕಣಬರಹವನ್ನು ಓದುವ ಮತ್ತು ಓದುವವರ ತಾಯಂದಿರಿಗೆಲ್ಲ ಮದರ್ಸ್ ಡೇ ಶುಭಾಶಯಗಳು. ಇದು ಗ್ರೀಟಿಂಗ್ ಕಾರ್ಡ್ ಅಲ್ಲ, ಕೈಬರಹದ್ದಲ್ಲದಿದ್ದರೂ ಕೀಬೋರ್ಡ್‌ನಲ್ಲಿ ಕುಟ್ಟಿದ ಸೌಹಾರ್ದ ಸಂದೇಶ, ಆತ್ಮೀಯವಾದದ್ದೇ ಎಂದು ತಿಳಿದುಕೊಳ್ಳಬೇಕಾಗಿ ವಿನಂತಿ.

ನರೆದಲೆಗ ಮತ್ತು ವ್ರಿಹಿಗಗಳಲ್ಲಿ ಶ್ರೇಷ್ಠರು ಯಾರು?



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.coma

ಆ ಜಾತಿ-ಧರ್ಮ ಹೆಚ್ಚು, ಈ ಜಾತಿ-ಧರ್ಮ ಕಡಿಮೆ', 'ಸ್ತ್ರೀ ಅಬಲೆ, ಪುರುಷ ಸಬಲ', 'ಕಪ್ಪು ತಿರಸ್ಕಾರಾರ್ಹ, ಬಿಳಿ ಸ್ವೀಕಾರಾರ್ಹ', 'ದಪ್ಪ ಎನ್ನುವುದು ನಿರಾಕರಣೀಯ, ಸಪೂರ ಎನ್ನುವುದು ಆಕರ್ಷಣೀಯ', 'ಶ್ರೀಮಂತ-ಬಡವ', 'ವಿದ್ಯಾವಂತ-ಅವಿದ್ಯಾವಂತ', 'ರಸಿಕ-ಅರಸಿಕ' ಹೀಗೆ ಹತ್ತು ಹಲವು ವಿರೋಧಾಭಾಸಗಳು ಮತ್ತು ಅಸಮತೋಲನಗಳು ಎಲ್ಲ ಸಮಾಜಗಳಲ್ಲೂ ಇದ್ದೇ ಇವೆ. ಸಮಾಜ ಸಮವಾಗಿಲ್ಲ ಮತ್ತು ಇರುವುದಕ್ಕೆ ಸಾಧ್ಯವೂ ಇಲ್ಲ. ಇದ್ದದ್ದನ್ನು ಇದ್ದ ಹಾಗೆ ಸ್ವೀಕರಿಸುವ ಮನಸ್ಸಿರುವವ ಮಾತ್ರ ಇಂಥ ವೈರುಧ್ಯಗಳಿಂದ ಕೂಡಿದ ಸಮಾಜದಲ್ಲೂ ಸುಖಿಯಾಗಿ ಬದುಕಬಲ್ಲ ಎಂಬುದು ನಮಗೆ ಪ್ರಾಚೀನರು ಹೇಳಿಕೊಟ್ಟ ಪಾಠ ತಾನೇ? ಬಿಳಿಬಣ್ಣಕ್ಕೆ ಅದರದ್ದೇ ಆದ ಹೆಚ್ಚುಗಾರಿಕೆಯಾದರೆ, ಕಪ್ಪು ಬಣ್ಣಕ್ಕೆ ಅದರದ್ದೇ ಸತ್ವ-ಪ್ರಾಮುಖ್ಯವಿದೆ. ಕೃಶಕಾಯನಿಗೆ ಅವನದ್ದೇ ಆದ ಅನುಕೂಲ್ಯಗಳಿದ್ದರೆ, ಪೀನ ದೇಹವಂತನಿಗೆ ಅವನದ್ದೇ ಆದ ಸೌಲಭ್ಯಗಳಿವೆ. ಹಾಗಾಗಿಯೇ, ಎಲ್ಲವನ್ನೂ ಪಕ್ಷಿನೋಟದಿಂದ, ಅಂದರೆ ಎತ್ತರದಿಂದ ನೋಡುವವರಿಗೆ ಸಮಾಜದಲ್ಲಿ ಯಾವ ಅಸಮಾನತೆಗಳೂ ಕಾಣದೇ, ಎಲ್ಲವೂ ಭವ್ಯವಾಗಿಯೂ ಸುಂದರವಾಗಿಯೂ ಗೋಚರಿಸುತ್ತವೆ.

ವಾಸ್ತವವಾಗಿ ಯಾವುದೂ ಹೆಚ್ಚಲ್ಲ, ಕಡಿಮೆಯೂ ಅಲ್ಲ. ಅವುಗಳ ಸರಿಯಾದ ಬಳಕೆ ಅಥವಾ ಉಪಯೋಗ ಗೊತ್ತಿರಬೇಕಷ್ಟೇ. ಹಾಗಾದಾಗ ಎಲ್ಲವೂ ಉಪಯುಕ್ತವೇ ಆಗಿರುತ್ತದೆ. ''ಅಮಂತ್ರಮಕ್ಷರಂ ನಾಸ್ತಿ ನಾಸ್ತಿ ಮೂಲಮನೌಷಧಂ ಅಯೋಗ್ಯಃ ಪುರುಷೋ ನಾಸ್ತಿ ಯೋಜಕಸ್ತತ್ರ ದುರ್ಲಭಃ'' ಎಂಬ ಸುಭಾಷಿತದಂತೆ, ಮಂತ್ರಸಮಾನವಲ್ಲದ ಯಾವ ಅಕ್ಷರವೂ ಇಲ್ಲ. ಅಂದರೆ, ಅವುಗಳನ್ನು ಸರಿಯಾಗಿ ಸಂಯೋಜಿಸಿದರೆ, ಪ್ರತಿ ಅಕ್ಷರಕ್ಕೂ ಮಂತ್ರದ ಸ್ಥಾನವಿದೆ. 'ಇದು ಔಷಧಕ್ಕಾಗದು' ಎನ್ನುವಂಥ ಯಾವ ಬೇರು-ಬಗಟೆಯೂ ಭೂಮಿಯಲ್ಲಿಲ್ಲ; ನಮಗೆ ಅವುಗಳ ಬಳಕೆ ಗೊತ್ತಿಲ್ಲವಷ್ಟೇ. ಹಾಗೆಯೇ, ಸೃಷ್ಟಿಯಲ್ಲಿ ಯಾವ ವ್ಯಕ್ತಿಗಳೂ ಅಯೋಗ್ಯರಲ್ಲ, ಎಲ್ಲರಲ್ಲೂ ಒಂದಲ್ಲಾ ಒಂದು ವಿಶೇಷ ಕ್ಷಮತೆ ಇದ್ದೇ ಇರುತ್ತದೆ. ಆದರೆ ಇದನ್ನೆಲ್ಲ ಅರಿತು ಸಮರ್ಥವಾಗಿ ಬಳಸುವ ಯೋಜಕರು ದುರ್ಲಭ ಎನ್ನುತ್ತದೆ ಈ ಸಂಸ್ಕೃತ ಶ್ಲೋಕ. ಹೀಗೆ, ಒಂದು ವಸ್ತುವಿನ ಸಾರ-ಸತ್ವವನ್ನು ಅರಿತು, ಅವನ್ನು ಎಲ್ಲಿ ಎಷ್ಟು ಬೇಕೋ ಅಷ್ಟನ್ನು ಸಮಾಜದ ಒಳಿತಿಗೆ ನಿಯೋಜಿಸುವ ಯೋಜಕನೊಬ್ಬ ಸಮಾಜದಲ್ಲಿ ಆಗಾಗ ಹುಟ್ಟಿಬರುತ್ತಿದ್ದರೆ, ಸಮಾಜ ಎಲ್ಲದರಿಂದಲೂ ಪ್ರಯೋಜನ ಪಡೆದು ಸರ್ವಸುಂದರವಾಗಿ ಕಂಗೊಳಿಸಬಹುದು ಎನ್ನುವುದು ಈ ಶ್ಲೋಕದ ನೀತಿ.

ಇನ್ನು, ಈ ಡೊಂಕುಗಳನ್ನು ಕೊಂಚವಾದರೂ ತಿದ್ದಿ ಸಮಾಜದಲ್ಲಿ ನಿರ್ಲಕ್ಷ್ಯಕ್ಕೊಳಗಾದವರನ್ನು ಎತ್ತಿ ಹಿಡಿಯಲೆಂದು ನಮ್ಮ ದೇಶದ ಅನೇಕ ಜಾನಪದರು, ಸಾಹಿತಿಗಳು, ಹರಿದಾಸರು, ವಚನಕಾರರು ಶ್ರಮಿಸಿದ್ದಾರೆ; ಕುಲ, ವರ್ಗ, ವರ್ಣ, ಜಾತಿ ಮುಂತಾದವುಗಳಿಂದ ಉಂಟಾಗುವ ತಾರತಮ್ಯವನ್ನು ನಿವಾರಿಸಿ, ಸಮಾಜವನ್ನು ಸುಧಾರಿಸುವ ಕೆಲಸವನ್ನು ಮಾಡುತ್ತಲೇ ಬಂದಿದ್ದಾರೆ ಮತ್ತು ಇಲ್ಲಿ ಯಾವುದೂ 'ಹೆಚ್ಚು-ಕಡಿಮೆ' ಎನ್ನುವಂಥದ್ದಿಲ್ಲ. ಅವಕ್ಕೆ ಅವುಗಳದ್ದೇ ಆದ ಪ್ರಯೋಜನವಿದೆ. ಮಿತವಾಗಿ ಬಳಸಿದರೆ ಪಾಷಾಣವೂ (ವಿಷವೂ) ಅನೇಕ ರೋಗಗಳಿಗೆ ಭೇಷಜ (ಔಷಧ) ಆಗಬಲ್ಲದು, ಅತಿಯಾದರೆ ಅಮೃತವೂ ವಿಷವಾಗುವುದು ಎಂದು ತೋರಿಸಿಕೊಟ್ಟಿದ್ದಾರೆ.

ಭಾಗ-1

'ಕಾವ್ಯಾನಂದ' ಎಂಬ ನಾಮದಿಂದ ಬರೆಯುತ್ತಿದ್ದ ಸಿದ್ಧಯ್ಯ ಪುರಾಣಿಕರು 'ಪೂರ್ವಾಂಗನೆ ಪಶ್ಚಿಮಾಂಗನೆಗೆ' ಎಂಬ ತಮ್ಮ ಕಾವ್ಯದಲ್ಲಿ, ಕಪ್ಪು ಮತ್ತು ಬಿಳಿ ಬಣ್ಣದ ಗೆಳತಿಯರ ನಡುವೆ ನಡೆಯುವ ಸಂಭಾಷಣೆಯ ಮುಖಾಂತರ, ಕಪ್ಪು-ಬಿಳುಪಿನ ನಡುವೆ ದೂಷಿತವಾದ ಕಪ್ಪಿನ ಹೆಚ್ಚುಗಾರಿಕೆಯನ್ನು ಎತ್ತಿ ತೋರಿಸಿದ್ದಾರೆ. ಬಿಳಿ ಹುಡುಗಿಯು ಯಾವ ರೀತಿಯಲ್ಲಿ ಹೆಚ್ಚಿನವಳು? ಕಪ್ಪು ಹುಡುಗಿಯ ಬಣ್ಣ ಕಪ್ಪಾದರೂ ಅವಳ ಸತ್ವವೇನು? ಎನ್ನುವುದನ್ನು ಪುರಾಣಿಕರು ಕಪ್ಪು ಹುಡುಗಿಯ ಮೂಲಕ ಮಾರ್ಮಿಕವಾಗಿ ಹೀಗೆ ಹೇಳಿಸುತ್ತಾರೆ- ''ನಾ ಕರಿಯಳೆಂದು ನೀ ಜರಿಯಬೇಡ ಬಿಳಿ ಗೆಳತಿ ಗರ್ವದಿಂದ, ಕಪ್ಪಿಗಿಂತ ಬಿಳಿ ಬಣ್ಣ ಹೆಚ್ಚು ಹೇಳು ಯಾವ ಹಿರಿಮೆಯಿಂದ? ಬಿಳಿಯ ಮೋಡ ನೀಡುವುದು ಇಳೆಗೆ ಬರಿ ಬೆಡಗು ಅಂದ ಚೆಂದ, ಇಳೆಯ ಜೀವ ಮಳೆ ಬರುವುದಕ್ಕ ಕರಿ ಮೋಡ ಮಾತ್ರದಿಂದ. ಕಣ್ಗೆ ನೋಟ ಕರಿಯಾಲಿಯಿಂದಲೆ, ಕುರುಡು ಬರಿಯ ಬಿಳುಪು, ಬಿಳಿಯ ಕೇಶಗಳೆ ಮುಪ್ಪು, ಯೌವನದ ವಿಜಯ ಧ್ವಜವು ಕಪ್ಪು. ಕಪ್ಪು ಭೂಮಿಯಲೆ ಬೆಳೆಯ ಬೇಕು ನೀ ತೊಟ್ಟ ನೂಲ ಬಿಳುಪು, ಬಿಳಿಯ ಮಂಜಿನಲಿ ಬೆಳೆಯಬಹುದೆ? ಬೆಳೆಯುವುದು ಎಲ್ಲ ಕಪ್ಪು. ನೀ ಬಿಳಿಯ ಹಾಳೆ, ನಾ ಕರಿಯ ಮಸಿಯು, ಆಗೋಣ ಪ್ರೇಮಕವನ. ದೇಹಕ್ಕೆ ಬಣ್ಣ, ದೇಶಕ್ಕೆ ಬಣ್ಣ, ಆತ್ಮಕ್ಕೆ ಯಾವ ಬಣ್ಣ? ಈ ವರ್ಣ ಮೈತ್ರಿ ಅನಿವಾರ್ಯ ಗೆಳತಿ ಸರ್ವತ್ರ ವಿಶ್ವಪ್ರಕೃತಿ ತೋರುವುದು ಇದನೆ, ಸಾರುವುದು ಇದನೆ, ಇದೆ ನೋಡು ಅದರ ನೀತಿ... ಹೊತ್ತಾರೆ ಕೆಂಪು, ಮತ್ತಷ್ಟು ಹಳದಿ, ಹೊತ್ತೇರೆ ಬಿಳುಪು ಗೆಳತಿ. ನಿನ್ನಂದ ಬಿಳುಪು, ಇದೋ ನೆರಳು ಕಪ್ಪು, ಎಲ್ಲಿಹುದು ವೈರ ಗೆಳತಿ?''.

ಈ ವರ್ಣವೈವಿಧ್ಯವನ್ನು ವೇದಾಂತದ ಸ್ತರಕ್ಕೆ ಏರಿಸಿ, ''ದೇಹಕ್ಕೆ ಬಣ್ಣ, ದೇಶಕ್ಕೆ ಬಣ್ಣ, ಆತ್ಮಕ್ಕೆ ಯಾವ ಬಣ್ಣ?'' ಎನ್ನುವ ಮೂಲಕ ಮೂಲದಲ್ಲಿ ಅಸಮಾನತೆ ಎನ್ನುವುದಿಲ್ಲ ಎಂದಿರುವುದು ಮತ್ತು ''ನೀ ಬಿಳಿಯ ಹಾಳೆ, ನಾ ಕರಿಯ ಮಸಿಯು, ಆಗೋಣ ಪ್ರೇಮಕವನ'' ಎನ್ನುವ ಸಾಮರಸ್ಯದ ಮಾತು ಮತ್ತು ''ಈ ವರ್ಣಮೈತ್ರಿ ಅನಿವಾರ್ಯ ಗೆಳತಿ, ಸರ್ವತ್ರ ವಿಶ್ವಪ್ರಕೃತಿ ತೋರುವುದು ಇದನೆ, ಸಾರುವುದು ಇದನೆ, ಇದೆ ನೋಡು ಅದರ ನೀತಿ'' ಎಂದು ಸಾಮರಸ್ಯದ ಅನಿವಾರ್ಯತೆಯನ್ನು ಹೇಳಿರುವುದು ಬಹಳ ಅರ್ಥಪೂರ್ಣವಾಗಿದೆ.

80ರ ದಶಕದ 'ಲಾವಾರಿಸ್' ಸಿನಿಮಾದ ''ಮೇರೆ ಅಂಗನೇಮೆ ತುಮ್ಹಾರಾ ಕ್ಯಾ ಕಾಮ್ ಹೈ'' ಎಂಬ ಪ್ರಸಿದ್ಧ ಹಾಡನ್ನು ನೀವು ಕೇಳಿರುತ್ತೀರಿ. ಅಮಿತಾಭ್ ಬಚ್ಚನ್ ಅವರು ತಮ್ಮ ತಂದೆ ಹರಿವಂಶರಾಯ್ ಬಚ್ಚನ್ ಅವರು ರಚಿಸಿದ ಈ ಹಾಡನ್ನು ತಮ್ಮದೇ ಆದ ನಾಟ್ಯಶೈಲಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ಈ ಹಾಡಿನಲ್ಲೂ, ಎಲ್ಲದರಲ್ಲಿ ಅಡಗಿರುವ ಪ್ರಯೋಜಕತೆ ಮತ್ತು ಬಳಕೆಯ ಕುರಿತಾಗಿಯೇ ಸ್ವಲ್ಪ ವಿಡಂಬನಾತ್ಮಕವಾಗಿ ಹೀಗೆ ಹೇಳಲಾಗಿದೆ: ''ಹೆಂಡತಿ ಕಪ್ಪಗಿರುವಳೆಂದು ಬೇಸರಿಸುವ ಅಗತ್ಯವಿಲ್ಲ, ಅವಳನ್ನು ನಿಮ್ಮ ನಯನದೊಳಗಿಟ್ಟರೆ ನಿಮಗೆ ಕಾಡಿಗೆಯ ಅಗತ್ಯವಿರುವುದಿಲ್ಲ; ಹೆಂಡತಿ ಕುಳ್ಳಗಿದ್ದರೆ ಮಡಿಲಲ್ಲಿ ಕುಳ್ಳಿರಿಸಿಕೊಳ್ಳಿ, ನಿಮಗೆ ಮಕ್ಕಳ ಅಗತ್ಯ ಬರದು. ಹೆಂಡತಿ ದಪ್ಪಗಿದ್ದರೆ ಚಿಂತಿಸುವುದು ಬೇಡ, ಹಾಸಿಗೆಯಲ್ಲಿ ತಲೆದಿಂಬನ್ನು ಹುಡುಕುವ ಅಗತ್ಯವಿರುವುದಿಲ್ಲ. ಒಂದೊಮ್ಮೆ ಹೆಂಡತಿ ಬೆಳ್ಳಗಿದ್ದರೆ, ಅವಳನ್ನು ಕೋಣೆಯಲ್ಲಿರಿಸಿದರೆ ಅಲ್ಲಿ ವಿದ್ಯುದ್ದೀಪದ ಅಗತ್ಯ ಬರುವುದಿಲ್ಲ..''.



ನಾನು ಮೊದಲೇ ಹೇಳಿದಂತೆ, ಈ ತಾರತಮ್ಯಗಳು ಮತ್ತು ಉಚ್ಚ-ನೀಚಗಳು, ಜಾತಿ-ಧರ್ಮ, ಕಪ್ಪು-ಬಿಳಿ, ದಪ್ಪ-ಸಪೂರ, ಶ್ರೀಮಂತ-ಬಡವ, ವಿದ್ಯಾವಂತ-ಅವಿದ್ಯಾವಂತ, ರಸಿಕ-ಅರಸಿಕ ಎನ್ನುವಲ್ಲಿಗೆ ನಿಲ್ಲುವುದಿಲ್ಲ. ಅವು ನಾವು ನಿತ್ಯ ಉಣ್ಣುವ ಆಹಾರ ಧಾನ್ಯಗಳಿಗೂ, ಉಡುವ ಬಟ್ಟೆಯವರೆಗೂ ವಿಸ್ತಾರವಾಗುತ್ತವೆ. ಧಾನ್ಯಗಳ ವಿಷಯದಲ್ಲೂ ಸಮಾಜದಲ್ಲಿ ಈಗಲೂ ಇಂಥ ಮೇಲು-ಕೀಳೆಂಬ ಭಾವನೆಯಿದೆ. ರಾಗಿ ತಿನ್ನುವಾತ ಬಡವ, ಅಕ್ಕಿ ತಿನ್ನುವಾತ ಶ್ರೀಮಂತ. ಅದರಲ್ಲೂ, ಘಟ್ಟದ ಕೆಳಗಿನ ಕರಾವಳಿ ಪ್ರದೇಶದ ಕುಚಲಕ್ಕಿ (ಕೆಂಪಕ್ಕಿ) ಉಣ್ಣುವವರ ಮುಂದೆ, ಬಿಳಿ ಅಕ್ಕಿ ಉಣ್ಣುವ ಘಟ್ಟದ ಮೇಲಿನವರ ಹಮ್ಮು-ಬಿಮ್ಮುಗಳೇ ಬೇರೆ. ಹೀಗೆ ಹಿಂದಿನಿಂದಲೂ ಬಡವರ ಧಾನ್ಯವೆಂತಲೇ ಬಿರುದು ಹೊತ್ತಿರುವ ರಾಗಿಯ ಗುಣಗಳನ್ನು ಆದರಿಸಿ, ಅದು ಶ್ರೀಮಂತಿಕೆಯನ್ನು ಪ್ರತಿನಿಧಿಸುವ ಭತ್ತಕ್ಕಿಂತ ಹೇಗೆ ಶ್ರೇಷ್ಠ ಎಂದು ಸಾರುವ, ಕನ್ನಡಿಗರಿಗೆ ಅಷ್ಟೊಂದು ಪರಿಚಿತವಲ್ಲದ, 'ರಾಮಧಾನ್ಯ ಚರಿತ್ರೆ' ಎಂಬ ಕನಕದಾಸರ ಕಾವ್ಯವು ಅಪೂರ್ವವಾದುದಾಗಿದೆ. ನಮ್ಮ ನೀತಿಕಥಾ ಪರಂಪರೆಯಲ್ಲಿ ಪ್ರಾಣಿ-ಪಿಶಾಚಿಗಳಿಂದ ಮಾತಾಡಿಸಿರುವುದನ್ನೂ 'ಪಂಚತಂತ್ರ', 'ವಿಕ್ರಮ್ ಮತ್ತು ಬೇತಾಳ' ಮುಂತಾದವುಗಳಲ್ಲಿ ನೋಡುತ್ತೇವೆ. ಆದರೆ, ಸಮಾಜದ 2 ಸ್ತರಗಳನ್ನು ಪ್ರತಿನಿಧಿಸುವ ಭತ್ತ ಮತ್ತು ರಾಗಿಯಂಥ ಧಾನ್ಯಗಳನ್ನು ಮಾತನಾಡಿಸಿ, ಸಮಾಜಕ್ಕೆ ಉತ್ತಮ ಸಂದೇಶ ಸಾರುವ 'ರಾಮಧಾನ್ಯ ಚರಿತ್ರೆ'ಯಂಥ ವಿಶಿಷ್ಟ ಕಾವ್ಯವು ಮತ್ತೊಂದು ಭಾಷೆಯಲ್ಲಿ ಸಿಗಲಿಕ್ಕಿಲ್ಲ.

'ರಾಮಧಾನ್ಯ ಚರಿತ್ರೆ'ಯು ಕನಕದಾಸರಿಂದ ರಚಿತವಾದ ಒಂದು ಕಲ್ಪಿತ ಕಥೆ, ಪುಟ್ಟ ವಿಡಂಬನಾ ಕಾವ್ಯ. ಹಾಡಲು ಅನುಕೂಲವಾದ ಮತ್ತು ಷಟ್ಪದಿಯ ಶೈಲಿಯಲ್ಲಿ ನಿರೂಪಿಸಲಾದ ಈ ಕಾವ್ಯವು 155 ಪದ್ಯಗಳನ್ನು ಒಳಗೊಂಡಿದೆ. ರಾಗಿ ಮತ್ತು ಭತ್ತದ ಪೈಕಿ ಯಾರು ಹೆಚ್ಚು ಎನ್ನುವಲ್ಲಿನ ಸಕಾರಣ ವಾದ-ಪ್ರತಿವಾದ-ಸಮರ್ಥನೆಗಳು, ದೇವತೆಗಳ ಸಮ್ಮುಖದಲ್ಲಿ ಶ್ರೀರಾಮನ ಆಸ್ಥಾನದಲ್ಲಾಗುವ ತೀರ್ಮಾನ ಮತ್ತು ಕೊನೆಯಲ್ಲಿನ ಸಾಮರಸ್ಯದ ಉಪಸಂಹಾರಗಳು ಉಭಯ ದೃಷ್ಟಿಯಿಂದಲೂ (ಕಾವ್ಯ ಮತ್ತು ಸತ್ವ) ಅತ್ಯಂತ ಸುಂದರವಾಗಿ ಮೂಡಿಬಂದಿವೆ. ನಿರ್ಲಕ್ಷ್ಯಕ್ಕೊಳಗಾಗಿದ್ದ ನರೆದಲೆಗ (ರಾಗಿ) ಧಾನ್ಯದ ಸಂಪರ್ಕವನ್ನು ಶ್ರೀರಾಮನೊಂದಿಗೆ ಸಾಧಿಸಿ, ಅವನು ನರೆದಲೆಗಕ್ಕೆ ತನ್ನ ನಾಮವನ್ನು ಪ್ರದಾನಿಸಿದ ಕಲ್ಪನೆಯ ಈ ಕಥೆಗೆ ಕನಕದಾಸರು ಮಹಾಭಾರತದ ಯುಧಿಷ್ಠಿರನ ಪ್ರವೇಶವನ್ನೂ, ರಾಮಾಯಣದ/ಶ್ರೀರಾಮನ ಸ್ಪರ್ಶವನ್ನೂ ನೀಡಿರುವುದು ವಿಶೇಷವಾಗಿದೆ. ಭಾರತೀಯರು ಯಾವುದನ್ನಾದರೂ ಸರಳವಾಗಿ ಸ್ವೀಕರಿಸಬೇಕೆಂದರೆ, ಅದನ್ನು ಒಂದೋ ರಾಮ (ರಾಮಾಯಣ) ಅಥವಾ ಕೃಷ್ಣ (ಭಗವದ್ಗೀತೆ) ಹೇಳಿರಬೇಕು ಎಂಬುದು ಅವರಿಗೆ ಚೆನ್ನಾಗಿ ಗೊತ್ತಿತ್ತು ಎನಿಸುತ್ತದೆ. ಹಾಗಾಗಿ ರಾಗಿ (ನರೆದಲೆಗ) ಮತ್ತು ಭತ್ತ (ವ್ರಿಹಿಗ) ಇವೆರಡರ ನಡುವೆ ಯಾರು ಹೆಚ್ಚು ಎಂಬ ವ್ಯಾಜ್ಯ ಉದ್ಭವಿಸಲಾಗಿ, ರಾಮನು ಅದನ್ನು ಪರಿಹರಿಸಿ ನರೆದಲೆಗವೇ ಉತ್ತಮವೆಂದು ಸಾರಿ ತೀರ್ಪುನೀಡುವ ಕಥಾಹಂದರವನ್ನು ಹೆಣೆದಿದ್ದಾರೆ ದಾಸರು.

ಕನಕದಾಸರೆಂದರೆ, ಕಂಬಳಿ ಹೊದ್ದಿದ್ದು ಒಂದು ಜಾತಿಗಷ್ಟೇ ಸೀಮಿತರಾದ, ಕೀರ್ತನೆಗಳನ್ನು ಬರೆದು ಮನೆಮನೆಯ ಮುಂದೆ ಹಾಡಿದ ಹರಿದಾಸರು ಎಂದಷ್ಟೇ ತಿಳಿದಿರುವವರಿಗೆ, ಅವರ ಶಾಸ್ತ್ರಾಧ್ಯಯನದ ಆಳ, ಸಂಗೀತಪ್ರಜ್ಞೆ, ಕಾವ್ಯಸೃಜನೆಯ ಶಕ್ತಿ ಮತ್ತು ಗಾಢ ಸಾಮಾಜಿಕ ಕಾಳಜಿಯ ಸಂಪೂರ್ಣ ಅರಿವಿರದಿರುವುದು ವಿಷಾದದ ಸಂಗತಿ. ಜನಸಾಮಾನ್ಯರಿಗೆ ಅಷ್ಟೊಂದು ಪರಿಚಿತವಲ್ಲದ 'ರಾಮಧಾನ್ಯ ಚರಿತ್ರೆ' ಎಂಬ ಅವರ ಈ ವಿಶಿಷ್ಟ ಕೃತಿಯನ್ನು ಅಧ್ಯಯನ ಮಾಡಲು ಓದುಗರಲ್ಲಿ ಆಸಕ್ತಿ ಹುಟ್ಟಿಸುವ ದೃಷ್ಟಿಯಿಂದ ಮುಂದಿನ ವಾರಗಳಲ್ಲಿ ಸ್ವಲ್ಪ ಅನುಸಂಧಾನ ಮಾಡೋಣ.

(ಮುಂದುವರಿಯುವುದು)

'ಯುಗ' ಬದಲಾದರೂ, 'ಯುಗಧರ್ಮ' ಬದಲಾಗಲಿಲ್ಲವೇ..?!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಶ್ರಮಜೀವಿಯಿಂದ ಮಾಲೀಶ್ ಮಾಡಿಸಿಕೊಳ್ಳುತ್ತಲೇ ಅವನ ಪೂರ್ವವೃತ್ತಾಂತವನ್ನು ಆಲಿಸಿದ ಕಥೆಗಾರ, ಅಲ್ಲಿಂದ ಹೊರಡಲು ಉದ್ಯುಕ್ತನಾಗುತ್ತಿದ್ದಂತೆ ಪತ್ರಿಕೆಯ ಸಂಪಾದಕರ ಕರೆ ಬರುತ್ತದೆ. ಮುಂದಕ್ಕೆ ಓದಿ...

ಫೋನಿನ ಅತ್ತಕಡೆಯಿಂದ ಸಿಡಿದ ಸಂಪಾದಕರ 'ತಾಂಬೂಲ-ಭರಿತ' ನಗೆಯನ್ನು ಜೀರ್ಣಿಸಿಕೊಳ್ಳುವ ಹರಸಾಹಸದಲ್ಲಿದ್ದ ಕಥೆಗಾರ, ''ಕಥೆಯ ಎಳೆ ಸಿಕ್ಕಿದೆ ಸರ್, ಇನ್ನೇನು ಮನೆಗೆ ಹೋಗಿ ನಿಮಗೆ ಮತ್ತೊಮ್ಮೆ ಫೋನ್ ಮಾಡುತ್ತೇನೆ'' ಎಂದಷ್ಟೇ ಹೇಳಿ ಕರೆಯನ್ನು ತುಂಡರಿಸಿದ. ನಂತರ ಶ್ರಮಜೀವಿಯ ಕಂಗಳನ್ನೇ ಒಮ್ಮೆ ಅಭಿಮಾನಪೂರ್ವಕವಾಗಿ ದಿಟ್ಟಿಸಿ, ಅವನ ಕೈಗಳನ್ನು ಮೃದುವಾಗಿ ಅದುಮಿ, ''ನನ್ನನ್ನು ನೀವು ಹಗುರಮಾಡಿಬಿಟ್ಟಿರಿ'' ಎಂದ. ಅದಕ್ಕೆ ಅಯೋಮಯಗೊಂಡ ಶ್ರಮಜೀವಿ, ''ಅದರಲ್ಲೇನು ಬಂತು ಸರ್? ಮಾಲೀಶ್ ಮಾಡಿಸಿಕೊಳ್ಳೋದೇ ದೇಹ-ಮನಸ್ಸು ಹಗುರವಾಗಲಿ ಅಂತಲ್ವೇ?'' ಎಂದು ಮರುಪ್ರಶ್ನಿಸಿದ. ಅದಕ್ಕೆ ಕಥೆಗಾರ, ''ನಾನು ಹೇಳಿದ್ದು ಆ ಅರ್ಥದಲ್ಲಲ್ಲ; ನನ್ನ ಕೆಲಸವನ್ನು ನೀವು ಹಗುರಮಾಡಿಬಿಟ್ರಿ, ಯುಗಾದಿ ವಿಶೇಷಾಂಕದ ಕಥೆಗೆ ನೀವೇ ವಸ್ತುವಾಗಿಬಿಟ್ರಿ...'' ಎಂದು ಹೇಳಿ ಶ್ರಮಜೀವಿಯಿಂದ ಬೀಳ್ಕೊಂಡು 'ಅಂಗರಾಜ ಮರ್ದನ ಕೇಂದ್ರ' ನಾಮಫಲಕವನ್ನೊಮ್ಮೆ ಸವರಿ ಅಲ್ಲಿಂದ ನಿರ್ಗಮಿಸಿದ.

ಹೋಟೆಲಿನಲ್ಲಿ ತಿಂಡಿ ಕಟ್ಟಿಸಿಕೊಂಡು ಮನೆಗೆ ಬಂದ ಕಥೆಗಾರ, ಸ್ನಾನ-ತಿಂಡಿ ಮುಗಿಸಿ, ಬರೆಯುವ ಮೇಜಿನ ಬಳಿಗೆ ಬಂದ. ಎದುರಿದ್ದ ಶೃಂಗೇರಿ ಶಾರದೆ, ಹೊರನಾಡು ಅನ್ನಪೂರ್ಣೇಶ್ವರಿ ಮತ್ತು ಸಖರಾಯಪಟ್ಟಣದ ವೇಂಕಟಾಚಲ ಅವಧೂತರ ದಿವ್ಯ ಚಿತ್ರಗಳಿಗೆ ಒಮ್ಮೆ ನಮಸ್ಕರಿಸಿ, ಬಿಳಿಹಾಳೆಯ ಮೇಲೆ 'ಶ್ರೀಂ' ಎಂದು ಬರೆದು ಅರೆಕ್ಷಣ ಕಣ್ಣುಮುಚ್ಚಿ ಕೂತ. 'ಅಕ್ಷರ ರಂಗೋಲಿ' ಇಡುವುದಕ್ಕೂ ಮುಂಚೆ ಹೀಗೆ ಆ ದಿವ್ಯಶಕ್ತಿಗಳನ್ನೊಮ್ಮೆ ಧ್ಯಾನಿಸುವುದು, ಕಥಾಹೂರಣದ ಆಳಕ್ಕಿಳಿದು ಧೇನಿಸುವುದು ಅವನ ಕಾರ್ಯಶೈಲಿಯಾಗಿತ್ತು. ಹಾಗೆ ಆತ ಕಣ್ಣು ಮುಚ್ಚಿ ಆ ಶ್ರಮಜೀವಿಯ ವೃತ್ತಾಂತವನ್ನು ಮನದಂಗಳಕ್ಕೆ ಎಳೆತರುತ್ತಿದ್ದಂತೆ ಅದೇಕೋ ದೇಹ ಕಂಪಿಸಿ ಕಂಗಳಿಂದ ಸಣ್ಣಗೆ ನೀರು ಜಿನುಗತೊಡಗಿತು. ''ಅಮ್ಮಾ ಶಾರದೇ... ಹೀಗೂ ಆಗುವುದುಂಟೇ?'' ಎಂದು ತನ್ನಲ್ಲೇ ಹೇಳಿಕೊಂಡ ಕಥೆಗಾರ ಕೆಲ ಕ್ಷಣದ ನಂತರ ರೆಪ್ಪೆ ತೆರೆದಾಗ ಕಂಗಳು ನಕ್ಷತ್ರಗಳಾಗಿದ್ದವು. ಅದು ಕಥೆಯ ಹೆಣಿಗೆ ರೂಪುಗೊಂಡಿದ್ದರ ದ್ಯೋತಕ. ಕೆಲ ಹೊತ್ತಿನ ಮುಂಚೆ ಮಾತುಕೊಟ್ಟಂತೆಯೇ ಸಂಪಾದಕರಿಗೆ ಕರೆಮಾಡಿದ ಕಥೆಗಾರ...

ಅತ್ತಲಿಂದ ಸಂಪಾದಕರು, ''ಹೇಳಿ ಕಥೆಗಾರರೇ... ಕಥೆಯ 'ಎಳೆ' ಸಿಕ್ಕಿದೆ ಅಂದ್ರಲ್ಲಾ? ಅದೇನು 'ಎಳೆ'? ಅದನ್ನು ಇನ್ನೆಷ್ಟು 'ಎಳೆ'ಯಬೇಕು ಅಂದುಕೊಂಡಿದ್ದೀರಿ? ಯುಗಾದಿಯ ಒಳಗೇ 'ಎಳೆ'ಯುತ್ತೀರೋ ಅಥವಾ ದೀಪಾವಳಿಯ ತನಕವೂ 'ಎಳೆ'ಯುತ್ತಲೇ ಇರುತ್ತೀರೋ?'' ಎಂದು ವಿಲಕ್ಷಣವಾಗಿ 'ಪನ್' ಮಾಡಿ, ಖಳನಾಯಕ ವಜ್ರಮುನಿಯಂತೆ ಮತ್ತೊಮ್ಮೆ ಗಹಗಹಿಸಿ ನಕ್ಕರು. ಆ 'ಶ್ರಾವ್ಯಸುಖ'ವನ್ನು ವಿಧಿಯಿಲ್ಲದೆ ಅರೆಕ್ಷಣ ಅನುಭವಿಸಿದ ಕಥೆಗಾರ, ತಾನು ಶ್ರಮಜೀವಿಯ ಮಾಲೀಶ್ ಕೇಂದ್ರಕ್ಕೆ ಹೋದಾಗಿನಿಂದ ಶುರುಮಾಡಿ ಆತ ಹೇಳಿದ ಒಂದೊಂದು ಪ್ರಸಂಗವನ್ನೂ ಒಂದಕ್ಷರ ತಪ್ಪದಂತೆ, ಅದರ ಭಾವದ ಸಮೇತ ಸಂಪಾದಕರಿಗೆ ವಿವರಿಸಿ, ''ಸರ್, ಇದು ಈ ಸಲ ನಾನು ನಿಮಗೆ ಬರೆದು ಕೊಡಲಿರುವ ಕಥೆಯ ಹೂರಣ'' ಎಂದ.

ಆಗ ಸಂಪಾದಕರು, ''ಅರೆ, ಹೃದಯವಿದ್ರಾವಕವಾಗಿ ಇದೆಯಲ್ರೀ....? ಮತ್ತಿನ್ಯಾಕ್ರೀ ತಡಾ? ಹಂಗೇ ಬರೆದು ಈ ಕಡೆ ವಗಾಯಿಸಿಬಿಡ್ರೀ...'' ಎಂದರು. ಅದಕ್ಕೆ ಕಥೆಗಾರ, ''ಸರ್, ನೀವು ಆ ಶ್ರಮಜೀವಿಯ ವೃತ್ತಾಂತವನ್ನಷ್ಟೇ ಕೇಳಿಸಿಕೊಂಡ್ರಿ, ಆದರೆ ಅದರ ಹಿಂದಿನ ಒಂದು 'ಇತಿಹಾಸ ಸೂಕ್ಷ್ಮ'ವನ್ನು ಗ್ರಹಿಸಲಿಲ್ಲ ಎನಿಸುತ್ತೆ. ಕಥಾಹೂರಣದ ಜತೆಜತೆಗೆ ಆ 'ಸೂಕ್ಷ್ಮ'ವೇ ನನ್ನನ್ನ ತುಂಬಾ ಕಾಡ್ತಾ ಇದೆ'' ಎಂದ.

ಈ ಮಾತಿಗೆ ಸಂಪಾದಕರು, ''ಕಥೆಗಾರರೇ, ಹೀಗೆ ಒಗಟಾಗಿ ಮಾತಾಡ್ತಾ ಇದ್ರೆ ನಂಗೂ ಗೊಂದಲವಾಗುತ್ತೆ. ಕಗ್ಗಂಟನ್ನು ಬಿಡಿಸಿ ದಾರವನ್ನು ನೇರವಾಗಿಸಿ. ಸುತ್ತು-ಬಳಸಿದ ಮಾರ್ಗ ಬೇಕಿಲ್ಲ. ಅದೇನು ಇತಿಹಾಸ ಸೂಕ್ಷ್ಮ ಹೇಳಿ?'' ಎಂದರು.

ಅದಕ್ಕೆ ಕಥೆಗಾರ, ''ಸರ್, ಗಮನವಿಟ್ಟು ಕೇಳಿಸಿಕೊಳ್ಳಿ. ಇಲ್ಲಿ ಕಥೆಯೊಳಗೊಂದು ಕಥೆ ಇದೆ. 'ಇತಿಹಾಸ ಪುನರಾವರ್ತನೆಯಾಗುತ್ತೆ' ಎಂಬ ಜಾಣನುಡಿಗೂ ಇಲ್ಲಿ ಪುರಾವೆ ಸಿಕ್ಕಿದೆ...'' ಎಂದ. ಈ ಮಾತಿಗೆ ಸಂಪಾದಕರು ಜೋರಾಗಿ ತಲೆ ಕೆರೆದುಕೊಂಡಿದ್ದು ಕಥೆಗಾರನಿಗೆ ಫೋನಿನಲ್ಲಿ ಸ್ಪಷ್ಟವಾಗಿ ಕೇಳಿಸಿತು. ಅಂತೆಯೇ ಸಂಪಾದಕರು, ''ಅಯ್ಯಾ, ಸಾಮಾಜಿಕ ಕಥೆಯೊಳಗೆ ಸಸ್ಪೆನ್ಸ್ ತುರುಕುತ್ತಿದ್ದೀರಲ್ಲಪ್ಪಾ? ಆಯಿತು, ಅದೇನು ಪುನರಾವರ್ತಿತ ಅಂಶ ಈ ಕಥೆಯಲ್ಲಿ ಅಡಗಿದೆ ಹೇಳಿ..'' ಎನ್ನುತ್ತಾ ಅವಸರಿಸತೊಡಗಿದರು.

ಆಗ ಕಥೆಗಾರ, ''ಸರ್, ಕಥೆಯ ಹೂರಣದ ಜತೆಜತೆಗೇ ಅಲ್ಲಿ ಅನಾವರಣಗೊಳ್ಳುವ ಸಜೀವ-ನಿರ್ಜೀವ ಪಾತ್ರಗಳ ಹೆಸರುಗಳನ್ನೂ ಒಮ್ಮೆ ಏಕಾಗ್ರತೆಯಿಂದ ಗಮನಿಸಿ. ಬಾಲಕ ಶ್ರಮಜೀವಿಯ ಗುರಿಕೌಶಲವನ್ನು ಕಂಡ ಮಿಲಿಟರಿ ಮಾವ ಆತನನ್ನು ತಮ್ಮೊಂದಿಗೆ ಕರೆದೊಯ್ದು ಆಶ್ರಯ ನೀಡಿ, ಬಿಲ್ಲು ವಿದ್ಯಾ ತರಬೇತಿ ಕೇಂದ್ರವೊಂದಕ್ಕೆ ಸೇರಿಸುತ್ತಾರೆ. ಅದರ ಹೆಸರು 'ಧನಂಜಯ ಆರ್ಚರಿ ಸೆಂಟರ್'. 'ಧನಂಜಯ' ಎಂಬುದು ಮಹಾಭಾರತದ ಅರ್ಜುನನಿಗೆ ಇದ್ದ ಇನ್ನೊಂದು ಹೆಸರು. ಆ ಕೇಂದ್ರವನ್ನು ನಡೆಸುತ್ತಿದ್ದ ಮಿಲಿಟರಿ ಮಾವನನ್ನು ಎಲ್ಲರೂ 'ಅಜ' ಎಂದೇ ಕರೆಯುತ್ತಿರುತ್ತಾರೆ. ಅದು 'ಅಶ್ವತ್ಥಾಮ ಜನಕ' ಎಂಬ ಹೆಸರಿನ ಸಂಕ್ಷಿಪ್ತ ರೂಪ. ಹಾಗೆಂದರೆ, ಅಶ್ವತ್ಥಾಮನ ತಂದೆ ಎಂದರ್ಥ. ಅಂದರೆ ಅದು ಮಹಾಭಾರತದಲ್ಲಿ ಬರುವ ದ್ರೋಣಾಚಾರ್ಯರ ಹೆಸರು. ಆ ಬಿಲ್ಲು ವಿದ್ಯಾ ಕೇಂದ್ರದಲ್ಲಿ ಅಭ್ಯಾಸ ಮಾಡುತ್ತ, ಶ್ರಮಜೀವಿಗೆ ಪ್ರತಿಸ್ಪರ್ಧಿಯಾಗಿದ್ದ ಶ್ರೀಮಂತ ಹುಡುಗನ ಹೆಸರು 'ಕಿರೀಟಿ'. ಇದು ಮಹಾಭಾರತದ ಅರ್ಜುನನಿಗೆ ಇದ್ದ ದಶನಾಮಗಳಲ್ಲಿ ಒಂದು. ಇನ್ನು, ಕಿರೀಟಿಯ ತಾಯಿಯಾಗಿದ್ದಾಕೆ 'ಪೃಥೆ'. ಇದು ಕೂಡ ಅರ್ಜುನನ ತಾಯಿ ಕುಂತಿಗೆ ಇದ್ದ ಇನ್ನೊಂದು ಹೆಸರು. ಶ್ರಮಜೀವಿ ಮತ್ತು ಕಿರೀಟಿ ಇಬ್ಬರೂ ಬಿಲ್ಲು ವಿದ್ಯೆಯಲ್ಲಿ ಅತೀವ ಪರಿಣತರಾಗಿದ್ದರೂ, ಈ ಪೈಕಿ ಒಂದು ಕೈ ಮೇಲಿದ್ದ ಶ್ರಮಜೀವಿಗೆ ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಇರುತ್ತದೆ.



ಆದರೆ ಆಶ್ರಯದಾತ 'ಅಜ' ಮರಣಿಸಿದಾಗ ಒಂದು ತಿಂಗಳವರೆಗೆ ಅವನಿಗೆ ಊಟ-ಉಪಾಹಾರ ಪೂರೈಸುತ್ತಾಳೆ ಕಿರೀಟಿಯ ತಾಯಿ ಪೃಥೆ; ಶ್ರಮಜೀವಿಯು ಕ್ರೀಡಾಕೂಟಕ್ಕೂ ಮುನ್ನ ಆಶೀರ್ವಾದ ಪಡೆಯಲು ತನ್ನ ಸಾಕುತಾಯಿಯಲ್ಲಿಗೆ ಬಂದಿದ್ದಾಗ ಅಲ್ಲಿಗೇ ಹುಡುಕಿಕೊಂಡು ಬಂದ ಪೃಥೆ, ಕ್ರೀಡಾಕೂಟದಲ್ಲಿ ಪಾಲ್ಗೊಳ್ಳುವ ಸಾಧ್ಯತೆ ಕಮ್ಮಿಯಾಗಿರುವ ಕಾರಣ ತನ್ನ ಮಗ ಕಿರೀಟಿ ಹಾಸಿಗೆ ಹಿಡಿದಿದ್ದಾನೆ ಎಂದು ಅಲವತ್ತುಕೊಂಡು ಸದರಿ ಕ್ರೀಡಾಕೂಟದಿಂದ ಹಿಂದೆ ಸರಿಯುವಂತೆ ಬಾಲಕ ಶ್ರಮಜೀವಿಯಲ್ಲಿ ಕೇಳಿಕೊಳ್ಳುತ್ತಾಳೆ. 'ಮಹಾಭಾರತ' ಯುದ್ಧದ ವೇಳೆ ಕುಂತಿಯು ಕರ್ಣನಲ್ಲಿಗೆ ಬಂದು 'ತೊಟ್ಟ ಬಾಣವನ್ನು ತೊಡಬೇಡ' ಎಂದು ಭಾಷೆ ತೆಗೆದುಕೊಂಡರೆ, ಈ 'ಕಲಿಭಾರತ'ದಲ್ಲಿ ಪೃಥೆ ಹೀಗೆ ಸ್ಪರ್ಧೆಯಿಂದ ಹಿಂದೆ ಸರಿಯುವಂತೆ ಶ್ರಮಜೀವಿಯಿಂದ ಭಾಷೆ ತೆಗೆದುಕೊಳ್ಳುತ್ತಾಳೆ. ಬರೋಬ್ಬರಿ ಒಂದು ತಿಂಗಳವರೆಗೆ ತನಗೆ ಅನ್ನ ನೀಡಿದಾಕೆ ಎಂಬ ದಾಕ್ಷಿಣ್ಯಕ್ಕೆ ಬಗ್ಗುವ ಶ್ರಮಜೀವಿ, ತನ್ನ ಸಂಕಲ್ಪದಿಂದ ಮತ್ತು 'ಅಜ'ರ ಆಸೆಯ ಈಡೇರಿಕೆ ಹೆಜ್ಜೆಯಿಂದ ಹಿಂದೆ ಸರಿಯುತ್ತಾನೆ. ನಂತರ ಅಲ್ಲಿಗೆ ಬರುವ ಸಾಕುತಾಯಿಯು ಪೃಥೆಯನ್ನು ಕಂಡು ಕೋಪಗೊಂಡು ಮೀನಿನ ಗಾಳದಿಂದ ಅವಳಿಗೆ ಅಪ್ಪಳಿಸಲು ಹೋಗುತ್ತಾಳೆ. ಅದನ್ನು ತಪ್ಪಿಸಿದ ಶ್ರಮಜೀವಿ ಸಾಕುತಾಯಿಯ ಕೋಪಕ್ಕೆ ಕಾರಣವನ್ನು ಕೇಳಿದಾಗ, ಆಕೆ ಅವನ ಪೂರ್ವವೃತ್ತಾಂತವನ್ನು ತಿಳಿಸುತ್ತಾಳೆ. ಅದರ ಪ್ರಕಾರ, ಮದುವೆಗೆ ಮುಂಚೆಯೇ ಗರ್ಭಧರಿಸಿ ಮಗುವನ್ನು ಹೆತ್ತು ಉದ್ಯಾನದಲ್ಲಿ ಮಲಗಿಸಿ ಹೋದಾಕೆಯೇ ಪೃಥೆ ಮತ್ತು ಆ ಮಗುವೇ ತಾನು ಎಂಬುದು ಶ್ರಮಜೀವಿಗೆ ಗೊತ್ತಾಗುತ್ತದೆ. ಮಹಾಭಾರತದಲ್ಲಿ ಕುಂತಿಯೂ ಮದುವೆಗೆ ಮುಂಚೆಯೇ ಗರ್ಭ ಧರಿಸಿ ಲೋಕಾಪವಾದಕ್ಕೆ ಬೆದರಿ ನವಜಾತ ಶಿಶುವನ್ನು ಬುಟ್ಟಿಯಲ್ಲಿಟ್ಟು ನದಿಯಲ್ಲಿ ತೇಲಿಬಿಡುತ್ತಾಳೆ, ಅದು ಬೆಸ್ತ ದಂಪತಿಗೆ ಸಿಕ್ಕಿ ಆ ಮಗುವನ್ನು ಸಾಕತೊಡಗುತ್ತಾರೆ. ಶ್ರಮಜೀವಿಯ ಈ ವೃತ್ತಾಂತದಲ್ಲೂ, ಉದ್ಯಾನದಲ್ಲಿ ಮಲಗಿದ್ದ ಶಿಶುವನ್ನು ಮೀನುಗಾರಿಕೆ ಕಸುಬಿನ ಸಾಕುತಾಯಿ ಎತ್ತಿಕೊಂಡು ಬಂದು ಸಾಕುತ್ತಾಳೆ. ಇವಳನ್ನೂ ಕಳೆದುಕೊಂಡ ಶ್ರಮಜೀವಿ ಆತ್ಮಹತ್ಯೆ ಮಾಡಿಕೊಳ್ಳುವ ಯತ್ನದಲ್ಲಿದ್ದಾಗ ಆ ದುಡುಕಿನಿಂದ ಅವನನ್ನು ರಕ್ಷಿಸುವ ಪರಮಾಪ್ತ 'ಚೌರದ ಚಂದ್ರಣ್ಣ' ನಡೆಸುತ್ತಿದ್ದ ಅಂಗಡಿಯ ಹೆಸರು 'ಕೌರವೇಶ್ವರ ಕ್ಷೌರಕೇಂದ್ರ'. 'ಕೌರವೇಶ್ವರ' ಎಂಬುದು ದುರ್ಯೋಧನನ ಮತ್ತೊಂದು ಹೆಸರು. ಅಂದು 'ಮಹಾಭಾರತ'ದಲ್ಲಿ ಕಂಗಾಲಾಗಿದ್ದ ಕರ್ಣನಿಗೆ ಹೆಗಲು ಕೊಟ್ಟಿದ್ದು ಆ 'ಕೌರವೇಶ್ವರ'ನಾದರೆ, 'ಕಲಿಭಾರತ'ದಲ್ಲಿ ಶ್ರಮಜೀವಿಗೆ ಹೆಗಲಾಗಿದ್ದು 'ಕೌರವೇಶ್ವರ' ನಾಮಾಂಕಿತ ಅಂಗಡಿಯ ಚೌರದ ಚಂದ್ರಣ್ಣ! ಅಲ್ಲಿ ದುರ್ಯೋಧನ-ಕರ್ಣರ ಸ್ನೇಹ 'ಹೈಲೈಟ್' ಆದರೆ, ಇಲ್ಲಿ ಶ್ರಮಜೀವಿ-ಚಂದ್ರಣ್ಣರ ನಂಟು ಕಳೆಗಟ್ಟಿದೆ. ನಂತರ ನಗರಿಗೆ ಬಂದು ಮಾಲೀಶ್ ಅಂಗಡಿಯನ್ನು ತೆರೆಯುವ ಶ್ರಮಜೀವಿ ಅದಕ್ಕೆ ಇಟ್ಟ ಹೆಸರು 'ಅಂಗರಾಜ ಮರ್ದನ ಕೇಂದ್ರ' ಅಂತ. ಅಂಗಮರ್ದನದ ಕಸುಬಿನ ಕಾರಣದಿಂದಾಗಿ ಆತ 'ಅಂಗರಾಜ' ಎಂಬ ಹೆಸರು ಇಟ್ಟಿರಬಹುದಾದರೂ, ರಾಜಮನೆತನದ ಇತಿಹಾಸವಿಲ್ಲ ಎಂಬ ಕಾರಣಕ್ಕೆ ಮಹಾಭಾರತದಲ್ಲಿ ಕರ್ಣನು ಹೀಯಾಳಿಕೆಗೆ, ಅವಮಾನಕ್ಕೆ ಒಳಗಾದಾಗ ದುರ್ಯೋಧನ ತಕ್ಷಣವೇ ಆತನನ್ನು 'ಅಂಗ'ರಾಜ್ಯದ ಅಧಿಪತಿಯನ್ನಾಗಿಸುತ್ತಾನೆ. ಅಗ ಕರ್ಣ 'ಅಂಗರಾಜ' ಎಂದೇ ಕರೆಸಿಕೊಳ್ಳುತ್ತಾನೆ. ಈ 'ಕಲಿಭಾರತ'ದಲ್ಲಿ ನೋಡಿದರೆ, ಶ್ರಮಜೀವಿ ತನ್ನ ಮಳಿಗೆಗೆ 'ಅಂಗರಾಜ'ನ ಹೆಸರನ್ನೇ ಇರಿಸಿಕೊಂಡಿದ್ದಾನೆ. ಇದೆಂಥಾ ಕಾಕತಾಳೀಯ...?'' ಎಂದು ಹೇಳಿ ಅರೆಕ್ಷಣ ನಿಲ್ಲಿಸಿದ.

ಭಾಗ-6

ಆಗ ಸಂಪಾದಕರು, ''ಅಯ್ಯಾ, ನಿಮ್ಮ ಪಾದಕ್ಕೆ ನಮಸ್ಕಾರ, ನಿಲ್ಲಿಸಬೇಡಿ ಮುಂದುವರಿಸಿ'' ಎಂದರು.

ಆಗ ಕಥೆಗಾರ, ''ಸರ್, ಈ 'ಇತಿಹಾಸ ಸೂಕ್ಷ್ಮ'ವನ್ನೇ ನಾನು ನಿಮ್ಮ ಗಮನಕ್ಕೆ ತರಲು ಹೊರಟಿದ್ದು. ಮಹಾಭಾರತ ನಡೆದಿದ್ದು ದ್ವಾಪರ ಯುಗದಲ್ಲಿ. ಆದರೆ ಆ ಕಾಲಘಟ್ಟದ ಕಥಾನಕವು ಕಲಿಯುಗದಲ್ಲೂ ನಡೆಯಿತು ಎಂದರೆ ಅದನ್ನು 'ಇತಿಹಾಸದ ಪುನರಾರ್ತನೆ' ಎಂದುಕೊಳ್ಳಬೇಕೋ? 'ಯುಗ ಬದಲಾದರೂ ಯುಗಧರ್ಮ ಬದಲಾಗಲಿಲ್ಲ' ಎಂದುಕೊಳ್ಳಬೇಕೋ? ಅಥವಾ 'ಇದು ಎಲ್ಲ ಯುಗದಲ್ಲೂ, ಎಲ್ಲ ಸಮಾಜಗಳಲ್ಲೂ ನಡೆಯಬಹುದಾದ ಕಥೆ. ಯುಗಗಳು ಬದಲಾದರೂ ಮನುಷ್ಯನ ಸ್ವಾರ್ಥ, ದುರಾಸೆ, ಅವಕಾಶವಾದಿತನ ಬದಲಾಗುವುದಿಲ್ಲ' ಎಂಬ ಗ್ರಹಿಕೆಯಲ್ಲೇ ವ್ಯಾಸಮುನಿಗಳು ತಮ್ಮ ತಪೋಬಲದಿಂದ ಮುನ್ನಂದಾಜಿಸಿ ಹೆಣೆದ ಕಥೆ ಎಂದುಕೊಳ್ಳಬೇಕೋ? ಎಂಬುದು ಗೊತ್ತಾಗುತ್ತಿಲ್ಲ. ಜತೆಗೆ, ಶ್ರಮಜೀವಿಯ ಈ ವೃತ್ತಾಂತವನ್ನು ನಿಮ್ಮ ಪತ್ರಿಕೆಯ ಯುಗಾದಿ ವಿಶೇಷಾಂಕಕ್ಕೆ ಬರೆದುಕೊಡುವುದೋ ಬಿಡುವುದೋ ಎಂಬ ಜಿಜ್ಞಾಸೆಯೂ ನನ್ನನ್ನು ಕಾಡುತ್ತಿದೆ'' ಎಂದು ಅಳಲು ತೋಡಿಕೊಂಡ.

ಆಗ ಸಂಪಾದಕರು, ''ಅರೆ ಇಸ್ಕಿ! ಕಥೆ ಚೆನ್ನಾಗೇ ಇದೆಯಲ್ರೀ? ಬರೆದುಕೊಡಲು ಏನು ಧಾಡಿ?'' ಎಂದು ಹುಸಿಮುನಿಸು ತೋರಿದರು.

ಅದಕ್ಕೆ ಕಥೆಗಾರ, ''ಸರ್, ಇದನ್ನು ಬರೆದುಕೊಟ್ಟರೆ ಓದುಗರು, 'ಹೋ, ಮಹಾಭಾರತದ ಕಥೆಯನ್ನೇ ಒಂದಿಷ್ಟು ತಿರುವಿ ಒಗ್ಗರಣೆ ಹಾಕಿಬಿಟ್ಟಿದ್ದಾರೆ' ಎಂದು ಕಾಲೆಳೆಯಬಹುದು. ನಾನು ಅತೀವವಾಗಿ ಗೌರವಿಸುವ ಕನ್ನಡದ ಖ್ಯಾತ ಸಾಹಿತಿ ಎಸ್.ಎಲ್. ಭೈರಪ್ಪನವರು ತಮ್ಮ 'ಪರ್ವ' ಕಾದಂಬರಿಯಲ್ಲಿ ಮಹಾಭಾರತದ ಕಥನವನ್ನೇ ವಿಶಿಷ್ಟವಾಗಿ ಮರುವ್ಯಾಖ್ಯಾನಿಸಿ ಹೆಸರಾಗಿದ್ದರೆ, ಗಿರೀಶ್ ಕಾರ್ನಾಡರೂ ತಮ್ಮ 'ಯಯಾತಿ' ನಾಟಕದಲ್ಲಿ ಇಂಥದೇ ಹೆಜ್ಜೆಯಿಟ್ಟಿದ್ದಾರೆ. ಆದರೆ, ಅವರೆಲ್ಲಾ ಸಾಹಿತ್ಯಲೋಕದ ಧ್ರುವತಾರೆಗಳು, ಬರೆದು ದಕ್ಕಿಸಿಕೊಂಡಿದ್ದಾರೆ ಸರ್. ನಾನಿನ್ನೂ ಎಳಸು, ಹಾಗಾಗಿ ಕೊಂಚ ಹಿಂಜರಿಕೆ'' ಎಂದ.

ಆಗ ಸಂಪಾದಕರು ಸಮಾಧಾನಿಸುವ ದನಿಯಲ್ಲಿ, ''ಎಲ್ಲ ರೀತಿಯ ಪಯಣ ಶುರುವಾಗೋದೂ ಪುಟ್ಟ ಹೆಜ್ಜೆಯಿಂದಲೇ ಕಥೆಗಾರರೇ. ನೀವು ಧೈರ್ಯವಾಗಿ ಬರೆದುಕೊಡಿ'' ಎಂದು ಹುರಿದುಂಬಿಸಿ, ''ಅಂದ್ಹಾಗೆ, ಕಥೆಯನ್ನೇನೋ ಸೊಗಸಾಗಿ ಹೇಳಿಬಿಟ್ರಿ, ಆದರೆ ಕಥೆಯುದ್ದಕ್ಕೂ 'ಶ್ರಮಜೀವಿ, ಶ್ರಮಜೀವಿ' ಅಂತಲೇ ಹೇಳ್ತಾ ಬಂದುಬಿಟ್ರಲ್ಲಪ್ಪಾ? ಆತನ ಹೆಸರೇನಪ್ಪಾ?'' ಎಂದು ತಿವಿದರು.

''ಅರೆ! ಹೌದಲ್ಲಾ..?'' ಎಂದು ಗೊಣಗಿಕೊಂಡ ಕಥೆಗಾರ, ''ಒಂದು ನಿಮಿಷ ಸರ್'' ಎಂದು ಹೇಳಿ ಕರೆಯನ್ನು ತುಂಡರಿಸಿದ. ಮಾಲೀಶಿನ ನಂತರ ಶ್ರಮಜೀವಿಯು ಕಾಗದದಲ್ಲಿ ತನ್ನ ಮೊಬೈಲ್ ನಂಬರ್ ಬರೆದುಕೊಟ್ಟಿದ್ದು ನೆನಪಾಗಿ, ಅದನ್ನೆತ್ತಿಕೊಂಡು ಶ್ರಮಜೀವಿಗೆ ಕರೆಮಾಡಿದ ಕಥೆಗಾರ, ''ಅಯ್ಯಾ, ನಿಮ್ಮ ವೃತ್ತಾಂತವನ್ನೆಲ್ಲಾ ಕೇಳಿದೆ, ಸೊಗಸಾದ ಮಾಲೀಶನ್ನೂ ಮಾಡಿಸಿಕೊಂಡೆ. ಆದರೆ ನಿಮ್ಮ ಹೆಸರನ್ನೇ ಕೇಳೋದು ಮರೆತುಬಿಟ್ಟೆ ನೋಡಿ. ಎಂಥಾ ಮುಠ್ಠಾಳ ನಾನು. ಅಂದಹಾಗೆ ನಿಮ್ಮ ಹೆಸರೇನು?'' ಎಂದು ಕೇಳಿದ.

''ಕರ್ಣ ಅಂತ ಸರ್... ಕರ್ಣ, ಕರ್ಣ...'' ಎಂದು ಆ ಕಡೆಯಿಂದ ಉತ್ತರ ಬಂತು!

ಕಥೆಗಾರ ಈಗ ನಿಜಕ್ಕೂ ನಿಬ್ಬೆರಗಾಗಿದ್ದ. ಆ ಬೆರಗಿನ ಗುಂಗಲ್ಲೇ ಸಂಪಾದಕರಿಗೆ ಕರೆಮಾಡಿ, ''ಸರ್, ಆ ಶ್ರಮಜೀವಿಯ ಹೆಸರು ಕರ್ಣ ಅಂತೆ..!'' ಎಂದ.

''ಓಹ್, 'ಇತಿಹಾಸ ಪುನರಾವರ್ತನೆಗೊಳ್ಳುತ್ತೆ' ಅನ್ನೋ ಮಾತು ನಿಜ ಕಣ್ರೀ..'' ಎಂದು ಸಂಪಾದಕರೂ ಪ್ರತಿಕ್ರಿಯಿಸಿದರು ಅಪ್ರತಿಭರಾಗಿ.

ಅಲ್ಲಿಗೆ, 'ಕರ್ಮಯೋಗಿಯೊಂದಿಗೆ ಕಥೆಗಾರನ ಕಥಾ ಕಾಲಕ್ಷೇಪ' ಮುಗಿಯಿತು. ಅಂದಹಾಗೆ, ಇಷ್ಟನ್ನೂ ನಿಮ್ಮೊಂದಿಗೆ ಹಂಚಿಕೊಂಡ ಕಥೆಗಾರನ ಹೆಸರೇನು ಗೊತ್ತೇ- 'ವ್ಯಾಸರಾಯ'!

'ಇತಿಹಾಸ ಪುನರಾವರ್ತನೆಗೊಳ್ಳುತ್ತದೆ' ಅನ್ನೋದು ತಮಾಷೆಗಲ್ಲ...!

(ಮುಗಿಯಿತು)

• • •

ನಲ್ಮೆಯ ಓದುಗರೇ,

ಆರು ಕಂತುಗಳಲ್ಲಿ ಮೂಡಿಬಂದ ಈ ಕಥನವನ್ನು, ನನ್ನ ಮತ್ತು ಸಮಸ್ತ ಕನ್ನಡಿಗರ ಅಚ್ಚುಮೆಚ್ಚಿನ ಕಾದಂಬರಿಕಾರ ಶ್ರೀಯುತ ಎಸ್.ಎಲ್.ಭೈರಪ್ಪನವರಿಗೆ ಸಮರ್ಪಿಸಲು ಬಯಸುತ್ತೇನೆ. ಇದು ಅವರಿಗೆ ನಾನು ನನ್ನ ಮಿತಿಯಲ್ಲಿ ಸಲ್ಲಿಸುವ 'ಅಳಿಲು-ನಮನ'....

ಡಿಆರ್‌ಎಸ್ ಅಂದ್ರೆ ಡ್ರೋನ್ ರಿವ್ಯೂ ಸಿಸ್ಟಮ್

ನೆಟ್ ಪಿಕ್ಸ್

ತುಂಟರಗಾಳಿ
ಹರಿ ಪರಾಕ್
vveditoped@gmail.com

ಒಂದು ಮಧ್ಯಾಹ್ನ ಕ್ಯೂಟ್ ನಾಯಿಮರಿಯೊಂದು ಅಷ್ಟೇ ಕ್ಯೂಟ್ ಆಗಿರೋ ಹೇಮಾ ಮನೆಗೆ ಬಂತು. ಬಾಗಿಲ ಹತ್ರನೇ ನಿಂತ್ಕಂಡಿದ್ದ ನಾಯಿಮರಿಯ ತಲೆ ಸವರಿದಳು ಹೇಮಾ, ನಾಯಿ ಮೆಲ್ಲನೆ ಮನೆಯೊಳಗೆ ಬಂತು. ಆ ಕಡೆ, ಈ ಕಡೆ ನೋಡಿ ಒಂದು ಮೂಲೆಯಲ್ಲಿ ಮಲಗಿಬಿಟ್ಟಿತು. ಒಂದೆರಡು ಗಂಟೆಗಳಾದ ಮೇಲೆ ಎದ್ದು ನಿಂತ ನಾಯಿಯನ್ನು ನೋಡಿ ಹೇಮಾ ಬಾಗಿಲು ತೆರೆದಳು. ಅವಳನ್ನೇ ಹಿಂಬಾಲಿಸಿದ ನಾಯಿ ಬಾಗಿಲು ತೆರೆದ ಕೂಡಲೇ ಹೊರಟುಹೋಯಿತು. ಮರುದಿನ ಅದೇ ಸಮಯಕ್ಕೆ ಬಾಗಿಲ ಬಳಿ ಸದ್ದಾಯಿತು. ಬಾಗಿಲು ತೆರೆದರೆ ಅದೇ ನಾಯಿ. ಹೇಮಾಳನ್ನು ನೋಡುತ್ತಿದ್ದಂತೆ ಅವಳ ಹಿಂದಿನಿಂದ ನುಸುಳಿ ಒಳಗೆ ಹೋಗಿ ಮತ್ತೆ ಅದೇ ಮೂಲೆಯಲ್ಲಿ ನೆಮ್ಮದಿಯಾಗಿ ಮಲಗಿತು. ಒಂದೆರಡು ಗಂಟೆಗಳ ನಂತರ ಎದ್ದುಹೋಯಿತು. ಇದು ಪ್ರತಿದಿನ ಕಂಟಿನ್ಯೂ ಆಗತೊಡಗಿತು. ಹೇಮಾಗೆ ಆಶ್ಚರ್ಯ, ಯಾರ ನಾಯಿ ಇದು, ಇಲ್ಲೇಕೆ ಬರುತ್ತೆ, ಇಲ್ಲೇಕೆ ಮಲಗುತ್ತೆ ಅಂತ. ಒಮ್ಮೆ ನಾಯಿ ಹೋಗುವಾಗ ''ನಾಯಿ ಮಾಲೀಕರ ಗಮನಕ್ಕೆ. ಈ ನಾಯಿ ಯಾರದೋ ಗೊತ್ತಿಲ್ಲ, ಪ್ರತಿದಿನ ಮಧ್ಯಾಹ್ನ ನಮ್ಮ ಮನೆಗೆ ಬಂದು ನಿದ್ದೆ ಮಾಡಿ ಎದ್ದು ಹೋಗುತ್ತದೆ. ನನಗೆ ಏನೂ ಅರ್ಥವಾಗುತ್ತಿಲ್ಲ'' ಎಂದು ಒಂದು ಚೀಟಿಯಲ್ಲಿ ಬರೆದು ನಾಯಿಯ ಕುತ್ತಿಗೆಯ ಪಟ್ಟಿಗೆ ಸಿಕ್ಕಿಸಿ ಕಳಿಸಿದಳು. ಸರಿ, ಮರುದಿನ ನಾಯಿ ಮತ್ತೆ ಬಂತು. ಎಂದಿನಂತೆ ಬಾಗಿಲು ತೆರೆದ ಕೂಡಲೇ ತನ್ನ ಮಲಗುವ ಜಾಗ ಹುಡುಕಿಕೊಂಡು ಹೊರಟ ನಾಯಿಯ ಕುತ್ತಿಗೆಯಲ್ಲಿ ಇನ್ನೊಂದು ಚೀಟಿ ಇತ್ತು. ಅದರಲ್ಲಿ ಬರೆದಿತ್ತು ''ಇದು ನಮ್ಮನೆ ನಾಯಿ, ವಟವಟ ಮಾತನಾಡುವ ನನ್ನ ಹೆಂಡತಿಯ ಕಾಟ ತಡೆಯಲಾಗದೆ ಮಧ್ಯಾಹ್ನದ ನಿದ್ದೆಗಾಗಿ ಅದು ನಿಮ್ ಮನೆಗೆ ಬರ್ತಾ ಇದೆ. ಅಂದ ಹಾಗೆ, ಇಫ್ ಯೂ ಡೋಂಟ್ ಮೈಂಡ್, ನಾಳೆಯಿಂದ ನಾಯಿ ಜತೆ ನಾನೂ ಬರ್ಲಾ?''

ಲೂಸ್ ಟಾಕ್

ಐಪಿಎಲ್ ಅಭಿಮಾನಿ

- **ಎನ್ರೀ ಐಪಿಎಲ್ ಅರ್ಧದಲ್ಲೇ ನಿಂತುಹೋಯ್ತಲ್ಲ?**
- ಹಂಗೇನಿಲ್ಲ, ಸ್ಟ್ರಾಟೆಜಿಕ್ ಟೈಮ್ ಔಟ್ ಕೊಟ್ಟಿದ್ದಾರೆ ಅಷ್ಟೇ. ಆದ್ರೆ ಈ ಸಲ ಎರಡೂವರೆ ನಿಮಿಷ ಅಲ್ಲ, ಮಿನಿಮಮ್ 1 ವಾರ.
- **ರೀ, ಪಾಕಿಸ್ತಾನದ ಮೇಲೆ ಇಂಡಿಯಾ ಯುದ್ಧದ ರೀತಿ ಅಟ್ಯಾಕ್ ಮಾಡಿದೆ. ಅದಕ್ಕೆ ಐಪಿಎಲ್ ನಿಲ್ಲಿಸಿರೋದು..**
- ಹಂಗಾದ್ರೆ ಇದನ್ನ ಕದನವಿರಾಮ ಅಂದ್ಕೊಳ್ಳೋಣ ಬಿಡಿ.
- **ಸರಿ, ಪಾಕಿಸ್ತಾನದ ಮೇಲೆ ಇಂಡಿಯಾ ಅಟ್ಯಾಕ್ ಮಾಡಿದ್ದು ಸರೀನಾ?**
- ಸರೀನೇ ಕಣ್ರೀ. ನಾವು ಪಾಕಿಸ್ತಾನದ ಮೇಲೆ ಆಟ ಆಡಲ್ಲ ಅಂತ ಅಷ್ಟೇ ಹೇಳಿದ್ದು. ಅವರು ನಮ್ಮತ್ರನೇ ಆಟ ಆಡೋಕ್ ಬಂದ್ರೆ ಅಟ್ಯಾಕ್ ಮಾಡಲ್ಲ ಅಂತೇನೂ ಹೇಳಿಲ್ಲ.
- **ಅದ್ಸರಿ, ಪಾಕಿಸ್ತಾನ ಇಂಡಿಯಾದ ಮಿಲಿಟರಿ ಮೇಲೆ ಅಟ್ಯಾಕ್ ಮಾಡೋದು ಬಿಟ್ಟು ನಾಗರಿಕರ ಮೇಲೆ ಡ್ರೋನ್ ಅಟ್ಯಾಕ್ ಮಾಡ್ತಾ ಇದೆ. ಇದರ ಬಗ್ಗೆ ನಿಮ್ಮ ಅಭಿಪ್ರಾಯ?**
- ಈ ನಿರ್ಧಾರ ಸರಿ ಇಲ್ಲ. ಇಂಡಿಯಾದವರು ಡಿಆರ್‌ಎಸ್ ತಗೋಬೇಕು. ಡ್ರೋನ್ ರಿವ್ಯೂ ಸಿಸ್ಟಮ್
- **ಸರಿ ಹೋಯ್ತು. ಹೋಗ್ಲಿ ನಿಮ್ಮ ಪ್ರಕಾರ ಯುದ್ಧ ಬೇಕಾ ಬೇಡ್ವಾ?**
- ಮಾಡ್ಕೊಳ್ಳಿ ಬಿಡ್ರೀ. ಐ ಮೀನ್ ಮಾಡ್ಲೇಬೇಕು. ನಾನೇನೂ ಹೋಗಿ ಬಾರ್ಡರ್‌ನಲ್ಲಿ ನಿಂತ್ಕೊಳ್ಳೋದ್ ಬೇಕಿಲ್ಲವಲ್ಲ. ಮಾಡೋರ್ ಮಾಡ್ತಾರೆ. ನಂಗೇನಾಗ್ಬೇಕಾಗಿದೆ.

(ಕಾಲ್ಪನಿಕ ಸಂದರ್ಶನ)

ಲೈನ್‌ಮ್ಯಾನ್

- **ಸೆನ್ಸಾರ್‌ನವರು ಸಿನಿಮಾಗಳಲ್ಲಿ ಯಾವ ರೀತಿಯ ಹೊಸ ಹೊಸ ಎಚ್ಚರಿಕೆಗಳನ್ನು ಹಾಕಬೇಕು ಅಂತ ರೂಲ್ಸ್ ಮಾಡಬಹುದು?**
- **ಹೆಲ್ಮೆಟ್ ಇಲ್ಲದೆ ಗಾಡಿ ಓಡಿಸುವಾಗ, ಡ್ರಿಂಕ್ ಅಂಡ್ ಡ್ರೈವ್ ಮಾಡುವಾಗ**
- ಪೊಲೀಸರು ದಂಡ ಹಾಕುತ್ತಾರೆ.
- **ಸಾರ್ವಜನಿಕ ಪ್ರದೇಶದಲ್ಲಿ ಧೂಮಪಾನ ಮಾಡುವಾಗ**
- ಪೊಲೀಸರು ದಂಡ ಹಾಕುತ್ತಾರೆ.
- **ಹೆಣ್ಣುಮಗುವನ್ನು ಕೊಲ್ಲುವಾಗ**
- ಭ್ರೂಣಹತ್ಯೆ ಅಪರಾಧ
- **ಮದುವೆ ಸಮಯದಲ್ಲಿ**
- ವರದಕ್ಷಿಣೆ ತೆಗೆದುಕೊಳ್ಳುವುದು ಅಪರಾಧ
- ಮದುವೆ ಆದರೆ ಡಿವೋರ್ಸ್ ಆಗುವ ಸಂಭವವಿರುತ್ತದೆ
- **ಬೆಡ್‌ರೂಮ್ ಸೀನ್‌ನಲ್ಲಿ**
- ಅಸುರಕ್ಷಿತ ಲೈಂಗಿಕ ಸಂಬಂಧದಿಂದ ಮಕ್ಕಳಾಗುತ್ತವೆ. ಏಯ್ಡ್ಸ್ ಬರುತ್ತದೆ.
- **ಫೈಟಿಂಗ್ ಸೀನ್‌ಗಳಲ್ಲಿ**
- ಮನುಷ್ಯರನ್ನೂ ಗ್ರಾಫಿಕ್ಸ್ ಮಾಡಬೇಕು. ಪ್ರಾಣಿಹಿಂಸೆ ಅಷ್ಟೇ ಅಲ್ಲ ಮನುಷ್ಯರನ್ನೂ ಹಿಂಸೆ ಮಾಡುವಂತಿಲ್ಲ
- **ನಾಯಿ ಜತೆ ಆಟವಾಡುವ ನಾಯಕಿಯರಿಗೆ**
- ನಾಯಿ ಕಚ್ಚಿದರೆ ರೇಬಿಸ್ ಬರುವ ಸಂಭವವಿರುತ್ತದೆ
- **ಸಿಟ್ಟಿನಿಂದ ತಟ್ಟೆಯಲ್ಲಿ ಕೈ ತೊಳೆದಾಗ**
- **ಊಟ ಮಾಡದಿದ್ದರೆ ಗ್ಯಾಸ್ಟ್ರಿಕ್** ಸಂಭವಿಸುತ್ತದೆ.
- **ಹೆಂಡತಿಗೆ ಹೊಡೆಯುವಾಗ, ಸಿಗರೇಟಿನಿಂದ ಸುಡುವಾಗ**
- ಇದಕ್ಕೆಲ್ಲಾ ಏನೂ ಆಗಲ್ಲ, ಸಿನಿಮಾ ಸ್ಟಾರ್‌ಗಳೇ ಮಾಡ್ತಾರಂತೆ, ಮಾಡ್ಕಳಿ, ಮಾಡ್ಕಳಿ...!

ಹೀಗೆಲ್ಲಾ ಮೆಸೇಜ್‌ಗಳನ್ನು ತೋರಿಸಿದರೆ ಅಟ್‌ಲೀಸ್ಟ್ 'ನಿಮ್ ಸಿನಿಮಾದಲ್ಲಿ ಯಾವ ಮೆಸೇಜ್ ಇದೆ' ಅಂತ ಕೇಳುವವರಿಗೆ ಸಿನಿಮಾದವರು 'ನೋಡಿ ಎಷ್ಟೊಂದ್ ಮೆಸೇಜ್ ಗಳಿವೆ' ಅಂತ ಎದೆತಟ್ಟಿಕೊಂಡು ಉತ್ತರಿಸಬಹುದು.

ಅಚ್ಚುಕಟ್ಟು ಪ್ರದೇಶ
RNI no: 3918/59
VISHVAVANI, Printed & Published by : VISHWESHWAR BHAT, On behalf of Vishwakshara Media Private Ltd., #483/1A/2A/3 Shri Ram plaza, 3rd floor, opp to Jain college, behind Kotak Mahindra Bank, Club Road, Hubli. Printed at M/s Elegant Offset Printers Pvt. Ltd. Plot No.33/1 & 15/1(part)M.T.Sagar Industrial Estate, Gokul Road, Hubballi-580030.
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:68, Issue: 6

ಸಮಾಚಾರ ಸಣ್ಣದಲ್ಲ

ಉಚಿತ ವೃತ್ತಿಪರ ತರಬೇತಿ ಆರಂಭ

ಗದಗ: ಎಸ್.ಬಿ. ಆಯ್ ಆರ್‌ಸೆಟಿ ಹುಲಕೋಟಿ ಗದಗ ಗಿಟ್‌ಸರ್ಡ್ ಗ್ರಾಮೀಣ ಸ್ವಯಂ ಉದ್ಯೋಗ ತರಬೇತಿ ಸಂಸ್ಥೆ ಹುಲಕೋಟಿ ಗದಗ ಮತ್ತು ಅಗ್ರಿಕಲ್ಚರಲ್ ಸೈನ್ಸ್ ಫೌಂಡೇಶನ್ ಹುಲಕೋಟಿ, ಇವುಗಳ ಸಂಯುಕ್ತ ಆಶ್ರಯದಲ್ಲಿ ಉಚಿತ ಊಟ-ವಸತಿಯೊದಿಗೆ ಕಂಪ್ಯೂಟರ್, ಡಿ.ಟಿ.ಪಿ, ಮಹಿಳೆಯರ ಹೋಲಿಗೆ ತರಬೇತಿ, ಮಹಿಳೆಯರ ಬ್ಯೂಟಿ ಪಾರ್ಲರ್. ಈ ಉಚಿತ ತರಬೇತಿಗಳನ್ನು ಜೂನ್ ತಿಂಗಳು 2025ರಲ್ಲಿ ಆರಂಭಿಸಲಾಗುವುದು, ಆದ್ದರಿಂದ ಆಸಕ್ತರು, ನಿರುದ್ಯೋಗಿಗಳು, ಯುವಕ ಯುವತಿಯರು, ಪುರುಷರು, ಮಹಿಳೆಯರು, ಸ್ವಸಹಾಯ ಗುಂಪಿನವರು ಮತ್ತು ಯಾವುದೇ ಸಾಮಾನ್ಯ ಜನರು 19 ರಿಂದ 44 ವಯಸ್ಸಿನೊಳಗಿನ ಗ್ರಾಮೀಣ ಭಾಗದವರಿಗೆ ಅರ್ಜಿ ಆಹ್ವಾನಿಸಿದೆ. ಈ ತರಬೇತಿಗಳು ಊಟ, ವಸತಿಯೊಂದಿಗೆ ಉಚಿತವಾಗಿರುತ್ತದೆ, ಕೇಂದ್ರ ಸರಕಾರದಿಂದ ತರಬೇತಿಯ ಪ್ರಮಾಣ ಪತ್ರ ಕೊಡಲಾಗುವುದು, ತರಬೇತಿ ಪಡೆದವರಿಗೆ ಬ್ಯಾಂಕ್ ಸಾಲ ಮಾಡಿಸಿಕೊಡಲಾಗುವುದು.ಆಸಕ್ತರು ಎಸ್.ಬಿ. ಆಯ್ ಆರ್‌ಸೆಟಿ ಹುಲಕೋಟಿ ಗದಗ ಸಂಸ್ಥೆಯಲ್ಲಿ ದೊರೆಯುವ ಅರ್ಜಿ ಫಾರಂನಲ್ಲಿ ತುಂಬಿ ನಿರ್ದೇಶಕ ಎಸ್.ಬಿ. ಆಯ್ ಆರ್ ಸೆಟಿ ಹುಲಕೋಟಿ ಗದಗ ಆರ್‌ಸೆಟಿ ಸಂಸ್ಥೆ ಹುಲಕೋಟಿ ಗದಗ, ಕೃಷಿ ವಿಜ್ಞಾನ ಕೇಂದ್ರ ಆವರಣ, ಹುಲಕೋಟಿ ಗದಗ. ಇವರಿಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅತ್ತಿಮಬ್ಬೆ ಬೀಡಿಗೆ ಹೆಮ್ಮೆಯ ಗರಿ

ಗದಗ: ಜಿಲ್ಲೆಯ ಲಕ್ಕುಂಡಿಯಲ್ಲಿ ಮೇ 13ರಂದು ಮಂಗಳವಾರ ಬೆಳಗ್ಗೆ 10.00 ಗಂಟೆಗೆ ಬ್ರಹ್ಮ ಜಿನಾಲಯ ದೇವಸ್ಥಾನದ ಶಾಶ್ವತ ಚಿತ್ರಾತ್ಮಕ ಮುದ್ರೆ ಹಾಗೂ ಚಿತ್ರ ಅಂಚೆ ಪತ್ರವನ್ನು ಬಿಡುಗಡೆ ಕಾರ್ಯಕ್ರಮ ನಡೆಯಲಿದೆ. ಭಾರತ ಸರಕಾರ ಸಂಪರ್ಕ, ಮಾಹಿತಿ, ಸಂವಹನ ಸಚಿವಾಲಯ ಹಾಗೂ ಭಾರತೀಯ ಅಂಚೆ ಇಲಾಖೆ ಹಾಗೂ ಗದಗ ವಿಭಾಗೀಯ ಅಂಚೆ ಅಧೀಕ್ಷಕರ ಕಚೇರಿ ಇವುಗಳ ಆಶ್ರಯದಲ್ಲಿ ಕರ್ನಾಟಕದ ವೈವಿಧ್ಯಮಯ ಸಂಸ್ಕೃತಿ ಮತ್ತು ಪರಂಪರೆಯನ್ನು ಐತಿಹಾಸಿಕ ಕುರುಹುಗಳನ್ನು ಪ್ರಚಾರದೊಂದಿಗೆ ಪರಿಚಯಿಸಲಾಗುತ್ತಿದೆ. ಕರ್ನಾಟಕ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಕರ್ನಲ್ ಎಸ್ ರಾಜೇಂದ್ರಕುಮಾರ್, ಉತ್ತರ ಕರ್ನಾಟಕ ವಲಯದ ಪೋಸ್ಟ್ ಮಾಸ್ಟರ್ ಜನರಲ್ ಕರ್ನಲ್ ಸುಶೀಲ್ ಕುಮಾರ, ಗದಗ ವಿಭಾಗೀಯ ಅಂಚೆ ಅಧೀಕ್ಷಕರಾದ ಜಯದೇವ ಕಡಗಿ, ರಾಜ್ಯದ ವಿವಿಧ ಭಾಗದ ಅಂಚೆ ಚೀಟಿ ಸಂಗ್ರಹಾಕರು ಪಾಲ್ಗೊಳ್ಳಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಡಿಪ್ಲೋಮಾ ಕೋರ್ಸ್‌ಗೆ ಅರ್ಜಿ ಆಹ್ವಾನ

ಕಾರವಾರ: ಪ್ರಸುತ್ತ ಸಾಲಿನ ಶೈಕ್ಷಣಿಕ ಅವಧಿಗೆ ಕೈಮಗ್ಗ ಮತ್ತು ಜವಳಿ ತಂತ್ರಜ್ಞಾನದಲ್ಲಿ ಲ್ಯಾಟರಲ್ ಎಂಟ್ರಿ ಮುಖಾಂತರ ನೇರವಾಗಿ 2 ನೇ ಸಾಲಿನ ಡಿಪ್ಲೋಮಾ(ಡಿ.ಎಚ್.ಟಿ.ಟಿ) ಕೋರ್ಸ್ ಪ್ರವೇಶಕ್ಕಾಗಿ 10 ಪುರುಷ ಮತ್ತು ಮಹಿಳಾ ಅಭ್ಯರ್ಥಿಗಳನ್ನು ಆಯ್ಕೆ ಮಾಡಲು ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ. ವ್ಯಾಸಂಗದ ಸಮಯದಲ್ಲಿ ಮಾರ್ಗಸೂಚಿಯ ಪ್ರಕಾರ ಪ್ರತಿ ವಿದ್ಯಾರ್ಥಿಗೆ ಪ್ರತಿ ತಿಂಗಳು ರು.2,500 ರಂತೆ ಶಿಷ್ಯವೇತನ ನೀಡಲಾಗುವುದು ಹಾಗೂ ಆಯ್ಕೆಯಾದ ಅಭ್ಯರ್ಥಿಗಳಿಗೆ ಆಯಾಯ ಐ.ಐ.ಎಚ್‌ಟಿ ನಿಯಾಮಾನುಸಾರ ವಸತಿ ನಿಲಯದ ಸೌಲಭ್ಯವನ್ನು ಕಲ್ಪಿಸಲಾಗು ವುದು. 2025-26 ನೇ ಸಾಲಿನ ಲ್ಯಾಟರಲ್ ಎಂಟ್ರಿ ಮುಖಾಂತರ ನೇರವಾಗಿ 2 ನೇ ಸಾಲಿನ ಡಿಪ್ಲೋಮಾ ಕೋರ್ಸಗೆ ನೇರ ಪ್ರವೇಶಕ್ಕೆ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಸೇಲಂ(ತಮಿಳುನಾಡು) 3, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ಗದಗ-ಬೆಟಗೇರಿ 2, ಎಸ್.ಪಿ.ಕೆ.ಎಂ ಭಾರತೀಯ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ವೆಂಕಟಗಿರಿ 3, ಭಾರತೀಯ ಕೈಮಗ್ಗ ತಂತ್ರಜ್ಞಾನ ಸಮಸ್ಥೆ, ಕಣ್ಣೂರು(ಕೇರಳ) 2 ಅಭ್ಯರ್ಥಿಗಳು ಸೇರಿದಂತೆ ಒಟ್ಟು 10 ಅಭ್ಯರ್ಥಿಗಳು ಪ್ರವೇಶಕ್ಕೆ ಲಭ್ಯವಿದೆ. ಹೆಚ್ಚಿನ ವಿವರಗಳಿಗಾಗಿ ಮತ್ತು ಅರ್ಜಿ ಪಾರಂಗಳಿಗಾಗಿ ಪ್ರಾಶುಂಪಾಲರು, ಕರ್ನಾಟಕ ಕೈಮಗ್ಗ ತಂತ್ರಜ್ಞಾನ ಸಂಸ್ಥೆ, ನರಸಾಪೂರ, ಗದಗ-ಬೆಟಗೇರಿ ಮೊಬೈಲ್ ಸಂಖ್ಯೆ: 9449162822 ಅಥವಾ ಆಯಾ ಜಿಲ್ಲೆಯ ಜಂಟಿ/ಉಪ/ಸಹಾಯಕ ನಿರ್ದೇಶಕರು, ಕೈಮಗ್ಗ ಮತು ಜವಳಿ ಇಲಾಖೆ, ಇವರು ಸಂಪರ್ಕಿಸುವಂತೆ ಕೈಮಗ್ಗ ಮತು ಜವಳಿ ಇಲಾಖೆ ಜವಳಿ ಅಭಿವೃದ್ಧಿ ಆಯುಕ್ತು ಹಾಗೂ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ತಾತ್ಕಾಲಿಕ ಅತಿಥಿ ಶಿಕ್ಷಕರ ನೇಮಕ:ಅರ್ಜಿ

ಹಾವೇರಿ: ಜಿಲ್ಲೆಯಲ್ಲಿ ಅಲ್ಪಸಂಖ್ಯಾತರ ಕಲ್ಯಾಣ ಇಲಾಖಾ ವತಿಯಿಂದ ಕಾರ್ಯನಿರ್ವಹಿಸುತ್ತಿರುವ ಡಾ.ಎ.ಪಿ.ಜೆ ಅಬ್ದುಲ್ ಕಲಾಂ ವಸತಿ ಶಾಲೆ, ಮೊರಾರ್ಜಿ ದೇಸಾಯಿ ವಸತಿ ಶಾಲೆ, ಕಾಲೇಜುಗಳಲ್ಲಿ ಹಾಗೂ ಮೌಲಾನಾ ಆಜಾದ ಆಂಗ್ಲ ಮಾಧ್ಯಮ ಮಾದರಿ ಶಾಲೆ ಮತ್ತು ಕಾಲೇಜುಗಳಲ್ಲಿ 2025-26ನೇ ಸಾಲಿನಲ್ಲಿ ಬೋಧಿಸಲು ತಾತ್ಕಾಲಿಕ ಅತಿಥಿ ಶಿಕ್ಷಕರ ನೇಮಕಕ್ಕೆ ಆನ್‌ಲೈನ್ ಅರ್ಜಿ ಆಹ್ವಾನಿಸಲಾಗಿದೆ. ಆಸಕ್ತ ಹಾಗೂ ಅರ್ಹ ಅಭ್ಯರ್ಥಿಗಳು ಮೇ. 19, 2025ರೊಳಗಾಗಿ ವೆಬ್‌ಸೈಟ್‌ನಲ್ಲಿ ಸಲ್ಲಿಸಬಹುದಾಗಿದೆ.

{ ಡಿ.ಕೆ.ಶಿವಕುಮಾರ್ } ಉಪಮುಖ್ಯಮಂತ್ರಿ

ಬ್ಯಾಂಕ್‌ನಲ್ಲಿ ದುಡ್ಡಿದ್ದರೆ ಏನೂ ಪ್ರಯೋಜನ ಇಲ್ಲ. ದುಡ್ಡು- ಬ್ಲಡ್ ಎರಡೂ ಜಂಗಮ ಸ್ವರೂಪಿಯಾಗಿರಬೇಕು ಎಂದು ಶ್ರೀ ಸಾಯಿಬಾಬಾ ಹೇಳಿದ್ದರು. ಎರಡೂ ಒಂದೇ ಕಡೆ ಇದ್ದರೆ ಸಮಸ್ಯೆ ಹೆಚ್ಚು. ಹಣ ಹರಿದಾಡುತ್ತಿದ್ದರೆ ಒಳ್ಳೆಯದು. ದೇಹದಲ್ಲಿ ರಕ್ತ ಚೆನ್ನಾಗಿ ಹರಿದಾಡುತ್ತಿದ್ದರೆ ಆರೋಗ್ಯವಾಗಿರುತ್ತೇವೆ. ಇದೇ ಸಹಕಾರಿ ತತ್ವದ ಮೂಲ.



ಅನಾರೋಗ್ಯಕ್ಕೆ ತುತ್ತಾದ ಕೋತಿಗಳನ್ನು ಆಸ್ಪತ್ರೆಗೆ ದಾಖಲಿಸಿ ಚಿಕಿತ್ಸೆ

10 ದಿನಗಳಲ್ಲಿ 8 ಮಂಗಗಳ ಮರಣ

ಮಹಾಂತೇಶ ಕಂಬಳಿ, ಹುಬ್ಬಳ್ಳಿ

ಮಾನವೀಯತೆ ಎನ್ನುವುದು ಕೇವಲ ಮನುಷ್ಯರ ಮೇಲೆ ತೋರುವಂತಹದ್ದು ಅಲ್ಲಾ. ಬದಲಾಗಿ ಪ್ರಾಣಿಗಳ ಮೇಲೆಯೂ ಮಾನವೀಯತೆಯ ಅಂತಃಕರಣವನ್ನು ತೋರಿಸುವ ಜನರು ನಮ್ಮ ನಡುವೆ ಇದ್ದಾರೆ. ಧಾರವಾಡ ಜಿಲ್ಲೆಯಲ್ಲಿ ಇಂತಹದೊಂದು ಘಟನೆ ನಡೆದಿದ್ದು, ಇಡೀ ಊರಿಗೆ ಊರೇ ಮಾನವೀಯತೆ ಪ್ರದರ್ಶಿಸಿ ಸೈ ಎನಿಸಿಕೊಂಡಿದ್ದಾರೆ.

ಕುಂದಗೋಳ ತಾಲೂಕಿನ ಗುಡೇನಕಟ್ಟಿ ಗ್ರಾಮದಲ್ಲಿ ಜನರ ಜತೆಗೆ ಪ್ರೀತಿಯಿಂದ ಇದ್ದ ಮಂಗಗಳು, ಕಳೆದ 10ದಿನಗಳಿಂದ ಅನಾರೋಗ್ಯದಿಂದ ಸಾವನ್ನಪ್ಪಿವೆ. ಇದು ಗ್ರಾಮಸ್ಥರಿಗೆ ನೋವನ್ನುಂಟು ಮಾಡಿದೆ. ಊರಿನಲ್ಲಿರುವ ಮರದ ಮೇಲೆ ಹಾಗೂ ಊರಿನಲ್ಲಿ ನಿತ್ಯವೂ ಬರುತ್ತಿದ್ದ ಮಂಗಗಳಿಗೆ ಏಕಾಏಕಿ ಅನಾರೋಗ್ಯಕಾಡಿದೆ.

ತಕ್ಷಣ ಎಚ್ಚೆತ್ತುಕೊಂಡು ಗ್ರಾಮಸ್ಥರು, ಸಾವು ಬದುಕಿನ ಮಧ್ಯೆ ಹೋರಾಟ ಮಾಡುತ್ತಿದ್ದ ಮಂಗಗಳಿಗೆ ಕುಂದಗೋಳ ಸರಕಾರಿ ಪಶು ವೈದ್ಯರ ಬಳಿ ಚಿಕಿತ್ಸೆಗೆ ತೆಗೆದುಕೊಂಡು ಹೋಗಿದ್ದಾರೆ. ವೈದ್ಯರ ತಂಡ ಹಗಲು ರಾತ್ರಿ ಎನ್ನದೆ, ಚಿಕಿತ್ಸೆ ನೀಡಿದರೂ ಕೂಡ, ಕೆಲವು ಮಂಗಗಳು ಸಾವನ್ನಪ್ಪಿದ್ದು ಕೆಲವು ಮಂಗಗಳು ಬದುಕು ಉಳಿದಿವೆ. ಶಾಸ್ತ್ರೋಕ್ತವಾಗಿ ಅಂತ್ಯ ಸಂಸ್ಕಾರ: ಮೃತಪಟ್ಟ 8 ಮಂಗಗಳಿಗೆ, ಗ್ರಾಮದ ಮಾರುತಿ ದೇವಸ್ಥಾನದ ಆವರಣದಲ್ಲಿ ಪೂಜೆ ಸಲ್ಲಿಸಿ ಶಾಸ್ತ್ರೋಕ್ತವಾಗಿ ಊರಿನ ಗ್ರಾಮಸ್ಥರು ಅಂತ್ಯ ಸಂಸ್ಕಾರ ಮಾಡಿದರು. ಗ್ರಾಮದ ಸತೀಶ ಹಿರೇಮಠ ಬೆಳಗ್ಗೆ ಗದ್ದುಗೆಗೆ ಪಂಚಾಮೃತ ಅಭಿಷೇಕ ಹಾಗೂ ಪುಣ್ಯಾರಾಧನೆ ಕಾರ್ಯಕ್ರಮವನ್ನು ನೆರವೇರಿಸಿ ಕೊಟ್ಟರು. ನಂತರ ಮಂಗಗಳು ತಿನ್ನುವ ಪದಾರ್ಥವನ್ನು ಹಣ್ಣು ಇನ್ನಿತರ ವಸ್ತುಗಳನ್ನು ಗದ್ದುಗೆಗೆ ನೈವೇದ್ಯ ಅರ್ಪಿಸಲಾಯಿತು. ಕಾರ್ಯಕ್ರಮಕ್ಕೆ ಆಗಮಿಸಿದ ಸುತ್ತ ಮುತ್ತಲಿನ ಗ್ರಾಮಸ್ಥರಿಗೆ ಅನ್ನಸಂತಪಣೆ ಮಾಡಲಾಯಿತು. ಈ ಸಂದರ್ಭದಲ್ಲಿ ಮಂಗಳಾರತಿ ಮಾಡುವ ಮೂಲಕ ವಿಸರ್ಜನೆ ಮಾಡಲಾಯಿತು.

ಗ್ರಾಮದ ಕೆಲವು ಯುವಕರು ಜತೆ ಪ್ರೀತಿಯಿಂದ ಇದ್ದ ಮಂಗಗಳನ್ನು ನೆನೆದು ಕಣ್ಣೀರು ಹಾಕಿದರು. ಈ ಸಮಯದಲ್ಲಿ ಶಾಂತಪ್ಪ ಕುಸುಗಲ,ದೇವಪ್ಪ ಹೊಸಳ್ಳಿ ಬಸವರಾಜ ಯೋಗಪ್ಪನವರ, ಮಲ್ಲಪ್ಪ ಕಂಬಳಿ, ಮಾನಪ್ಪ ಬಡಿಗೇರ, ಶಿವಲಿಂಗಪ್ಪ ಕಕಸಣ್ಣವರ, ಶೇಖಪ್ಪ ಮಲ್ಲಿಗವಾಡ, ಮುದುಕಪ್ಪ ಪೂಜಾರ, ಮುದುಕಪ್ಪ ಮಾದರ್, ಬಸು ಪೂಜಾರ ಅನೇಕ ಗ್ರಾಮದ ಗ್ರಾಮಸ್ಥರು ಪೂಜೆಯಲ್ಲಿ ಪಾಲ್ಗೊಂಡು ಅನ್ನ ಸಂತರ್ಪಣೆಯಲ್ಲಿ ಭಾಗವಹಿಸಿದ್ದರು.

ಅನಾರೋಗ್ಯದಿಂದ ಸಾವನ್ನಪ್ಪಿರುವ ಮಂಗಗಳು.

> ನಮ್ಮ ಜತೆಗೆ ನಮ ಮನೆ ಮಕ್ಕಳ ತರಹ, ನಾವು ಅವುಗಳ್ನು ನೋಡ್ತಾ ಇದ್ದಿವಿ. ಇಗಾ ಅವುಗಳ ಸಾವಿನ ಸುದ್ದಿ ಕೇಳಿ ಕಣೀರು ಹಾಕ್ತಾ ಇದ್ದಿವಿ. ತುಂಬಾ ನೋವಾಗಿದೆ ನಮಗೆಲ್ಲಾ ಗ್ರಾಮಸ್ಥರಿಗೆ.
> - ಬಸವರಾಜ ಯೋಗಪ್ಪನವರ, ಪ್ರಾಣಿ ಪ್ರೇಮಿ

> ಗ್ರಾಮಸ್ಥರು ಕರೆ ಮಾಡಿದ ತಕ್ಷಣ, ನಮ್ಮ ತಂಡ ಆ ಗ್ರಾಮಕ್ಕೆ ತೆರಳಿ ಚಿಕಿತ್ಸೆ ನೀಡಿದೆವು. ಇನ್ನು ಕೆಲವು ಮಂಗಗಳನ್ನು ಆಸ್ಪತ್ರೆಗೆ ತೆಗೆದುಕೊಂಡು ಬಂದಾಗ ಚಿಕಿತ್ಸೆ ಕೊಡಲಾಗಿದೆ. ಚಿಕಿತ್ಸೆ ನಂತರ ಕೆಲವು ಬದುಕಿ ಉಳಿದಿವೆ. ಇನ್ನು ಕೆಲವು ಬಿಸಿಲಿನ ತಾಪ ಹಾಗೂ ಫುಡ್ ಪ್ಯಾಜನ್ ಆಗಿ ಮರಣ ಹೊಂದಿವೆ.
> - ಹನಮಂತಗೌಡ ಪಾಟೀಲ್, ಪಶು ವೈದ್ಯಾಧಿಕಾರಿ, ಕುಂದಗೋಳ

ತನುಶ್ರೀಯಿಂದ ಗುರುವಂದನೆ: ಹೊಸ ಪರಂಪರೆಗೆ ಮುನ್ನುಡಿ

ಶಿರಸಿ: ಅಂಗನವಾಡಿ, ಪ್ರಾಥಮಿಕ ಶಾಲೆ, ಹಾಗೂ ಹೈಸ್ಕೂಲ್ ವರೆಗೆ ಕಲಿಸಿದ ಎಲ್ಲಾ ಅಧ್ಯಾಪಕ ವೃಂದಕ್ಕೆ ಸನ್ಮಾನ ಮಾಡುವುದರೊಂದಿಗೆ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ದ್ವಿತೀಯ ಸ್ಥಾನ ಪಡೆದ ಮಾರಿಕಾಂಬಾ ಹೈಸ್ಕೂಲ್ ಶಿರಸಿ ವಿದ್ಯಾರ್ಥಿನಿ ತನುಶ್ರೀ ನರಸಿಂಹ ಜೋಶಿ ಬಾಡಲಕೊಪ್ಪ ಹಾಗೂ ಅವಳ ಕುಟುಂಬದವರು ಗುರುವಂದನಾ ಕಾರ್ಯಕ್ರಮ ನಡೆಸಿಕೊಟ್ಟರು.

ಶಿರಸಿಯ ರಂಗಧಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಿಸಿದ ಗುರುಗಳಿಗೆ ಸನ್ಮಾನ ಮಾಡುವ ಮೂಲಕ ಹೊಸ ಸಂಪ್ರದಾಯ ಕ್ಕೆ ಮುನ್ನುಡಿ ಬರೆದರು. ಈ ಸಂದರ್ಭದಲ್ಲಿ ಕಾರ್ಯಕ್ರಮ ದ ಉದ್ಘಾಟಕರಾಗಿ ಮಾತನಾಡಿದ, ಶಶಿಭೂಷಣ ಹೆಗಡೆ ದೊಡ್ಡನೆ, ಮಾರಿಕಾಂಬಾ ಹೈಸ್ಕೂಲ್ ಶಿರಸಿಯಲ್ಲಿ ರಾಜ್ಯವೇ ಗುರುತಿಸುವ ಸಂಸ್ಥೆಯಾಗಿ ಬೆಳದಿದೆ, ಅದರ ಶ್ರೇಯಸ್ಸು ಸಕಲ ಶಿಕ್ಷಕ ವೃಂದಕ್ಕೆ ಸಲ್ಲಬೇಕು ಹಾಗೂ ಸರಕಾರ ಶಿಕ್ಷಣ ಇಲಾಖೆ ಅಧಿಕಾರಿಗಳು ಹಾಗೂ ಶಿಕ್ಷಕರು ಒತ್ತಡರಹಿತವಾಗಿ ಕೆಲಸ ನಿರ್ವಹಿಸುವ ವ್ಯವಸ್ಥೆ ಯನ್ನಾ ನಿರ್ಮಿಸಬೇಕೆಂದು ಒತ್ತಾಯಿಸಿದರು.

ಮಕ್ಕಳ ತಜ್ಞ ಡಾಕ್ಟರ್ ದಿನೇಶ್ ಹೆಗಡೆಯವರು ಮಾರಿಕಾಂಬಾ ಹೈಸ್ಕೂಲ್ ಅಪ್ರತಿಮ ಸಾಧನೆಯ ಪರಂಪರೆಯನ್ನು ಮುಂದುವರೆಸುತ್ತಾ ಬಂದಿದೆ, ಅಲ್ಲಿಯ ಶಿಕ್ಷಕರ ಪರಿಶ್ರಮವೇ ಕಾರಣ , ತನುಶ್ರೀಯ ಸಾಧನೆಯನ್ನು ನೆನೆಯುತ್ತಾ ಅವರ ಕುಟುಂಬದ ಜೊತೆಗಿನ ಒಡನಾಟದ ಬಗ್ಗೆ ಹೇಳುತ್ತಾ, ತನುಶ್ರೀ ಹಾಗೂ ಉಳಿದ ವಿದ್ಯಾರ್ಥಿಗಳು ಇದೆತರಹ ಸಾಧನೆಯನ್ನು ತೋರುತ್ತಾ, ದೇಶ ವಿದೇಶಗಳಲ್ಲಿ ಶಿರಸಿ ಹೆಸರನ್ನು ಹೇಳುವಂತಾಗುವದು ಹೆಮ್ಮೆ, ಇನ್ನೂ ಮುಂದು ಇದೆ ತರಹದ ಸಾಧನಷೆಯನ್ನು ತೋರಿ, ನುರಿತ ವೈದ್ಯ ರಾಗಿ ಶಿರಸಿಯಲ್ಲಿ ನಮಗೆಲ್ಲಾ ಇನ್ನೊಂದು ಸ್ಪರ್ಧಾಳುವಾಗಿ ಬರುವಂತಾಗಲಿ ಎಂದು ಹರಸಿದರು. ಅಂಗನವಾಡಿಯಿಂದ ಹೈಸ್ಕೂಲ್ ವರೆಗೆ ತನುಶ್ರೀಗೆ ಕಲಿಸಿದ 18 ಜನ ಶಿಕ್ಷಕ ಹಾಗೂ ಶಿಕ್ಷಕಿಯರನ್ನು ಸನ್ಮಾನಿಸಲಾಯಿತು. ಮುಖ್ಯ ಅತಿಥಿಯಾಗಿ ಶಿರಸಿ ಶೈಕ್ಷಣಿಕ ಜಿಲ್ಲೆಯ ಉಪನಿರ್ದೇಶಕ ಪಿ ಬಸವರಾಜ್, ಕ್ಷೇತ್ರ ಶಿಕ್ಷಣ ಅಧಿಕಾರಿ ನಾಗರಾಜ ನಾಯ್ಕ ಆಗಮಿಸಿದ್ದರು.

ಕಾರ್ಯಕ್ರಮ ದ ಅಧ್ಯಕ್ಷತೆಯನ್ನು ವಿಶ್ವನಾಥ ಜೋಶಿ ಬಾಳೇಹದ್ದ ವಹಿಸಿಕೊಂಡಿದ್ದರು. ಕಾರ್ಯಕ್ರಮ ದ ಕೊನೆಯಲ್ಲಿ ಕುಟುಂಬದ ಮೊಮ್ಮಗಳು ಕುಮಾರಿ ದೀಪಿಕಾ ಅವಳು ನೃತ್ಯ ದ ಮೂಲಕ ನೆರೆದಿದ್ದವರನ್ನು ರಂಜಿಸಿದಳು.

ರಂಗಧಾಮದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಲಿಸಿದ ಗುರುಗಳಿಗೆ ಸನ್ಮಾನಿಸಲಾಯಿತು.

‘ದುಡಿಯೋಣ ಬಾ’ ಅಭಿಯಾನದಡಿ ನಿರಂತರ ಕೆಲಸ 370 ರು. ಕೂಲಿ ಪಾವತಿ

ವಿಶೇಷ ಚೇತನ ದಂಪತಿಗೆ ನರೇಗಾ ಊರುಗೋಲು

ಗದಗ: ದೈಹಿಕ ನ್ಯೂನ್ಯತೆ ಇರುವವರನ್ನು ತುಚ್ಛವಾಗಿ ಕಾಣುವುದೇ ಹೆಚ್ಚು. ಅವರಿಂದ ಏನೂ ಮಾಡಲು ಸಾಧ್ಯವಿಲ್ಲ ಎನ್ನುವುದು ಹಲವರ ಊಹೆ. ಆದರೆ ತಾವು ಕೂಡ ದುಡಿದು ಸ್ವಾವಲಂಬಿಗಳಾಗಬಹುದು ಎನ್ನುವುದಕ್ಕೆ ಈ ವಿಶೇಷ ಚೇತನ ದಂಪತಿಗಳು ಸಾಕ್ಷಿಯಾಗಿದ್ದಾರೆ.

ಗದಗ ತಾಲೂಕಿನ ನಾಗಾವಿ ಗ್ರಾಮದಲ್ಲಿ ನರೇಗಾದಡಿ ಮೂರು ವಾರಗಳಿಂದ ಬದು ನಿರ್ಮಾಣ ಕೆಲಸ ನೀಡಲಾಗಿದೆ. ಗ್ರಾಮದ ಅಂಗವಿಕಲ ದಂಪತಿಗಳಾದ ಹುಲಗೆಪ್ಪ ಸುಬ್ಬಪ್ಪ ಚಲವಾದಿ ಮತ್ತು ಶಾಂತವ್ವ ಹುಲಗೆಪ್ಪ ಚಲವಾದಿ ಅವರು ಮೂರು ನಾಲ್ಕು ವರ್ಷಗಳಿಂದ ಉದ್ಯೋಗ ಖಾತ್ರಿಯಲ್ಲಿ ಕೆಲಸ ಮಾಡುತ್ತಿದ್ದಾರೆ. ಹುಲಗೆಪ್ಪ ಅವರಿಗೆ ಒಂದು ಕಣ್ಣು ಸರಿಯಾಗಿ ಕಾಣುವುದಿಲ್ಲ. ಅವರ ಪತ್ನಿ ಶಾಂತವ್ವ ಅವರದು ಒಂದು ಕೈ ಅಶಕ್ತವಾಗಿದೆ. ಹೀಗಿದ್ದರೂ ದುಡಿಯುವ ಉತ್ಸಾಹ ದಂಪತಿಗಳಲ್ಲಿ ಕಡಿಮೆಯಾಗಿಲ್ಲ. ದಂಪತಿಗೆ ಮೂವರು ಮಕ್ಕಳು ಅವರಲ್ಲಿ ಇಬ್ಬರು ಹೆಣ್ಣು ಮಕ್ಕಳು ಅವರಿಗೆ ಮದುವೆಯಾಗಿದೆ. ಓರ್ವ ಮಗನಿಂದು ಅವನು ಸಹ ನಿತ್ಯ ದುಡಿಮೆಗೆ ಗಾರೆ ಕೆಲಸ ಮಾಡುತ್ತಾರೆ. ತುಂಬು ಕುಟುಂಬದಲ್ಲಿ ವಾಸವಾಗಿರುವ ದಂಪತಿಗಳಿಗೆ ಯಾವುದೇ ಜಮೀನು ಆಸ್ತಿ ಇಲ್ಲ. ಊರಿನಲ್ಲಿ ವಾಸಿಸಲು ಸ್ವತಃ ಮನೆ ಅಷ್ಟೆ ಇದೆ. ಮನೆಯ ಖರ್ಚು ವೆಚ್ಚಕ್ಕೆ ಅಲ್ಪ ಸಹಾಯವಾಗಲಿ ಎಂಬ ಉದ್ದೇಶದಿಂದ ಉದ್ಯೋಗ ಖಾತ್ರಿಯಲ್ಲಿ ಪ್ರಸಕ್ತ ವರ್ಷ ಮೂರು ವಾರಗಳಿಂದ ಕೆಲಸ ಮಾಡುತ್ತಿದ್ದಾರೆ.

ಇವರಲ್ಲದೆ ಇದೇ ರೀತಿ ಹಲವು ಮಂದಿಗೆ ಆಯಾ ಗ್ರಾಮಸ್ಥರು, ಪಂಚಾಯಿತಿಯವರು ಆಸಕ್ತಿ ವಹಿಸಿ ಕೆಲಸ ಒದಗಿಸುತ್ತಿರುವುದು ವಿಕಲಚೇತನರ ಸಂತಸ ಜೀವನಕ್ಕೆ ಅನಕೂಲವಾಗಿದೆ.

ನಾನು ವಿಕಲಾಂಗನಾಗಿ ಹುಟ್ಟಿದ್ದೇ ತಪ್ಪಾಯ್ತಾ? ಎಂಬ ಭಾವ ಮೂಡಿದವರಿಗೆ, ನರೇಗಾ ಯೋಜನೆ ಹೊಸ ಬದುಕಿನ ಭರವಸೆ, ಪ್ರೀತಿ ಜೊತೆಗೆ ಕಾಳಜಿ ನೀಡಿದೆ. ನರೇಗಾ ಯೋಜನೆಯೂ ನಮಗೆ ಕೆಲಸ ಹಾಗೂ ಹೆಚ್ಚಿನ ಕೂಲಿ ನೀಡುವುದರ ಜೊತೆಗೆ ನೆಮ್ಮದಿಯೂ ನೀಡುತ್ತಿದೆ ಎಂದು ಹುಲಗೆಪ್ಪ ಚಲವಾದಿ ಖುಷಿ ವ್ಯಕ್ತಪಡಿಸುತ್ತಾರೆ.

ಗದಗ ತಾಲೂಕಿನ ನಾಗಾವಿ ಗ್ರಾಮದಲ್ಲಿ ನರೇಗಾದಡಿ ಮೂರು ವಾರಗಳಿಂದ ಬದು ನಿರ್ಮಾಣ ಕೆಲಸ ನೀಡಲಾಗಿದೆ.

> ಬೇಸಿಗೆ ಅವಧಿಯಲ್ಲಿ ದುಡಿಯೋಣ ಬಾ ಅಭಿಯಾನದಡಿ ನಿರಂತರ ನರೇಗಾ ಕೆಲಸ ನೀಡುತ್ತಿರುವುದರಿಂದ ವಿಕಲಚೇತನರಿಗೆ ಇದ್ದೂರಲ್ಲೇ ಕೆಲಸ ಸಿಗುತ್ತಿದೆ. ನರೇಗಾ ಕೂಲಿ ದಿನಕ್ಕೆ 370 ರು.ಗೆ ಹೆಚ್ಚಿಸಿದ್ದರಿಂದ ಅಂಗವಿಕಲರು ಖುಷಿಯಿಂದ ನರೇಗಾ ಕೆಲಸ ಮಾಡುತ್ತಾ ಸ್ವಾವಲಂಬಿ ಜೀವನ ನಡೆಸುತ್ತಿದ್ದಾರೆ.
> - ಮಲ್ಲಯ್ಯ ಕೊರವನವರ, ಕಾರ್ಯನಿರ್ವಾಹಕ ಅಧಿಕಾರಿಗಳು

ಭಾರತ - ಪಾಕ್ ಯುದ್ಧ: ವಾಣಿಜ್ಯ ನಗರಿ ಹುಬ್ಬಳ್ಳಿಯಲ್ಲೂ ಹೈ ಅಲರ್ಟ್

ಹುಬ್ಬಳ್ಳಿ: ಭಾರತ - ಪಾಕಿಸ್ತಾನ್ ನಡುವೆ ಯುದ್ಧದ ಕಾರ್ಮೋಡ ಹಿನ್ನೆಲೆಯಲ್ಲಿ, ಇಡೀ ದೇಶಾದ್ಯಂತ ವಿವಿಧ ಭಾಗಗಳಲ್ಲಿ ಕಟ್ಟೆಚ್ಚರ ವಹಿಸಲಾಗಿದೆ.

ಅದರಂತೆ ಹುಬ್ಬಳ್ಳಿಯ ಶ್ರೀ ಸಿದ್ಧಾರೂಢ ಸ್ವಾಮೀಜಿ ರೈಲ್ವೆ ನಿಲ್ದಾಣದಲ್ಲೂ ಹೈ ಅಲರ್ಟ್ ಮಾಡ್ಲಾಗಿದ್ದು, ಹುಬ್ಬಳ್ಳಿಯ ರೈಲ್ವೇ ನಿಲ್ದಾಣದಲ್ಲೂ ಹದ್ದಿನ ಕಣ್ಣನ್ನು ರೈಲ್ವೇ ಇಲಾಖೆ ಇರಿಸಿದೆ.

ರೈಲ್ವೆ ನಿಲ್ದಾಣದಲ್ಲಿ ಭದ್ರತಾ ತಪಾಸಣೆ ಕೈಗೊಂಡ ಪೊಲೀಸ್ ಅಧಿಕಾರಿಗಳುರೈಲ್ವೆ ರಕ್ಷಣಾ ಪಡೆ , ಸರಕಾರಿ ರೈಲ್ವೆ ಪೊಲೀಸ್ (ಉಖಂ), ಡಾಗ್ ಸ್ಕ್ವಾಡ್ ನಿಂದ ಪ್ರಯಾಣಿಕರ ಮತ್ತು ಲಗೇಜಗಳ ತೀವ್ರ ತಪಾಸಣೆ ಮಾಡಿದರು. ಹ್ಯಾಂಡ್ ಹೆಲ್ಡ್ ಮೆಟಲ್ ಡಿಟೆಕ್ಟರ್, ಡೋರ್ ಫ್ರೇಮ್ ಮೆಟಲ್ ಡಿಟೆಕ್ಟರ್, ಲಗೇಜ್ ತಪಾಸಣಾ ಸ್ಕ್ಯಾನರ್‌ಗಳ ಮೂಲಕ ತಪಾಸಣೆ ಮಾಡುತ್ತಾ, ರೈಲು ನಿಲ್ದಾಣದ ಪ್ರವೇಶ ದ್ವಾರ ಮತ್ತು ನಿರ್ಗಮನ ಕೇಂದ್ರ ಗಳಲ್ಲಿ ಕಟ್ಟುನಿಟ್ಟಿನ ನಿಗಾವ್ಹೆಸಿದ್ದಾರೆ.

ರೈಲ್ವೆ ನಿಲ್ದಾಣದೊಳಗೆ ಕೊಂಡೊಯ್ಯುವ ಲಗೇಜ್ ತಪಾಸಣೆ ಮಾಡಿ, ಪ್ರತಿ ರೈಲ್ವೆ ಬೋಗಿಗಳ ಒಳ ತೆರಳಿ ಇಂಚಿಂಚೂ ತಪಾಸಣೆ ನಡೆಸಲಾಗಿದೆ.

ಸುಮಾರು 50 ಕ್ಕೂ ಹೆಚ್ಚು ಬೇರೆ ಬೇರೆ ವಿಭಾಗದ ಪೊಲೀಸರಿಂದ ತಪಾಸಣೆ ನಡೆಸಿದ್ದು, ನಿಲ್ದಾಣದ10 ಕ್ಕೂ ಹೆಚ್ಚು ಕಡೆಗಳಲ್ಲಿ ಚೆಕ್ ಪೋಸ್ಟ್ ನಿರ್ಮಿಸಿ ತಪಾಸಣೆ ಮಾಡ್ತಾ ಇದ್ದಾರೆ. ರೈಲ್ವೆ ನಿಲ್ದಾಣದಲ್ಲಿ ಅಗತ್ಯ ಮುನ್ನೆಚ್ಚರಿಕೆ ಕ್ರಮಕ್ಕೆ ರೈಲ್ವೇ ಪೊಲೀಸರು ಮುಂದಾಗಿದ್ದಾರೆ.

ಹುಬ್ಬಳ್ಳಿಯ ರೈಲ್ವೇ ನಿಲ್ದಾಣದಲ್ಲೂ ಹದ್ದಿನ ಕಣ್ಣನ್ನು ರೈಲ್ವೇ ಇಲಾಖೆ ಇರಿಸಿದೆ.

ತಂಗಿ ಮನೆ ಕಿತ್ತುಕೊಂಡ ವೈದ್ಯ, ನ್ಯಾಯಕ್ಕಾಗಿ ಮನವಿ

ಹಾವೇರಿ: ರಾಣೆಬೆನ್ನೂರ ತಾಲೂಕಿನ ಚಳಗೇರಿ ಗ್ರಾಮದ ಬಿಎಎಂಎಸ್ ವೈದ್ಯನೊಬ್ಬ ತಂಗಿ ತನ್ನ ಬದುಕಿಗಾಗಿ ಕಟ್ಟಿಕೊಂಡಿದ್ದ ಮನೆಯನ್ನೇ ಆಕೆಯಿಂದ ಕಿತ್ತುಕೊಂಡ ಘಟನೆ ಖಂಡಿಸಿ ಜಿಲ್ಲೆಯ ವಿವಿಧ ಮಹಿಳಾ ಸಂಘಟನೆಯವರು ಮಹಿಳೆಗೆ ನ್ಯಾಯ ಕೊಡಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರಗೆ ಮನವಿ ಸಲ್ಲಿಸಿದ್ದಾರೆ.

ಅಖಿಲ ಕರ್ನಾಟಕ ಮಹಿಳಾ ಸಬಲೀಕರಣ ಹೋರಾಟ ಒಕ್ಕೂಟ ಜಿಲ್ಲಾಧ್ಯಕ್ಷೆ ಪರೀದಾ ಮುಲ್ಲಾ ಮಾತನಾಡಿ, ಚಳಗೇರಿಯ ನಿವಾಸಿಯಾದ ಗೀತಾ ತಂದೆ ಲಕ್ಷ್ಮಪ್ಪ ಕಣ್ಣಮ್ಮನವರ್ ಇವರ ಹೆಸರಿನಲ್ಲಿ 2000-2001 ಸಾಲಿನಲ್ಲಿ ಸರಕಾರದಿಂದ ಡಾ. ಅಂಬೇಡ್ಕರ್ ಇಂದಿರಾ ಆವಾಸ ಯೋಜನೆ ಅಡಿಯಲ್ಲಿ ಮನೆ ಮಂಜೂರಾಗಿ ಅಲ್ಪಸ್ವಲ್ಪ ಹಣ ಕೊಡಿಸಿ ಕೈಗಾರಿಕೆ ಕೆಲಸ ಮಾಡಿ ಆ ಮನೆ ಗೀತಾ ಕಟ್ಟಿಕೊಂಡು ತೆಲೆ ಮೇಲೆ ಒಂದು ಸ್ವಂತ ಸೂರನ್ನು ಕಷ್ಟಪಟ್ಟು ನಿರ್ಮಿಸಿಕೊಂಡ ಮನೆಯನ್ನೇ ಇವಳ ತಮ್ಮ ಬಿಎಎಂಎಸ್ ವೈದ್ಯನಾಗಿರುವ ಕುಮಾರ ಲಕ್ಷ್ಮಣ ಕಣ್ಣಮ್ಮನವರ ಸ್ವಲ್ಪ ವರ್ಷಗಳ ಕಾಲ ಬೆಂಗಳೂರಿನಲ್ಲಿ ಇದ್ದು ಈಗ ಊರಿಗೆ ಬಂದು ತನ್ನ ತಂಗಿಯ ಮೇಲೆ ದೌರ್ಜನ್ಯ ವೆಸಗಿ ಜೀವ ಬೆದರಿಕೆ ಹಾಕಿ ಮನೆಯನ್ನು ಕಸೆದುಕೊಂಡು ಅವಳನ್ನು ಮನೆಯಿಂದ ಹೊರ ತಳ್ಳಿದ್ದಾನೆ. ವಿಶೇಷಚೇತನಯಾಗಿರುವ ಗೀತಾಳನ್ನು ಮನೆಯಿಂದ ಹೊರ ಹಾಕಿದ ನಂತರದಲ್ಲಿ ಅವಳು ಸ್ವಲ್ಪ ಕಾಲ ಅನಾಥಾಶ್ರಮದಲ್ಲಿ ಇದ್ದು, ಈಗ ತಮ್ಮ ಸಂಬಂಧಿಕರ ಮನೆಯಲ್ಲಿ ವಾಸವಿದ್ದು ಜೀವನ ನಡೆಸುತ್ತಿದ್ದಾಳೆ. ನೆಲೆಯನ್ನು ಕಳೆದ ಕೊಂಡ ಗೀತಾಳಿಗೆ ನ್ಯಾಯ ಕೊಡಿಸಬೇಕು. ಅವಳಿಗೆ ಅನ್ಯಾಯ ಮಾಡಿರುವ ಕುಮಾರ ಮೇಲೆ ಕಾನೂನು ಕ್ರಮ ಜರುಗಿಸಬೇಕು. ಅವಳ ಮನೆಯನ್ನು ಮರಳಿಗೆ ಕೊಡಿಸಬೇಕು ಎಂದು ಜಿಲ್ಲಾಧಿಕಾರಿಗಳಿಗೆ ಮನವಿ ಮಾಡಿದರು.

ಈ ಸಂದರ್ಭದಲ್ಲಿ ಕರವೇ ಮಹಿಳಾ ಸಂಘದ ಅಧ್ಯಕ್ಷರಾದ ಫರೀದಾ ನದ್ದಿ ಮುಲ್ಲಾ,ಮಹಬೂಬಿ ಹಿತ್ತಲಮನಿ,ಪ್ರೇಮ ಮೂಲಿಮನಿ, ಜರಿನಾ ಮುಲ್ಲಾ, ಹೊನ್ನಮ್ಮ, ರಜಿಯಾ ಹಿತ್ತಲಮನಿ, ಅನ್ನಪೂರ್ಣ ಸಣ್ಣ ಪುಟ್ಟಕ್ಕನವರ್, ತಸ್ಲೀಮಾ ಚನ್ನಾಪುಗೇರ,ಮಾತಂಗಮ್ಮ ಕುರುಡಂನವರ್ ಇನ್ನು ಮುಂತಾದವರು ಇದ್ದರು.

ತಂಗಿ ಮನೆ ಕಿತ್ತುಕೊಂಡ ವೈದ್ಯನ ಕ್ರಮ ಖಂಡಿಸಿ ಜಿಲ್ಲೆಯ ವಿವಿಧ ಮಹಿಳಾ ಸಂಘಟನೆಯವರು ಮಹಿಳೆಗೆ ನ್ಯಾಯ ಕೊಡಿಸುವಂತೆ ಒತ್ತಾಯಿಸಿ ಜಿಲ್ಲಾಧಿಕಾರಿ ಡಾ. ವಿಜಯ ಮಹಾಂತೇಶ ದಾನಮ್ಮನವರಗೆ ಮನವಿ ಸಲ್ಲಿಸಿದ್ದಾರೆ.

ಹೇಮರಡ್ಡಿ ಮಲ್ಲಮ್ಮ ಮಹಾಸಾಧ್ವಿ: ಸಚಿವ

ಗದಗ: ಜಾತಿ, ಮತ ಎಂದು ಬೇಧಭಾವ ಮಾಡದೆ ಇಡೀ ಮನುಕುಲದ ಶ್ರೇಯಕ್ಕೆ ದಾರಿ ತೋರಿದಂತಹ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಅವರಿಗೆ ನಾವೆಲ್ಲರೂ ಸದಾ ಚಿರ ಋಣಿಯಾಗಿರಬೇಕು ಎಂದು ರಾಜ್ಯದ ಕಾನೂನು, ನ್ಯಾಯ, ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು, ಶಾಸನ ರಚನೆ ಮತ್ತು ಪ್ರವಾಸೋದ್ಯಮ ಸಚಿವರು ಹಾಗೂ ಗದಗ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಚ್.ಕೆ.ಪಾಟೀಲ ಅವರು ನುಡಿದರು.

ನಗರದ ಶ್ರೀ ಶಿವಾನಂದ ಕಲ್ಯಾಣ ಮಂಟಪದಲ್ಲಿ ಶನಿವಾರ(ಮೇ.10) ಜರುಗಿದ ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮನವರ ಜಯಂತಿ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶಾಸಕ ಜಿ.ಎಸ್.ಪಾಟೀಲ , ವಿಧಾನ ಪರಿಷತ್ ಶಾಸಕ ಎಸ್.ವಿ.ಸಂಕನೂರ, ಜಿಲ್ಲಾಧಿಕಾರಿ ಸಿ.ಎನ್.ಶ್ರೀಧರ ಅಕಬರಸಾಬ್ ಬಬರ್ಚಿ, ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಬಿ.ಬಿ.ಅಸೂಟಿ, ಮಾಜಿ ಶಾಸಕರುಗಳಾದ ಡಿ.ಆರ್.ಪಾಟೀಲ, ಬಿ.ಆರ್. ಯಾವಗಲ್, ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ ಎಸ್, ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಬಿ.ಎಸ್.ನೇಮಗೌಡ, ಅಪರ ಜಿಲ್ಲಾಧಿಕಾರಿ ಅನ್ನಪೂರ್ಣ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ವೀರಯ್ಯಸ್ವಾಮಿ ಹಿರೇಮಠ, ಜಿಲ್ಲಾ ರಡ್ಡಿ ಸಮಾಜದ ಅಧ್ಯಕ್ಷ ರವೀಂದ್ರ ಮೂಲಿಮನಿ ಸೇರಿದಂತೆ ಸಮಾಜದ ಗಣ್ಯರು, ಮುಖಂಡರು, ಸಾರ್ವಜನಿಕರು ಉಪಸ್ಥಿತರಿದ್ದರು.

> ಮಹಾಸಾಧ್ವಿ ಶಿವಶರಣೆ ಹೇಮರಡ್ಡಿ ಮಲ್ಲಮ್ಮ ಸಾಕಷ್ಟು ಜನರಿಗೆ ನಾಟಕ, ಕೀರ್ತನ ಹಾಗೂ ಪುರಾಣಗಳ ಮೂಲಕ ಪರಿಚಯಿಸಲಾಗುತ್ತಿದೆ. ಮಲ್ಲಮ್ಮ ಭಕ್ತಿಯ ಪರಕಾಷ್ಠೆ, ಭಕ್ತಿಯ ಶ್ರೇಷ್ಠತೆಯನ್ನು ಸಮಾಜಕ್ಕೆ ತೋರಿಸಿರುವ ಮಹಾಸಾಧ್ವಿ .
> - ಡಾ.ಎಚ್.ಕೆ.ಪಾಟೀಲ, ಸಚಿವ



ನಂದೀಶ್ವರ ಜಾತ್ರೆ ಮೇ 12ರಂದು

ಧಾರವಾಡ: ಉತ್ತರ ಕರ್ನಾಟಕ ಭಾಗದ ಪ್ರಸಿದ್ಧ ಜಾತ್ರೆಗಳಲ್ಲಿ ಒಂದಾಗಿರುವ ಇಲ್ಲಿಗೆ ಸಮೀಪದ ತಾಲೂಕಿನ ಮರೇವಾಡ ಗ್ರಾಮದ ಬಸವಣ್ಣ(ನಂದೀಶ್ವರ) ದೇವರ ವಾರ್ಷಿಕ ಜಾತ್ರಾ ಮಹೋತ್ಸವ ಸೋಮವಾರ ಮೇ-12 ರಂದು ಆಗಿ ಹುಣ್ಣಿವೆಯ ದಿನ ವಿಜೃಂಭಣೆಯಿಂದ ನಡೆಯಲಿದೆ. ಅಮ್ಮಿನಬಾವಿ ಮತ್ತು ಮರೇವಾಡ ಗ್ರಾಮದ ಬಸವಣ್ಣ(ನಂದೀಶ್ವರ) ದೇವರು ಪರಸ್ಪರ ಸಹೋದರರು ಎಂಬ ಪ್ರತೀತಿ ಇದೆ. ದವನದ ಹುಣ್ಣಿವೆಗೆ ಅಮ್ಮಿನಬಾವಿ ಜಾತ್ರೆಯಾದರೆ, ಮುಂದಿನ ಆಗಿ ಹುಣ್ಣಿವೆಗೆ ಮರೇವಾಡದ ಜಾತ್ರೆ ನಡೆಯುತ್ತ ಬಂದಿದೆ. ಈ ಉಭಯ ಜಾತ್ರೆಗಳಲ್ಲಿ ಪರಸ್ಪರರ ಪಾಲ್ಕಿ-ನಂದಿಕೋಲುಗಳು ಆಯಾ ದೇವಾಲಯಗಳಿಂದ ಬಂದಾಗಲೇ ರಥೋತ್ಸವ ಸಾಂಗವಾಗುತ್ತಿರುವುದು ಪರಂಪರೆಯಲ್ಲಿ ಬಹಳ ಹಿಂದಿನಿಂದಲೂ ನಡೆದುಕೊಂಡು ಬಂದಿದೆ. ಭಜನಾ ಸಪ್ತಾಹ ಸಂಪನ್ನ- ಜಾತ್ರೆಯ ಅಂಗವಾಗಿ ಮೇ-5 ರಿಂದ ನಡೆದಿರುವ ನಿರಂತರ ಶಿವನಾಮಸ್ಮರಣೆಯ ಭಜನಾ ಸಪ್ತಾಹವು ಇಂದು ಸಂಪನ್ನಗೊಳ್ಳುವುದು. ಅಂದು ಸಂಜೆ 4.30 ಗಂಟೆಗೆ ಆರಂಭಗೊಳ್ಳುವ ಉಚ್ಚಾಯ ಬಂಡಿ ಉತ್ಸವವನ್ನು ಧಾರವಾಡ ಮುರುಘಾ ಮಠದ ಡಾ.ಮಲ್ಲಿಕಾರ್ಜುನ ಸ್ವಾಮೀಜಿ ಉದ್ಘಾಟಿಸುವರು. ಅಂಕಲಯ್ಯ ಯರಗಂಬಳಿಮಠ ಅವರ ವೈದಿಕತ್ವದಲ್ಲಿ ನಡೆಯಲಿದೆ.

ನೂತನ ಆರೋಗ್ಯ ಘಟಕ ಲೋಕಾರ್ಪಣೆ

ಹಾನಗಲ್: ಇಲ್ಲಿನ ತಾಲೂಕಾಸ್ಪತ್ರೆಯಲ್ಲಿ 15 ನೇ ಹಣಕಾಸು ಯೋಜನೆಯಡಿ 53 ಲಕ್ಷ ರು. ವೆಚ್ಚದಲ್ಲಿ ಹೊಸದಾಗಿ ನಿರ್ಮಿಸಿದ ಸಾರ್ವಜನಿಕ ಆರೋಗ್ಯ ಘಟಕ ಹಾಗೂ ಪ್ರಯೋಗಾಲಯದ ಕಟ್ಟಡವನ್ನು ಶಾಸಕ ಶ್ರೀನಿವಾಸ್ ಮಾನೆ ಉದ್ಘಾಟಿಸಿದರು.

ತಾಲೂಕಿನಲ್ಲಿ ಆರೋಗ್ಯ ಕ್ಷೇತ್ರಕ್ಕೆ ಅಗತ್ಯ ಮೂಲಭೂತ ಸೌಲಭ್ಯಗಳನ್ನು ಕಲ್ಪಿಸುವ ಮೂಲಕ ಗುಣಮಟ್ಟದ ಆರೋಗ್ಯ ಸೇವೆ ದೊರಕಿಸಲು ಕಾಳಜಿ ವಹಿಸಲಾಗಿದೆ. ಸ್ಥಳೀಯವಾಗಿ ಚಿಕಿತ್ಸೆ ಒದಗಿಸುವ ಉದ್ದೇಶದಿಂದ ಪ್ರಾಥಮಿಕ ಆರೋಗ್ಯ ಕೇಂದ್ರ ಹಾಗೂ ಆರೋಗ್ಯ ಕ್ಷೇಮ ಮತ್ತು ಉಪ ಕೇಂದ್ರಗಳಿಗೆ ಸುಸಜ್ಜಿತ ಕಟ್ಟಡ ನಿರ್ಮಿಸಲಾಗುತ್ತಿದೆ. ಶಿರಗೋಡ ಮತ್ತು ಕಲಕೇರಿ ಗ್ರಾಮಗಳ ಪ್ರಾಥಮಿಕ ಆರೋಗ್ಯ ಕೇಂದ್ರಗಳ ಹೊಸ ಕಟ್ಟಡ ನಿರ್ಮಾಣಕ್ಕೆ ಶೀಘ್ರ ಅನುದಾನ ಬಿಡುಗಡೆಯಾಗಲಿದೆ ಎಂದು ತಿಳಿಸಿದ ಶಾಸಕ ಮಾನೆ, ತಾಲೂಕಾಸ್ಪತ್ರೆಯಲ್ಲಿ ಸಹ ಸೌಲಭ್ಯಗಳನ್ನು ಹೆಚ್ಚಿಸಲಾಗುತ್ತಿದೆ. ಆರೋಗ್ಯ ಘಟಕ ಹಾಗೂ ಪ್ರಯೋಗಾಲಯದ ಕಟ್ಟಡದಿಂದ ಸಾರ್ವಜನಿಕರಿಗೆ ಅನುಕೂಲವಾಗಲಿದೆ. ಲಭ್ಯ ಸೌಲಭ್ಯ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಉತ್ತಮ ಚಿಕಿತ್ಸೆ ನೀಡುವಂತೆ ವೈದ್ಯರು ಹಾಗೂ ವೈದ್ಯಕೀಯ ಸಿಬ್ಬಂದಿಗೆ ಸೂಚಿಸಲಾಗಿದೆ. ಗ್ರಾಮೀಣ ಪ್ರದೇಶದಲ್ಲಿ ಸೇವೆ ಸಲ್ಲಿಸಲು ವೈದ್ಯಕರು ಹಿಂದೇಟು ಹಾಕುತ್ತಿದ್ದು, ಸಾರ್ವಜನಿಕರೂ ಸಹಕಾರ ನೀಡುವ ಮೂಲಕ ವೈದ್ಯಕೀಯ ಸೇವೆ ಪಡೆದುಕೊಳ್ಳುವಂತೆ ಕಿವಿಮಾತು ಹೇಳಿದರು.

ಆಡಳಿತ ವೈದ್ಯಾಧಿಕಾರಿ ಡಾ. ಬಸವರಾಜ, ಪುರಸಭೆ ಅಧ್ಯಕ್ಷ ಪರಶುರಾಮ ಖಂಡೂನವರ, ಉಪಾಧ್ಯಕ್ಷೆ ವೀಣಾ ಗುಡಿ, ಮಾಜಿ ಅಧ್ಯಕ್ಷ ಖುರ್ಷಿದ್‌ಅಹ್ಮದ್ ಹುಲ್ಲತ್ತಿ, ಮುಖಂಡರಾದ ಗುರುರಾಜ ನಿಂಗೋಜಿ, ರಾಜೂ ಗುಡಿ, ಡಾ.ಮಾರುತಿ ಚಿಕ್ಕಣ್ಣನವರ, ಮೇಕಾಜಿ ಕಲಾಲ, ಡಾ.ಅಖಿಲೇಷ ಮಾಳೋದೆ, ಬಸವರಾಜ ಡುಮ್ಮನವರ, ಇರ್ಫಾನ್ ಸೌದಾಗರ, ಪ್ರದೀಪ ಹರಿಜನ ಸೇರಿದಂತೆ ಇನ್ನೂ ಹಲವರು ಈ ಸಂದರ್ಭದಲ್ಲಿ ಉಪಸ್ಥಿತರಿದ್ದರು.

ಹಾನಗಲ್ ತಾಲೂಕಾಸ್ಪತ್ರೆಯಲ್ಲಿ 53 ಲಕ್ಷ ರು. ವೆಚ್ಚದಲ್ಲಿ ಹೊಸದಾಗಿ ನಿರ್ಮಿಸಿದ ಸಾರ್ವಜನಿಕ ಆರೋಗ್ಯ ಘಟಕ ಹಾಗೂ ಪ್ರಯೋಗಾಲಯದ ಕಟ್ಟಡವನ್ನು ಶಾಸಕ ಶ್ರೀನಿವಾಸ್ ಮಾನೆ ಉದ್ಘಾಟಿಸಿದರು.

ಗಾಂಧಿ ವಿವಿ ಗೋಶಾಲೆ ಕಾಮಗಾರಿ ಪರಿಶೀಲನೆ

ಗದಗ: ಜಿಲ್ಲಾ ಪಂಚಾಯತಿ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಭರತ್ ಎಸ್. ಅವರು ಶುಕ್ರವಾರ ವಿವಿಧ ಯೋಜನೆಗಳ ಅನುದಾನದಲ್ಲಿ ತಾಲೂಕಿನ ನಾಗಾವಿ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಅಭಿವೃದ್ಧಿ ಪಡಿಸಿದ ಕಾಮಗಾರಿಗಳನ್ನು ಪರಿಶೀಲಿಸಿದರು. ಜಿಲ್ಲಾ ಪಂಚಾಯತಿ ರಾಜ್ ಎಂಜಿನಿಯರಿಂಗ್ ಇಲಾಖೆಯಿಂದ ತಾಲೂಕಿನ ನಾಗಾವಿ ಗ್ರಾಮ ಪಂಚಾಯತಿ ವ್ಯಾಪ್ತಿಯ ಮಹಾತ್ಮಗಾಂಧಿ ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದ ಆವರಣದಲ್ಲಿ ನಿರ್ಮಿಸಲಾದ ಗೋಶಾಲೆ ಕಾಮಗಾರಿ ವೀಕ್ಷಿಸಿದರು. ದಿ. ವಿ.ಎಸ್. ಚಿಂಚಲಿ ಉನ್ನತೀಕರಿಸಿದ ಸರಕಾರಿ ಪ್ರೌಢಶಾಲೆಯ ಆಟದ ಮೈದಾನ ಮತ್ತು ಅಡುಗೆ ಕೋಣೆ ಕಾಮಗಾರಿ ವೀಕ್ಷಿಸಿ ಹಾಗೂ ಕಡತಗಳನ್ನು ಪರಿಶೀಲಿಸಿದರು. ಗ್ರಾಮದ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಗೆ ತೆರಳಿ ಮಕ್ಕಳ ಸಂಖ್ಯೆ ಅನುಗುಣವಾಗಿ ಕೊಠಡಿಗಳು ಇರುವ ಬಗ್ಗೆ ವಿಚಾರಿಸಿ ಮಾಹಿತಿ ಪಡೆದರು. ಈ ಸಂದರ್ಭದಲ್ಲಿ ಡಿಡಿಪಿಐ ಆರ್.ಎಸ್. ಬುರಡಿ, ಗದಗ ತಾಲೂಕು ಪಂಚಾಯತಿ ಸಹಾಯಕ ನಿರ್ದೇಶಕರು (ಉಖಾ) ಕುಮಾರ ಪೂಜಾರ, ಗದಗ ಗ್ರಾಮೀಣ ಬಿಇಒ ವಿ.ವಿ. ನಡುವಿನಮನಿ, ಡಿವೈಪಿಸಿ ಎಂ.ಎಚ್. ಕಂಬಳಿ, ಪ್ರೌಢಶಾಲೆಯ ಮುಖ್ಯ ಶಿಕ್ಷಕಿ ಜಯಶ್ರೀ ಏಕಬೋಟೆ, ಎಸ್‌ಡಿಎಂಸಿ ಅಧ್ಯಕ್ಷರು ಮಲ್ಲಪ್ಪ ಗೂಲಪ್ಪನವರ, ಗಣೇಶ ಪೂಜಾರ, ಐಇಸಿ ಸಂಯೋಜಕ ವೀರೇಶ ಬಸನಗೌಡ್ರ, ಪ್ರವೀಣ ಸೂಡಿ, ತಾಂತ್ರಿಕ ಸಹಾಯಕ ಅಜಯ ಅಬ್ಬಿಗೇರಿ, ಬಿಎಫ್‌ಟಿ ದುರ್ಗಪ್ಪ ಆಲೂರ ಇತರರಿದ್ದರು.

ಗಂಗಾವತಿ ಶಾಸಕ ಜನಾರ್ದನ ರೆಡ್ಡಿ ಅನರ್ಹ । ಕಾಂಗ್ರೆಸ್ ನಾಯಕತ್ವಕ್ಕೆ ಹೆಚ್ಚಿದ ಪೈಪೋಟಿ

ಗರಿಗೆದರಿದ ರಾಜಕೀಯ ಚುರುಕಾದ ನಾಯಕರು

ಶರಣಬಸವ ಹುಲಿಹೈದರ ಕೊಪ್ಪಳ



ಕೂಸು ಹುಟ್ಟುವ ಮೊದಲೇ ಕುಲಾವಿ ಹೊಲಿಸಿದ್ರು ಎಂಬ ಗಾದೆಯಂತೆ ಗಂಗಾವತಿ ವಿಧಾನಸಭೆ ಕ್ಷೇತ್ರದಲ್ಲಿ ಚುನಾವಣೆ ಘೋಷಣೆಗೂ ಮೊದಲೇ ರಾಜಕೀ ಯ ಚಟುವಟಿಕೆ ಗರಿಗೆದರಿವೆ. ಶಾಸಕ ಜನಾರ್ದನ ರೆಡ್ಡಿಗೆ ಸಿಬಿಐ ವಿಶೇಷ ನ್ಯಾಯಾಲಯ 7 ವರ್ಷದ ಜೈಲು ಶಿಕ್ಷೆ ಪ್ರಕಟಿಸಿದೆ. ಬೆನ್ನಲ್ಲೇ ವಿಧಾನಸಭೆ ಕಾರ್ಯದರ್ಶಿ ವಿಶಾ ಲಾಕ್ಷಿ ಶಾಸಕ ಸ್ಥಾನದಿಂದ ರೆಡ್ಡಿ ಅವರನ್ನು ಅನರ್ಹ ಗೊಳಿಸಿ ಅಧಿಸೂಚನೆ ಹೊರಡಿಸಿದ್ದಾರೆ. ಈ ಹಿನ್ನೆಲೆ ಗಂಗಾ ವತಿ ವಿಧಾನಸಭೆ ಕ್ಷೇತ್ರಕ್ಕೆ ಉಪ ಚುನಾವಣೆ ನಡೆಯಲಿದೆ ಎಂಬ ಪುಕಾರು ಹಬ್ಬಿರುವ ಹಿನ್ನೆಲೆ ಪ್ರಮುಖ ಮುಖಂ ಡರು ಭಾರಿ ಆ್ಯಕ್ಟಿವ್ ಆಗಿದ್ದಾರೆ.

ಸಿಬಿಐ ವಿಶೇಷ ನ್ಯಾಯಾಲಯದ ತೀರ್ಪಿಗೆ, ಆಂಧ್ರಪ್ರದೇಶ ಹೈಕೋರ್ಟ್ ತಡೆ ನೀಡಿದರೆ, ಜನಾರ್ದನ ರೆಡ್ಡಿ ಶಾಸಕರಾಗಿ ಮುಂದುವರೆಯುತ್ತಾರೆ. ಈ ವಿಷಯ ಸದ್ಯ ಉಪ ಚುನಾವಣೆಗೆ ತಯಾರಿ ಮಾಡುವ ರೀತಿಯಲ್ಲಿ ಓಡಾಡುತ್ತಿರುವ ಎರಡೂ ಪಕ್ಷದ ನಾಯಕರಿಗೂ ಗೊತ್ತಿದೆ. ಆದರೂ, ಉಭಯ ಪಕ್ಷದ ನಾಯಕರು, ಹೈಕೋರ್ಟ್ ತಡೆ ನೀಡದಿರಲೂ ಬಹುದು ಎಂಬ ಆಶಾ ಭಾವನೆಯಿಂದ ಚುನಾವಣೆ ತಯಾರಿಯಲ್ಲಿ ತೊಡಗಿದ್ದಾರೆ. ಜನಾರ್ದನ ರೆಡ್ಡಿ ಕೆಆರ್‌ಪಿಪಿಯಿಂದ ಆಯ್ಕೆ ಆಗಿದ್ದರೂ ಸದ್ಯ ಬಿಜೆಪಿಯಲ್ಲಿದ್ದಾರೆ.

ಒಂದೊಮ್ಮೆ ಉಪ ಚುನಾವಣೆ ನಡೆದರೆ ಬಿಜೆಪಿ ಪರಾಜಿತ ಅಭ್ಯರ್ಥಿ ಪರಣ್ಣ ಮುನವಳ್ಳಿ ಅವರೇ ಅಭ್ಯರ್ಥಿ ಎಂಬ ಮಾತು ಬಿಜೆಪಿ ವಲಯದಲ್ಲಿ ಕೇಳಿ ಬಂದಿವೆ. ಆದರೆ, ಕಾಂಗ್ರೆಸ್ ನಲ್ಲಿ ಆಕಾಂಕ್ಷಿಗಳ ಪಟ್ಟಿ ಹನುಮಂತನ ಬಾಲದಂತೆ ಬೆಳೆಯುತ್ತಿದೆ.

ಅನ್ಸಾರಿ ಹಿಮ್ಮುಖ: ಗಂಗಾವತಿ ಕ್ಷೇತ್ರದಲ್ಲಿ ಇಷ್ಟೆಲ್ಲ ಬೆಳವಣಿಗೆ ನಡೆಯುತ್ತಿದ್ದರೂ ಕಳೆದ ಚುನಾವಣೆಯ ಪಾರಾಜಿತ ಅಭ್ಯರ್ಥಿ ಇಕ್ಬಾಲ್ ಅನ್ಸಾರಿ ಹಾಜರಾತಿ ಎಲ್ಲೂ ಕಾಣುತ್ತಿಲ್ಲ. ಈ ಹಿನ್ನೆಲೆಯಲ್ಲಿ ಈಗಾಗಲೇ ಅನ್ಸಾರಿ ಜತೆಗೆ ಅಂತರ ಕಾಯ್ದುಕೊಂಡಿರುವ ಗಂಗಾವತಿ ಕಾಂಗ್ರೆಸ್‌ನ ಎರಡನೇ ಹಂತದ ನಾಯಕರು ಕ್ಷೇತ್ರದಲ್ಲಿ ಆ್ಯಕ್ಟಿವ್ ಆಗಿದ್ದಾರೆ. ಕೊಪ್ಪಳ ಶಾಸಕ-ಸಂಸದರ ಆಪ್ತ ಹನುಮಂತಪ್ಪ ಅರಸಿನಕೇರಿ ಮತ್ತು ನಗರಸಭೆ ಸದಸ್ಯ ಶ್ಯಾಮೀದ್ ಮನಿಯಾರ್ ತಂಡ ಕ್ಷೇತ್ರದಲ್ಲಿ ಸದ್ದಿಲ್ಲದೇ ಓಡಾಟ ಶುರು ಮಾಡಿದ್ದಾರೆ. ಹನುಮಂತಪ್ಪ ಆಸರಂಕೇರಿ ಪರ ಸೋಷಿಯಲ್ ಮೀಡಿಯಾದಲ್ಲಿ ಅವರ ಬೆಂಬಲಿಗರು ಪ್ರಚಾರವನ್ನೂ ಶುರು ಮಾಡಿದ್ದಾರೆ. ಈ ಮೂಲಕ ಈ ಬಾರಿ ಕಾಂಗ್ರೆಸ್ ಟಿಕೆಟ್ ಇಕ್ಬಾಲ್ ಅನ್ಸಾರಿ ಅವರಿಗೆ ಅಷ್ಟೊಂದು ಸುಲಭವಾಗಿ ದಕ್ಕುವುದು ಸಾಧ್ಯವಿಲ್ಲ ಎಂಬ ಸಂದೇಶವನ್ನು ಕ್ಷೇತ್ರದ ಮತದಾರರು ಮತ್ತು ಅನ್ಸಾರಿ ಕಟ್ಟರ್ ಬೆಂಬಲಿಗರಿಗೆ ನೀಡುವ ಉದ್ದೇಶವೂ ಇದರ ಹಿಂದಿದೆ ಎಂಬ ಮಾತು ಕೇಳಿ ಬಂದಿವೆ.

> ನ್ಯಾಯಾಲಯದ ತೀರ್ಪಿಗೆ ತಡೆ ಸಿಗುತ್ತದೆ ಎಂದು ಕೆಲವರು ಹೇಳುತ್ತಿದ್ದಾರೆ. ಇನ್ನೂ ಹಲಮಂ ಕಷ್ಟ ಸಾಧ್ಯ ಎಂದೂ ಹೇಳುತ್ತಿದ್ದಾರೆ. ಏನೇ ಆದೂರ ನಾವಂತೂ ಚುನಾವಣೆ ಮಾಡಲು ಯಾವತ್ತೂ ಸಿದ್ಧ. ಸದ್ಯ ಹಿಂದಿನ ಪರಾಜಿತ ಅಭ್ಯರ್ಥಿ ಜೊತೆಗೆ ಮಾಜಿ ಸಂಸದ ಸಂಗಣ್ಣ ಕರಡಿ ಹಾಗೂ ಹನುಮಂತಪ್ಪ ಅರಸನಕೇರಿ ಸರ್ಧೆಗೆ ಉತ್ಸುಕರಾಗಿದ್ದಾರೆ. ಹನುಮಂತಪ್ಪ ಕಳೆದ 2024ರಲ್ಲಿ ವಿದ್ಯಾರ್ಥಿ ಕಾಂಗ್ರೆಸ್ ನ ಜಿಲ್ಲಾಧ್ಯಕ್ಷ ಆಗಿದ್ದಾಗಿನಿಂದ ಕಾಂಗ್ರೆಸ್ ಸಂಘಟನೆ ಮಾಡಿಕೊಂಡು ಬಂದಿದ್ದಾರೆ. ಹೊಸ ಮುಖ, ಗೆಲ್ಲುವು ಕುದುರೆಗೆ ಟಿಕೆಟ್ ಕೊಡಬೇಕು ಎಂಬುದು ನನ್ನ ಮನವಿ. ಪಕ್ಷ ಆಯ್ಕೆ ಮಾಡುವ ಅಭ್ಯರ್ಥಿ ಪರ ಪ್ರಾಮಾಣಿಕವಾಗಿ ಕೆಲಸ ಮಾಡುತ್ತೇನೆ.
>
> - ಶ್ಯಾಮೀದ್ ಮನಿಯಾರ್, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ

ಸದಸ್ಯತ್ವ ಅಭಿಯಾನಕ್ಕೆ ಸಹಕಾರ!

ಕಳೆದ 2023ರ ವಿಧಾನಸಭೆ ಚುನಾವಣೆಗೂ ಮೊದಲು ಕಾಂಗ್ರೆಸ್ ಸದಸ್ಯತ್ವ ಅಭಿಯಾನ ಆರಂಭಿಸಿತ್ತು. ಈ ವೇಳೆ ಗಂಗಾವತಿ ವಿಧಾನಸಭೆ ಕ್ಷೇತ್ರ ವ್ಯಾಪ್ತಿಯಲ್ಲಿ ಬರೋಬ್ಬರಿ 80 ಸಾವಿರ ಆನ್ ಲೈನ್ ಸದಸ್ಯತ್ವ ಮಾಡಿಸಲಾಗಿತ್ತು. ಇದು ಇಡೀ ರಾಜ್ಯದಲ್ಲಿ ನಂ.1 ಎಂಬ ಹೆಗ್ಗಳಿಕೆಗೂ ಪಾತ್ರ ವಾಗಿ ತ್ತು. ಆದರೆ, ಈ ಸದಸ್ಯತ್ವ ಅಭಿಯಾನದ ಹಿಂದೆ ಹನುಮ ಂತಪ್ಪ ಅರಸಿನಕೇರಿ ಅವರ ತಂಡ ಗಟ್ಟಿಯಾಗಿ ಕೆಲಸ ಮಾಡಿ ತ್ತು ಎಂಬುದನ್ನು ಈಗ ಅವರ ಬೆಂಬಲಿಗರು ಸಾಮಾ ಜಿಕ ಜಾಲತಾಣದಲ್ಲಿ ಹಂಚಿಕೊಳ್ಳುತ್ತಿದ್ದಾರೆ. ಈ ಮೂಲಕ ಅನ್ಸಾರಿ ಅವರ ಹಿಂದಿನ ಶಕ್ತಿಯೇ ಹನುಮಂತಪ್ಪ ಅರಸಿನ ಕೇರಿ ಮತ್ತು ಶ್ಯಾಮೀದ್ ಮನಿಯಾರ್ ಟೀಂ ಎಂಬುದನ್ನು ಪಕ್ಷದ ಹೈಕಮಾಂಡ್ ಗೆ ತೋರಿಸುವ ಕೆಲಸ ಸದ್ದಿಲ್ಲದೇ ನಡೆದಿದೆ.

ನೀರಿಗಾಗಿ ಶಾಸಕರಿಗೆ ಮುತ್ತಿಗೆ



ದಲಿತ ಸಂಘಟನೆಗಳ ಮುಖಂಡರು ಕುಡಿಯುವ ನೀರಿಗಾಗಿ ಮುತ್ತಿಗೆ ಹಾಕಿ ವಾಗ್ವಾದ ನಡೆಸಿದರು.

ಮುದಗಲ್: ಪಟ್ಟಣದ ಪುರಸಭೆಗೆ 2021 ರಿಂದ 2024 ರಲ್ಲಿನ 15 ನೇ ಹಣಕಾಸು ಯೋಜನೆಯ ಅಡಿಯಲ್ಲಿ 6 ಆಟೋ ಟಿಪ್ಪರ್ ಹಾಗೂ 1 ಟ್ರ್ಯಾಕ್ಟರ್ ಟ್ರಾಲಿ ಉದ್ಘಾಟನೆಗೆ ಆಗಮಿಸಿದ್ದ ಲಿಂಗಸ್ಗೂರು ಶಾಸಕ ಮಾನಪ್ಪ ವಜ್ಜಲರಿಗೆ ದಲಿತ ಸಂಘಟನೆಗಳ ಮುಖಂಡರು ಕುಡಿಯುವ ನೀರಿಗಾಗಿ ಮುತ್ತಿಗೆ ಹಾಕಿ ವಾಗ್ವಾದ ನಡೆಸಿದ ಘಟನೆ ಜರುಗಿದೆ.

ಪಟ್ಟಣದಲ್ಲಿ ದಲಿತ ಸಂಘನೆಯ ಮುಖಂಡರಾದ ಶರಣಪ್ಪ ಕಟ್ಟಿಮನಿ, ಬಸವರಾಜ ಬಂಕದಮನಿ, ಕೃಷ್ಣಾ ಚಲುವಾದಿ ಅವರು ಕಳೆದ 2 ವರ್ಷಗಳಿಂದ ಶಾಸಕರಾಗಿದ್ದೀರಿ ಮುದಗಲ್ ಪಟ್ಟಣಕ್ಕೆ ಈಗ 15 ದಿನಗಳಿಗೊಮ್ಮೆ ನೀರು ಸರಬರಾಜುವಾಗುತ್ತಿದೆ. ಆದರೆ ಕುಡಿಯುವ ನೀರಿಗಾಗಿ ಏನು ಕ್ರಮ ತೆಗೆದುಕೊಂಡಿರಿ.

ನಿಮ್ಮ ಕೊಡುಗೆ ಏನು ಎಂದು ಪ್ರಶ್ನಿಸಿದಾಗ ಶಾಸಕರ ಬೆಂಬಲಿಗರು ಇಂದಿನ ಅವಧಿಯಲ್ಲಿ ಹೂಲಗೇರಿ ಅವರು ಯಾವ ಕ್ರಮ ತೆಗೆದುಕೊಡಿದ್ದಾರೆ ಎಂದಾಗ ಬಿಜೆಪಿ ಜಿಲ್ಲಾದ್ಯಕ್ಷ ವೀರನಗೌಡ ಲೆಕ್ಕಿಹಾಳ ಅವರು ಸಂಘಟನೆಯವರು ಮೊದಲು ಕುಡಿಯುವ ನೀರಿಗಾಗಿ ಮನವಿ ಮಾಡಿಕೊಡಬೇಕಿತ್ತು.

ಆದರೆ ಶಾಸಕರ ಮೇಲೆ ಗುಂಡಾ ವರ್ತನೆ ಮಾಡುತ್ತಿರುವುದು ಸಮಂಜಸವಲ್ಲ ಎಂದು ಏರುದ್ವನಿಯಲ್ಲಿ ಸಂಘಟನೆವರ ಮೇಲೆ ವಾಗ್ವಾದ ನಡೆಸಿದರು.

ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಿ ವಾಹನಗಳ ಉದ್ಘಾಟನೆಗೆ ಚಾಲನೆ ನೀಡಿ ಎಂದು ಸಂಘಟನೆಯವರು ಪಟ್ಟು ಹಿಡಿದರು.

ನಂತರ ಗ್ಯಾರಂಟಿ ಯೋಜನೆಗಳ ಜಿಲ್ಲಾದ್ಯಕ್ಷ ಪಾಮಯ್ಯ ಮುರಾರಿ ಮದ್ಯಪ್ರವೇಶಿಸಿ ಸಂಘಟನೆಯವರಿಗೆ ಪುರಸಭೆಯಲ್ಲಿ ಕುಳಿತುಕೊಂಡು ನೀರಿನ ಸಮಸ್ಯೆ ಕುರಿತು ಮಾತನಾಡೋಣ ಎಂದು ತಿಳಿ ಹೇಳಿದಾಗ ಸಂಘಟನೆಯವರು ಶಾಂತವಾದರು.

ಪುರಸಭೆಯಲ್ಲಿ ಕುಡಿಯುವ ನೀರಿಗಾಗಿ ವಾಗ್ವಾದ ನಡೆದರೂ ಆವರಣದಲ್ಲಿ ಅದ್ಯಕ್ಷರು, ಉಪಾದ್ಯಕ್ಷರು,ಸರ್ವ ಸದಸ್ಯರು ಮೂಕ ಪ್ರೇಕ್ಷಕರಾಗಿ ನಿಂತಿರುವುದು ಸಾರ್ವಜನಿಕರ ಚರ್ಚೆಗೆ ಗ್ರಾಸವಾಯಿತು. ನಂತರ ಕಸ ವಿಲೇವಾರಿ ವಾಹನಗಳಿಗೆ ಶಾಸಕ ಮಾನಪ್ಪ ಚಾಲನೆ ನೀಡಿ ಮಾತನಾಡಿದಾಗ, 2-3 ತಿಂಗಳಲ್ಲಿ ಅಮೃತ ಯೋಜನೆಯಡಿಯಲ್ಲಿ ಮುದಗಲ್ ಪಟ್ಟಣಕ್ಕೆ ಕುಡಿಯುವ ನೀರಿನ ವ್ಯವಸ್ಥೆ ಮಾಡಲಾಗುವುದು ಎಂದರು.

ಈ ಸಂದರ್ಭದಲ್ಲಿ ವಿಧಾನ ಪರಿಷತ್ ಸದಸ್ಯ ಶರಣಗೌಡ ಪಾಟೀಲ್ ಬಯ್ಯಾಪೂರ ಸೇರಿದಂತೆ ಇತರರಿದ್ದರು.

ಸಮಾಚಾರ ಸಣ್ಣದಲ್ಲ

ಬದುಕಿಗೆ ಸೌಹಾರ್ದತೆ ಮುಖ್ಯ: ಅಮ್ಜದ್

ಕೊಪ್ಪಳ: ಪರಸ್ಪರ ಸೌಹಾರ್ದತೆ ಬೆಳೆಸಿಕೊಂಡು ಜೀವನ ಸಾಗಿಸಿದರೆ ಬದುಕು ಸಾರ್ಥಕ- ಆಗಲಿದೆ ಎಂದು ನಗರಸಭೆ ಅಧ್ಯಕ್ಷ ಅಮ್ಜದ್ ಪಟೇಲ್ ಹೇಳಿದರು. ನಗರದ ಹಮಾಲರ ಕಾಲನಿಯಲ್ಲಿ ಹಮ್ಮಿಕೊಂಡಿದ್ದ ಕೋರಮ್ಮ ದೇವಿ ಜಾತ್ರೋತ್ಸವ ಕಾರ್ಯಕ್ರಮದಲ್ಲಿ ಗುರುವಾರ ಮಾತನಾಡಿದರು. ಹಬ್ಬಹರಿದಿನಗಳಲ್ಲಿ ನಾವುಗಳು ಪರಸ್ಪರ ಭಾವೈಕ್ಯತೆ ಬೆಳೆಸಿಕೊಂಡು ಆಚರಣೆ ಮಾಡಬೇಕು. ಸೌಹಾರ್ದತೆಯಿಂದ ವರ್ತಿಸಬೇಕು. ಹಮಾಲರ ಬಡಾವಣೆ ಸೌಹಾರ್ದತೆಗೆ ಹೆಸರಾಗಿದೆ. ಯಾವುದೇ ಹಬ್ಬ ಬಂದರೂ ಎಲ್ಲರೂ ಒಗ್ಗೂಡಿ ಆಚರಿಸುತ್ತಾರೆ. ಇದು ಎಲ್ಲರಿಗೆ ಮಾದರಿ. ಎಲ್ಲರೂ ಸಹೋದರತ್ವ ಭಾವದಿಂದ ನಡೆದುಕೊಳ್ಳುತ್ತಾರೆ. ಹಬ್ಬಗಳು ನಮ್ಮ ಸಂಸತಿ ಪ್ರತಿಕ. ಬಡ ಜನರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ರಕ್ತದಾನ ಶಿಬಿರ, ನೇತ್ರ ತಪಾಸಣಾ ಶಿಬಿರ ಹಮ್ಮಿಕೊಂಡಿದ್ದು ಉತ್ತಮ ಕೆಲಸ ಎಂದು ಪ್ರಶಂಸಿದರು. ಜೆಡಿಎಸ್ ರಾಜ್ಯ ಕೋರ್ ಕಮಿಟಿ ಸದಸ್ಯ ಸಿ.ವಿ.ಚಂದ್ರಶೇಖರ, ನಗರಸಭೆ ಉಪಾಧ್ಯೆ ಅಶ್ವಿನಿ ಗದುಗಿನ ಮಠ, ಜಿಪಂ ಮಾಜಿ ಸದಸ್ಯ ಗೂಳಪ್ಪ ಹಲಗೇರಿ, ಪ್ರಮುಖರಾದ ಸಂತೋಷ ದೇಶಪಾಂಡೆ, ಮಹಾಲಕ್ಷೀ ಕಂದಾರಿ, ಕೋರಮ್ಮ ದೇವಸ್ಥಾನ ಸಮಿತಿ ಅಧ್ಯಕ್ಷ ವೇಣು ಲಡ್ಡು, ಉಪಾಧ್ಯಕ್ಷ ದೇವಪ್ಪ ಚಿಗರಿ, ಪದಾಧಿಕಾರಿಗಳಾದ ಶಿವಾಜಿ ಗುದಗಿ, ಹನುಮಂತಪ್ಪ ಬನ್ನಿಕೊಪ್ಪ, ಇದ್ದರು.

ರೆಡ್‌ಕ್ರಾಸ್ ಸಂಸ್ಥೆ ದಿನ ಆಚರಣೆ

ಕೊಪ್ಪಳ: ರೆಡ್‌ಕ್ರಾಸ್ ಸಂಸ್ಥೆ ಸೇರುವ ಮೂಲಕ ಯುವಕರು ದೇಶ ಸೇವೆಯಲ್ಲಿ ತೊಡಗಿಕೊಳ್ಳಬಹುದು ಎಂದು ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮಾಧಿಕಾರಿ ಬಸವರಾಜ ಎಂ.ಎಸ್. ತಿಳಿಸಿದರು. ನಗರದ ಕಾನೂನು ಮಹಾವಿದ್ಯಾಲಯದಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ರೆಡ್? ಕ್ರಾಸ್? ದಿನಾಚರಣೆ ಕಾರ್ಯಕ್ರಮದಲ್ಲಿ ಮಾತನಾಡಿದರು. 1863ರಲ್ಲಿ ಅಂತಾರಾಷ್ಟ್ರೀಯ ರೆಡ್ ಕ್ರಾಸ್ ಸಂಸ್ಥೆ ಜಿನೇವಾದಲ್ಲಿ ಸ್ಥಾಪನೆಯಾಗಿದೆ. 1920ರಲ್ಲಿ ಭಾರತದಲ್ಲಿ 1921ರಲ್ಲಿ ರಾಜ್ಯದಲ್ಲಿ ಸ್ಥಾಪನೆ ಆಗಿದೆ. ಈ ಸಂಸ್ಥೆಯು ಮುಖ್ಯವಾಗಿ 7 ಮೂಲಭೂತ ಅಂಶಗಳನ್ನು ಒಳಗೊಂಡಿದೆ. ಪ್ರತಿ ವರ್ಷ ಮೇ 8ರಂದು ಹೆನ್ರಿ ಡ್ಯೂನೆಂಟ್? ಅವರ ಜನ್ಮ ದಿನವನ್ನು ವಿಶ್ವ ರೆಡ್‌ಕ್ರಾಸ್ ದಿನವಾಗಿ ಆಚರಿಸಲಾಗುತ್ತಿದೆ ಎಂದರು. ಪ್ರಾಚಾಯೆರ್ ಉಮಾದೇವಿ ಹಿರೇಮಠ ಮಾತನಾಡಿ, ಯಾವುದೇ ಪ್ರದೇಶದಲ್ಲಿ ಭೂಕಂಪ, ನೈಸರ್ಗಿಕ ವಿಪತ್ತು ಅಥವಾ ಮಾನವ ನಿರ್ಮಿತ ವಿಪತ್ತು ಉದ್ಭವಿಸಿದರೆ ರೆಡ್‌ಕ್ರಾಸ್ ಅಲ್ಲಿ ಸೇವೆ ಸಲ್ಲಿಸುತ್ತದೆ. ಕೊಪ್ಪಳ ರೆಡ್‌ಕ್ರಾಸ್ ಸಂಸ್ಥೆಯೂ ಅನೇಕ ಸೇವೆ ಸಲ್ಲಿಸಿದೆ ಎಂದರು. ಕೊಪ್ಪಳ ರೆಡ್‌ಕ್ರಾಸ್ ಸಂಸ್ಥೆ ಸಭಾಪತಿ ಸೋಮರಡ್ಡಿ ಅಳವಂಡಿ, ಉಪನ್ಯಾಸಕರಾದ ಯು.ಎಸ್. ಸೊಪ್ಪಿಮಠ, ಇತರರಿದ್ದರು.

ಅಕ್ರಮ ಪಡಿತರ ಸಾಗಣೆ: ವಶಕ್ಕೆ

ಹೊಸಪೇಟೆ: ಹೊಸಪೇಟೆ ತಾಲೂಕಿನಲ್ಲಿ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಚೀಟಿದಾರರಿಗೆ ವಿತರಿಸುವ ಅಕ್ಕಿ ಮತ್ತು ರಾಗಿಯನ್ನು ಅಕ್ರಮವಾಗಿ ಸಾಗಣೆ ಮಾಡುತ್ತಿರುವುದನ್ನು ಮೇ 6 ರಂದು ಪತ್ತೆಮಾಡಿ 182.6 ಕ್ವಿಂಟಾಲ್ ಅಕ್ಕಿ ಮತ್ತು 10.50 ಕ್ವಿಂಟಾಲ್ ರಾಗಿಯನ್ನು ವಶಪಡಿಸಿಕೊಳ್ಳಲಾಗಿದೆ ಎಂದು ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಉಪನಿರ್ದೇಶಕರಾದ ರಿಯಾಜ್ ತಿಳಿಸಿದ್ದಾರೆ. ಇವರ ಮೇಲೆ ಅಗತ್ಯ ವಸ್ತುಗಳ ಕಾಯ್ದೆಯಡಿ ನಾಲ್ಕು ಪ್ರಕರಣಗಳನ್ನು ದಾಖಲಿಸಲಾಗಿದೆ. ಸಾಗಣೆ ಮಾಡುತ್ತಿದ್ದ 1 ವಾಹನ ಸೇರಿ ಮೂರು ಗೋದಾಮುಗಳನ್ನು ಸೀಜ್ ಮಾಡಲಾಗಿದೆ. ಇಬ್ಬರು ಆರೋಪಿಗಳನ್ನು ಪೊಲೀಸ್ ವಶಕ್ಕೆ ನೀಡಿ ಮುಂದಿನ ತನಿಖೆ ಕೈಗೊಳ್ಳಲಾಗುತ್ತಿದೆ. ಸೀಜ್ ಮಾಡಿದ ಆಹಾರ ಧಾನ್ಯದ ಮೌಲ್ಯ ರೂ.6,05,660 ಗಳಾಗಿರುತ್ತದೆ.

ಹೇಮರಡ್ಡಿ ಮಲ್ಲಮ್ಮ ಜಯಂತಿ ಆಚರಣೆ

ಮುದಗಲ್: ಪಟ್ಟಣದ ಪುರಸಭೆ, ನಾಢಕಛೇರಿ, ರೈತ ಸಂಪರ್ಕ ಕೇಂದ್ರ, ಸೇರಿದಂತೆ ಶಾಲಾ ಕಾಲೇಜು, ಸುತ್ತಲಿನ ಗ್ರಾ.ಪಂ ಗಳಲ್ಲಿ ಮಹಾಸಾದ್ವಿ ಹೇಮರಡ್ಡಿ ಮಲ್ಲಮ್ಮ ಜಯಂತಿಯನ್ನು ಶನಿವಾರ ಆಚರಿಸಿದರು. ಪುರಸಭೆ ಕಾರ್ಯಾಲಯದಲ್ಲಿ ಮಹಾಸಾದ್ವಿ ಹೇಮರಡ್ಡಿ ಮಲ್ಲಮ್ಮ ಅವರ ಭಾವಚಿತ್ರಕ್ಕೆ ಸಮಾಜದ ಮುಖಂಡ ಸುರೇಂದ್ರ,ಗೌಡ ಪಾಟೀಲ್ ಪೂಜೆ ಸಲ್ಲಿಸುವ ಮೂಲಕ ಜಯಂತಿ ಆಚರಿಸಿದರು. ಈ ಸಂದರ್ಭದಲ್ಲಿ ಪುರಸಭೆ ಅದ್ಯಕ್ಷೆ ಮಹಾದೇವಮ್ಮ ಗುತ್ತೇದಾರ, ಮುಖ್ಯಾಧಿಕಾರಿ ನರಸರಡ್ಡಿ, ಸದಸ್ಯರಾದ ಅಮೀರ್ ಬೇಗ್ ಉಸ್ತಾದ್, ದುರ್ಗಪ್ಪ ಕಟ್ಟಿಮನಿ, ತಸ್ಲಿಂ ಮುಲ್ಲಾ, ಶಿವನಾಗಪ್ಪ, ಹನಮಂತ, ಬಾಬು ಉಪ್ಪಾರ, ಬಿಜೆಪಿ ಅಧ್ಯಕ್ಷ ಕರಿಯಪ್ಪ ಯಾದವ್, ಹುಸೇನ್ ಅಲಿ, ಸತೀಶ ಬೋವಿ, ಸಣ್ಣಸಿದ್ದಯ್ಯ, ರವಿಕಟ್ಟಿಮನಿ, ವೆಂಕಟೇಶ, ಮುಜಾಕೀರ್ ಸೇರಿದಂತೆ ಇತರರು ಇದ್ದರು.

ವಿರಾಮ
ಪ್ರತಿ ಭಾನುವಾರ

{ ಡಿ.ಕೆ.ಶಿವಕುಮಾರ್ } ಉಪ ಮುಖ್ಯಮಂತ್ರಿ

ಕರಾವಳಿ ಭಾಗದ ಜನ ಹೆಚ್ಚು ಬುದ್ಧಿವಂತರು, ವಿದ್ಯಾವಂತರು. ಅತಿ ಹೆಚ್ಚು ವಿದ್ಯಾವಂತರು ಇರುವ ಜಿಲ್ಲೆ ದಕ್ಷಿಣ ಕನ್ನಡ. ದೇಶದಲ್ಲಿ ಅತಿ ಹೆಚ್ಚು ಬ್ಯಾಂಕುಗಳನ್ನು ಕೊಟ್ಟ ನೆಲ ಇದು. ಈ ಪರಂಪರೆ ನೀವು ಉಳಿಸಿಕೊಳ್ಳಬೇಕು. ಪ್ರತಿಭಾವಂತರು ಉದ್ಯೋಗಕ್ಕಾಗಿ ಹೊರದೇಶಕ್ಕೆ ಹೋಗುತ್ತಿದ್ದಾರೆ. ಅವರು ವಿದ್ಯೆ ಪಡೆದು ಇಲ್ಲೇ ಉದ್ಯೋಗ ಮಾಡುವಂತಾಗಲು ನಾವು ಶ್ರಮಿಸಬೇಕು.

ನರೇಗಾ ಕಾಮಗಾರಿ ಸ್ಥಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ

ಶೈಕ್ಷಣಿಕ ಜಾಗೃತಿಯಿಂದ ನಿರುದ್ಯೋಗ ದೂರ



ಕಂದಕೂರು ಗ್ರಾಪಂ ವ್ಯಾಪ್ತಿಯ ನೆರೆಬೆಂಚಿ ಗ್ರಾಮದ ನರೇಗಾ ಕಾಮಗಾರಿ ಸ್ಥಳದಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು.

ಕುಷ್ಟಗಿ: ಕಲ್ಯಾಣ ಕರ್ನಾಟಕ ಭಾಗದ ನಿರುದ್ಯೋಗಿ ಯುವಕ, ಯುವತಿಯರಿಗೆ 371ಜೆ ಕಲಂ ವರದಾನ. ಈ ಕಲಂ ಅನ್ನು ಈ ಭಾಗದವರು ಸದುಪಯೋಗ ಮಾಡಿಕೊಳ್ಳಬೇಕಿದ್ದು, ಶೈಕ್ಷಣಿಕ ಜಾಗೃತಿಯಿಂದ ನಿರುದ್ಯೋಗ ದೂರವಾಗಲಿದೆ ಎಂದು ಕಲಾವಿದ ಬಸವರಾಜ ಉಪ್ಪಲದಿನ್ನಿ ಅಭಿಪ್ರಾಯಪಟ್ಟರು.

ತಾಲೂಕಿನ ಕಂದಕೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ನೆರೆಬೆಂಚಿ ಗ್ರಾಮದಲ್ಲಿನ ನರೇಗಾ ಕಾಮಗಾರಿ ಸ್ಥಳದಲ್ಲಿ ಸಂಘ-ಸಂಸ್ಥೆಗಳ ಧನಸಹಾಯ ಯೋಜನೆಯಡಿ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಪ್ರಾಸ್ತಾವಿಕವಾಗಿ ಮಾತನಾಡಿದರು.

ಜನಜಾಗೃತಿ ಕಲಾರಂಗ ಸಂಸ್ಥೆ ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ. ರಾಷ್ಟ್ರೀಯ ಯೋಜನೆಗಳು ಜನ ಸಾಮಾನ್ಯರಿಗೆ ತಲುಪಬೇಕು. ಶಿಕ್ಷಣದ ಅವಶ್ಯಕತೆ ಬಹಳಷ್ಟಿದ್ದು, ಎಲ್ಲ ಮಕ್ಕಳನ್ನು ಕಡ್ಡಾಯವಾಗಿ ಶಾಲೆಗೆ ಕಳುಹಿಸುವ ಮೂಲಕ ಅವರ ಭವಿಷ್ಯ ರೂಪಿಸಬೇಕಿದೆ. ಆಗ ಮಕ್ಕಳು ಉನ್ನತ ಶಿಕ್ಷಣ ಮತ್ತು ಉದ್ಯೋಗ ಪಡೆಯಲು ಸಾಧ್ಯ. ಪರಿಸರದ ಸ್ವಚ್ಛತೆ ಬಹಳ ಮುಖ್ಯ. ಮಾಲಿನ್ಯವನ್ನು ತೊಡೆದು ಹಾಕಬೇಕಿದೆ ಎಂದರು. ನಂತರ ಸ್ವಚ್ಛತೆ ಕುರಿತು ಜಾಗೃತಿ ಗೀತೆಯನ್ನು ಹಾಡಿ ಗಮನ ಸೆಳೆದರು.

ನೆರೆಬೆಂಚಿ ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಜಯಮ್ಮ ಬಸವರಾಜ ಉಪ್ಪಲದಿನ್ನಿ ತಮಟೆ ಬಾರಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಜನಜಾಗೃತಿ ಕಲಾರಂಗ ಸಂಸ್ಥೆಯ ಅಧ್ಯಕ್ಷ ಹಾಗೂ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಶರಣಪ್ಪ ವಡಿಗೇರಿ ಅಧ್ಯಕ್ಷತೆ ವಹಿಸಿದ್ದರು. ನಂತರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಶರಣಪ್ಪ ಬನ್ನಿಗೋಳ, ಸುಗ್ಗಿಯ ಹಾಡು ಹಾಗೂ ದೇವೇಂದ್ರಪ್ಪ ಕಮ್ಮಾರ ಅವರಿಂದ ವಚನ ಗಾಯನ, ವೀರಯ್ಯ ಹಿರೇಮಠ ಮತ್ತು ಬಸವರಾಜ ಉಪ್ಪಲದಿನ್ನಿ ಅವರಿಂದ ಜಾಗೃತಿ ಗೀತೆ ಮೂಲಕ ಜನಮನ ರಂಜಿಸಿದರು. ಶಿವಲಿಂಗಪ್ಪ ಪೂಜಾರ ಅವರ ಕಲಾ ತಂಡದವರಿಂದ ಸ್ವಚ್ಛಭಾರತ ಮತ್ತು ಶೈಕ್ಷಣಿಕ ಜಾಗೃತಿ ವಿಷಯದ ಕುರಿತು ಅರಿವು ಮೂಡಿಸುವ ಬೀದಿ ನಾಟಕ ಕಾರ್ಯಕ್ರಮ ಪ್ರದರ್ಶಿಸಿದರು. ನೆರೆಬೆಂಚಿ ಗ್ರಾಪಂ ಸದಸ್ಯರಾದ ಶೇಖಪ್ಪ ಮ್ಯಾಗಳಮನಿ, ಹನಮಗೌಡ ಪಾಟೀಲ್, ಶರಣಪ್ಪ ಮೇಟಿ, ಚಂದ್ರಶೇಖರ ಗದ್ದಿ, ಭರಮಣ್ಣ ಕಲಗೋಡಿ, ದುರುಗವ್ವ, ಲೋಕೇಶ ಪಾಟೀಲ್, ಬಾನುಬೇಗಂ, ಮಂಜುನಾಥ, ಶರಣಗೌಡ, ನಾಗರಾಜ ಇದ್ದರು.

ವಿವಿಧ ಕಾಮಗಾರಿಗೆ ಶಾಸಕ ಚಾಲನೆ



ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗೆ ಹೊಸಪೇಟೆ ಶಾಸಕ ಹೆಚ್.ಆರ್. ಗವಿಯಪ್ಪ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ಹೊಸಪೇಟೆ: ಕಮಲಾಪುರದ ವಾಲ್ಮೀಕಿ ವೃತ್ತದ ಬಳಿಯಿರುವ ನೀರು ಸರಬರಾಜು ಕೇಂದ್ರದ ಆವರಣದಲ್ಲಿ ಕೇಂದ್ರ ಸರಕಾರದ ಅಮೃತ್ 2.0 ಯೋಜನೆಯಡಿ ಕಮಲಾಪುರ ಪಟ್ಟಣಕ್ಕೆ ಸುಧಾರಿತ ಕುಡಿಯುವ ನೀರು ಸರಬರಾಜು ಯೋಜನೆಯ ಕಾಮಗಾರಿಗೆ ಹೊಸಪೇಟೆ ಶಾಸಕ ಹೆಚ್.ಆರ್.ಗವಿಯಪ್ಪ ಶುಕ್ರವಾರ ಭೂಮಿಪೂಜೆ ನೆರವೇರಿಸಿದರು.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿ, ನಗರದಲ್ಲಿ ಕುಡಿಯುವ ನೀರಿನ ಶಾಶ್ವತ ಪರಿಹಾರಕ್ಕಾಗಿ ಅಮೃತ್ 2.0 ಯೋಜನೆಯಡಿ ಕುಡಿಯುವ ನೀರು ಸರಬರಾಜು ಘಟಕ ಆರಂಭವಾಗಲಿದೆ. ಇದರಲ್ಲಿಯೇ ಪಟ್ಟಣದಲ್ಲಿ ಫೀಡರ್ ಮೇನ್ ಕೊಳವೆ ಮಾರ್ಗ, 10 ಲಕ್ಷ ಲೀಟರ್ ಸಾಮಾರ್ಥ್ಯದ ಮೇಲ್ಮಟ್ಟ ಜಲ ಸಂಗ್ರಹಗಾರ ನಿರ್ಮಾಣ, 6199 ಕಿಲೋ ಮೀಟರ್ ವಿತರಣಾ ಜಾಲಾ ಹಾಗೂ ಪಟ್ಟಣದಲ್ಲಿ ಸುಮಾರು 6000 ಮನೆಗಳಿಗೆ ನಳ ಸಂಪರ್ಕ ಕಲ್ಪಿಸಲಾಗುವುದು. ಹಾಲಿ 4.54 ಎಂಎಲ್‌ಡಿ ಸಾಮಾರ್ಥ್ಯದ ಜಲಶುದ್ಧಿಕರಣ ಘಟಕವನ್ನು ನವೀಕರಣಗೊಳಿಸಲಾಗುವುದು. ಒಟ್ಟಾರೆಯಾಗಿ 26.17 ಕೋಟಿ ರೂಗಳ ವೆಚ್ಚದಲ್ಲಿ ಕಾಮಗಾರಿಗೆ ಚಾಲನೆ ನೀಡಲಾಗಿದೆ. ವಿಶೇಷವಾಗಿ ಗುಣಮಟ್ಟದ ಕಾಮಗಾರಿಗೆ ನಿರ್ಮಿಸಲು ಗುತ್ತಿಗೆದಾರರಿಗೆ ಸೂಚಿಸಲಾಗಿದೆ ಎಂದರು.

ಇದೇ ವೇಳೆ ಕಮಲಾಪುರ ಪುರಸಭೆ ಕಚೇರಿಯಲ್ಲಿನ ನೂತನ 2 ಕಸದ ವಾಹನ, 1 ಜೆಸಿಬಿ ಯಂತ್ರವನ್ನು ಉದ್ಘಾಟಿಸಲಾಯಿತು. ಭೂಮಿಪೂಜೆ ಕಾರ್ಯಕ್ರಮದಲ್ಲಿ ಪುರಸಭೆ ಉಪಾಧ್ಯಕ್ಷ ಗೋಪಾಲಕೃಷ್ಣ, ಸದಸ್ಯರಾದ ಮುಕ್ತಿಯಾರ್ ಭಾಷಾ, ನಾಮನಿರ್ದೇಶಿತ ಸದಸ್ಯರಾದ ಕನ್ನೇಶ್ವರ, ಸೋಮಶೇಖರ್, ಮುಖಂಡರಾದ ಖಾಜಾ ಹುಸೇನ್, ಮುಖ್ಯಾಧಿಕಾರಿ ಡಿ.ಬಿ.ಈರಣ್ಣ ಇತರರಿದ್ದರು.

ಸಮಾಜ ಕಟ್ಟುವಲ್ಲಿ ಮಠಗಳ ಪಾತ್ರ ದೊಡ್ಡದು:ಲಾಡ್

ಹೂವಿನಹಡಗಲಿ: ಉತ್ತಮ ಸಮಾಜ ನಿರ್ಮಾಣ ಮಾಡುವಲ್ಲಿ ಮಠಗಳ ಪಾತ್ರ ಮುಖ್ಯವಾಗಿದೆ ಎಂದು ಸಚಿವ ಸಂತೋಷ್ ಲಾಡ್ ಹೇಳಿದರು.

ಶಾಖಾ ಮಠದಲ್ಲಿ ಹಮ್ಮಿಕೊಳ್ಳಲಾಗಿದ್ದ ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಸಚಿವ ಸಂತೋಷ್ ಲಾಡ್ ಉದ್ಘಾಟಿಸಿದರು.

> ಕಾಗಿನೆಲೆ ಗುರುಪೀಠ ಹಿಂದುಳಿದವರ ಹಾಗೂ ಶೋಷಿತರ ಸಮುದಾಯದ ಪ್ರಗತಿಗಾಗಿ ಶ್ರಮಿಸುತ್ತಿದ್ದು, ಸಮಾಜಕ್ಕೆ ಉತ್ತಮ ಶಿಕ್ಷಣ ನೀಡುವ ಮೂಲಕವಾಗಿ ಉತ್ತಮ ಸಂಸ್ಕಾರ ನೀಡುವ ಕೆಲಸ ಮಾಡುತ್ತಿದೆ. ಉಚಿತ ಸಾಮೂಹಿಕ ವಿವಾಹ ಕಾರ್ಯಕ್ರಮ ಹಮ್ಮಿಕೊಂಡಿರುವುದು ನಿಜಕ್ಕೂ ಶ್ಲಾಘನೀಯವಾಗಿದೆ. ನೂತನ ದಂಪತಿಗಳು ಉತ್ತಮ ಜೀವನ ನಡೆಸಿ.
>
> -ಸಂತೋಷ್ ಲಾಡ್, ಸಚಿವ

ತಾಲೂಕಿನ ಮೈಲಾರದಲ್ಲಿ ಕಾಗಿನೆಲೆ ಕನಕ ಗುರುಪೀಠದಿಂದ ಹಮ್ಮಿಕೊಳ್ಳಲಾಗಿದ್ದ ಸಾಮೂಹಿಕ ವಿವಾಹ, ಧರ್ಮಸಭೆ, ಹಾಗೂ ಶಾಖಾ ಮಠದ 6ನೇ ವಾರ್ಷಿಕೋತ್ಸವ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಕಾಗಿನೆಲೆ ಕನಕ ಗುರುಪೀಠದ ಶ್ರೀಗಳು ಮಾತನಾಡಿ ಶ್ರೀ ಮಠದಿಂದ ಬರುವ ದಿನಗಳಲ್ಲಿ ಪ್ರತಿ ವರ್ಷ ಉಚಿತ ಸಾಮೂಹಿಕ ವಿವಾಹ ಕಾರ್ಯಹಮ್ಮಿಕೊಳ್ಳಲಾಗುವುದು ಎಂದರು.

> ಕಾಗಿನೆಲೆ ಕನಕ ಗುರುಪೀಠ ಸಮಾಜ ಮುಖಿ ಕಾರ್ಯಗಳನ್ನು ಮಾಡುತ್ತಿದೆ. ಶ್ರೀಗಳು ಶಿಕ್ಷಣಕ್ಕೆ ಹೆಚ್ಚಿನ ಮಹತ್ವ ನೀಡಿದ್ದು, ಧಾರ್ಮಿಕ ಸಂಸ್ಕೃತಿಯನ್ನು ಜನರಲ್ಲಿ ಮೂಡಿಸುವ ಪ್ರಯತ್ನ ಆಡುತ್ತಿದ್ದಾರೆ.
>
> -ಕೃಷ್ಣನಾಯ್ಕ, ಶಾಸಕ

ಮೈಲಾರಲಿಂಗೇಶ್ವರ ದೇವಸ್ಥಾನದ ವಂಶ ಪಾರಂಪರ್ಯ ಧರ್ಮಾಧಿಕಾರಿ ಗುರು ವೆಂಕಪ್ಪಯ್ಯ ಒಡೆಯರ್, ಮಾಜಿ ಸಚಿವ ಆರ್. ಶಂಕರ್. ಜಿಲ್ಲಾಧಿಕಾರಿ ಎಂ.ಎಸ್ ದಿವಾಕರ ಮಾತನಾಡಿದರು.

ಮಾಜಿ ಸಚಿವ ಪಿ.ಟಿ.ಪರಮೇಶ್ವರನಾಯ್ಕ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಬಿ.ಎಲ್. ಶ್ರೀಹರಿಬಾಬು, ಕಾರ್ಣಿಕದ ಗೊರಯ್ಯ, ರಾಮಣ್ಣ, ಮಾಜಿ ಶಾಸಕ ನಂದಿಹಳ್ಳಿ ಹಾಲಪ್ಪ, ಕಾಗಿನೆಲೆ ಕನಕ ಗುರುಪೀಠದ ಧರ್ಮದರ್ಶಿ ಎಚ್.ಬಿ ಪರಶುರಾಮಪ್ಪ, ಹ.ಬೋ ಹಳ್ಳಿ ಪುರಸಭೆ ಅಧ್ಯಕ್ಷ ಮರಿ ರಾಮಪ್ಪ, ನಂದಿಗಾವಿ ಶ್ರೀನಿವಾಸ್, ಜಿ.ಪಂ ಮಾಜಿ ಉಪಾಧ್ಯಕ್ಷೆ ಜೀವೇಶ್ವರ್ಿ, ತಾ.ಪಂ ಮಾಜಿ ಸದಸ್ಯ ಈಟಿ ಲಿಂಗರಾಜು, ಉಪಸ್ಥಿತರಿದ್ದರು.

ಮಸಲವಾಡ ಗ್ರಾಮದೇವತೆ ಜಾತ್ರೆ

ಹೂವಿನಹಡಗಲಿ: ತಾಲೂಕಿನ ಮಾನ್ಯರಸಲ್ವಾಡ ಗ್ರಾಮದಲ್ಲಿ ಗ್ರಾಮದೇ ಜಾತ್ರಾ ಮಹೋತ್ಸವ ಅದ್ದೂರಿಯಿಂದ ಜರಿಗಿದೆ. ಈ ಜಾತ್ರಾ ಮಹೋತ್ಸವ ಕೊರೋನದ ಕಾರಣ ಮುಂದೂಡಲ್ಪಟ್ಟು, ಒಂಬತ್ತು ವರ್ಷಗಳ ನಂತರ ಜಾತ್ರಾ ಮಹೋತ್ಸವ ಅತ್ಯಂತ ಯಶಸ್ವಿಯಾಗಿ ಯುವಕರು, ಗೆಳೆಯರು, ಗ್ರಾಮಸ್ಥರೆಲ್ಲ ಸೇರಿ ಯಶಸ್ವಿಗೊಳಿಸಿದ್ದಾರೆ.

ಐದು ಆರು ಮತ್ತು ಏಳನೇ ತಾರೀಕು ಮೂರು ದಿನಗಳ ಕಾಲ ಜಾತ್ರಾ ಮಹೋತ್ಸವ ಬಹಳ ಅತ್ಯಂತ ಸಂಭ್ರಮ ಸಡಗರದಿಂದ ಎಲ್ಲಾ ಜನಾಂಗದ ಭಕ್ತರು ಸೇರಿ ಆಚರಿಸಿದರು,5ನೇ ತಾರೀಕಿನ ಸೋಮವಾರದಂದು ಹೊನ್ನತಮ್ಮ ದೇವಿ ಗ್ರಾಮದೇವತೆಗೆ ಉಡಿ ತುಂಬುವ ಕಾರ್ಯಕ್ರಮ ಜರುಗಿತು.

ಗ್ರಾಮದ ಬೀದಿಗಳಲ್ಲಿ ವಿವಿಧ ಒಂದು ಚಿತ್ತಾರಗಳ ಬಣ್ಣದ ದೀಪಗಳನ್ನು ಹಾಕಿಸಿ ಅಲಂಕಾರ ಮಡಲಾಗಿತ್ತು. ಧಾರ್ಮಿಕ ವಿಧಿವಿಧಾನಗಳನ್ನು ಸಂಪ್ರದಾಯ ಬದ್ಧವಾಗಿ ನೆರವೇರಿಸಲಾಯಿತು.ಸಿಡಿಮದ್ದುಗಳನ್ನು ಸಿಡಿಸುವ ಕಾರ್ಯಕ್ರಮ ಜನರನ್ನು ಸೆಳೆಯಿತು.

ಮಸಲವಾಡ ಗ್ರಾಮದ ಗ್ರಾಮದೇವತೆ ಜಾತ್ರಾ ಮಹೋತ್ಸವದಲ್ಲಿ ಸಂಗೀತ ಕಲಾವಿದ ಪ್ರಕಾಶ್ ಜೈನ್ ಮತ್ತು ಸಂಗಡಿಗರನ್ನು ಸನ್ಮಾನಿಸಲಾಯಿತು.

ಎಲ್ಲಾ ಹಿರಿಯರು, ದೈವಸ್ಥರು ಮತ್ತು ಸಮಾನ ಮನಸ್ಕ ಗೆಳೆಯರ ಬಳಗದ ಸಾಕಾರದಿಂದ ಸಂಗೀತ ಕಾರ್ಯಕ್ರಮವನ್ನು ಆಯೋಜನೆ ಮಾಡಲಾಗಿತ್ತು. ಹಡಗಲಿಯ ಪ್ರಕಾಶ್ ಜೈನ್ ಮತ್ತೆ ತಂಡದವರು ಚಿತ್ರಗೀತೆ, ಭಾವಗೀತೆ, ಜಾನಪದ ಗೀತೆಗಳನ್ನು ಹಾಡಿ ರಂಜಿಸಿದರು. ಸತತ ಮೂರು ದಿನಗಳ ಕಾಲ ಹೊನ್ನೆ ತೆಮ್ಮನ ಜಾತ್ರಾ ಮಹೋತ್ಸವ ಜರುಗಿತು.

ಹಲ್ಲೆ: ಆರೋಪಿಗಳ ಬಂಧನಕ್ಕೆ ಒತ್ತಾಯ

ಸಿಂಧನೂರು: ತಾಲೂಕಿನ ಎಲೆಕೂಡ್ಲಿಗಿ ಗ್ರಾಮದ ಬಾಬುಸಾಬ್ ಮೇಲೆ ಮಾರಣಾಂತಿಕ ಹಲ್ಲೆ ನಡೆಸಿದ ಆರೋಪಿಗಳನ್ನು ಬಂಧಿಸಿ ಕಾನೂನು ಕ್ರಮ ಜರುಗಿಸಬೇಕು' ಎಂದು ಒತ್ತಾಯಿಸಿ ಕರ್ನಾಟಕ ದಲಿತ ಸಂಘರ್ಷ ಸಮಿತಿ (ಎನ್.ಮೂರ್ತಿ ಸ್ಥಾಪಿತ) ತಾಲೂಕು ಘಟಕ ಸ್ಥಳೀಯ ಮಿನಿ ವಿಧಾನಸೌಧ ಕಚೇರಿ ಮುಂದೆ ಪ್ರತಿಭಟನಾ ಧರಣಿ ನಡೆಸಿತು. ಹಲ್ಲೆಗೀಡಾದ ಜನ ಆತಂಕದಲ್ಲಿ ಬದುಕುವಂತಾಗಿದೆ' ಎಂದು ಜಿಲ್ಲಾ ಘಟಕದ ಅಧ್ಯಕ್ಷ ಅಶೋಕ ನಂಜಲದಿನ್ನಿ ಆಕ್ರೋಶ ವ್ಯಕ್ತಪಡಿಸಿದರು. ಏ.10 ರಂದು ತಾಲೂಕಿನ ಎಲೆಕೂಡ್ಲಿಗಿ ಗ್ರಾಮದಲ್ಲಿ ಬಾಬುಸಾಬ್ ಎಂಬ ವ್ಯಕ್ತಿ ಕೆಲಸದಲ್ಲಿ ನಿರತರಾಗಿದ್ದ ಸಮಯದಲ್ಲಿ ಬಸವರಾಜ ಈಶಪ್ಪಗೌಡ ಎಂಬಾತನು ವಿನಾಃಕಾರಣ ಮಾರಣಾಂತಿಕ ಹಲ್ಲೆ ಎಸಗಿ ಕೊಲೆ ಮಾಡಲು ಪ್ರಯತ್ನಿಸಿದ್ದಾನೆ. ಇದರಿಂದ ಬಾಬುಸಾಬ್ ಸಿಂಧನೂರಿನ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದಾರೆ. ನಂತರ ಬಾಬುಸಾಬ್ ಪತ್ನಿ ಪೊಲೀಸ್ ಠಾಣೆ ಮುಂದೆ ಮೂರು ದಿನ ಕುಳಿತರೂ ಪ್ರಕರಣ ದಾಖಲಿಸುವಲ್ಲಿ ಪೊಲೀಸರು ವಿಳಂಬ ಮಾಡಿ, ಮಹಿಳೆಗೆ ಗೌರವ ಕೊಡದೆ ಅನಾಗರಿಕರಂತೆ ವರ್ತಿಸಿದ್ದಾರೆ' ಎಂದು ಆಪಾದಿಸಿದರು. ವಿಳಂಬವಾಗಿ ಪ್ರಕರಣ ದಾಖಲಿಸಿಕೊಂಡ ಸಬ್‌ಇನ್‌ಸ್ಪೆಕ್ಟರ್ ನೊಂದವರ ಪರವಾಗಿ ನಿಲ್ಲದೆ, ಆರೋಪಿ ಪರ ವಕಾಲತ್ ವಹಿಸಿ, ರಾಜಿ ಮಾಡಿಕೊಂಡು ಹೋಗುವಂತೆ ಬಾಬುಸಾಬ ಕುಟುಂಬದ ಮೇಲೆ ಒತ್ತಡ ಹಾಕಿದ್ದಾರೆ. ಆದ್ದರಿಂದ ಕೂಡಲೇ ಆರೋಪಿ ಯನ್ನು ಬಂಧಿಸಬೇಕು ಹಾಗೂ ತುರ್ವಿಹಾಳ ಸಬ್‌ಇನ್‌ಸ್ಪೆಕ್ಟರ್ ಅವರನ್ನು ಸೇವೆಯಿಂದ ಅಮಾನತು ಮಾಡಬೇಕು ಎಂದು ಆಗ್ರಹಿಸಿದರು.

ಮೆದಿಕಿನಾಳ ಭೂ ಹೋರಾಟದ ನೆನಪಿಗೆ ಸಾಹಿತ್ಯ ಮೇಳ

ರಾಯಚೂರು: ಮೆದಕಿನಾಳ ಭೂ ಹೋರಾಟ ನೆನಪಿಗಾಗಿ ಮೇ ಸಾಹಿತ್ಯ ಮೇಳ ಸಿಂಧನೂರಿನಲ್ಲಿ ಅಸಮಾನತೆ ಭಾರತ, ಸಮಾನತೆಗಾಗಿ ಸಂಘರ್ಷ ಅಂದು ಇಂದು ಕುರಿತು ಮೇಳ ನಡೆಯ ಲಿದೆ ಎಂದು ಬಸವರಾಜ ಸುಳಿಭಾವಿ ಹೇಳಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಸಿಂಧನೂರಿನ ಸತ್ಯ ಗಾರ್ಡನಲ್ಲಿ ನಡೆಯಲಿರುವ ಸಾಹಿತ್ಯ ಮೇಳವನ್ನು ಮೆದಿಕಿನಾಳ ಭೂ ಹೋರಾಟದಲ್ಲಿ ಭಾಗವಹಿಸಿದ್ದ ಸಂಗಮ್ಮ, ದಲಿತ ಚಳುವಳಿ ಭೀಮಣ್ಣ ನಗನೂರು, ಕಾರ್ಮಿಕ ಚಳುವಳಿಯ ನರಸಿಂಹಪ್ಪ, ಮದ್ಯ ವಿರೋಧಿ ಹೋರಾಟ ಸಮಿತಿಯ ಚಿನ್ನಮ್ಮ ಮುದ್ದನಗುಡ್ಡಿ, ರೈತ ಚಳುವಳಿಯ ತಿಮ್ಮನಗೌಡ ಚಿಲ್ಕರಾಗಿ ಉದ್ಘಾಟಿಸಲಿದ್ದಾರೆ.

ಮಧ್ಯಾನ್ಹ 1 ಗಂಟೆಗೆ ಅಸಮಾನತೆ ಮತ್ತು ಸಂಘರ್ಷ ಹೊರಳು ನೋಟ ಕುರಿತು ನಡೆಯಲಿದೆ. ವರ್ಗನೆಲೆ ಕುರಿತು ರವೀಂದ್ರ ಹಳಿಂಗಳಿ, ಜಾತಿ ನೆಲೆ ಕುರಿತು ಸಿ.ಜಿ, ಲಕ್ಷ್ಮೀಪತಿ, ಬಿಂಗ ನೆಲೆ ಕೆ.ಎಸ್.ಲಕ್ಷ್ಮೀ, ಭಾಷಾ ನೆಲೆ ಕುರಿತು ರಹಮ್ ತರೀಕೆರೆ ಮಾತನಾಡಲಿದ್ದಾರೆ ಎಂದರು.

ಎರಡನೇ ಗೋಷ್ಠಿ ದಮಿನದ ಸ್ವರೂಪದ ಮೇಲೆ ನಡೆಯಲಿದ್ದು, ಪ್ರಭುತ್ವದ ದಮನ ಕುರಿತು ಹೈದ್ರಾಭಾದನ ವೇಣುಗೋಪಾಲ, ಸಾಂಸ್ಕೃತಿಕ ರಾಜಕಾರಣ ಕುರಿತು ಜೆ.ಎಸ್.ಪಾಟೀಲ್, ಮಾಧ್ಯಮ -ಸಮ್ಮತಿ ಉತ್ಪಾದನೆ ಕುರಿತ ನವೀನ್ ಸೂರಂಜೆ ಮಾತಾಡಲಿದ್ದಾರೆ. ನಂತರ ಹೋರಾಟಗಾರರೊಂದಿಗೆ ಸಂವಾದ ನಡೆಯಲಿದೆ. ರಾಘವೇಂದ್ರ ಕುಷ್ಟಗಿ, ಆರ್. ಮಾನಸಯ್ಯ, ಎಸ್.ಮಾರೆಪ್ಪ, ಅಮರಣ್ಣ ಗುಡಿಹಾಳ ಭಾಗವಹಿಸಲಿದ್ದಾರೆ.

ಪತ್ರಿಕಾ ಸುದ್ದಿಗೋಷ್ಟಿ ಉದ್ದೇಶಿಸಿ ಬಸವರಾಜ ಸುಳಿಭಾವಿ ಮಾತನಾಡಿರು.

ನಂತರ ಬೆಳಿಗ್ಗೆ 11 ಗಂಟೆಗೆ ಅಭಿವೃದ್ಧಿಯ ಸತ್ಯ-ತನಗೌಡ ಮಿಥ್ಯ ವಿಷಯದ ಮೇಲೆ ಗೋಷ್ಟಿ ನಡೆಯಲಿದೆ. ಅಭಿವೃದ್ಧಿಯ ಪರಿಕಲ್ಪನೆ, ವಾಸ್ತವಾಂಶಗಳು ಕುರಿತು ನಾಗೇಗೌಡ ಕೀಲಾರ, ಕಲ್ಯಾಣ ಕರ್ನಾಟಕದ ಅಭಿವೃದ್ಧಿ ಕುರಿತು ಚಂದ್ರಶೇಖರ ಗೋರೆಬಾಳ, ಉತ್ತರ ಕರ್ನಾಟಕದ ಕುರಿತು ಬಿ.ಎಸ್. ಸೋಪ್ಪಿನ ಮಾತನಾಡಲಿದ್ದಾರೆ.

ಮಧ್ಯಾನ್ಹ2 ಗಂಟೆಗೆ ಬಕ್ಕ ಚಳುವಳಿ ಯಾತಕ್ಕಾಗಿ, ಯಾರ ಜೊತೆ ವಿಷಯವಾಗಿ ನಡೆಯಲಿರುವ ಗೋಷ್ಠಿಯಲ್ಲಿ ಎಸ್.ಆರ್.ಹೀರೆಮಠ, ಶಿವಸುಂದರ, ಕೆ.ನೀಲಾ, ಗುರು ಪ್ರಸಾದ ಕೇರೆಗೋಡು, ಸಾತಿ ಸುಂದರೇಶ, ಚಾಮರಸ ಪಾಟೀಲ್, ಕ್ಲಿಷನ್ ಡಿ. ರಿಜೋರಿಯಾ ಭಾಗವಹಿಸಲಿದ್ದಾರೆ. ಸಂಜೆ 4 ಗಂಟೆಗೆ ಸಮಾರೋಪ ಮತ್ತು ಪ್ರಶಸ್ತಿ ಪ್ರದಾನ ಸಮಾರಂಭ ನಡೆಯಲಿದೆ.

ಸಮಾರೋಪದ ನುಡಿಗಳನ್ನು ಪ್ರೋ.ಅಮರೇಶ ನುಗುಡೋಣಿ ಮಾತನಾಡಲಿದ್ದಾರೆ. ಪ್ರಶಸ್ತಿಗಳನ್ನು ಮೈಸೂರಿನ ರತಿರಾವ್ ಪದಾನ ಮಾಡಲಿದ್ದಾರೆ. ವಿಭಾಗ ಸಾಹಿತ್ಯ ಪ್ರಶಸ್ತಿಗೆ ಸವಾಶಿವ ಸೋರಟೂರು, ಬಂದ್ರಿ, ನರಸಪ್ಪ ಸಮಾಜಮುಖಿ ಶ್ರಮಜೀವಿ ಪ್ರಶಸ್ತಿಗೆ ಬೆಂಗಳೂರಿನ ವಿಜಯಮ್ಮ, ನವಲಕಲ್ ಬೃಹನಠದ ಶಾಂತವೀರಮ್ಮ ಮಹಾತಾಯಿ ಕಥಾ ಪ್ರಶಸ್ತಿಗೆ ಸಬಿಹಾ ಭೂಮಿಗೌಡ ಇವರಿಗೆ ಪ್ರದಾನ ಮಾಡಲಾಗುತ್ತದೆ. ನಿಂಗಪ್ಪ ಸಂತಿ ರೈತ ಚೇತನ ಪ್ರಶಸ್ತಿ ಸುರೇಶಬಾಬು ಪಟೇಲ್, ಪಂಚಪ್ಪ ಸಮೂದಾಯ ಮಾರ್ಗಿ ಪ್ರಶಸ್ತಿಗೆ ಪಿಚ್ಚಳ ಶ್ರೀನಿವಾಸ, ಚಂದ್ರಶೇಖರ ಹೊಸಮನಿ ಅಂಬೇಡ್ಕರ ಪತ್ರಿಕಾ ಮಾರ್ಗಿ ಪ್ರಶಸ್ತಿಗೆ ಡಿ.ಉಮಾಪತಿ, ಲಕ್ಷ್ಮೀಬಾಯಿ ಕಟ್ಟಿಮನಿ ಸಮಾಜ ಮುಖಿ ಮಹಿಳಾ ಪ್ರಶಸ್ತಿಗೆ ಅಂಬೂಬಾಯಿ ಮಾಳಗೆ, ವಿ.ಎಚ್.ತಳವಾರ ಫುಲೆ ಮಾರ್ಗಿ ಶಿಕ್ಷಕ ಪ್ರಶಸ್ತಿಗೆ ರಾಜಪ್ಪ ಮಾಸ್ಟರ್ ಸೊರಬ ಇವರಿಗೆ ಪ್ರದಾನ ಮಾಡಲಾಗುತ್ತದೆ. ಅಧ್ಯಕ್ಷೆಯನು ಬಾಬು ಭಂಡಾರಿಗಲ್ ವಹಿಸಲಿದ್ದಾರೆ ಎಂದು ತಿಳಿಸಿದರು.

ಜನಮುಖಿ ಸಾಹಿತ್ಯ ಪ್ರಭುತ್ವ ಮುಖಿಯಾಗುತ್ತಿರುವ ಆಪಾಯದ ಹಿನ್ನಲೆಯಲ್ಲಿ ಮೇ ಸಾಹಿತ್ಯ ಮೇಳ ನಡೆಸಲಾಗುತ್ತಿದೆ.

ವಾಸ್ತವದ ಬಲದು ಕಲ್ಪನೆ ಬಿತ್ತುವ ಕೆಲಸ ನಡೆಯುತ್ತಿರುವ ಅಪಾಯದಿಂದ ಜನಮುಖಿ ಸಾಹಿತ್ಯ ಬೆಳೆಸಲಾಗುತ್ತವೆ. ರಾಜಕಾರಣಿಗಳು, ಉದ್ಯಮಿಗಳ ಹೊರತುಪಡಿಸಿ ಮನಸ್ಸುಗಳೊಂದಿಗೆ ಮೇಳ ನಡೆಸಲಾಗುತ್ತದೆ. ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಅವಕಾಶ ನೀಡಿ ಹೊಸಬರಿಗೆ ವೇದಿಕೆ ಅವಕಾಶ ನೀಡುತ್ತದೆ ಎಂದರು. ಸುದ್ದಿಗೋಷ್ಟಿಯಲ್ಲಿ ದೇವೆಂದ್ರಗೌಡ, ಎಸ್.ಮಾರಪ್ಪ, ಭಾಬು ಸೇರಿದಂತೆ ಇತರರು ಉಪಸ್ಥಿತರಿದ್ದರು.

ರೋಹಿತ್ ಜತೆ ಕೊಹ್ಲಿಯೂ ನಿವೃತ್ತಿ?

ಇಂಗ್ಲೆಂಡ್ ಪ್ರವಾಸಕ್ಕೂ ಮುನ್ನ ಟೆಸ್ಟ್ ಕ್ರಿಕೆಟ್‌ಗೆ ವಿರಾಟ್ ನಿವೃತ್ತಿ ವದಂತಿ

ದೆಹಲಿ: ಭಾರತ ಕ್ರಿಕೆಟ್ ತಂಡದ ನಾಯಕ ರೋಹಿತ್ ಶರ್ಮಾ ಅವರು ಅಂತಾರಾಷ್ಟ್ರೀಯ ಟೆಸ್ಟ್ ಕ್ರಿಕೆಟ್‌ಗೆ ನಿವೃತ್ತಿ ಘೋಷಿಸಿದ ಬೆನ್ನಲ್ಲೇ ಅನುಭವಿ ವಿರಾಟ್ ಕೊಹ್ಲಿ ಕೂಡ ಟೆಸ್ಟ್‌ಗೆ ನಿವೃತ್ತಿ ಪ್ರಕಟಿಸಲು ಮುಂದಾಗಿದ್ದಾರೆ ಎಂದು ತಿಳಿದುಬಂದಿದೆ. ಈಗಾಗಲೇ ಕೊಹ್ಲಿ ತಮ್ಮ ನಿವೃತ್ತಿ ನಿರ್ಧಾರವನ್ನು ಬಿಸಿಸಿಐಗೆ ತಿಳಿಸಿದ್ದಾರೆ ಎನ್ನಲಾಗಿದೆ. ಇಂಗ್ಲೆಂಡ್ ಟೆಸ್ಟ್ ಸರಣಿಗೂ ಮುನ್ನವೇ ಕೊಹ್ಲಿ ಟೆಸ್ಟ್‌ಗೆ ಗುಡ್‌ಬೈ ಹೇಳುವ ಸಾಧ್ಯತೆ ಇದೆ. ಕಳೆದ ವರ್ಷ ರೋಹಿತ್ ಮತ್ತು ವಿರಾಟ್ ಜತೆಯಾಗಿ ಅಂತಾರಾಷ್ಟ್ರೀಯ ಟಿ20 ಕ್ರಿಕೆಟ್‌ನಿಂದ ನಿವೃತ್ತಿಯಾಗಿದ್ದರು.

ಬಿಸಿಸಿಐನ ಹಿರಿಯ ಅಧಿಕಾರಿಯೊಬ್ಬರು ವಿರಾಟ್ ಕೊಹ್ಲಿ ಅವರೊಂದಿಗೆ ಮಾತನಾಡಿ, ತಮ್ಮ ನಿರ್ಧಾರವನ್ನು ಮರುಪರಿಶೀಲಿಸುವಂತೆ ಒತ್ತಾಯಿಸಿದ್ದಾರೆ ಎನ್ನಲಾಗಿದೆ. ಆದರೆ ಕೊಹ್ಲಿ ಯುವ ಆಟಗಾರರಿಗೆ ಅವಕಾಶ ಕಲ್ಪಿಸುವ ಸಲುವಾಗಿ ಟೆಸ್ಟ್‌ನಿಂದ ನಿವೃತ್ತಿಯಾಗಲು ನಿರ್ಧರಿಸಿದ್ದಾರೆ ಎನ್ನಲಾಗಿದೆ.

ಒಂದು ವೇಳೆ ಕೊಹ್ಲಿ ಇಂಗ್ಲೆಂಡ್ ಪ್ರವಾಸಕ್ಕೂ ಮುನ್ನ ನಿವೃತ್ತಿ ಘೋಷಿಸಿದರೆ, ಭಾರತೀಯ ಟೆಸ್ಟ್ ತಂಡವು ಬ್ಯಾಟಿಂಗ್ ವಿಭಾಗದಲ್ಲಿ ಅನುಭವಿ ಆಟಗಾರರನ್ನು ಕಳೆದುಕೊಳ್ಳಲಿದೆ. ಭವಿಷ್ಯದ ಆಟಗಾರರಾದ ಯಶಸ್ವಿ ಜೈಸ್ವಾಲ್, ಶುಭಮನ್ ಗಿಲ್ ಅವರಂತಹ ಆಟಗಾರರನ್ನು ತಂಡ ಹೆಚ್ಚು ಅವಲಂಬಿಸಿ ಪ್ರದರ್ಶನ ನೀಡಬೇಕಿದೆ.

2024-25ರ ಟೆಸ್ಟ್ ಋತುವಿನಲ್ಲಿ ವಿರಾಟ್ ಕೊಹ್ಲಿ ಕಳಪೆ ಪ್ರದರ್ಶನ ನೀಡಿದ್ದರು. ಆಸ್ಟ್ರೇಲಿಯಾದಲ್ಲಿ ನಡೆದ ಐದು ಪಂದ್ಯಗಳ ಬಾರ್ಡರ್ -ಗವಾಸ್ಕರ್ ಟ್ರೋಫಿ ಟೆಸ್ಟ್ ಸರಣಿಯಲ್ಲಿ ಕೊಹ್ಲಿ ರನ್ ಗಳಿಸಲು ಹೆಣಗಾಡಿದ್ದರು. ಐದು ಪಂದ್ಯಗಳಿಂದ ಕೇವಲ 190 ರನ್ ಮಾತ್ರ ಗಳಿಸಿದ್ದರು. ಪರ್ತ್‌ನಲ್ಲಿ ನಡೆದ ಸರಣಿಯ ಮೊದಲ ಟೆಸ್ಟ್‌ನಲ್ಲಿ ಶತಕ ಗಳಿಸಿದರೂ, ಆ ಬಳಿಕದ ನಾಲ್ಕು ಪಂದ್ಯಗಳಲ್ಲಿ ಅವರು ಕೇವಲ 85 ರನ್ ಗಳಿಸಿದ್ದರು. ಕೊಹ್ಲಿ ಒಟ್ಟಾರೆ 123 ಟೆಸ್ಟ್ ಪಂದ್ಯಗಳನ್ನು ಆಡಿದ್ದು 30 ಶತಕಗಳು ಸೇರಿದಂತೆ 9,230 ರನ್ ಗಳಿಸಿದ್ದಾರೆ.

ರೋಹಿತ್‌ರಿಂದ ತೆರವಾದ ನಾಯಕತ್ವ ಸ್ಥಾನಕ್ಕೆ ಹಲವು ಮಂದಿ ರೇಸ್‌ನಲ್ಲಿದ್ದಾರೆ. ಹಿರಿತನ, ಅನುಭವದ ಆಧಾರದಲ್ಲಿ ಟೆಸ್ಟ್ ನಾಯಕತ್ವ ನೀಡಲು ಬಯಸಿದರೆ ಜಸ್‌ಪ್ರೀತ್ ಬುಮ್ರಾ, ಕೆ.ಎಲ್.ರಾಹುಲ್ ಮುಂಚೂಣಿಯಲ್ಲಿದ್ದಾರೆ. ಇವರಿಬ್ಬರೂ ತಲಾ 3 ಪಂದ್ಯಗಳಿಗೆ ನಾಯಕರಾಗಿದ್ದಾರೆ. ಸದ್ಯ ಬಿಸಿಸಿಐ ಯುವ ಆಟಗಾರನಿಗೆ ನಾಯಕತ್ವ ನೀಡಲು ಬಯಸಿದೆ ಎನ್ನಲಾಗಿದೆ. ಹಾಗಾದರೆ ಶುಭ್‌ಮನ್ ಗಿಲ್ ಅಥವಾ ರಿಷಭ್ ಪಂತ್‌ಗೆ ಹೊಣೆಗಾರಿಕೆ ಸಿಗಬಹುದು.

ಕದನ ವಿರಾಮದ ಹಿನ್ನೆಲೆ: ಐಪಿಎಲ್ ಪಂದ್ಯಕ್ಕಿದ್ದ ತೊಡಕು ನಿವಾರಣೆ

ಐಪಿಎಲ್: ಸದ್ಯವೇ ಹೊಸ ವೇಳಾಪಟ್ಟಿ

ದೆಹಲಿ: ಭಾರತ ಮತ್ತು ಪಾಕಿಸ್ತಾನದ ನಡುವೆ ಕದನ ವಿರಾಮ ಘೋಷಣೆಯಾಗುತ್ತಿದ್ದಂತೆ ಹೊಸ ವೇಳಾಪಟ್ಟಿ ಪ್ರಕಟಿಸಲು ಬಿಸಿಸಿಐ ನಿರ್ಧರಿಸಿದೆ. ಎರಡೂ ರಾಷ್ಟ್ರಗಳ ನಡುವೆ ಪ್ರತೀಕಾರ ಸಮರ ಜೋರಾಗುತ್ತಿದ್ದಂತೆ ಭದ್ರತಾ ಕಾರಣಗಳಿಂದ 18ನೇ ಆವೃತ್ತಿಯ ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯನ್ನು ಬಿಸಿಸಿಐ ಒಂದು ವಾರಗಳ ಕಾಲ ಸ್ಥಗಿತಗೊಳಿಸಿತ್ತು.

ಸಂಬಂಧಪಟ್ಟವರೊಂದಿಗೆ ಸಮಾಲೋಚಿಸಿ ಪರಿಸ್ಥಿತಿ ನೋಡಿಕೊಂಡು ಪರಿಷ್ಕೃತ ವೇಳಾಪಟ್ಟಿಯನ್ನು ಶೀಘ್ರದಲ್ಲೇ ಪ್ರಕಟಿಸುವುದಾಗಿ ಬಿಸಿಸಿಐ ಹೇಳಿದೆ. ಭಾರತ ಮತ್ತು ಇಂಗ್ಲೆಂಡ್ ಟೆಸ್ಟ್ ಸರಣಿ ಬಳಿಕ ಪಂದ್ಯ ಮುಂದುವರಿಯಲಿದೆಯೇ ಅಥವಾ ಅದಕ್ಕೂ ಮುನ್ನವೇ ಪಂದ್ಯ ನಡೆಯಲಿದೆಯೇ ಎನ್ನುವುದು ಸ್ಪಷ್ಟವಾಗಬೇಕಿದೆ.



ಪ್ರಸ್ತುತ 18ನೇ ಆವೃತ್ತಿಯ ಐಪಿಎಲ್ ಗುರುವಾರದ ಸ್ಥಗಿತಗೊಂಡ ಪಂಜಾಬ್ ಕಿಂಗ್ಸ್ ಮತ್ತು ಡೆಲ್ಲಿ ಕ್ಯಾಪಿಟಲ್ಸ್ ನಡುವಿನ ಪಂದ್ಯ ಸೇರಿ 58 ಪಂದ್ಯಗಳು ನಡೆದಿವೆ. ಇನ್ನೂ ನಾಲ್ಕು ಪ್ಲೇ ಆಫ್ಸ್ ಪಂದ್ಯಗಳೂ ಸೇರಿ 16 ಪಂದ್ಯಗಳು ಬಾಕಿ ಇವೆ. ಸದ್ಯ ಆಟಗಾರರು ತಮ್ಮ ತವರಿಗೆ ಮರಳಿದ್ದು ಅವರು ಮತ್ತೆ ತಂಡವನ್ನು ಸೇರಿಕೊಳ್ಳಲು ಕಾಲಾವಕಾಶ ನೀಡಬೇಕಾಗಿದೆ. ಉದ್ವಿಗ್ನತೆ ಶಮನವಾದ ಬಳಿಕ ಹೊಸ ದಿನಾಂಕಗಳನ್ನು ಪ್ರಕಟಿಸಲಿದೆ ಎಂದು ಬಿಸಿಸಿಐ- ಐಪಿಎಲ್ ಮಂಡಳಿ ತನ್ನ ಪ್ರಕಟಣೆಯಲ್ಲಿ ತಿಳಿಸಿದೆ.

ಮೇ 9ರಂದು ಲಖನೌದ ಏಕನಾ ಕ್ರೀಡಾಂಗಣದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ಮತ್ತು ಲಕ್ನೋ ಸೂಪರ್ ಜೈಂಟ್ಸ್ ತಂಡಗಳ ನಡುವೆ ಹಣಾಹಣಿ ನಡೆಯಬೇಕಿತ್ತು. ಪ್ಲೇ ಆಫ್ ಅಧಿಕೃತ ಪ್ರವೇಶಕ್ಕೆ ಆರ್‌ಸಿಬಿಗೆ ಈ ಪಂದ್ಯದ ಗೆಲುವು ಅನಿವಾರ್ಯವಾಗಿತ್ತು. ಇನ್ನೊಂದು ಪಂದ್ಯ ಮೇ 13ರಂದು ಬೆಂಗಳೂರಿನಲ್ಲಿ ನಿಗದಿಯಾಗಿದೆ. ಈ ಪಂದ್ಯಕ್ಕೆ ಟಿಕೆಟ್ ಖರೀದಿ ಮಾಡಿರುವ ಕ್ರಿಕೆಟ್ ಪ್ರೇಮಿಗಳು ಪಂದ್ಯ ನಿಗದಿಯಂತೆ ನಡೆಯಲಿ ಎನ್ನುವ ನಿರೀಕ್ಷೆಯಲ್ಲಿದ್ದಾರೆ.

ಪ್ರತಿ ಪಂದ್ಯಕ್ಕೆ ಐಪಿಎಲ್‌ನ ಮಾಧ್ಯಮ ಹಕ್ಕುಗಳ ಮೌಲ್ಯ

ಭಾರತ ಮತ್ತು ಪಾಕಿಸ್ತಾನ ನಡುವಿನ ಗಡಿಯಾಚೆಗಿನ ಉದ್ವಿಗ್ನತೆ ಹೆಚ್ಚುತ್ತಿರುವ ಹಿನ್ನೆಲೆಯಲ್ಲಿ ಐಪಿಎಲ್ 2025 ಟೂರ್ನಿಯನ್ನು ಸ್ಥಗಿತಗೊಳಿಸಲಾಗಿದೆ. ಪ್ರತಿ ಐಪಿಎಲ್ ಪಂದ್ಯದಿಂದ ಬಿಸಿಸಿಐ ಗಳಿಸುವ ಗಳಿಕೆಯ ಮಾಹಿತಿ ಇಲ್ಲಿದೆ

ಗಳಿಕೆ ಎಷ್ಟು

- ಪ್ರತಿ ಐಪಿಎಲ್ ಪಂದ್ಯವು 118 ಕೋಟಿ ರು. ಮೊತ್ತದ ಪ್ರಸಾರ ಮೌಲ್ಯ ಹೊಂದಿದೆ.
- ಇನ್ನೂ 17 ಪಂದ್ಯಗಳನ್ನು ಆಡಲಿದ್ದು, ಈ ಮೂಲಕ 2000 ಕೋಟಿಗೂ ಹೆಚ್ಚು ಹಣ ನಿರೀಕ್ಷಿತ ಆದಾಯ ಅಪಾಯದಲ್ಲಿದೆ
- ಪ್ರಸಾರಕರಾದ ಜಿಯೋಸ್ಟಾರ್ ಜಾಹೀರಾತಿನ ಮೂಲಕ ತನ್ನ ಹೂಡಿಕೆಯನ್ನು ವಾಪಸ್ ಪಡೆಯುತ್ತಿದೆ. ಅಂತರರಾಷ್ಟ್ರೀಯ ಆಟಗಾರರು ಹೆಚ್ಚಿನ ಪ್ರಮಾಣದಲ್ಲಿದ್ದರೆ ಜಾಹೀರಾತಿಗೂ ಬೇಡಿಕೆ ಹೆಚ್ಚಿರುತ್ತದೆ.
- 18 ನೇ ಟೂರ್ನಿಯಲ್ಲಿ ರಿಷಭ್ ಪಂತ್ ಮತ್ತು ಶ್ರೇಯಸ್ ಅಯ್ಯರ್ ಕ್ರಮವಾಗಿ 27 ಮತ್ತು 26.75 ಕೋಟಿ ರು.ಗೆ ಮಾರಾಟವಾಗಿದ್ದಾರೆ.

ಐಪಿಎಲ್ ಟೂರ್ನಿ ಭಯೋತ್ಪಾದನೆ ದಾಳಿಯಂತಹ ಅಪಾಯಗಳಿಂದ ವಿರುದ್ಧ ವಿಮೆ ಹೊಂದಿದ್ದು, ಮುಂದಿನ ಪಂದ್ಯಗಳು ರದ್ದಾದರೂ ವಿಮೆ ಮೊತ್ತ ಸಿಗಲಿದೆ.

118 ಕೋಟಿ ರು.

ಮುಖ್ಯವಾಹಿನಿಯ ಟಿವಿ ಮತ್ತು ಡಿಜಿಟಲ್ ಹಕ್ಕುಗಳು ಸೇರಿ ಪ್ರತಿ ಐಪಿಎಲ್ ಪಂದ್ಯ 107.5 ಕೋಟಿ ರು.ಗಳ ನೇರ ಪ್ರಸಾರ ಮೌಲ್ಯ ಹೊಂದಿದೆ. ಇದರಲ್ಲಿ ಟಿವಿ ನೇರ ಪ್ರಸಾರ ಮೌಲ್ಯ 107.5 ಕೋಟಿ ರು.ಗಳಾದರೆ ಡಿಜಿಟಲ್ ಪ್ರಸಾರ ಮೌಲ್ಯ 50 ಕೋಟಿ ರು.ಗಳು. ಈ ಮೂಲಕ ಬಿಸಿಸಿಐ ಎಲ್ಲ ಮಾಧ್ಯಮ ಹಕ್ಕುಗಳ ಮೂಲಕ 118 ಕೋಟಿ ರು. ಗಳಿಕೆ ಹೊಂದಿದೆ.

157.5 ಕೋಟಿ
ಟಿವಿ ಹಕ್ಕುಗಳು (ಪ್ಯಾಕೇಜ್ ಎ) 18ನೇ ಆವೃತ್ತಿಯ ಐಪಿಎಲ್ ಟೂರ್ನಿಯ ಪ್ರಸಾರ ಹಕ್ಕು 23,575 ಕೋಟಿ ರು.ಗಳಿಗೆ ಮಾರಾಟವಾಗಿದೆ. ಅಂದರೆ ಪ್ರತಿ ಪಂದ್ಯವು ಸರಾಸರಿ 52.5 ಕೋಟಿ ರೂ. ಪ್ರಸಾರ ಮೌಲ್ಯ ಹೊಂದಿದೆ.

50 ಕೋಟಿ
ಡಿಜಿಟಲ್ ಹಕ್ಕುಗಳು ಒಟ್ಟು ಟೂರ್ನಿಯ ಪ್ರಸಾರ ಮೌಲ್ಯ 20,500 ರು.ಗಳಿಗೆ ಮಾರಾಟವಾಗಿದೆ, ಅಂದರೆ ಪ್ರತಿ ಪಂದ್ಯಕ್ಕೆ ಸರಾಸರಿ 150 ಕೋಟಿ ರು.

7.3 ಕೋಟಿ ರು.
ವಿಶೇಷವಲ್ಲದ ಡಿಜಿಟಲ್ ಹಕ್ಕುಗಳು (ಪ್ಯಾಕೇಜ್ ಸಿ- 5 ವರ್ಷಗಳಲ್ಲಿ 98 ಪಂದ್ಯಗಳ ಪ್ರಸಾರದ ಹಕ್ಕು 2,991 ಕೋಟಿ ರು.ಗಳಿಗೆ ಮಾರಾಟವಾಗಿದೆ. ಇದರಲ್ಲಿ ನಿರ್ದಿಷ್ಟವಾದ ಪ್ರತಿ ಪಂದ್ಯಗಳಿಗೆ ನಿಗದಿ ಮಾಡಿದ ಸುಮಾರು 30.52 ಕೋಟಿ ರು. ಮತ್ತು ಒಟ್ಟಾರೆಯಾಗಿ ಪ್ರತಿ ಪಂದ್ಯಕ್ಕೆ 7.3 ಕೋಟಿ ರು. ಸೇರಿದೆ.

3.2 ಕೋಟಿ
ಜಗತ್ತಿನ ಉಳಿದ ಭಾಗ (ಪ್ಯಾಕೇಜ್ ಡಿ): ಟಿವಿ ಮತ್ತು ಡಿಜಿಟಲ್ ಹಕ್ಕುಗಳ ಪ್ಯಾಕೇಜ್ 1,324 ಕೋಟಿ ರು.ಗಳಿಗೆ ಮಾರಾಟವಾಗಿದೆ. ಅಂದರೆ ಪ್ರತಿ ಪಂದ್ಯಕ್ಕೆ ಸರಾಸರಿ 3.2 ನಿಗದಿಯಾಗಿದೆ.

ಯಶಸ್ವಿ ಜೈಸ್ವಾಲ್ ಯೂಟರ್ನ್: ಗೋವಾ ಬದಲು ಮುಂಬೈ ಪರ ಆಡುವ ಬಯಕೆ

ಮುಂಬೈ: ದೇಶೀಯ ಟೂರ್ನಿಯಲ್ಲಿ ಮುಂಬೈ ಬದಲು ಗೋವಾ ಪರ ಆಡುವ ಬಯಕೆ ವ್ಯಕ್ತಪಡಿಸಿದ್ದ ಟೀಮ್ ಇಂಡಿಯಾ ಟೆಸ್ಟ್ ಆರಂಭಿಕ ಆಟಗಾರ ಯಶಸ್ವಿ ಜೈಸ್ವಾಲ್ ಇದೀಗ ತಮ್ಮ ನಿರ್ಧಾರ ಬದಲಿಸಿದ್ದಾರೆ. ಮುಂಬೈ ಪರ ಆಡಲು ತಮಗೆ ಅವಕಾಶ ನೀಡುವಂತೆ ಅವರು ಮುಂಬೈ

ಕ್ರಿಕೆಟ್ ಮಂಡಳಿಗೆ ಮನವಿ ಮಾಡಿದ್ದಾರೆ.

ಐಪಿಎಲ್ 2025 ರ ನಡುವೆ, ಜೈಸ್ವಾಲ್ ಮುಂಬೈ ರಾಜ್ಯ ತಂಡವನ್ನು ತೊರೆದು 2025-26 ದೇಶೀಯ ಋತುವಿಗಾಗಿ ಗೋವಾಕ್ಕೆ ಹೋಗುವ ನಿರ್ಧಾರವನ್ನು ತೆಗೆದುಕೊಂಡಿದ್ದರು.

ಮುಂಬೈ ಕ್ರಿಕೆಟ್ ಅಸೋಸಿಯೇಷನ್‌ಗೆ ಬರೆದ ಪತ್ರದ ಪ್ರಕಾರ, ಯಶಸ್ವಿ ಜೈಸ್ವಾಲ್ ಮುಂಬೈ ತೊರೆಯುವ ನಿರ್ಧಾರ ಕಷ್ಟಕರವಾಗಿತ್ತು. ಗೋವಾ ನೀಡಿದ ನಾಯಕತ್ವದ ಅವಕಾಶವೇ ತಮ್ಮ ನಿರ್ಧಾರಕ್ಕೆ ಕಾರಣ ಎಂದು ಯುವ ಬ್ಯಾಟ್ಸ್‌ಮನ್ ಬಹಿರಂಗಪಡಿಸಿದ್ದಾರೆ. ಗೋವಾ ತಂಡ ಸೇರಲು ಎಂಸಿಎಯಿಂದ ಎನ್‌ಒಸಿ ಕೋರಿ ಒಂದು ತಿಂಗಳ ನಂತರ, ಯಶಸ್ವಿ ಜೈಸ್ವಾಲ್ ಅದನ್ನು ಹಿಂಪಡೆಯಲು ಮನವಿ ಸಲ್ಲಿಸಿದ್ದಾರೆ.

ಯಶಸ್ವಿ ಜೈಸ್ವಾಲ್ ತಮ್ಮ ಎನ್‌ಒಸಿಯನ್ನು ಹಿಂಪಡೆಯಲು ಮತ್ತು ಮುಂದಿನ ದೇಶೀಯ ಋತುವಿಗಾಗಿ ಮುಂಬೈ ಪರ ಆಡುವ ಬಯಕೆಯನ್ನು ವ್ಯಕ್ತಪಡಿಸಿದ ಅರ್ಜಿಯನ್ನು ಮುಂಬೈ ಕ್ರಿಕೆಟ್ ಅಸೋಸಿಯೇಷನ್ ಸ್ವೀಕರಿಸಿದ್ದರೂ, ಅವರ ಪ್ರಕರಣವನ್ನು ಮುಂದಿನ ಎಂಸಿಎ ವಾರ್ಷಿಕ ಸಭೆಯಲ್ಲಿ ಸುಮಾರು ಎರಡು ವಾರಗಳ ನಂತರ ತೆಗೆದುಕೊಳ್ಳಲಾಗುತ್ತದೆ ಎನ್ನಲಾಗಿದೆ. 23 ವರ್ಷದ ಯಶಸ್ವಿ ಜೈಸ್ವಾಲ್ ಕುಟುಂಬದ ಜತೆ ಗೋವಾದಲ್ಲಿ ನೆಲೆಸಲು ಯೋಚಿಸಿದ್ದು, ಇದೀಗ ಈ ನಿರ್ಧಾರ ಬದಲಿಸಿದ್ದಾರೆ ಎನ್ನಲಾಗಿದೆ.

ಸೆಟ್ಟೇರಲಿದೆ ಮ್ಯಾಕ್ಸ್ 2

ಕಿಚ್ಚ ಸುದೀಪ್ ಅಭಿನಯದ ಮ್ಯಾಕ್ಸ್ ಸೂಪರ್ ಹಿಟ್ ಸಿನಿಮಾವಾಗಿತ್ತು. ಮಂಕಾಗಿದ್ದ ಕನ್ನಡ ಚಿತ್ರರಂಗಕ್ಕೆ ಬೂಸ್ಟ್ ನೀಡಿತು. ಮ್ಯಾಕ್ಸ್ ಸಿನಿಪ್ರಿಯರ ಮಗೆಲ್ಲುವ ಮೂಲಕ ಭರ್ಜರಿ ಕಲೆಕ್ಷನ್ ಕೂಡ ಮಾಡಿತು. ಮ್ಯಾಕ್ಸ್ ಕನ್ನಡ ಮಾತ್ರವಲ್ಲ ಪ್ಯಾನ್ ಇಂಡಿಯಾ ಸಿನಿಮಾವಾಗಿ ನಿರ್ಮಾಣವಾಗಿದೆ ಇತರ ಭಾಷೆಗಳಲ್ಲಿಯೂ ಕಮಾಲ್ ಮಾಡಿತ್ತು. ಮ್ಯಾಕ್ಸ್ ನೋಡಿ ಆನಂದಿಸಿದ ಎಲ್ಲರೂ ಮುಂದೆ ಮ್ಯಾಕ್ಸ್2 ಕೂಡ ಬರಬಹುದು ಎಂದು ನಿರೀಕ್ಷೆ ಮಾಡಿದ್ದರು. ಅಂತೆಯೇ ಈಗ ಮ್ಯಾಕ್ಸ್ 2 ಸೆಟ್ಟೇರಲು ಸಿದ್ಧವಾಗಿದೆ. ಮ್ಯಾಕ್ಸ್ ಚಿತ್ರವನ್ನು ನಿರ್ದೇಶಿಸಿದ್ದ ವಿಜಯ್ ಕಾರ್ತಿಕೇಯನ್ ಅವರೇ ಈ ಚಿತ್ರವನ್ನು ನಿರ್ದೇಶಿಸಲಿದ್ದಾರೆ. ಈಗಾಗಲೇ ಚಿತ್ರದ ಕಥೆ ಹೆಣೆದಿದ್ದು, ಚಿತ್ರೀಕರಣಕ್ಕೆ ಅಣಿಯಾಗಿದ್ದಾರೆ ಎಂದು ಹೇಳಲಾಗುತ್ತಿದೆ.

ಮ್ಯಾಕ್ಸ್ ಒಂದೇ ರಾತ್ರಿಯಲ್ಲಿ ನಡೆಯುವ ರೋಚಕ ಕಥೆಯನ್ನು ಒಳಗೊಂಡಿತ್ತು. ಥ್ರಿಲ್ಲರ್,ಸಸ್ಪೆನ್ಸ್ ಅಂಶಗಳು ಬೆರೆತಿದ್ದ ಈ ಚಿತ್ರದಲ್ಲಿ ಕಿಚ್ಚ ಸುದೀಪ್ ಭರ್ಜರಿ ಆ್ಯಕ್ಷನ್‌ನಲ್ಲಿ ಮಿಂಚಿದ್ದರು. ಸಂಯುಕ್ತಾ ಹೊರನಾಡು, ಸುಕೃತಾ ವಾಗ್ಲೆ, ವರಲಕ್ಷ್ಮಿ ಶರತ್ ಕುಮಾರ್ ಹೀಗೆ ದೊಡ್ಡ ತಾರಾಬಳಗವೇ ಈ ಸಿನಿಮಾದಲ್ಲಿತ್ತು. ಮುಂದಿನ ಭಾಗದಲ್ಲಿಯೂ ಇದೇ ತಾರಾಬಳಗ ಮುಂದುವರಿಯಲಿದೆ. ಮ್ಯಾಕ್ಸ್ 2 ಮತ್ತಷ್ಟು ರೋಚಕವಾಗಿ ಬರಲಿದೆ.

ಸದ್ಯ ಕಿಚ್ಚ ಸುದೀಪ್ ಬಿಲ್ಲ ರಂಗ ಭಾಷ ಚಿತ್ರದಲ್ಲಿ ಬ್ಯುಸಿಯಾಗಿದ್ದಾರೆ. ವಿಕ್ರಾಂತ್ ರೋಣ ಚಿತ್ರದ ಬಳಿಕ ಅನೂಪ್ ಭಂಡಾರಿ ಈ ಚಿತ್ರವನ್ನು ನಿರ್ದೇಶನ ಮಾಡುತ್ತಿದ್ದು, ಸುದೀಪ್ ಈ ಚಿತ್ರದಲ್ಲಿ ವಿಭಿನ್ನ ಲುಕ್‌ನಲ್ಲಿ ಮಿಂಚಲಿದ್ದಾರೆ. ಇದು ಹೈಬಜೆಟ್ ಚಿತ್ರವಾಗಿದ್ದು ಅದ್ದೂರಿಯಾಗಿ ಮೂಡಿಬರಲಿದೆ. ಇತ್ತ ಬಿಲ್ಲ ಭಾಷ ರಂಗ ಚಿತ್ರದ ನಡುವೆಯೇ ಕಿಚ್ಚ ಸುದೀಪ್, ಮ್ಯಾಕ್ಸ್ 2 ಚಿತ್ರದಲ್ಲಿಯೂ ನಟಿಸಲಿದ್ದು ಬಿಲ್ಲ ರಂಗ ಭಾಷ ಚಿತ್ರಕ್ಕೂ ಮೊದಲೇ ಮ್ಯಾಕ್ಸ್ 2 ತೆರೆಗೆ ಬರಲಿದೆ ಎನ್ನಲಾಗುತ್ತಿದೆ. ಎಲ್ಲವೂ ಅಂದುಕೊಂಡಂತೆ ಆದರೆ ಇನ್ನೇನು ಚಿತ್ರ ಸೆಟ್ಟೇರಲಿದೆ.

ಹಾಡಿನಲ್ಲಿ ಮನಗೆದ್ದ ವೃತ್ತ

ಹೊಸಬರೇ ಸೇರಿ ನಿರ್ಮಿಸಿ, ನಿರ್ದೇಶಿಸಿರುವ ವೃತ್ತ ತೆರೆಗೆ ಸಿದ್ಧವಾಗಿದೆ. ಟೈಟಲ್‌ನಲ್ಲಿಯೇ ಕ್ಯೂರಿಯಾಸಿಟಿ ಮೂಡಿಸಿರುವ ವೃತ್ತ ಹಾಡಿನಲ್ಲಿಯೂ ಸಿನಿಪ್ರಿಯರ ಮನಗೆದ್ದಿದೆ. ವೃತ್ತದ ಒಳಗಿನಿಂದ ಮಾಯೆಯೋ ಎಂಬ.. ಹಾಡು ಮೂಡಿಬಂದಿದ್ದು ಕೇಳಲು ಮಧುರವಾಗಿದೆ. ಎಂ.ಜಿ. ಆಂಟೋನಿ ಮತ್ತು ಹರಿ ಕೃಷಂತ್ ಸಂಗೀತ ಸಂಯೋಜಿಸಿರುವ ಈ ಹಾಡಿಗೆ ನಿಹಾಲ್ ಟೌರೊ ದನಿಯಾಗಿದ್ದಾರೆ. ಎಸ್.ಲಿಖಿತ್ ಕುಮಾರ್ ಕಥೆ, ಚಿತ್ರಕಥೆ ಬರೆದು ನಿರ್ದೇಶನ ಮಾಡಿದ್ದು, ಲಕ್ಷ್ಯ ಆರ್ಟ್ಸ್ ಬ್ಯಾನರ್‌ನಲ್ಲಿ ಟಿ.ಶಿವಕುಮಾರ್ ವೃತ್ತವನ್ನು ನಿರ್ಮಿಸಿದ್ದಾರೆ. ವೃತ್ತ ಒಂದು ವಿಭಿನ್ನ ಪ್ರಯತ್ನವಾಗಿದ್ದು, ಸಿದ್ಧಾರ್ಥ ಎಂಬ ಪಾತ್ರದ ಸುತ್ತ ಸಿನಿಮಾದ ಸ್ಟೋರಿ ಸಾಗುತ್ತದೆ. ಸಿದ್ಧಾರ್ಥನ ಒಂದು ತಪ್ಪು ನಡೆಯೇ ಚಿತ್ರದ ಕಥಾವಸ್ತು. ವೃತ್ತ ಥ್ರಿಲ್ಲರ್ ಮಿಸ್ಟರಿ ಜಾನರ್‌ನ ಸಿನಿಮಾ, ಎಲ್ಲರಿಗೂ ಕನೆಕ್ಟ್ ಆಗುವ, ಕಾಡುವ ಕಥೆ ಇಲ್ಲಿದೆ. ಸಿನಿಮಾ ನೋಡುತ್ತಿದ್ದರೆ ನಾವು ಕೂಡ ಅದರ ಜತೆಯೇ ಸಾಗುತ್ತೇವೆ ಎನ್ನುತ್ತಾರೆ ನಿರ್ದೇಶಕ ಲಿಖಿತ್ ಕುಮಾರ್. ಮಾಹಿರ್ ಮೊಯಿದ್ದೀನ್ ನಾಯಕನಾಗಿ ನಟಿಸಿದ್ದು, ಸಿದ್ಧಾರ್ಥನ ಪಾತ್ರ ನಿರ್ವಹಿಸಿದ್ದಾರೆ. ಹರಿಣಿ ಸುಂದರ ರಾಜನ್ ನಾಯಕಿಯಾಗಿ ಬಣ್ಣಹಚ್ಚಿದ್ದು, ಪ್ರಿಯಾ ಎಂಬ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ವೃತ್ತ ಜೂನ್ 6ರಂದು ತೆರೆಗೆ ಬರಲಿದೆ.

ಸ್ನೇಹದ ಕಡಲಲ್ಲಿ ಸುಮನ್

ಕಿರುತೆರೆಯಲ್ಲಿ ಹಲವು ಧಾರಾವಾಹಿಗಳು ಪ್ರಸಾರವಾಗುತ್ತಿವೆ. ಅವುಗಳ ಸಾಲಿಗೆ ಈಗ ಸ್ನೇಹದ ಕಡಲಲ್ಲಿ ಧಾರಾವಾಹಿಯೂ ಸೇರ್ಪಡೆಯಾಗಿದೆ. ಇದೊಂದು ಕೌಟುಂಬಿಕ ಕಥೆ ಧಾರಾವಾಹಿಯಾಗಿದ್ದು, ಪ್ರೀತಮ್ ಶೆಟ್ಟಿ ನಿರ್ದೇಶನ ಮಾಡುತ್ತಿದ್ದಾರೆ. ವಿಶೇಷ ಎಂದರೆ ಬಹು ಭಾಷಾ ನಟ ಸುಮನ್ ತಲ್ವಾರ್ ಪ್ರಮುಖ ಪಾತ್ರದಲ್ಲಿ ಅಭಿನಯಿಸುತ್ತಿದ್ದಾರೆ. ಇದು ಸುಮನ್ ಅವರು ಅಭಿನಯಿಸುತ್ತಿರುವ ಮೊದಲ ಕನ್ನಡ ಧಾರಾವಾಹಿಯಾಗಿದೆ. ಚಂದು ಗೌಡ ನಾಯಕನಾಗಿದ್ದು ಕಾವ್ಯಾ ಮಹದೇವ್ ನಾಯಕಿಯಾಗಿ ಕಾಣಿಸಿಕೊಳ್ಳುತ್ತಿದ್ದಾರೆ. ಹೇಮಾ ಬೆಳ್ಳೂರು ಕೂಡ ತಾರಾಬಳಗದಲ್ಲಿದ್ದಾರೆ.

ನಾನು ಚಿತ್ರರಂಗಕ್ಕೆ ಬಂದು ನಾಲ್ಕೂವರೆ ದಶಕಗಳು ಕಳೆದಿವೆ. ಕನ್ನಡ, ತಮಿಳು, ತೆಲುಗು ಸೇರಿದಂತೆ ಹನ್ನೊಂದು ಭಾಷೆಯ ಚಿತ್ರಗಳಲ್ಲಿ ನಟಿಸಿದ್ದೇನೆ. ಸ್ನೇಹದ ಕಡಲಲ್ಲಿ ನಾನು ನಟಿಸುತ್ತಿರುವ ಮೊದಲ ಕನ್ನಡ ಧಾರಾವಾಹಿಯಾಗಿದ್ದು, ಆ ಮೂಲಕ ಕಿರುತೆರೆಗೂ ಎಂಟ್ರಿಕೊಟ್ಟಿದ್ದೇನೆ. ಧಾರಾವಾಹಿಯ ಕಥೆ ಇಷ್ಟವಾಯಿತು, ಹಾಗಾಗಿ ಈ ಧಾರಾವಾಹಿಯಲ್ಲಿ ನಟಿಸಲು ಒಪ್ಪಿದೆ ಎಂದು ಸುಮನ್ ತಲ್ವಾರ್ ಹೇಳಿದರು.

ಸ್ನೇಹದ ಕಡಲಲ್ಲಿ ಧಾರಾವಾಹಿಯ ಕಥೆ ತುಂಬಾ ಚೆನ್ನಾಗಿದೆ. ಪ್ರೇಕ್ಷಕರಿಗೆ ಮೂವತ್ತು ನಿಮಿಷದ ಸಂಚಿಕೆ ನೋಡಿದರೆ ಒಂದು ಸಿನಿಮಾ ನೋಡಿದ ಅನುಭವವಾಗುತ್ತದೆ. ನಾನು ಇದರಲ್ಲಿ ಶಿವರಾಜ್ ಅರಸ್ ಎಂಬ ಪಾತ್ರದಲ್ಲಿ ಅಭಿನಯಿಸುತ್ತಿದ್ದೇನೆ. ಸುಮನ್ ಅವರು ನನ್ನ ತಂದೆ ಪಾತ್ರದಲ್ಲಿ ಅಭಿನಯಿಸುತ್ತಿರುವುದು ಸಂತಸವಾಗಿದೆ ಎಂದು ನಟ ಚಂದು ಗೌಡ ಹೇಳಿದರು.

ತಾಯವ್ವನಾದ ಗೀತಾಪ್ರಿಯಾ

ಕಿಚ್ಚ ಸುದೀಪ್ ಅಭಿನಯದ ತಾಯವ್ವ ಚಿತ್ರ ದಶಕಗಳ ಹಿಂದೆಯೇ ತೆರೆಗೆ ಬಂದಿತ್ತು. ಈಗ ಅದೇ ಶೀರ್ಷಿಕೆಯಲ್ಲಿ ಮತ್ತೊಂದು ಚಿತ್ರ ತೆರೆ ಸಿದ್ಧವಾಗಿದೆ. ಈ ಬಾರಿ ತಾಯವ್ವನಾಗಿ ಗೀತಾಪ್ರಿಯಾ ಕಾಣಿಸಿಕೊಳ್ಳುತ್ತಿದ್ದಾರೆ. ಸದ್ದಿಲ್ಲದೆ ಚಿತ್ರೀಕರಣ ಮುಗಿಸಿರುವ ತಾಯವ್ವ ಬಿಡುಗಡೆಗೂ ರೆಡಿಯಾಗಿದೆ. ಸದ್ಯ ತಾಯವ್ವ ಚಿತ್ರದ ಟ್ರೇಲರ್ ರಿಲೀಸ್ ಆಗಿದೆ. ಇದೊಂದು ಅಪ್ಪಟ ಗ್ರಾಮೀಣ ಸೊಗಡಿನ ಚಿತ್ರವಾಗಿದ್ದು, ತಾಯವ್ವ ಚಿತ್ರದ ಮೂಲಕ ಗೀತಾಪ್ರಿಯಾ ಚಿತ್ರರಂಗ ಪ್ರವೇಶಿಸುತ್ತಿದ್ದಾರೆ.

ಹಿರಿಯ ನಟ ಪ್ರಣಯರಾಜ ಶ್ರೀನಾಥ್, ತಾಯವ್ವ ಸಿನಿಮಾದ ಟ್ರೇಲರ್ ಬಿಡುಗಡೆ ಮಾಡಿ ಚಿತ್ರತಂಡಕ್ಕೆ ಶುಭಕೋರಿದರು.

ತಾಯವ್ವ ಹೆಸರಿನಲ್ಲೇ ಭಾವನಾತ್ಮಕ ಸೆಳೆತವಿದೆ, ಗೀತಪ್ರಿಯಾ ನನಗೆ ತುಂಬ ಇಷ್ಟವಾದ ಹೆಸರು. ಹಿರಿಯ ನಿರ್ದೇಶಕ ಗೀತಪ್ರಿಯಾ ಅವರನ್ನು ಈ ಹೆಸರು ನೆನಪಿಸುತ್ತದೆ. ಇಲ್ಲಿ ಗೀತಾಪ್ರಿಯಾ ತಾಯವ್ವನಾಗಿ ಅಭಿನಯಿಸಿದ್ದಾರೆ. ಇದೊಂದು ಸಾಮಾಜಿಕ ಕಥಾಹಂದರದ ಸಿನಿಮಾ ಎಂಬುದು ಟ್ರೇಲರ್‌ನಲ್ಲಿ ತಿಳಿಯುತ್ತದೆ. ಸೂಲಗಿತ್ತಿಯ ಕಾರ್ಯ, ಹೆಣ್ಣಿನ ಮಹತ್ವ ಎರಡನ್ನೂ ಈ ಸಿನಿಮಾದಲ್ಲಿ ಹೇಳಲಾಗಿದೆ. ಇಂಥ ಸಿನಿಮಾಗಳು ಹೆಚ್ಚಾಗಿ ಬರಬೇಕು ಎಂದು ಶ್ರೀನಾಥ್ ಆಶಿಸಿದರು.

> ಸೂಲಗಿತ್ತಿ ನರಸಮ್ಮ ಅವರಂಥ ನೂರಾರು ಸೂಲಗಿತ್ತಿಯರು ಈ ಸಿನಿಮಾ ಮಾಡಲು ನಮಗೆ ಪ್ರೇರಣೆ. ಹೆಣ್ಣುಮಕ್ಕಳನ್ನು ಉಳಿಸಿ, ಬೆಳೆಸಿ ಎಂಬ ಸಂದೇಶವನ್ನು ಇಟ್ಟುಕೊಂಡು ಈ ಸಿನಿಮಾ ಮಾಡಲಾಗಿದೆ. ಇದರಲ್ಲಿ ನಾನು ತಾಯವ್ವ ಪಾತ್ರದಲ್ಲಿ ಕಾಣಿಸಿಕೊಂಡಿದ್ದೇನೆ. ಸಿನಿಮಾದಲ್ಲಿ ಒಂದು ಸಂದೇಶವಿದೆ. ಎಲ್ಲರಿಗೂ ತಲುಪುವಂಥ ವಿಷಯ ಈ ಸಿನಿಮಾದಲ್ಲಿದೆ. ಈಗಾಗಲೇ ಸಿನಿಮಾದ ಬಹುತೇಕ ಕೆಲಸಗಳು ಪೂರ್ಣಗೊಂಡಿದ್ದು, ಆದಷ್ಟು ಬೇಗ ಸಿನಿಮಾವನ್ನು ಪ್ರೇಕ್ಷಕರ ಮುಂದೆ ತರಲಿದ್ದೇವೆ.
> -ಗೀತಾಪ್ರಿಯಾ ನಟಿ, ನಿರ್ಮಾಪಕಿ

ಚಿತ್ರದ ಹಾಡುಗಳಿಗೆ ಅನಂತ ಆರ್ಯನ್ ಸಂಗೀತ ಸಂಯೋಜಿಸಿದ್ದು, ತಾಯವ್ವನ ಹಾಡುಗಳಿಗೆ ಗೀತಾಪ್ರಿಯಾ ಅವರೇ ದನಿಯಾಗಿದ್ದಾರೆ. ಅಪ್ಪಟ ಕನ್ನಡದ ಗ್ರಾಮೀಣ ಸೊಗಡಿನ ಜನಪದ ಗೀತೆಗಳ ಗುಚ್ಛವನ್ನು ತಾಯವ್ವ ಚಿತ್ರದಲ್ಲಿ ಹೊಸ ರೂಪದಲ್ಲಿ ತೆರೆಯ ಮೇಲೆ ತಂದಿರುವುದು ಈ ಸಿನಿಮಾದ ವಿಶೇಷ.

ತೆರೆಗೆ ಸಿದ್ಧವಾದ ಜಾವ ಕಾಫಿ

ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕಿಯರ ಸಂಖ್ಯೆ ಬಹಳ ಕಡಿಮೆ. ಈಗ ಆ ಸಾಲಿಗೆ ಸಾನ್ವಿಕಾ ಸೇರ್ಪಡೆಯಾಗಿದ್ದಾರೆ. ಮೂಲತಃ ಕೇರಳದವರಾದ ಸಾನ್ವಿಕಾ ಕನ್ನಡದಲ್ಲಿ ಜಾವ ಕಾಫಿ ಶೀರ್ಷಿಕೆಯಲ್ಲಿ ಚಿತ್ರವೊಂದನ್ನು ನಿರ್ದೇಶಿಸಿದ್ದಾರೆ. ಕೇವಲ ನಿರ್ದೇಶನ ಮಾತ್ರವಲ್ಲ, ನಾಯಕಿಯಾಗಿ ನಟಿಸುವ ಜತೆಗೆ ಸಾಹಸ ನಿರ್ದೇಶಕಿ ಹೀಗೆ ಒಂಭತ್ತು ಆಯಾಮಾಗಳಲ್ಲಿ ಸಾನ್ವಿಕಾ ನಿರ್ವಹಿಸಿದ್ದಾರೆ. ಚಿತ್ರ ನಿರ್ಮಾಣಕ್ಕೂ ಬಂಡವಾಳ ಹೂಡಿದ್ದಾರೆ. ಜಾವ ಕಾಫಿ ಚಿತ್ರದ ಟ್ರೇಲರ್ ಹಾಗೂ ಹಾಡುಗಳು ಬಿಡುಗಡೆಯಾಗಿವೆ.

ಜಾವ ಕಾಫಿ ಸಸ್ಪೆನ್ಸ್, ಥ್ರಿಲ್ಲರ್ ಜಾನರ್‌ನಲ್ಲಿ ಮೂಡಿಬಂದಿದ್ದು, ಪ್ಯಾನ್ ಇಂಡಿಯಾ ಚಿತ್ರವಾಗಿ ನಿರ್ಮಾಣವಾಗಿದೆ. ಈ ಹಿಂದೆ ತುಳು ಸಿನಿಮಾಗಳಲ್ಲಿ ನಟಿಸಿದ್ದ ಅಜಯ್ ವರ್ಧನ್ ನಾಯಕನಾಗಿ ನಟಿಸಿದ್ದಾರೆ. ಮಂಜುನಾಥ್, ಪ್ರತಿಮಾ, ಭವಾನಿ ಶಂಕರ್, ವಿಜಯ್ ಕುಮಾರ್,

ರಾಮಚಂದ್ರ, ರಾಮಲಿಂಗಪ್ಪ ತಾರಾಗಣದಲ್ಲಿದ್ದಾರೆ. ಮೂರು ಹಾಡುಗಳಿರುವ ಈ ಚಿತ್ರಕ್ಕೆ ಶ್ರೀಧರ್ ಕರ್ಕೇರ ಸಂಗೀತ ಸಂಯೋಜಿಸಿದ್ದು, ಪಾಲಾಶ್ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ.

> ಸಿನಿಮಾ ನಿರ್ದೇಶನ ಮಾಡಬೇಕೆಂಬುದು ನನ್ನ ಬಹು ವರ್ಷಗಳ ಕನಸು. ಈಗ ಅದು ನನಸಾಗಿದೆ. ನಾನು ಕೇರಳದವಳಾಗಿದ್ದರೂ ನನ್ನ ಮೊದಲ ಚಿತ್ರವನ್ನು ಕನ್ನಡದಲ್ಲಿಯೇ ನಿರ್ದೇಶಿಸಿದ್ದೇನೆ. ನಿರ್ದೇಶಕಿ, ನಿರ್ಮಾಪಕಿ, ನಾಯಕಿ, ಕಥೆ, ಚಿತ್ರಕಥೆ, ಸಾಹಸ ನಿರ್ದೇಶನ ಸೇರಿದಂತೆ ಈ ಚಿತ್ರದ ಒಂಬತ್ತು ಆಯಾಮಗಳಲ್ಲಿ ಕೆಲಸ ಮಾಡಿದ್ದೇನೆ. ಜಾವ ಕಾಫಿ ಸಸ್ಪೆನ್ಸ್, ಥ್ರಿಲ್ಲರ್ ಕಥಾಹಂದರ ಹೊಂದಿರುವ ಚಿತ್ರವಾಗಿದ್ದು, ಪಂಚ ಭಾಷೆಗಳಲ್ಲಿ ನಿರ್ಮಾಣವಾಗಿದೆ. ಬೆಂಗಳೂರು, ಮಂಗಳೂರು, ಕೇರಳ ಸುತ್ತಮುತ್ತ ಚಿತ್ರೀಕರಣ ನಡೆಸಿದ್ದೇವೆ.
> -ಸಾನ್ವಿಕಾ ನಿರ್ದೇಶಕಿ, ನಿರ್ಮಾಪಕಿ

ವಿಶ್ವವಾಣಿ
ಭಾನುವಾರ
11.05.2025

ಕ್ಯಾಟಕಾಂಬ್ ಭೂಗತವಾದ ಮೆಟ್ಟಿಲು, ಕಿರುಮಾರ್ಗ, ಗೂಡು, ಎಲ್ಲವನ್ನೂ ಹೊಂದಿರುವ ಕೋಣೆಗಳ ಜಾಲವಾಗಿದ್ದು ಮೃತರ ಅಂತ್ಯಕ್ರಿಯೆಗೆ ಬಳಸುವ ಸಮಾಧಿ ಸ್ಥಳಗಳು! ಈಜಿಪ್ಟಿನ ಜನರು ಮರಣ ನಂತರದ ಬದುಕಿನಲ್ಲಿ ಅಪಾರವಾದ ನಂಬಿಕೆ ಯನ್ನು ಹೊಂದಿದ್ದರು. ಹಾಗಾಗಿಯೇ ಫೆರೋಗಳು ಮತ್ತು ರಾಜ ಮನೆತನದವರಿಗೆ ವಿಶಾಲ ಮತ್ತು ವೈಭವಯುತವಾದ ಸಮಾಧಿಗಳನ್ನು ನಿರ್ಮಿಸಲಾಗುತ್ತಿತ್ತು.

ಶಿಲಾಸಮಾಧಿಯೇ ವಿಶ್ವದ ಅದ್ಭುತ

» ಡಾ. ಕೆ.ಎಸ್.ಚೈತ್ರಾ

ಈಜಿಪ್ಟಿನ ರಾಜಧಾನಿ ಕೈರೋದಿಂದ ಎರಡೂವರೆ ತಾಸಿನ ಪಯಣದ ನಂತರ ಪ್ರಾಚೀನ ಕಾಲದ ಕಲೆ ಮತ್ತು ಸಾಂಸ್ಕೃತಿಕ ರಾಜಧಾನಿಯಾಗಿದ್ದ ಅಲೆಕ್ಸಾಂಡ್ರಿಯಾ ತಲುಪಿದ್ದೆವು. ಮಿನಿವ್ಯಾನ್‌ನಲ್ಲಿ ಎಸಿಯ ತಂಪಿನಲ್ಲಿ ಕುಳಿತು ಹೊರಗೆ ಕಣ್ಣು ಹಾಯಿಸಿದರೆ ಪ್ರಖರ ಬಿಸಿಲಿನಲ್ಲಿ ಹೊಳೆವ ನೀಲ ನದಿಯ ಇಕ್ಕೆಲಗಳಲ್ಲಿ ಛತ್ರಿ ಬಿಚ್ಚಿಟ್ಟಂತೆ ಕಾಣುವ ತಾಳೆ ಮರಗಳು ಮನ ಸೆಳೆದವು! ನೋಡಲೇಬೇಕಾದ ಅದ್ಭುತ ಸ್ಥಳ ಎಂದು ಗೈಡ್ ಮುನೀರ್ ಬಣ್ಣಿಸಿದಾಗ ಮನಸ್ಸಿನಲ್ಲಿ ಇದ್ದದ್ದು ಪಿರಮಿಡ್‌ನಂಥ ಬೃಹತ್ ರಚನೆ, ಎತ್ತರದ ಮೂರ್ತಿ ಇತ್ಯಾದಿ. ಎದುರಿಗೆ ಕಂಡಿದ್ದು ಸಮತಟ್ಟಾದ ನೆಲದ ಮೇಲೆ ಗೋಳಾಕಾರದ ಚಿಕ್ಕದಾದ ಬಾಗಿಲು; ಇಷ್ಟೇನಾ ಎಂದುಕೊಂಡು ತಣ್ಣಗಿನ ಗಾಳಿ, ಮಂದ ಬೆಳಕಿನ ನಡುವೆ ಒಳಗೆ ಕಾಲಿಟ್ಟರೆ ಅದು ಈವರೆಗೆ ನಾವು ಕಂಡರಿಯದ ಲೋಕ, ಅದೇ ಅಲೆಕ್ಸಾಂಡ್ರಿಯದ ಕ್ಯಾಟಕಾಂಬ್!

ಕತ್ತೆ ಕಾರಣ!

ಮಧ್ಯಯುಗದ ವಿಶ್ವದ ಏಳು ಅದ್ಭುತಗಳಲ್ಲಿ ಒಂದಾದ ಅಲೆಕ್ಸಾಂಡ್ರಿಯದ 'ಕ್ಯಾಟಕಾಂಬ್' ಹೊರಜಗತ್ತಿಗೆ ಪರಿಚಯವಾದದ್ದು ಒಂದು ಕತ್ತೆಯಿಂದ! 1900 ಇಸವಿಯಲ್ಲಿ ಜನನಿಬಿಡ ಈ ಪುಟ್ಟ ಪಟ್ಟಣದ ಮಾರುಕಟ್ಟೆಯಲ್ಲಿ ಬಂಡಿ ಯನ್ನು ಕತ್ತೆಯೊಂದು ಎಳೆಯುತ್ತಾ ನಡೆಯುತ್ತಿತ್ತು. ಇಲ್ಲಿಗೆ ಬಂದು ಕಾಲಿಟ್ಟದ್ದೇ ತಡ ದುಡುಂ ಎಂದು ಕೆಳಗೆ ಬಿದ್ದು, ಜನರೆಲ್ಲ ನೋಡನೋಡುತ್ತಿರುವಂತೆಯೇ ನೆಲದಾಳದಲ್ಲಿ ಕಣ್ಮರೆಯಾಯಿತು. ಇದೇನು ವಿಚಿತ್ರ, ಎಂದು ಶೋಧಿಸಿದಾಗ ಮಣ್ಣಿನಲ್ಲಿ ಅಡಗಿದ್ದ ಈ ವಿಶಿಷ್ಟ ಭೂಗತ ಪ್ರಪಂಚ ಬೆಳಕಿಗೆ ಬಂತು. ಈಗ ಈಜಿಪ್ಟಿನ ಪ್ರಮುಖ ಪ್ರವಾಸಿ ತಾಣಗಳಲ್ಲಿ ಒಂದಾಗಿದ್ದು ಬೆಳಗ್ಗೆ ಒಂಬತ್ತರಿಂದ ಸಂಜೆ ಐದರವರೆಗೆ ಇದು ತೆರೆದಿದ್ದು ಸುಮಾರು ಮುನ್ನೂರಾ ಐವತ್ತು ರೂಪಾಯಿ ಪ್ರವೇಶಧನ. ನೋಡಲು ಕನಿಷ್ಠ ಎರಡರಿಂದ ಮೂರು ತಾಸು ಸಮಯ ಬೇಕು.

ಕ್ಯಾಟಕಾಂಬ್ ಭೂಗತವಾದ ಮೆಟ್ಟಿಲು, ಕಿರುಮಾರ್ಗ, ಗೂಡು, ಎಲ್ಲವನ್ನೂ ಹೊಂದಿರುವ ಕೋಣೆಗಳ ಜಾಲವಾಗಿದ್ದು ಮೃತರ ಅಂತ್ಯಕ್ರಿಯೆಗೆ ಬಳಸುವ ಸಮಾಧಿ ಸ್ಥಳಗಳು! ಈಜಿಪ್ಟಿನ ಜನರು ಮರಣ ನಂತರದ ಪಯಣ ಮತ್ತು ಬದುಕಿನಲ್ಲಿ ಅಪಾರವಾದ ನಂಬಿಕೆಯನ್ನು ಹೊಂದಿದ್ದರು. ಹಾಗಾಗಿಯೇ ಫೆರೋಗಳು ಮತ್ತು ರಾಜ ಮನೆತನದವರಿಗೆ ವಿಶಾಲ ಮತ್ತು ವೈಭವಯುತ ವಾದ ಸಮಾಧಿಗಳನ್ನು ನಿರ್ಮಿಸಲಾಗುತ್ತಿತ್ತು. ಗ್ರೀಕ್ ರೋಮನ್ ಆಳ್ವಿಕೆ ಶುರು ವಾದ ನಂತರವೂ ಈ ನಂಬಿಕೆ ಮುಂದುವರಿಯಿತು. ಆದರೆ ನೆಲಮಟ್ಟದಲ್ಲಿ ಸಮಾಧಿ ಮಾಡಲು ಜಾಗದ ಕೊರತೆ ಇತ್ತು. ಹಾಗೆಯೇ ಇವುಗಳನ್ನು ಲೂಟಿ ಮಾಡಿ, ವಿರೂಪಗೊಳಿಸಿ ಅಪವಿತ್ರಗೊಳಿಸುವ ಸಾಧ್ಯತೆ ಇತ್ತು.

ಸತ್ತ ಮೇಲೂ ಸ್ಥಳ ಮೀಸಲು

ಸಮಾಧಿ ಮಾಡುವಾಗಲೂ ಆಯಾ ವ್ಯಕ್ತಿಯ ಸಾಮಾಜಿಕ ಸ್ಥಾನಮಾನಕ್ಕೆ ಅನುಗುಣ ವಾಗಿ ಸ್ಥಳ ನಿರ್ಧಾರವಾಗುತ್ತಿತ್ತು. ಪ್ರವೇಶದ್ವಾರಕ್ಕೆ ಸಮೀಪವಾಗಿದ್ದು, ಹೋಗಿಬರಲು ಅನುಕೂಲಕರವಾಗಿದ್ದ, ವಿಶಾಲವಾದ ಕೋಣೆಗಳು ಗಣ್ಯರ ಬಂಧುಗಳ ಸಮಾಧಿ ಗಳಿಗೆ ಮೀಸಲಾಗಿದ್ದವು!

ಹೀಗಾಗಿ ಜನಸಂದಣಿ ಹೆಚ್ಚಿರುವ ಪ್ರದೇಶಗಳಲ್ಲಿ ಅಂತ್ಯಕ್ರಿಯೆಗಾಗಿ ಮೀಸಲಾಗಿಟ್ಟ ಸುರಕ್ಷಿತ ಭೂಗತ ರಚನೆಗಳು ಈ ಕ್ಯಾಟಕಾಂಬ್‌ಗಳು. ಕ್ರಿಸ್ತಶಕ ಒಂದರಿಂದ ಮೂರನೇ ಶತಮಾನದವರೆಗೆ ರೋಮನ್ನರ ಆಳ್ವಿಕೆಯಲ್ಲಿ ಇವುಗಳ ನಿರ್ಮಾಣ ನಡೆಯಿತು. ಹಾಗಾಗಿಯೇ ಈ ಶಿಲಾಸಮಾಧಿಗಳ ವಿನ್ಯಾಸ ಮತ್ತು ಕೆತ್ತನೆಗಳಲ್ಲಿ ಈಜಿಪ್ಟ್, ಗ್ರೀಕ್, ರೋಮನ್ ಈ ಮೂರೂ ಶೈಲಿಗಳ ಮಿಶ್ರಣ ವನ್ನು ಕಾಣಬಹುದು. ಆರಂಭದಲ್ಲಿ ನಿರ್ದಿಷ್ಟ ಕುಲೀನ ಮನೆತನಕ್ಕಾಗಿ ಕಟ್ಟಿ ದಂತಹ ಭೂಗತ ಸಮಾಧಿ, ನಂತರ ವಿಸ್ತಾರಗೊಳ್ಳುತ್ತ ಸಾರ್ವಜನಿಕ ಸಮಾಧಿ ಸ್ಥಳವಾಗಿ ಬಳಸಲ್ಪಟ್ಟಿತು. ಅಲೆಕ್ಸಾಂಡ್ರಿಯಾದಲ್ಲಿರುವ ಈ ಸಮುಚ್ಚಯದಲ್ಲಿ ಮುನ್ನೂರು ಸಮಾಧಿಗೆ ಅವಕಾಶವಿತ್ತು! ಇವು ಸುಮಾರು ನೂರಾಹತ್ತು ಅಡಿ ಕೆಳಗಿದ್ದು ಶಿಲಾಪದರವನ್ನು ಮೂರು ಹಂತಗಳಲ್ಲಿ ಕತ್ತರಿಸಿ, ಕೆತ್ತಿ ಇವುಗಳನ್ನು ನಿರ್ಮಿಸಲಾಗಿದೆ. ಅತ್ಯಂತ ಕೆಳಗಿನ ಹಂತ ಅಂತರ್ಜಲ ಸೋರಿಕೆಯಿಂದಾಗಿ ಈಗ ಮುಳುಗಿದೆ. ಕೋಮ್ ಎಲ್ ಶೋಕಾಫಾ ಕ್ಯಾಟಕಾಂಬ್ ಗಳನ್ನು ಕೋಮ್ ಎಲ್ ಶೋಕಾಫಾ ಅಂದರೆ ಚೂರುಗಳ ದಿಬ್ಬ ಎಂದು ಕರೆಯಲಾಗುತ್ತದೆ. ಆರಂಭದಲ್ಲಿ ಇದರ ಶೋಧ ನಡೆಸಿದಾಗ ಮುರಿದ ಮಡಕೆಗಳು ಮತ್ತು ಜಾಡಿ ಗಳ ರಾಶಿಯೇ ಸಿಕ್ಕಿತು. » ಮೂರನೇ ಪುಟಕ್ಕೆ

ಬುದ್ಧನು ತನ್ನನ್ನು 'ತಥಾಗತ' ಎಂದು ಕರೆದುಕೊಂಡಿದ್ದಾನೆ; ಆತನ ಕಾಲ ಕ್ರಿ.ಪೂ. ಆರನೆಯ ಶತಮಾನದಿಂದ ಐದನೆಯ ಶತಮಾನ. ಕ್ರಿ.ಪೂ.ಮೂರನೆಯ ಶತಮಾನದಿಂದ ಅವನನ್ನು ಬುದ್ಧ ಎಂದು ಕರೆಯಲು ಆರಂಭಿಸಿದರು. ಬುದ್ಧನಿಗೆ ಇರುವ ಇನ್ನೊಂದು ಪ್ರಖ್ಯಾತ ಹೆಸರೆಂದರೆ 'ಶಾಖ್ಯ ಮುನಿ'. ಪುರಾತನ ಕಾಲದಿಂದಲೂ ಉತ್ತರ ಭಾರತದಲ್ಲಿ ಆಡಳಿತ ನಡೆಸುತ್ತಿದ್ದ ಶಾಖ್ಯ ರಾಜರ ಕುಟುಂಬದಲ್ಲಿ ಜನಿಸಿದ್ದರಿಂದ ಶಾಖ್ಯ ಮುನಿ ಎಂಬ ಹೆಸರು. ಸಿದ್ಧಾರ್ಥ ಗೌತಮ ಸಹ ಆತನ ಹೆಸರು.

ಮಧ್ಯಮ ಮಾರ್ಗ ಪ್ರವರ್ತಕ

ತಥಾಗತ ಬುದ್ಧ

» ನಾರಾಯಣ ಯಾಜಿ

ಗಯಾಕ್ಕೆ ಬಂದು, ಅಲ್ಲಿದ್ದ ಬೋಧಿವೃಕ್ಷದ ಕೆಳಗೆ ಧ್ಯಾನಮಾಡುವ ಸ್ಥಿತಿಯಲ್ಲಿ ಬುದ್ಧನಿಗೆ ಜ್ಞಾನೋದಯವಾಯಿತು. ಜ್ಞಾನವೆಂದರೆ ಪ್ರಾಪಂಚಿಕ ವಸ್ತುಗಳಿಂದ ವಿಮುಖನಾಗು ವುದಲ್ಲ, ನಮ್ಮ ಉಸಿರು, ಹಕ್ಕಿಯ ಹಾಡು, ಎಲೆ, ಸೂರ್ಯನ ಕಿರಣ ಇವೆಲ್ಲವೂ ಧ್ಯಾನಕ್ಕೆ ಸಾಧನವಾಗಬಹುದೆಂದು ಆತನಿಗೆ ಅನಿಸಿತು. ಒಂದು ಧೂಳಿನ ಕಣದಿಂದಲೇ ಸಮಗ್ರವಾಗಿ ಬ್ರಹ್ಮಾಂಡದ ಲಕ್ಷಣವನ್ನು ಅರಿಯಬಹುದೆನ್ನುವ ವಿಷಯ ಹೊಳೆಯಿತು. ಜ್ಞಾನೋದಯವೆನ್ನುವದು ವಾಸ್ತವ ಪ್ರಪಂಚದಲ್ಲಿದೆಯೇ ಹೊರತು ಕಾಣದ ಆತ್ಮ ಅಥವಾ ಬ್ರಹ್ಮದ ವಿಷಯದಲ್ಲಿ ಇಲ್ಲ. ಆತ್ಮ ಪ್ರತ್ಯೇಕವೆನ್ನುವ ಭಾವನೆಯನ್ನು ಮೀರಿ ಪ್ರಕೃತಿಯ ಪ್ರತೀ ವಸ್ತುವಿನಲ್ಲಿ ಸೌಂದರ್ಯವಿದೆಯೆನ್ನುವದನ್ನು ಗೌತಮನ ಅರಿವಿಗೆ ಬಂತು. ಪ್ರಪಂಚವೇ ಪರಸ್ಪರ ಅವಲಂಬಿತ ಮತ್ತು ಸ್ವಯಂ ಸ್ವಭಾವವುಳ್ಳ ಸತ್ಯವೆನ್ನುವ ಸೂತ್ರ ಆತನಿಗೆ ಅರಿವಾಯಿತು. ಜ್ಞಾನವೆನ್ನುವದು ಒಳಗಣ್ಣು ಎನ್ನುವ ಭ್ರಮೆ ಗಿಂತ ಹೊರಗಣ್ಣಿಗೆ ಕಾಣುವ ಪ್ರಪಂಚದ ಸಮಸ್ಥ ವಸ್ತುವಿನಲ್ಲಿ ಇದೆ ಎನ್ನುವದು ಸ್ಪಷ್ಟವಾಯಿತು.

ತಥಾಗತ (ಹೀಗೆ ಹೋಗಿ ಹಾಗೆ ಬಂದವ) ಬುದ್ಧ ಭಾರತೀಯ ತತ್ತ್ವ ಶಾಸ್ತ್ರದಲ್ಲಿ ಪ್ರಮುಖವಾಗಿ ಬರುವುದು ಆತ ಎಲ್ಲಾ ದರ್ಶನಶಾಸ್ತ್ರಗಳಿಗೂ ಪೂರ್ವ ಪಕ್ಷವಾಗಿರುವುದರಿಂದ. ಶಂಕರಾಚಾರ್ಯರು ಮತ್ತು ಬುದ್ಧ ಈ ಇಬ್ಬರೂ ಚದುರಿ ಹೋಗಿದ್ದ ಬಹುಮೂಲ್ಯ ತತ್ತ್ವಶಾಸ್ತ್ರಗಳಿಗೆ ಭದ್ರವಾದ ಬುನಾದಿಯನ್ನು ಹಾಕಿ ಕೊಟ್ಟವರು. ವ್ಯಾಸರು ಬೃಹತ್ತಾಗಿದ್ದ ವೇದಗಳನ್ನು ಅಭ್ಯಾಸಿಗಳಿಗೆ ಅನುಕೂಲವಾಗುವಂತೆ ನಾಲ್ಕು ವಿಭಾಗಗಳನ್ನಾಗಿ ವಿಭಜಿಸಿದಂತೆ ಭಾರತೀಯ ತತ್ತ್ವಶಾಸ್ತ್ರ ಗಳಿಗೆ ಹೊಸ ವಿವೇಚನೆಯನ್ನು ಕೊಡುವ ಕಾರ್ಯವನ್ನು ಮೊದಲಾಗಿ ಮಾಡಿದವ ಗೌತಮ ಬುದ್ಧ.

ಅವನನ್ನು ಆಳವಾಗಿ ಅಧ್ಯಯನ ಮಾಡಿದ್ದ ಸ್ವಾಮಿ ವಿವೇಕಾನಂದರು ಸೆಪ್ಟೆಂಬರ್ 26, 1893 ರಂದು ಶಿಕಾಗೋದಲ್ಲಿ ಮಾಡಿದ ಪ್ರಸಿದ್ಧವಾದ ಭಾಷಣದಲ್ಲಿ ''ಬೌದ್ಧಧರ್ಮ; ಹಿಂದೂ ಧರ್ಮದ ಸಾಫಲ್ಯ'' ಎಂದು ವಿವರಿಸುತ್ತಾರೆ. ಅವರು ಶಾಕ್ಯಮುನಿಯನ್ನು ''ವೇದ ಗಳಲ್ಲಿ ಅದಗಿದ್ದ ಸತ್ಯವನ್ನು ಹೊರತೆಗೆದು ಜಗತ್ತಿಗೆಲ್ಲ ಘಂಟಾಘೋಷವಾಗಿ ಸಾರಿದವ'' ಎನ್ನುತ್ತಾರೆ. ಮುಂದು ವರಿದು ಬುದ್ಧ ವೇದಾಂತವನ್ನು ವಿಶ್ಲೇಷಿದನು; ಶಂಕರರು ಅದನ್ನು ಸಂಶ್ಲೇಷನೆ ಮಾಡಿ ಒಂದು ಸಾಮರಸ್ಯಕ್ಕೆ ತಂದರು ಎನ್ನುತ್ತಾರೆ.

ಬುದ್ಧನ ಕಾಲಕ್ಕಿಂತ ಹಿಂದೆಯೂ ತತ್ತ್ವಶಾಸ್ತ್ರಜ್ಞರಿದ್ದರು. ವೇದಕ್ಕೆ ತಿರುಳನ್ನು ಉಣಬಡಿಸಿದ ಕೊಟ್ಟ ಉಪನಿಷತ್ತು ಗಳು ಆ ಮೊದಲೇ ಇದ್ದವು. ವೇದದ ತಿರುಳೇ ಬ್ರಹ್ಮವನ್ನು ಕಾಣಲು ಎನ್ನುವುದನ್ನು ಉಪನಿಷತ್ತು ಸಾರುತ್ತದೆ. ಯಜ್ಞಸಂಸ್ಕೃತಿಯಲ್ಲಿ ಪ್ರಾಣಿ ಹಿಂಸೆ ಆಚರಣೆಯಲ್ಲಿದ್ದ ಕಾಲದಲ್ಲಿ ಕ್ಷತ್ರಿಯನಾದ ವಿಶ್ವಾಮಿತ್ರ ಯಜ್ಞದ ಬದಲು 24 ಅಕ್ಷರಗಳ ಗಾಯತ್ರಿ ಮಂತ್ರವನ್ನು ಕೊಟ್ಟರು. ಹಾರೀತ ಗೌತಮರು ತಂದೆಯಾರೆನ್ನುವುದೇ ಗೊತ್ತಿಲ್ಲದ ಜಾಬಾಲಿಯನ್ನು ಮಹರ್ಷಿಯನ್ನಾಗಿ ರೂಪಿಸಿದರು. ಬೀಜದಿಂದ ಚಿಗಿತ ಗಿಡ ಸೂರ್ಯನ ಬೆಳಕಿರುವೆಡೆ ಬೆಳೆಯುವಾಗ ಅಡ್ಡವೋ ಉದ್ದವೋ ಬೆಳೆಯುತ್ತದೆ. ಸಾಗರದೆಡೆ ಹರಿಯುವ ನದಿಗೆ ಅಡ್ಡಲಾಗಿ ಬಂಡೆ ಎದು ರಾದರೆ ಅದನ್ನು ಬಳಸಿ ಧಾವಿಸುತ್ತದೆ. ಇವ್ಯಾವವೂ ಬಂಡಾಯವಲ್ಲ. ಮುಚ್ಚಿಹೋದ ಹಾದಿಯನ್ನು ಸರಿಮಾಡಿ ಸಾಗುವಿಕೆ.

''ಬುದ್ಧ ಮತ್ತು ಉಪನಿಷತ್ತಿನ ಕಾಲದ ನಡುವೆ ಆದ ಮಹಾಭಾರತದ ಯುದ್ಧವೆನ್ನುವ ಒಂದು ಘನಘೋರ ದುರಂತ ಭಾರತದ ಜನಜೀವನದ ಬದುಕಿನಲ್ಲಿ ಧಾರ್ಮಿಕ ಪ್ರಜ್ಞೆಯನ್ನು ಮರೆಮಾಡಿಬಿಟ್ಟಿತ್ತು''. ಅರ್ಜುನ ಗೀತೆಯ ವಿಷಾದಯೋಗದಲ್ಲಿ ಯುದ್ಧದ ಪರಿಣಾಮವನ್ನು ವಿವರಿಸಿದ್ದ. ಯುದ್ಧಾನಂತರದಲ್ಲಿ ಆಗಬಹುದಾದ ದುರಂತಗಳನ್ನು ವಿವರಿಸಿದ್ದ. ಭರತ ಖಂಡದ ಎಲ್ಲ ಯೋಧರನ್ನು ಕಳೆದುಕೊಂಡ ಯುದ್ಧ ಅದು. ಸುಮಾರು ಎರಡುವರೆ ಸಾವಿರ ವರ್ಷಗಳ ಯುದ್ಧಾನಂತರ ದಿನಗಳಲ್ಲಿ ಧರ್ಮವನ್ನು ಪರಿಪಾಲನ ಮಾಡಬೇಕಾಗಿರುವ ಕ್ಷತ್ರಿಯರ ಸಂತತಿ ಸಂಪೂರ್ಣವಾಗಿ ನಾಶವಾಗಿತ್ತು. ಧರ್ಮದ ಕುರಿತು ಪಂಡಿತರು ಪಾಮರ ರೆಲ್ಲರೂ ಅವರವರಿಗೆ ಬೇಕಾದ ವ್ಯಾಖ್ಯಾನವನ್ನು ಮಾಡಿ ಕೊಂಡಿದ್ದರು. ಯಜ್ಞದ ಹೆಸರಿನಲ್ಲಿ ಅನಾಚಾರಗಳು ನಡೆದರೆ, ತಾಂತ್ರಿಕರ ಹೆಸರಿನಲ್ಲಿ ವಾಮಾಚಾರ ಮಿತಿಮೀರಿತ್ತು. ಕ್ಷತ್ರಿಯರ ಅವಸಾನದೊಂದಿಗೆ ಜನಪದಕ್ಕೆ ನಾಯಕರೆನ್ನುವವರೇ ಇದ್ದಿರಲಿಲ್ಲ.

ಬಹುಶಃ ಇದೇ ಹೊತ್ತಿನಲ್ಲಿ ಜಾತಿಪದ್ಧತಿ ರೂಢಿಗೆ ಬರತೊಡಗಿತ್ತು. ಬ್ರಾಹಣರ ಧಾರ್ಮಿಕ ಪ್ರಾಧಾನ್ಯ ಆಚರಣೆ ಮಿತಿಮೀರಿತ್ತು. ವೇದಗಳ ನಿಜಾರ್ಥಕ್ಕಿಂತ ಅದರ ಕುರಿತು ತಪ್ಪು ವ್ಯಾಖ್ಯಾನಗಳೇ ಪ್ರಚಾರದಲ್ಲಿದ್ದವು. ವೇದವನ್ನು ಪ್ರಶ್ನಿಸುವ ಹಾಗೂ ಬ್ರಾಹ್ಮಣಿಕೆಯ ಪ್ರಶ್ನಾತೀತ ಯಜಮಾನತ್ವವನ್ನು ಒಪ್ಪದಿರುವ ಪಂಗಡಗಳೂ ಆಗಲೂ ಸಾಕಷ್ಟಿದ್ದವು. ಇಂತಹ ಕತ್ತಲ ಯುಗದಲ್ಲಿಯೇ ''ಸಂಭವಾಮಿ ಯುಗೇ ಯುಗೇ'' ಎನ್ನುವಂತೆ ಕಪಿಲವಸ್ತುವಿನಲ್ಲಿ ಕ್ರಿ. ಪೂ. 560ರಲ್ಲಿ ಸಿದ್ಧಾರ್ಥನ ಜನವಾಯಿತು. ಆತನ ತಂದೆಗೆ ತನ್ನ ಈ ಮಗುವಿನ ಭವಿಷ್ಯದ ಕುರಿತು ಕುತೂಹಲ. ಜ್ಯೋತಿಷಿಗಳನ್ನು ಕೇಳಿದರೆ ಅವರು ಈತ ಒಂದೋ ಈ ಭೂಮಂಡಲದಲ್ಲಿನ ಅತ್ಯಂತ ಶ್ರೇಷ್ಠ ರಾಜನಾಗುತ್ತಾನೆ; ಇಲ್ಲಸಂಸಾರವನ್ನು ತ್ಯಜಿಸಿ ಮಹಾ ಗುರುವಾಗುತ್ತಾನೆ ಎಂದರು.

ಚಿನ್ನದ ಪಂಜರದ ಬದುಕು

ಜ್ಯೋತಿಷ್ಯವನ್ನು ನಂಬಿದ ತಂದೆಗೆ ಮಗ ಎಲ್ಲಿಯಾದರೂ ಸನ್ಯಾಸಿಯಾಗಿ ಕೈತಪ್ಪಿಹೋದರೆ ಎನ್ನುವ ಹೆದರಿಕೆಯಿಂದ ಚಿನ್ನದ ಪಂಜರದಲ್ಲಿ ಇಟ್ಟು ಎಲ್ಲಾ ಸುಖಭೋಗಗಳಲ್ಲಿ ಮುಳುಗೇಳುವಂತೆ ಮಾಡಿದ. ಬದುಕಿನಲ್ಲಿ ಕಷ್ಟಗಳ ಪರಿಚಯ ಆಗದಿರುವಂತೇ ನೋಡಿಕೊಂಡ. ಸದಾ ಬೆಳಕಿ ನಲ್ಲಿರುವವರಿಗೆ ಕತ್ತಲೆಯ ಅರಿವಿರುವದಿಲ್ಲ; ಹಿಮಾಲ ಯದ ಹಿಮದಲ್ಲಿ ಓಡಾಡುವವನಿಗೆ ಮರುಭೂಮಿಯ ಕಲ್ಪನೆ ಇರುವದಿಲ್ಲ. ಹಾಗೇ ಸಿದ್ಧಾರ್ಥನಿಗೆ ಪಟ್ಟಣದಲ್ಲಿ ಓಡಾಡುವತನಕ, ತಾನು ನೋಡಿದ ಬದುಕಿಗಿಂತಲೂ ಮತ್ತೊಂದು ಜಗತ್ತಿದೆ ಎನ್ನುವದು ತಿಳಿದಿಲ್ಲ. ಬದುಕಿನ ನಶ್ವರತೆಯ ಆತನಿಗೆ ಅರ್ಥವಾಯಿತು.

ಜ್ಯೋತಿಷ್ಯವನ್ನು ಅಲ್ಲಗೆಳೆದ ಬುದ್ಧನ ಭವಿಷ್ಯದ ಮುಂಗಾಣ್ಕೆ ಜ್ಯೋತಿಷಿಗಳ ಮೂಲಕವೇ ಶುದ್ಧೋಧನ ನಿಗೆ ತಿಳಿದಿತ್ತು ಎನ್ನುವುದು ಕಾಲದ ವೈಚಿತ್ರ್ಯ. ಅರಮನೆಯಲ್ಲಿ ಇರುವಾಗಲೇ ಸಿದ್ಧಾರ್ಥನಿಗೆ ಜ್ಞಾನದ ಹಸಿವಿತ್ತು. ಕುಲಗುರು ಅಸಿತದೇವಲನಿಂದ ತತ್ತ್ವಶಾಸ್ತ್ರ ವೇದಾಂತವನ್ನೆಲ್ಲ ಕಲಿತರೂ ಆತನಲ್ಲಿ ಇದು ಪರಿಪೂರ್ಣ ಅನಿಸಲಿಲ್ಲ. ಬದುಕು, ಸಾವು, ಮುಕ್ತಿಯಕುರಿತು ಅವನಿಗೆ ಸಿಕ್ಕ ಉತ್ತರ ತೃಪ್ತಿಯನ್ನು ನೀಡಲಿಲ್ಲ. ಯಾರೋ ಆತನಿಗೆ ಹಿಮಾಲಯದ ತಪ್ಪಲಿನಲ್ಲಿರುವ ಸಾಧುಗಳು ವೇದದ ಗೂಢವನ್ನು ಅರಿತಿದ್ದಾರೆ ಎನ್ನುವ ವಿಷಯ ಗಳನ್ನು ಹೇಳಿದ್ದರು. ಆತ ಮನೆಯನ್ನು ಬಿಡಲು ಇದೂ ಒಂದು ಕಾರಣವಾಯಿತು.

ಹಾಗೆ ಹೊರಟವ ಆರು ವರ್ಷಗಳ ಕಾಲ ತಿರುಗಿದ. ಆಲಾರಕಲಮನಲ್ಲಿ ದೇಹ ಮತ್ತು ಸಂವೇದನೆಯನ್ನು ನಿಯಂತ್ರಿಸುವ ಸಾಧನಾ ಮಾರ್ಗವನ್ನೂ, ಉದ್ದತ ರಾಮಪುತ್ರನ ಹತ್ತಿದ ಸಮಾಧಿಸ್ಥಿತಿಗೆ ಹೋಗುವ ವಿದ್ಯೆಯನ್ನೂ ಕಲಿತ. ಆಲಾರಾಕಲಮ್ ತನ್ನ ಉತ್ತರಾಧಿ ಕಾರಿಯಾಗೆಂದಾಗ ಅದನ್ನು ತಿರಸ್ಕರಿಸಿದ. ಆತನನ್ನು ಕೊರೆಯುತ್ತಿದ್ದುದು ಜನನ ಮರಣಗಳ ಭವಚಕ್ರದಿಂದ ಬಿಡುಗಡೆ ಹೊಂದಬೇಕಾದ ಮಾರ್ಗ. ಅವ್ಯಾವುದೂ ತಾನು ಕಲಿತ ವಿದ್ಯೆಗಳಿಂದ ಸಾಧ್ಯವಿಲ್ಲ ಎನ್ನುವುದನ್ನು ಅರಿತ.

ಗಯಾದ ಬೋಧಿವೃಕ್ಷದ ಕೆಳಗೆ

ಈ ಮಿತಿಯನ್ನು ಮೀರಲು ಆತ ಗಯಾಕ್ಕೆ ಬಂದು, ಅಲ್ಲಿದ್ದ ಬೋಧಿವೃಕ್ಷದ ಕೆಳಗೆ ಧ್ಯಾನಮಾಡುವ ಸ್ಥಿತಿ ಯಲ್ಲಿ ಆತನಿಗೆ ಜ್ಞಾನೋದಯವಾಯಿತು. ಜ್ಞಾನವೆನ್ನು ವದು ಪ್ರಾಪಂಚಿಕ ವಸ್ತುಗಳಿಂದ ವಿಮುಖನಾಗುವದಲ್ಲ, ನಮ್ಮ ಉಸಿರು, ಹಕ್ಕಿಯ ಹಾಡು, ಎಲೆ, ಸೂರ್ಯನ ಕಿರಣ ಇವೆಲ್ಲವೂ ಧ್ಯಾನಕ್ಕೆ ಸಾಧನವಾಗಬಹುದೆಂದು ಆತನಿಗೆ ಅನಿಸಿತು. ಒಂದು ಧೂಳಿನ ಕಣದಿಂದಲೇ ಸಮಗ್ರವಾಗಿ ಬ್ರಹ್ಮಾಂಡದ ಲಕ್ಷಣವನ್ನು ಅರಿಯ ಬಹುದೆನ್ನುವ ವಿಷಯ ಹೊಳೆಯಿತು. ಜ್ಞಾನೋದಯ ವೆನ್ನುವದು ವಾಸ್ತವ ಪ್ರಪಂಚದಲ್ಲಿದೆಯೇ ಹೊರತು ಕಾಣದ ಆತ್ಮ ಅಥವಾ ಬ್ರಹ್ಮದ ವಿಷಯದಲ್ಲಿ ಇಲ್ಲ. ಆತ್ಮ ಪ್ರತ್ಯೇಕವೆನ್ನುವ ಭಾವನೆಯನ್ನು ಮೀರಿ ಪ್ರಕೃತಿಯ ಪ್ರತೀ ವಸ್ತುವಿನಲ್ಲಿ ಸೌಂದರ್ಯವಿದೆಯೆನ್ನುವದನ್ನು ಗೌತಮನ ಅರಿವಿಗೆ ಬಂತು. ಪ್ರಪಂಚವೇ ಪರಸ್ಪರ ಅವ ಲಂಬಿತ ಮತ್ತು ಸ್ವಯಂ ಸ್ವಭಾವವುಳ್ಳ ಸತ್ಯವೆನ್ನುವ ಸೂತ್ರ ಆತನಿಗೆ ಅರಿವಾಯಿತು. ಜ್ಞಾನವೆನ್ನುವದು ಒಳಗಣ್ಣು ಎನ್ನುವ ಭ್ರಮೆಗಿಂತ ಹೊರಗಣ್ಣಿಗೆ ಕಾಣುವ ಪ್ರಪಂಚದ ಸಮಸ್ಥವಸ್ತುವಿನಲ್ಲಿ ಇದೆ ಎನ್ನುವದು ಸ್ಪಷ್ಟವಾಯಿತು.

ಸಿದ್ಧಾರ್ಥ ಮನೆಯನ್ನು ಬಿಟ್ಟ ಕಾರಣವೇ ನಿರಂತರ ವಾಗಿ ಲೋಕವನ್ನು ಬಾಧಿಸುತ್ತಿರುವ ಜರಾ, ಮರಣಗಳ ಭವಚಕ್ರಗಳಿಗೆ ಕಾರಣತಿಳಿಯಲು. ಜ್ಞಾನೋದಯವ ದಾಗ ಆತನಿಗೆ ಕಂಡ ಸತ್ಯವೇ ನಾಲ್ಕು ಆರ್ಯಸತ್ಯಗಳಾಗಿ ಹೊರಹೊಮ್ಮಿರುವುದು. ಈ ಆರ್ಯ ಸತ್ಯವೇ ಪ್ರಪಂಚದ ಎಲ್ಲದಕ್ಕೂ ಕಾರಣ ಎನ್ನುವುದನ್ನು ಮನಗಂಡ. ಮೊದಲನೆಯದಾಗಿ ದುಃಖವೆನ್ನುವುದಿದೆ. ಇದಕ್ಕೆ ಕಾರಣ ಜರಾ, ಮರಣ, ಮನಸ್ಸಿನ ಕಾಮನೆಗಳು ಈಡೇರಿಸಿಕೊಳ್ಳಲಾಗದಾಗ ಆಗುವ ನೋವು. 2. ಇದಕ್ಕೆ ಕಾರಣ ಆಸೆ (ತಣ್ಹೆ), ಇಂದ್ರಿಯ ಸುಖದ ಆಸೆ (ಕಾಮ ತಣ್ಹೆ), ಅಸ್ತಿತ್ವದ ಆಸೆ (ಭವ ತಣ್ಹೆ), ಅನಸ್ತಿತ್ವದ ಆಸೆ ವಿಭವ ತಣ್ಹೆ ಎನ್ನುವ ಮೂರು ವಿಧವಾದ ತಣ್ಹೆಗಳು. 3. ದುಃಖವನ್ನು ನಿವಾರಿಸುವ ಸಾಧ್ಯತೆ ಇದೆ; ತಣ್ಹೆಯ ನಾಶದಿಂದ ನಿರ್ವಾಣ ಸಾಧ್ಯ. ನಿರ್ವಾಣ ಎಂದರೆ ಅಹಂಕಾರ, ಕೋಪ, ಮೋಹ ನಾಶವಾದ ಸ್ಥಿತಿ. ಇವೆಲ್ಲದಕ್ಕು ಕಾರಣ ಮನುಷ್ಯ ತನ್ನ ಮೂಲ ರೂಪವನ್ನು ಅರಿಯದಿರುವುದು. ಈ ಅಜ್ಞಾನಗಳಿಂದಾಗಿಯೇ ಆತ ದೇಹ-ಮನಸ್ಸುಗಳಿಗೆ ಅಂಟಿಕೊಳ್ಳುತ್ತಾನೆ. ಈ ಕಾರ್ಯ ಕಾರಣ ಸಂಬಂಧದಿಂದಾಗಿ ಕರ್ಮಚಕ್ರಗಳ ಮೂಲಕ ಪುನರ್ಜನದ ಭವಚಕ್ರಗಳಿಗೆ ಸಿಕ್ಕುಬೀಳುತ್ತಾನೆ, ಈ ಯಾತನೆಗಳಿಗೆ ಕಾರಣ ಆಯಾ ವ್ಯಕ್ತಿಯೇ ಹೊರತೂ ವಿಧಿ, ಆಕಸ್ಮಿಕ ಇತ್ಯಾದಿಗಳೆಲ್ಲ ಸುಳ್ಳು. ಮೂರನೆಯದು ಈ ಭವಚಕ್ರಗಳಿಂದ ಬಿಡುಗಡೆ. ಬುದ್ಧ ಇದು ಅವಿದ್ಯೆ, ಅಜ್ಞಾನಾವಸ್ಥೆಯೆನುತ್ತಾನೆ. ಲೋಕದಲ್ಲಿನ ಎಲ್ಲಾ ಅವಸ್ಥೆಗಳಿಗೂ ಇದೇ ಕಾರಣ, ಇದೇ ''ಪ್ರತ್ಯೀತ್ಯ ಸಮುತ್ಪಾದ'' ಸಿದ್ಧಾಂತ.

ಕೊನೆಯದಾದ ನಾಲ್ಕನೆಯದು ಅದನ್ನು ನಿವಾರಿಸುವ ಮಾರ್ಗ. ಅದನ್ನು ದುಃಖ ನಿರೋಧ ಗಾಮಿನಿ ಎಂದು ಹೇಳುತ್ತಾನೆ ಇದನ್ನು ಅಷ್ಟಾಂಗಿಕ ಮಾರ್ಗಗಳಾದ ಸಮ್ಯಕ್ ದೃಷ್ಟಿ, ಸಮ್ಯಕ್ ಸಂಕಲ್ಪ, ಸಮ್ಯಕ್ ವಾಕ್ಕು, ಸಮ್ಯಕ್ ಕ್ರಿಯಾ ಸಮ್ಯಕ್ ಆಜೀವ, ಸಮ್ಯಕ್ ವ್ಯಾಯಾಮ, ಸಮ್ಯಕ್ ಸ್ಮೃತಿ ಮತ್ತು ಸಮ್ಯಕ ಸಮಾಧಿಯ ಮೂಲಕ ಸಾಧಿಸಬಹುದು. ಯಾವಾತ ಸಮ್ಯಕ್ ಸಮಾಧಿಯನ್ನು ತಿಳಿಯುತ್ತಾನೋ ಆಗ ಬದುಕುವ ಬಯಕೆ ನಿರ್ಮೂಲವಾಗುವುದು. ಪುನರ್ಜನ್ಮದ ಬೀಜ ನಾಶವಾಗುವುದು, ಮುಂದೆ ಯಾವಜನ್ಮವೂ ಇರುವುದಿಲ್ಲ. ಈ ಧ್ಯೇಯವೇ ಸಮ್ಯಕ್ ಮುಕ್ತಿ ಅಥವಾ ನಿರ್ವಾಣ. ತೈತ್ತರೀಯೋಪನಿಷತ್ತಿನ ಬ್ರಹ್ಮಾನಂದವಲ್ಲಿ ಯಲ್ಲಿ ಬ್ರಹ್ಮವನ್ನು ಅನುಭವಿಸುವುದು ಎನ್ನುವುದು ಇದೆ ಆಗಿದೆ. ಇದನ್ನು ತಪ್ಪಾಗಿ ಅರ್ಥೈಸಿಕೊಂಡ ಪಾಶ್ಚಾತ್ಯ ವಿಮರ್ಶಕರು ಮುಖ್ಯವಾಗಿ ಷೋಪನ್‌ಹೋವರ್ ''ಬೌದ್ಧಧರ್ಮ ನಿರಾಶಾವಾದವನ್ನು ಬೋಧಿಸುತ್ತದೆ'' ಎಂದಿದ್ದಾನೆ.

ಉಪನಿಷತ್ ಋಷಿಗಳಂತೆಯೇ ಬುದ್ಧನೂ ಕೂಡ ಸತ್ಯವನ್ನು ಪ್ರತಿಯೊಬ್ಬನೂ ತಾನೇ ಅರಿಯಬೇಕೆಂದು ದೃಢವಾಗಿ ಹೇಳುತ್ತಾನೆ. ಶ್ವೇತಾಶ್ವರೋಪನಿಷತ್ತಿನಲ್ಲಿ ಬರುವ ''ಸುವರ್ಣಕಾಂತಿಯಿಂದ ಕೂಡಿದ ತಮಸ್ಸಿನಾಚೆ ಇರುವ ಆ ಪುರುಷಶ್ರೇಷ್ಠನನ್ನು ನಾನು ಅರಿತಿರುವನು. ಅವನನ್ನು ಅರಿತವನು ಮಾತ್ರ ಮೃತ್ಯುವನ್ನು ಗೆಲ್ಲುತ್ತಾನೆ. ಇದಕ್ಕೆ ಬೇರಿನ್ನಾವ ಮಾರ್ಗವೂ ಇಲ್ಲ'' ಎಂದಿದೆ. ಇದನ್ನೇ ಬುದ್ಧ ತೆವಿಜ್ಜಸುತ್ತದಲಿ ''ಎಲೈ ವಾಸಟ್ಟನೇ, ಬ್ರಹ್ಮವನ್ನೂ, ಬ್ರಹ್ಮದ ವಿಶ್ವವನ್ನೂ ಮತ್ತು ಅದನ್ನು ಪಡೆಯುವ ಮಾರ್ಗವನ್ನೂ ನಾನು ಅರಿತಿರುವೆನು. ನಿಜ, ಬ್ರಹ್ಮ ಜಗತ್ತನ್ನು ಪ್ರವೇಶಿಸಿ ಅದರಲ್ಲಿ ಹುಟ್ಟಿರುವವ ನಂತೆ ನಾನದನ್ನು ಅರಿತಿರುವನು. ಒಬ್ಬನು ಬ್ರಹ್ಮವನ್ನು ತನ್ನ ಪ್ರಯತ್ನದ ಮೂಲಕ ತನ್ನಾತ್ಮನಲ್ಲಿಯೇ ಅರಿಯ ಬೇಕು'' ಎನ್ನುತ್ತಾನೆ. ಇಂತಹ ಅನೇಕ ಉದಾಹರಣೆಗಳ ಮೂಲಕ ಬುದ್ಧನ ಉಪದೇಶಕ್ಕೂ, ವೇದಾಂತಕ್ಕೂ ಇರುವ ಸಾಮ್ಯವನ್ನು ಗುರುತಿಸಬಹುದು. ಮಹಾ ಪರಿನಿಬ್ಬಣದ ಸುತ್ತದಲ್ಲಿ (2-33,35) ಆನಂದನ ಹತ್ತಿರ ಮಾತು ಗಮನಾರ್ಹ. ''ಆದ್ದರಿಂದ, ಎಲೈ ಆನಂದನೆ, ನಿನಗೆ ನೀನೇ ದೀಪವಾಗಿರು. ನಿನಗೆ ನೀನೇ ಆಶ್ರಯ ವಾಗಿರು. » ಮೂರನೇ ಪುಟಕ್ಕೆ

ಪುಸ್ತಕ ವಿಮಾನ

ಪಾಂಗಾಳ ಡಾಕ್ಟ್ರು

» ಶಿವಸುಬ್ರಹ್ಮಣ್ಯ ಕೆ.

ಇಡೀ ದೇಶವು ಕರೋನದಿಂದ ಸ್ತಬ್ಧವಾದಾಗ, ಧೊತ್ತೆಂದು ಅದೇ ನನ್ನ ಮೇಲೆ ಎರಗಿತ್ತು. ಮಾಮೂಲಿ ಜ್ವರ ಎಂದು ಡೋಲೋ ತೆಗೆದುಕೊಂಡು ಮಲಗಿದ್ದೆ. ಎರಡೇ ದಿನಗಳಲ್ಲಿ ಎದೆಗೂಡು ನೋವು ಉಲ್ಬಣಿಸಿ, ಶ್ವಾಸಕೋಶದ ಸೋಂಕು ಆವರಿಸಿ ಕೆಮ್ಮತೊಡಗಿದೆ. ದಿನವಿಡೀ ಕೆಮ್ಮಿ ನಡೆಯಲೂ ಆಗದೆ ನಿತ್ರಾಣಗೊಂಡಿದ್ದೆ. ಬೆಂಗಳೂರಿನ ದೊಡ್ಡ ಆಸ್ಪತ್ರೆಯಲ್ಲಿದ್ದ ವೈದ್ಯ ಮಿತ್ರರೊಬ್ಬರಿಗೆ ಕರೆ ಮಾಡಿ ವಿಷಯ ತಿಳಿಸಿದೆ. ತಕ್ಷಣವೇ ಎಕ್ಸ್ ರೇ ಮಾಡಿಸಿ ಎಂದರು. ಅವರ ಸಲಹೆ ಪಾಲಿಸಿ ಅದನ್ನು ವಾಟ್ಸಾಪ್ ನಲ್ಲಿ ಅವರಿಗೆ ಕಳುಹಿಸಿದೆ. ಒಂದೇ ನಿಮಿಷದಲ್ಲಿ ಆಸ್ಪತ್ರೆಗೆ ಹೊರಡಿ ಎಂದರು. ಕಾಸಿನ ಕೊರತೆ, ಅಲ್ಲಿಗೆ ಅಡ್ಮಿಟ್ ಆದಲ್ಲಿ ಒಂದು ಲಕ್ಷ ಬಿಲ್ ಖಚಿತ ಎಂದು ಮತ್ತಷ್ಟು ದಿಗಿಲುಗೊಂಡೆ!

ಏನು ಮಾಡುವುದೆಂದು ತೋಚದೆ, ನಮ್ಮ ಬಡಾವಣೆಯಲ್ಲೇ ಇರುವ ವೈದ್ಯಮಿತ್ರ ಡಾ.ರಾಧಾಕೃಷ್ಣ ರಾವ್ ಪಾಂಗಾಳ ಅವರಿಗೆ ಕರೆ ಮಾಡಿದೆ. 'ನನ್ನ ಮೇಲೆ ನಂಬಿಕೆ ಇಟ್ಟು ಬನ್ನಿ, ಗುಣಪಡಿಸುವೆ' ಎಂಬ ವಿಶ್ವಾಸದ ಮಾತು ಅವರದು. ಕಡಿಮೆ ಖರ್ಚಿನಲ್ಲಿ ವಾರದ ಚಿಕಿತ್ಸೆ ಪಡೆದು ಸಂಕಷ್ಟದಿಂದ ಪಾರಾದೆ!

ವೈದ್ಯರೊಬ್ಬರ ಬಗ್ಗೆ ಗುಣಗಾನದ ಮಾತಿದು ಎಂದು ಇದನ್ನು ಯಾರು ಓದಿದರೂ ಅನಿಸುತ್ತದೆ. ಆದರೆ ನಾನು ಉಲ್ಲೇಖಿಸುತ್ತಿರುವುದು ಒಬ್ಬರು ವೈದ್ಯರ ಬಗ್ಗೆ ಮಾತ್ರವಲ್ಲ, ಒಬ್ಬರು ಸಾಹಿತಿಯ ಬಗ್ಗೆಯೂ ಆಗಿದೆ. ನಾಡಿನ ಹಿರಿಯ ವೈದ್ಯರಲ್ಲಿ ಒಬ್ಬರಾಗಿರುವ ಡಾ.ಪಾಂಗಾಳ ಅವರು ಹದಿನೈದು ಕೃತಿಗಳನ್ನು ಬರೆದಿದ್ದಾರೆ. ಅವರ ಈ ಕೃತಿಗಳ ಕುರಿತಾದ, ವಿವಿಧ ಲೇಖಕರ ಬರಹಗಳ ಸಂಕಲನ 'ಪಾಂಗಾಳ ಡಾಕ್ಟ್ರು' ಚಂದ್ರಶೇಖರ ಚಡಗರ ಸಂಪಾದಕತ್ವದಲ್ಲಿ ಈಗ ಹೊರಬಂದಿದೆ. ಇವರು ಹಲವು ಕೃತಿಗಳನ್ನು ರಚಿಸಿದ್ದು, ಮನೋವೈಜ್ಞಾನಿಕ ಕಾದಂಬರಿ ನರನೊಳಗೊಬ್ಬ ವಾನರ ಎಂಬ ಕಾದಂಬರಿಯಿಂದ ಹಿಡಿದು, ಮಹಾಭಾರತದ ಕಥಾನಕಗಳಿಗೆ ವೈಚಾರಿಕ ನೆಲೆಗಟ್ಟು ನೀಡಿದ ವ್ಯಾಸಭಾರತ ಭಿನ್ನ ವಿನ್ಯಾಸ ಎಂಬ ಬೃಹತ್ ಗ್ರಂಥವನ್ನೂ ರಚಿಸಿದ್ದಾರೆ.

ಉಡುಪಿ ತಾಲೂಕಿನ ಪಾಂಗಾಳ ಗ್ರಾಮ ಡಾಕ್ಟರ್ ಹುಟ್ಟೂರು. ಯಕ್ಷಗಾನ ಬಯಲಾಟ ನೋಡಿದ ಬಾಲ್ಯ, ವೀರಭದ್ರನಾಯಕರ ಬಳಿ ಯಕ್ಷಗಾನದ ಹೆಜ್ಜೆ ಕಲಿಕೆ, ನಾರಾಯಣ ಉಪ್ಪೂರರ ಬಳಿ ಭಾಗವತಿಕೆ ಕಲಿಕೆಯ ನೆನಪುಗಳೊಂದಿಗೆ ಈ ಯುವಕ ಪದವಿಗೆ ಬಂದದ್ದು ಬೆಂಗಳೂರಿನ ವಿಜಯಾ ಕಾಲೇಜಿಗೆ. ಮುಂದೆ ಬೆಂಗಳೂರು ಮೆಡಿಕಲ್ ಕಾಲೇಜಿಗೆ ವೈದ್ಯ ವಿದ್ಯಾರ್ಥಿಯಾಗಿ ಸೇರಿದರು. ನ್ಯಾಷನಲ್ ಕಾಲೇಜು ಮೈದಾನದಲ್ಲಿ ಪ್ರಸನ್ನ, ಚಂದ್ರಶೇಖರ್ ರೊಡನೆ ಕ್ರಿಕೆಟ್ ಆಡಿದ್ದು, ಕಾಲೇಜಿನಿಂದ ಮರಳುವಾಗ ಆಗಾಗ ಗಾಂಧಿ ಬಜಾರ್ ಬಳಿ ಸಿಗುತ್ತಿದ್ದ ಮಾಸ್ತಿ, ವಾರಕ್ಕೆರಡು ಬಾರಿ ಡಿವಿಜಿಯರ ಮನೆಗೆ ಭೇಟಿ ಹೀಗೆ ಅದ್ಭುತ ನೆನಪುಗಳೊಂದಿಗೆ ವೈದ್ಯ ವಿದ್ಯಾರ್ಥಿಯೊಬ್ಬ ಕ್ರೀಡೆ, ಸಾಹಿತ್ಯ ವಿಷಯಗಳಲ್ಲಿ ಆಸಕ್ತಿ ಹೆಚ್ಚಿಸಲು ಸಹಾಯ ಆಯಿತು.



ಪಾಂಗಾಳ ಡಾಕ್ಟ್ರು
ಸಂ: ಪಾ. ಚಂದ್ರಶೇಖರ ಚಡಗ
ಪ್ರ: ಚಿರಂತ್ ಪ್ರಕಾಶನ ಬೆಂಗಳೂರು
8660966208
ಬೆಲೆ ರು.100/-

ಇಳಿವಯಸ್ಸಿನಲ್ಲೂ ವೈದ್ಯ ವೃತ್ತಿಯಲ್ಲಿ ತೊಡಗಿ, ಸಮಾಜ ಸೇವೆ ಮಾಡುತ್ತಿರುವ ಡಾ.ಪಾಂಗಾಳ ರಾಧಾಕೃಷ್ಣ ರಾವ್ ಅವರ ಸಾಹಿತ್ಯಕ ಮತ್ತು ವೈದ್ಯಕೀಯ ಸಾಧನೆಗಳನ್ನು ಪರಿಚಯಿಸುವ ಈ ಪುಸ್ತಕ ವಿಶಿಷ್ಟ, ಅನನ್ಯ.

ಸಾಹಿತ್ಯ ಓದಲೇ?

ಮೆಡಿಕಲ್ ಬಿಟ್ಟು ಸಾಹಿತ್ಯ ಓದಲೇ? ಎಂದು ಈ ಹುಡುಗ ಒಂದು ಬಾರಿ ಡಿವಿಜಿಯವರಲ್ಲಿ ಕೇಳಿದ.
'ಹುಡುಗಾ, ನೀನು ಸಾಹಿತ್ಯವನ್ನು ಯಾವತ್ತಿದ್ದರೂ ಬೆಳೆಸಿಕೊಳ್ಳಬಹುದು. ಆದರೆ ಒಮ್ಮೆ ಮೆಡಿಕಲ್ ಬಿಟ್ರೆ ಮತ್ತೆ ಡಾಕ್ಟರ್ ಆಗಲು ಆಗಲ್ಲ. ಆದ್ದರಿಂದ ಈಗ ಓದು' ಎಂದು ಡಿವಿಜಿಯವರು ಸೂಚಿಸಿದ್ದರಿಂದ ರಾಧಾಕೃಷ್ಣ ರಾವ್ ಮುಂದೆ ಡಾಕ್ಟರ್ ಆಗಲು ಸಾಧ್ಯವಾಯಿತು.

ಡಾ. ಪಾಂಗಾಳ ಅವರು ಇರಾನಿನ ರಾಜಧಾನಿಯಲ್ಲಿ ವೈದ್ಯನಾಗಿ ಕೆಲಸ ಮಾಡಿದ ದಿನಗಳು ರೋಚಕ. ಈ ನೆನಪುಗಳನ್ನು ಕ್ರೋಢೀಕರಿಸಿ ಪಾಂಗಾಳರು ಕೃತಿ ಬರೆದರೆ ಅದೊಂದು ಅಪೂರ್ವ ಕೃತಿಯಾಗಬಹುದು. ಇರಾನ್ ನಂತಹ ಮೂಲಭೂತ ವಾದಿಗಳೇ ಹೆಚ್ಚಾಗಿರುವ ಇರಾನಿನ ಟೆಹರಾನ್, ಬೇಹೂದ್, ಫೈಜಾಬಾದ್, ತುರ್ಬತ್ ನಲ್ಲಿ ಭಾರತೀಯ ವೈದ್ಯ ನಾಲ್ಕೈದು ದಶಕಗಳ ಹಿಂದೆ ಕೆಲಸ ಮಾಡಿದ್ದೆಂದರೆ ಅದೊಂದು ವಿಶಿಷ್ಟ ಅನುಭವವಾದೀತು. ಅಲ್ಲಿ ಸಂಪೂರ್ಣ ಇಸ್ಲಾಮಿಕ್ ಆಡಳಿತ ಬರುವ ವೇಳೆಗೆ ಪಾಂಗಾಳರು ಬೆಂಗಳೂರಿಗೆ ವಾಪಸ್ಸಾದರು.

ಸಮಾಜದಲ್ಲಿ ನಡೆಯುತ್ತಿರುವ ಕಥೆಗಳನ್ನೇ ವಸ್ತುವಾಗಿರಿಸಿ ಬರೆದ ಕಾದಂಬರಿಯೇ ಡಾಕ್ಟರ್ ರ 'ಹಸಿರು ಪಾಚಿ' ಕಾದಂಬರಿ. ಪಾಂಗಾಳರ ಕಾದಂಬರಿಗಳಲ್ಲಿ ಇದು ಪ್ರಮುಖವಾದುದು. ವೈದ್ಯಕೀಯ ಬರಹಗಳಲ್ಲಿ ಮುಖ್ಯವಾಗಿ ಎರಡು ವಿಧ. ಮೊದಲನೆಯದು ನೇರವಾಗಿ ವೈದ್ಯ ಶಾಸ್ತ್ರವನ್ನು ವಿವರಿಸಿ ಹೇಳುವ ವೈದ್ಯ ವಿಜ್ಞಾನ. ಇನ್ನೊಂದು ಕಥಾನಕವೊಂದರ ಚೌಕಟ್ಟಿನೊಳಗೆ ತಿಳಿಸಿಕೊಡುವ ವೈದ್ಯ ಶಾಸ್ತ್ರ. ಪಾಂಗಾಳರು ಗಂಡು - ಹೆಣ್ಣು ಮಾನವ ಸಂಬಂಧಗಳ ಹಲವು ಮಜಲುಗಳನ್ನು ವೈದ್ಯ ವಿಜ್ಞಾನದ ಕಣ್ಣಿನಿಂದಲೂ ಕಾಣಿಸುತ್ತಾರೆ. ಕರ್ಮಣ್ಯೇ, ಉತ್ತಿಷ್ಠ ಮುಂತಾದ ಕೃತಿಗಳ ಬಗೆಗಿನ ಲೇಖನಗಳು ಅವುಗಳನ್ನು ಹೇಳುತ್ತವೆ.

ವ್ಯಾಸಭಾರತ ಭಿನ್ನ ವಿನ್ಯಾಸ

ಕಾದಂಬರಿಯಲ್ಲದೆ, ಕಥೆ , ಕವನ, ಸಂಶೋಧನೆ,ಯಕ್ಷಗಾನ ಪ್ರಸಂಗ ಹೀಗೆ ಹಲವು ಕ್ಷೇತ್ರಗಳಲ್ಲಿ ಕೆಲಸ ಮಾಡಿದವರು ಡಾ.ಪಾಂಗಾಳರು. ಏಳು ಕಾದಂಬರಿ, ಮೂರು ಸಣ್ಣ ಕಥೆಗಳ ಸಂಕಲನ ಬರೆದ ಪಾಂಗಾಳರ ವಿಶೇಷ ಕೃತಿಯೇ ವ್ಯಾಸಭಾರತ ಭಿನ್ನ ವಿನ್ಯಾಸ . 900 ಕ್ಕೂ ಹೆಚ್ಚು ಪುಟಗಳ ಈ ಗ್ರಂಥದ ಪುನರ್ ಮುದ್ರಣ ಇಂದಿನ ಅಗತ್ಯವಾಗಿದೆ. ಉತ್ಸಾಹಿ ಪ್ರಕಾಶಕರು ಮುಂದೆ ಬರಬೇಕಾಗಿದೆ.

'ಪಾಂಗಾಳ ಡಾಕ್ಟ್ರು' ಕೃತಿ ಒಂದು ಚಿಕ್ಕ ಪುಸ್ತಕ. ಈ ಕೃತಿಯನ್ನು ಓದಿದರೆ ವೈದ್ಯರೊಬ್ಬರ ವ್ಯಕ್ತಿತ್ವ, ಬರವಣಿಗೆಯ ಅಗಾಧ ಲೋಕ ಕಣ್ಣೆದುರಿಗೆ ಬಂದು ನಿಲ್ಲುತ್ತದೆ. ರಾಜಧಾನಿಯ ರವೀಂದ್ರನಾಥ ಟಾಗೂರ್ ನಗರದ ನಿವಾಸಿಗಳಿಗೆ ಡಾ.ಪಾಂಗಾಳ್ ಚಿರಪರಿಚಿತ. ಬಹುಭಾಷಿಕರು ವಾಸಿಸುವ ಕಾರಣ ಅವರು 'ಪೊಂಗಲ್ ಡಾಕ್ಟರ್' ಕೂಡಾ ಆಗಿದ್ದಾರೆ. ಅಂದರೆ ರೋಗಿಗಳಿಗೆ ಈ ಡಾಕ್ಟರ್ ಸಿಹಿಮಾತಿನೊಂದಿಗೆ ಮಮತಾಮಯಿಯಾಗಿ ಇರುವುದರಲ್ಲಿ ಯಾವುದೇ ಉತ್ಪ್ರೇಕ್ಷೆ ಇಲ್ಲ. ಇಳಿವಯಸ್ಸಿನಲ್ಲೂ ಪ್ರತಿದಿನ ರೋಗಿಗಳ ಆರೈಕೆಯಲ್ಲೇ ನಿರತರಾಗಿರುವ ಡಾ.ಪಾಂಗಾಳರು, ತಮ್ಮ ಬರವಣಿಗೆಗೂ ಸಮಯ ಮೀಸಲು ಇಡಬೇಕು ಮತ್ತು ಆ ಮೂಲಕ ಬರಹ ರೂಪಕ್ಕೆ ಕೊಡಲು ಬಾಕಿ ಇರುವ ಅನುಭವದ ವಿಷಯಗಳನ್ನು ಪಾಂಗಾಳರು ತಮ್ಮ ಹೊಸ ಕೃತಿಗಳ ಮೂಲಕ ಪೂರ್ಣಗೊಳಿಸಬೇಕಾಗಿದೆ.

ವಿಶ್ವವಾಣಿ ಅಂಕಿತ ಟಾಪ್ ಟೆನ್

1



ಹಸೀನಾ ಮತ್ತು ಇತರ ಕಥೆಗಳು
(ಬೂಕರ್ ಪ್ರಶಸ್ತಿಗೆ ನಾಮಕರಣಗೊಂಡ ಕೃತಿ)
ಲೇ: ಬಾನು ಮುಷ್ತಾಕ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 750/-

2



ಹೊಯ್ಸಳೇಶ್ವರ
(ವಿಷ್ಣುವರ್ಧನ - ಶಾಂತಲೆಯರ ಅಮರ ಪ್ರೇಮ ಕಥೆ)
ಲೇ: ಸು.ರುದ್ರಮೂರ್ತಿ ಶಾಸ್ತ್ರಿ
ಪ್ರ: ತನುಮನು ಪ್ರಕಾಶನ, ಮೈಸೂರು
ಬೆಲೆ : ರೂ 600/-

3



ವಾರೆನ್ ಹೇಸ್ಟಿಂಗ್ಸ್ ನ ಹೋರಿ
(ಬ್ರಿಟಿಷ್ ಆಡಳಿತದ ಮೊದಲ ಗವರ್ನರ್ ಜನರಲ್‌ನ ಕಥೆ)
ಹಿಂದಿ ಮೂಲ : ಉದಯ ಪ್ರಕಾಶ
ಅನು : ಪ್ರಕಾಶ ಗರುಡ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 130/-

4



ಆಕಾಶ ಇಷ್ಟೇ ಯಾಕಿದೆಯೋ?
(ವಾಯು ಸೇನೆಯ ಅನುಭವ ಕಥನ)
ಲೇ: ಪೂರ್ಣಿಮಾ ಮಾಳಗಿಮನಿ
ಪ್ರ: ಸಾವಣ್ಣ ಎಂಟರ್ ಪ್ರೈಸಸ್, ಬೆಂಗಳೂರು
ಬೆಲೆ : ರೂ 225/-

5



ಕೆರೆಯ ನೋಡಿರೋ
(ಮುಚ್ಚದಿರಲಿ ಜಲದ ಕಣ್ಣು)
ಲೇ: ಶಿವಾನಂದ ಕಳವೆ
ಪ್ರ: ಸಾಹಿತ್ಯ ಪ್ರಕಾಶನ, ಹುಬ್ಬಳ್ಳಿ
ಬೆಲೆ : ರೂ 250/-

6



ತುಂಬಿ ಬಂದಿತ್ತ - ಬೇಂದ್ರೆ ಕಾವ್ಯದ ಅಧ್ಯಯನ
(ವಿಮರ್ಶಾ ಲೇಖನಗಳು)
ಲೇ: ಡಾ। ನರಸಿಂಹಮೂರ್ತಿ ಹೂವಿನಹಳ್ಳಿ
ಪ್ರ: ಪ್ರೇರಣ ಪ್ರಕಾಶನ, ನೆಲಮಂಗಲ
ಬೆಲೆ : ರೂ 150/-

7



ನಾಡವರ್ಗಳ್
(ಸಂಪನ್ನರ ನಡೆನುಡಿ)
ಲೇ: ಅಗ್ರಹಾರ ಕೃಷ್ಣಮೂರ್ತಿ
ಪ್ರ: ಜೀರುಂಡೆ ಪುಸ್ತಕ, ಬೆಂಗಳೂರು
ಬೆಲೆ : 200/-

8



ಬುದ್ಧ ಗಂಟೆಯ ಸದ್ದು
(ರಾಘವೇಂದ್ರ ಪಾಟೀಲ ಕಥಾ ಪುರಸ್ಕಾರ ಪಡೆದ ಕೃತಿ)
ಲೇ: ಮಹಾಂತೇಶ ನವಲಕಲ್
ಪ್ರ: ಪಲ್ಲವ ಪ್ರಕಾಶನ, ಚನ್ನಪಟ್ಟಣ
ಬೆಲೆ : ರೂ 120/-

9



ಛತ್ರಪತಿ ಶಿವಾಜಿ
(ಶಿವಾಜಿ ಮಹಾರಾಜರ ಚರಿತ್ರೆ)
ಲೇ: ಕೃಷ್ಣರಾವ ಅರ್ಜುನ ಕೇಳೂಸ್ಕರ್
ಅನು : ಚಂದ್ರಕಾಂತ ಪೋಕಳೆ
ಪ್ರ: ಐಬಿಎಚ್ ಪ್ರಕಾಶನ, ಬೆಂಗಳೂರು
ಬೆಲೆ : ರೂ 350/-

10



ಹಮೀದ್ ದಳವಾಯಿ ಮತ್ತು ಮಹರ್ಷಿ ವಾಲ್ಮೀಕಿ
(ಒಂದು ಸಾಂಸ್ಕೃತಿಕ ವಾಚಿಕೆ)
ಲೇ: ಕೆ. ಸತ್ಯನಾರಾಯಣ
ಪ್ರ: ಸಮನ್ವಿತ, ಬೆಂಗಳೂರು
ಬೆಲೆ : ರೂ 270/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004.
ದೂರವಾಣಿ: 26617100/26617755
ಮೊಬೈಲ್ ನಂ: 9019190502

ರಾಗ ದರ್ಪಣ

» ಪ್ರೊ. ಕೆ. ರಾಮಮೂರ್ತಿ ರಾವ್

ಇದು ಕರ್ನಾಟಕ ಸಂಗೀತ ಶಾಸ್ತ್ರಕ್ಕೆ ಸಂಬಂಧಿಸಿದ ಗ್ರಂಥ. ಕರ್ನಾಟಕ ಸಂಗೀತ ಜನಕ ಜನ್ಯ ರಾಗಗಳ ಲಕ್ಷಣ ಸೂತ್ರಗಳು ಇದರಲ್ಲಿವೆ. ಹೀಗಾಗಿ ಶಾಸ್ತ್ರೀಯ ಸಂಗೀತ ಕಲಾವಿದರಿಗೆ ಗುರುಗಳಿಗೆ ಹಾಗೂ ವಿದ್ಯಾರ್ಥಿ ಗಳಿಗೆ ಉಪಯುಕ್ತ ಮಾಹಿತಿಯನ್ನು ಒದಗಿಸುತ್ತದೆ. ಕನ್ನಡ ಭಾಷೆಯಲ್ಲಿ ಛಂದೋಬದ್ಧವಾಗಿ ಯುಗಳ ಖಂಡ ಜತೆಯಾಗಿ, 72 ಮೇಳಕರ್ತ ಜನಕರಾಗ ಗಳಿಗೂ ನೂರು ಜನ್ಯ ರಾಗಗಳಿಗೂ ಲಕ್ಷ್ಯ ಲಕ್ಷಣಗಳನ್ನು ಸಮನ್ವಯಗೊಳಿಸಿ ರಚಿಸಿದ ಒಂದು ಉತ್ತಮ ಗ್ರಂಥವಿದು. ಇಂತಹ ಒಂದು ಅಮೂಲ್ಯವಾದ ಪುಸ್ತಕವನ್ನು ಡಾ. ಕಬ್ಬಿನಾಲೆ ವಸಂತ ಭಾರದ್ವಾಜ ಇವರು ಬಹುಮುಖ ಪ್ರತಿಭೆಯ ವಿದ್ವಾಂಸರು. ಅವರು ಕಾವ್ಯ, ಕಥೆ, ಯಕ್ಷಗಾನ, ನಿಘಂಟು, ವ್ಯಾಕರಣ, ಛಂದಸ್ಸು, ಗ್ರಂಥ ಸಂಪಾದನೆ, ಸಂಶೋಧನೆ, ಅನುವಾದ, ಅಷ್ಟಾವಧಾನ, ಗಮಕ ವ್ಯಾಖ್ಯಾನ. ತಾಳಮದ್ದಳೆ, ಗೀತ ರೂಪಕ, ನೃತ್ಯ ರೂಪಕಗಳಿಗೆ ಸಾಹಿತ್ಯ ರಚನೆ ಮಾಡಿದವರು. ಅವರ ಲೇಖನಿಯಲ್ಲಿ ಇದೊಂದು ಅಪರೂಪದ ಪುಸ್ತಕ ಹೊಂದಿರುವುದು ವಿಶೇಷ ಎನಿಸಿದೆ. ಗ್ರಂಥದ ಆರಂಭದ 20 ನಾಂದಿ ಪದ್ಯಗಳಲ್ಲಿ ವಿನಾಯಕ ಸ್ತುತಿ, ಸರಸ್ವತಿ ಸ್ತುತಿ, ಗೋಪಾಲಕೃಷ್ಣನ ಸ್ತುತಿಯ ನಂತರ ಮಹಾದೇವ, ಭರತಮುನಿ, ವೆಂಕಟ ಮುನಖಿ, ವಿದ್ಯಾರಣ್ಯರೇ ಮೊದಲಾದ ಆಚಾರ್ಯ ಸ್ವರೂಪಿಗಳನ್ನು ಸ್ಮರಿಸಿದ್ದಾರೆ. ಮುಂದಿನ ಹದಿನಾಲ್ಕು ನಾಂದಿ ಪದ್ಯಗಳಲ್ಲಿ ಪದ್ಯರೂಪದಲ್ಲೇ ಒಂದು ರಾಗವು ಮೇಳವೆಂದು ಪರಿಗಣಿತವಾಗಬೇಕಾದರೆ ಅದಕ್ಕೆ ಇರಬೇಕಾದ ಲಕ್ಷಣಗಳನ್ನು ಹೇಳಿದ್ದಾರೆ. ಹೀಗೆ ಸಂಗೀತ ಅಭ್ಯಾಸದ ಪ್ರಾರಂಭಿಕ ಹಂತಗಳಲ್ಲಿ ವಿದ್ಯಾರ್ಥಿಯು ಅರಿತುಕೊಳ್ಳಬೇಕಾದ ಪ್ರಮುಖ ಪಾರಿಭಾಷಿಕ ಪದಗಳ ಕುರಿತು ಚಂದೋಬದ್ಧ ವಾಗಿ ಪದ್ಯಗಳ ಮೂಲಕ ತಿಳಿಸಿಕೊಟ್ಟಿದ್ದಾರೆ. ಸಂಗೀತದ ಅಭ್ಯಾಸಕ್ಕೆ ಅದರ ಶೃತಿ, ಲಯ, ರಸ ರಾಗಗಳೇ ಆಧಾರ. ಸಂಗೀತ ಶಾಸ್ತ್ರದ ತಿರುಳು ಆಗಿರುವ ಇವುಗಳ ವಿವಿಧ ಆಯಾಮಗಳನ್ನು ಸತತ ಅಭ್ಯಾಸದಿಂದ ಪರಿಷ್ಕರಿಸಿಕೊಳ್ಳಲು ಈ 'ರಾಗ ದರ್ಪಣ' ಗ್ರಂಥವು ಉಪಯುಕ್ತವಾಗಿದೆ. 72 ಮೇಳಕರ್ತ ಜನಕ ರಾಗಗಳಿಗೂ 100 ಜನ್ಯ ರಾಗಗಳಿಗೂ ಅವುಗಳ ಲಕ್ಷಣ ಸೂತ್ರಗಳನ್ನು ಛಂದೋಬದ್ಧವಾದ ಪದ್ಯಗಳ ರೂಪದಲ್ಲಿ ಬರದಿರುವುದರಿಂದ ವಿದ್ಯಾರ್ಥಿಗಳು ರಾಗಲಕ್ಷಣಗ ಳನ್ನು ತಮ್ಮ ಪಾಠ ಪುಸ್ತಕದಲ್ಲಿ ಮಾತ್ರವೇ ಉಳಿಸಿಕೊಳ್ಳದೆ ತಮ್ಮ ಮಸ್ತಕಕ್ಕೆ ತೆಗೆದುಕೊಂಡು ರಾಗ ಲಕ್ಷಣಗಳನ್ನು ಅರ್ಥೈಸಿಕೊಂಡು ವಿವರಿಸಲು ಅವರಿಗೆ ಸಾಧ್ಯವಾಗುತ್ತದೆ. ಹಾಗಾಗಿ ಅವರು ಸಂಗೀತದ ಪ್ರಯೋಗ ಹಾಗೂ ಶಾಸ್ತ್ರ ಎರಡರಲ್ಲೂ ನಿಷ್ಣಾತರಾಗಲು ಸಾಧ್ಯವಾಗುತ್ತದೆ. ಸುಮಾರು 216 ಪುಟಗಳ ಈ ಮೌಲಿಕ ಗ್ರಂಥದ ಗುಣಗಳನ್ನು ವಿನಮ್ರವಾಗಿ ಅವಲೋಕಿಸಿ ವಿಚಾರ ಪೂರ್ಣವಾದ ಮುನ್ನುಡಿಯ ತಿಲಕವನ್ನು ಇಟ್ಟಿರುವ ಸಂಗೀತ ವಿದ್ವಾಂಸರಾಗಿರುವ ರಾ ಸಾ ನಂದಕುಮಾರ್ ಅವರು ಪುಸ್ತಕದ ಹೂರಣವನ್ನು ಸೂಕ್ತವಾಗಿ ಪ್ರಶಂಸಿಸಿ ಬರೆದಿರುವುದು ವಿಶೇಷ. ಸಂಗೀತಾ ಬ್ಯಾಸಿಗಳ ಅಮೂಲ್ಯ ಸಂಗ್ರಹದಲ್ಲಿ ಅಗತ್ಯವಾಗಿ ಇರಲೇಬೇಕು ಎನಿಸುವಷ್ಟು ಮೌಲಿಕವಾದ ಗ್ರಂಥವಿದು.



ರಾಗ ದರ್ಪಣ
ಲೇ:ಡಾ. ಕಬ್ಬಿನಾಲೆ ವಸಂತ ಭಾರದ್ವಾಜ
ಪ್ರ: ಅಶ್ವಿನಿ ಟಿ ಎಸ್, ಬೆಂಗಳೂರು
9538737102

ನಭ ಮತ್ತು ನಕ್ಷತ್ರದ ಕಥನ

» ಡಾ. ಅಜಿತ್ ಹರೀಶಿ

ಆಕಾಶ ಇಷ್ಟೇ ಯಾಕಿದೆಯೋ' ಇದು ಲೇಖಕಿ ಪೂರ್ಣಿಮಾ ಮಾಳಗಿಮನಿ ಅವರ ಮೊದಲ ನಾನ್ ಫಿಕ್ಷನ್ ಕೃತಿ. ಕಾದಂಬರಿ, ಕಥೆ ಮತ್ತು ಕವಿತೆಗಳ ಪ್ರಕಾರಗಳಲ್ಲಿ ಅದಾಗಲೇ ತಮ್ಮ ಛಾಪನ್ನು ಮೂಡಿಸಿರುವ ಪೂರ್ಣಿಮಾ ಒಬ್ಬರು ವಿಶಿಷ್ಟ ಬರಹಗಾರ್ತಿ. ಯಾವುದೇ ಹಿಂಜರಿಕೆಯಿಲ್ಲದೆ ಬರೆಯುವ ಛಾತಿಯನ್ನುಳ್ಳವರು. ಈ ಹೊತ್ತಿಗೆಯಲ್ಲಿ ವಾಯುಸೇನೆಯ ಅನುಭವವನ್ನು ವಿವರಿಸುವಾಗ ಅವರು ತಮ್ಮ ಸ್ವಂತ ಬದುಕಿನ ಅಂಚನ್ನು ಸೋಕಿ ಮುಂದಕ್ಕೆ ಹೋಗುವಾಗ, ಯಾವುದೇ ಸೋಗಿನ ಸೋಂಕಿಲ್ಲದೆ ವಿವರಗಳನ್ನು ದಾಖಲಿಸಿರುವುದು ಅನನ್ಯವಾಗಿದೆ.

ವೃತ್ತಿ ಬದುಕಿನ ಕುರಿತು ಮುಕ್ತವಾಗಿ, ವಿವರವಾಗಿ ಮಧ್ಯ ವಯಸ್ಕರು ಬರೆದಿದ್ದು ಕಡಿಮೆ. ಅದರಲ್ಲೂ ಭಾರತೀಯ ಸೇನೆಯಲ್ಲಿ, ವಿಶೇಷವಾಗಿ ವಾಯುಸೇನೆಯಲ್ಲಿ ಕೆಲಸ ಮಾಡಿ ಬಂದವರು, ತಮ್ಮ ಅನುಭವವನ್ನು ಕನ್ನಡದಲ್ಲಿ ಕಥನ ರೂಪಕ್ಕೆ ಒಗ್ಗಿಸಿರುವವರು ಇಲ್ಲವೇ ಇಲ್ಲ. ಇವೆಲ್ಲ ಕಾರಣಗಳಿಂದ ಇದೊಂದು ವಿಭಿನ್ನ ಮತ್ತು ಮಹಾತ್ವಾಕಾಂಕ್ಷಿ ಕೃತಿಯಾಗಿದೆ.

'ನಾನೇಕೆ ಸೇನೆ ಸೇರಿದೆ' ಎಂಬ ಭಾಗದಲ್ಲಿ ಪೂರ್ಣಿಮಾ ವೀರಾವೇಶದಿಂದ, ಉತ್ಪ್ರೇಕ್ಷೆಯಿಂದ ಏನನ್ನೂ ಹೇಳುವುದಿಲ್ಲ. ತಣ್ಣಗೆ ತಾವು ಕೆಲಸಕ್ಕೆ ಸೇರಿದ ಅನಿವಾರ್ಯತೆಯನ್ನು ನಮ್ಮ ಮುಂದಿಡುತ್ತಾರೆ. ಈ ಪ್ರಾಮಾಣಿಕತೆ ನಮಗೆ ಇಷ್ಟವಾಗುತ್ತದೆ. ಸೇನೆಗೆ ಆಯ್ಕೆಯಾಗಲು ಇದ್ದ ಕಠಿಣ ಪರೀಕ್ಷೆಗಳಲ್ಲಿ ತೇರ್ಗಡೆಯಾಗಿ, ತರಬೇತಿಯ ದಿನಗಳನ್ನು ಕಣ್ಣಿಗೆ ಕಟ್ಟುವಂತೆ ಹೇಳುವಾಗ, ನಿರೂಪಣೆಯು ರೂಕ್ಷವೆನಿಸದೆ, ತಿಳಿ ಹಾಸ್ಯದ ಲೇಪನ ಗಮನ ಸೆಳೆಯುತ್ತದೆ. ಇದು ಪೂರ್ಣಿಮಾರ ಅನುಭವ ಕಥನವಲ್ಲದೆ, ವಾಯುಸೇನೆಗೆ ಸೇರಬಯಸುವ ಯುವಕ, ಯುವತಿಯರು, ಮತ್ತವರ ಪೋಷಕರಿಗೆ ಮಾಹಿತಿ ನೀಡುವ ಪುಸ್ತಕವೂ ಹೌದು. ವಿಶೇಷವಾಗಿ ಸೇನೆಗೆ ಸೇರಲು ಬಯಸುವ ಹೆಣ್ಣುಮಕ್ಕಳಿಗೆ ಒಂದು ಪೂರ್ವತಯಾರಿಯ ಪುಸ್ತಿಕೆಯಾಗಿ ಕೂಡ ಉಪಯುಕ್ತವಾಗಿದೆ.

'ನೆಲದಿಂದ ನಭದೆಡೆಗೆ' ಎಂಬ ಅಧ್ಯಾಯದಲ್ಲಿ ಬರುವ ಘಟನೆಗಳು ಓದುಗರಿಗೆ ಕಚಗುಳಿಯಿಡುತ್ತಾ, ಸರಾಗವಾಗಿ ಓದಿಸಿಕೊಂಡು ಹೋಗುವುದು ಇಲ್ಲಿನ ವಿಶೇಷ. ಇಂತಹ ಸಂದರ್ಭಗಳನ್ನು ಜನರ ಮುಂದಿಡುವುದು ಸಾಹಸದ ಕೆಲಸವೇ ಸೈ. ಎಲ್ಲಿ ಸಾರ್ವಜನಿಕ ವಲಯದಿಂದ ತಾವು ಜಡ್ಜ್‌ಮೆಂಟಲ್ ಆಗಬಹುದು ಎಂಬ ಸಂಕೋಚ, ಭಯವಿಲ್ಲದೆ ಬರೆವ ಧೀರ ಮಹಿಳೆಯಾಗಿ ಪೂರ್ಣಿಮಾ ಈ ಕೃತಿಯಲ್ಲಿ ಕಾಣಸಿಗುತ್ತಾರೆ.

'ನನ್ನೊಳಗೆ ಉಳಿದ ಸಿಪಾಯಿ' ಭಾಗವು, ಸೈನಿಕರು ನಿವೃತ್ತರಾದ ನಂತರ ನಾಗರಿಕ ಸಮಾಜದಲ್ಲಿ ಹೊಂದಿಕೊಳ್ಳಲು ಆಗುವ ಸವಾಲುಗಳನ್ನು ಸೂಕ್ಷ್ಮವಾಗಿ ಚಿತ್ರಿಸುತ್ತದೆ. ಶಿಸ್ತು ಮತ್ತು ಕರ್ತವ್ಯಪ್ರಜ್ಞೆ ಹೇಗೆ ಮೃದುವಾದವು ಎಂಬುದನ್ನು ಒರೆಗೆ ಹಚ್ಚುತ್ತದೆ. ಆಸಕ್ತರಿಗಾಗಿ, ಯುದ್ಧ ವಿಮಾನಗಳು, ಆಯುಧಗಳು, ಸಹಾಯಕ ಉಪಕರಣಗಳು, ಆಧುನಿಕ ತಂತ್ರಜ್ಞಾನ ಮತ್ತು ಇತರ ರಕ್ಷಣಾ ವಲಯದ ಉತ್ಪಾದನೆಯಲ್ಲಿ ಆತ್ಮ ನಿರ್ಭರತೆಯತ್ತ ಭರದಿಂದ ಸಾಗುತ್ತಿರುವ ಭಾರತವು ಜಾಗತಿಕ ಮಟ್ಟದಲ್ಲಿ ಎಲ್ಲಿದೆ ಎನ್ನುವ ಒಂದು ತುಲನಾತ್ಮಕ ಅಧ್ಯಾಯವೂ ಇಲ್ಲಿದೆ.

ಒಟ್ಟಿನಲ್ಲಿ ವಾಯುಸೇನೆ ಮತ್ತು ತಮ್ಮ ವೃತ್ತಿಯ ಅನುಭವದ ದಿನಗಳನ್ನು ಸರಳವಾದ ಭಾಷೆಯಲ್ಲಿ ಪೂರ್ಣಿಮಾ ಇಲ್ಲಿ ಹೇಳಿದ್ದಾರೆ. ಆರಂಭದಲ್ಲಿ ಕೆಲಸಕ್ಕೆ ಸೇರುವುದೇ ಆದ್ಯತೆಯಾಗಿದ್ದು, ಕ್ರಮೇಣವಾಗಿ ಆ ವೃತ್ತಿಯು ಹೃದಯಕ್ಕೆ ಪ್ರೀತಿಯ ಕಾರ್ಯವಾಗಿ ಬದಲಾಗುತ್ತದೆ. ಕೃತಿಯ ಅಂತ್ಯದ ವೇಳೆಗೆ, ಸೇನೆಯನ್ನು ಸೇರಿದ್ದು ಹೆಮ್ಮೆಯ ವಿಷಯವಾಗಿ ಬದಲಾಗಿ, ಯುವಜನತೆಗೆ ಪ್ರೇರಣಾದಾಯಕ ವ್ಯಕ್ತಿಯಾಗಿ ಪೂರ್ಣಿಮಾ ದರ್ಶನವಾಗುತ್ತದೆ, ಕೃತಿಯೊಂದು ಸಾಮಾನ್ಯೀಕರಣಕ್ಕೆ ಒಳಗಾದ ಶ್ರೇಯಸ್ಸಿಗೆ ಪಾತ್ರವಾಗುತ್ತದೆ.

ನಭದಲ್ಲಿ ಯುದ್ಧವಿಮಾನಗಳು ಹಾರಾಡುತ್ತಿರುವ ಇಂದಿನ ಸಂಕೀರ್ಣ ಸನ್ನಿವೇಶದಲ್ಲಿ, ಈ ಪುಸ್ತಕ ಹೆಚ್ಚಿನ ಓದುಗರಿಗೆ ಇಷ್ಟವಾಗಬಹುದು.



ಆಕಾಶ ಇಷ್ಟೇ ಯಾಕಿದೆಯೋ
ಲೇ: ಪೂರ್ಣಿಮಾ ಮಾಳಗಿಮನಿ
ಪ್ರ: ಸಾವಣ್ಣ ಎಂಟರ್‌ಪ್ರೈಸಸ್
ಬೆಲೆ ರು.225/-

ಸೈನಿಕನ ಅನುಭವಗಳು ಕನ್ನಡದಲ್ಲಿ ಕಡಿಮೆ; ಅದರಲ್ಲೂ ಸೈನ್ಯದಲ್ಲಿ ಕೆಲಸ ಮಾಡಿದ ಮಹಿಳೆಯರು ತಮ್ಮ ಅನುಭವಗಳನ್ನು ಅಕ್ಷರ ರೂಪಕ್ಕೆ ಇಳಿಸಿದ್ದು ಇನ್ನೂ ಅಪೂರ್ವ. ಅಂತಹ ಒಂದು ಅಪರೂಪದ ಪುಸ್ತಕವಿದು.

ಸೂಕ್ಷ್ಮ ಸಂವೇದನೆಯ ಅರ್ಥಪೂರ್ಣ ಕಥೆಗಳು

» ಡಾ.ಪಾರ್ವತಿ ಜಿ.ಐತಾಳ್

ಪಾಂಚಾಲಿಯಾಗಲಾರೆ ' ಗೀತಾ ಕುಂದಾಪುರ ಅವರ ನಾಲ್ಕನೆಯ ಕಥಾ ಸಂಕಲನ. ಇಲ್ಲಿರುವ ಹದಿನಾಲ್ಕು ಕಥೆಗಳು (ಮತ್ತು ನಾಲ್ಕು ಮಿನಿಕಥೆಗಳು) ನಮ್ಮ ಕೌಟುಂಬಿಕ ಹಾಗೂ ಸಾಮಾಜಿಕ ಬದುಕುಗಳನ್ನು ತೆರೆದ ಕಣ್ಣುಗಳಿಂದ ಮತ್ತು ಸೂಕ್ಷ್ಮ ದೃಷ್ಟಿಯ ಒಳಗಣ್ಣುಗಳಿಂದ ನೋಡುವಲ್ಲಿ ಯಶಸ್ಸು ಸಾಧಿಸಿವೆ. 'ಪಾಂಚಾಲಿಯಾಗಲಾರೆ' ಎಂಬ ಶೀರ್ಷಿಕೆಯ ಕಥೆಯಲ್ಲಿ ಮದುವೆಯ ಬಗ್ಗೆ ಆಯ್ಕೆಯ ಸ್ವಾತಂತ್ರ್ಯವೇ ಇಲ್ಲದೆ ಬದುಕಿನುದ್ದಕ್ಕೂ ಕಷ್ಟ ಪಡುವ ಒಬ್ಬ ಅಸಹಾಯಕ ಹೆಣ್ಣಿನ ಕಥೆಯಿದೆ. ಸಮಾಜದ ದೃಷ್ಟಿಯಲ್ಲಿ ಹೆಣ್ಣು ಮದುವೆಯಾಗುವ ವ್ಯಕ್ತಿ ಹಣವಿದ್ದವನಾದರೆ ಸಾಕು. ಅವಳು ಆರ್ಥಿಕವಾಗಿ ನೆಲೆಯೂರುವ ಅವಕಾಶವಿದ್ದರೆ ಸಾಕು. ಅವಳು ಅದೃಷ್ಟವಂತೆ. ಇಲ್ಲಿ ಬಡ ಹೆಣ್ಣು ಜಾನಕಿ ಕಾರಣಾಂತರಗಳಿಂದ ಮೂರು ಬಾರಿ ಮದುವೆಯಾಗಬೇಕಾಗಿ ಬಂದಿದೆ. ಮದುವೆಗೆ ಮೊದಲೇ ಒಬ್ಬನನ್ನು ಪ್ರೀತಿಸಿ ಅವನನ್ನು ಕಳೆದುಕೊಂಡಿದ್ದಾಳೆ. ಮೂರನೆಯ ಗಂಡನಿಗೆ ಆಗಲೇ ಇಳಿವಯಸ್ಸು. ಅವನು ಸಾಯುವ ಸ್ಥಿತಿಯಲ್ಲಿದ್ದಾಗ ಅವನ ಮಕ್ಕಳು ತಮ್ಮ ಮಲತಾಯಿಗೆ ಇನ್ನೊಂದು ಮದುವೆ ಮಾಡಿ ಮನೆಯಿಂದ ಸಾಗ ಹಾಕಲು ಹುನ್ನಾರ ಮಾಡುತ್ತಾರೆ. ಐದನೇ ಬಾರಿ ಮದುವೆಯಾಗಲು ಒಪ್ಪಿ ತಾನು ಪಾಂಚಾಲಿಯಾಗಲಾರೆ ಎಂದು ಜಾನಕಿ ಗಂಡನಿಗಿಂತ ಮೊದಲೇ ಸಾಯುತ್ತಾಳೆ. ಪುರುಷಾಹಂಕಾರವು ಒಬ್ಬ ಅಸಹಾಯಕ ಹೆಣ್ಣನ್ನು ಹೇಗೆ ಫುಟ್ಬಾಲ್ ನಂತೆ ಆಡಿಸುವ ಕ್ರೌರ್ಯ ತೋರಿಸುತ್ತದೆ ಅನ್ನುತ್ತದೆ ಈ ಕಥೆ. ಇಲ್ಲಿ ಒಬ್ಬ ಹೆಣ್ಣು ಐದು ಮಂದಿಯ ಹೆಂಡತಿಯಾಗುವುದು ಅನ್ನುವುದಕ್ಕಿಂತಲೂ ಆಯ್ಕೆಯ ಸ್ವಾತಂತ್ರ್ಯವಿಲ್ಲದವಳು ಅನ್ನುವುದರ ಮೇಲೆ ಹೆಚ್ಚು ಫೋಕಸ್ ಇದೆ.

'ಹೆದ್ದಾರಿಯಲ್ಲಿ ನಿಂತ ಬದುಕು' ಸ್ವಂತವಾಗಿ ಬದುಕು ಕಟ್ಟಿಕೊಂಡ ಒಬ್ಬ ದಿಟ್ಟ ಹೆಣ್ಣಿನ ಕಥೆಯಾದರೂ ಕೊನೆಯಲ್ಲಿ ವೃದ್ಧಾಪ್ಯದ ಹೊಸ್ತಿಲಲ್ಲಿ ನಿಂತಾಗ ಅವಳು ಸಾಕಿ ಬೆಳೆಸಿ ನೆಲೆಗಾಣಿಸಿದ ಗಂಡು ಮಕ್ಕಳೇ ಅವಳಿಗೆ ಮೋಸ ಮಾಡುತ್ತಾರೆ ಅನ್ನುವುದನ್ನು ಮನಮುಟ್ಟುವ ರೀತಿಯಲ್ಲಿ ಹೇಳುವ ಕಥೆ.



ಪಾಂಚಾಲಿಯಾಗಲಾರೆ
ಲೇ: ಗೀತಾ ಕುಂದಾಪುರ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್
ಬೆಲೆ ರು.160/-

'ತಲ್ಲಣಿಸದಿರು ಮನವೇ' ಪುರುಷ ಪ್ರಧಾನ ಕುಟುಂಬದಲ್ಲಿ ಹೆಣ್ಣು ಹರಿಸುವ ಕಣ್ಣೀರಿನ ಕಥೆ. 'ರಂಗಸ್ಥಳ' ಒಬ್ಬ ಪ್ರತಿಭಾವಂತ ಕಲಾವಿದನ ಕಥೆ.

ತಮ್ಮ ನಾಲ್ಕನೆಯ ಕಥಾ ಸಂಕಲನದ ಮೂಲಕ, ಕಥೆಗಾರ್ತಿ ಗೀತಾ ಕುಂದಾಪುರ ಅವರು ಓದುಗರಿಗೆ ಒಂದು ವಿಶಿಷ್ಟ ಕಥಾ ಜಗತ್ತಿನ ಕೀಲಿಕೈಯನ್ನು ತೆರೆದುಕೊಟ್ಟಿದ್ದಾರೆ.

ಬಡತನದ ಬೇಗೆಯಲ್ಲಿ ಬೇಯುತ್ತ ಕಷ್ಟಪಟ್ಟು ದುಡಿದು ಮಕ್ಕಳನ್ನು ಬೆಳೆಸಿ ಬೇಕಾದ ವಿದ್ಯಾಭ್ಯಾಸ ಕೊಟ್ಟು ಅವರು ಬದುಕಿನಲ್ಲಿ ನೆಲೆಯೂರುವಂತೆ ಮಾಡಿದ ತಂದೆಯನ್ನು ಕೊನೆಗಾಲದಲ್ಲಿ ಆತ ತನ್ನ ಹೆಂಡತಿಯನ್ನು ಕಳೆದುಕೊಂಡು ಒಂಟಿಯಾದ ಸಂದರ್ಭದಲ್ಲಿ ಕಡೆಗಣಿಸುವ ಮತ್ತು ಆತನ ದುಡ್ಡಿಗಾಗಿ ಹೊಂಚು ಹಾಕುವ ಮಕ್ಕಳ ಚಿತ್ರ 'ಯೂ ಟರ್ನ್' ಎಂಬ ಕಥೆಯಲ್ಲಿದೆ.

'ಶಶಿಯ ಶರಪಂಜರ' ಒಂದು ಸಾಮಾಜಿಕ ವಸ್ತುವುಳ್ಳ ಕಥೆ. 'ಬೆಕ್ಕಿನ ಕಣ್ಣು' ಮತ್ತು 'ಕವಡೆಯಾಟವಯ್ಯಾ' ಎಂಬ ಎರಡು ಕಥೆಗಳು ಜನರ ಮೂಢನಂಬಿಕೆಗಳನ್ನು ಬಂಡವಾಳಗಿಸಿಕೊಂಡು ಕೊಬ್ಬುವ ಜ್ಯೋತಿಷಿ ಮತ್ತು ಕವಡೆ ಶಾಸ್ತ್ರಕಾರರ ಕುರಿತಾದ ಕಥೆ. ಅವರನ್ನು ನಂಬುವವರು ತಾವು ಹಾಳಾಗುವುದಲ್ಲದೆ ತಮ್ಮ ಹೆಂಡತಿ-ಮಕ್ಕಳು ಮತ್ತು ಕುಟುಂಬದವರನ್ನೂ ಸಂಕಷ್ಟಕ್ಕೆ ಸಿಲುಕಿಸುವುದು ಇಲ್ಲಿನ ವ್ಯಂಗ್ಯ. ಮೊದಲ ಕಥೆ 'ಆಟಿ ಕಾಲದ ಸ್ವಾಮಿ'ಯಲ್ಲಿ ಒಂದು ಜನಪದ ಆಚರಣೆಯ ಬಗ್ಗೆ ವಿವರಗಳಿವೆಯಾದರೂ ಅಲ್ಲಿಯೂ ಮೈಮೇಲೆ ಬರುವ ದೈವವು ಅವಾಹಿಸಿಕೊಂಡವನ ಮನಸ್ಸಿನೊಳಗೆ ಏನಿದೆಯೋ ಅದನ್ನೇ ಹೇಳುತ್ತದೆ ಮತ್ತು ಜನರು ಅದನ್ನು ಭಕ್ತಿ ಭಾವದಿಂದ ಕಣ್ಣು ಮುಚ್ಚಿ ಅನುಸರಿಸುತ್ತಾರೆ ಅನ್ನುವುದನ್ನು ಕಥೆಗಾರ್ತಿ ಇಲ್ಲಿ ತೆರೆದು ಹೇಳುತ್ತಾರೆ.

ಲಂಪಟನೊಬ್ಬ ಹೆಂಡತಿಗೆ ಅನ್ಯಾಯ ಮಾಡುವುದಲ್ಲದೆ ತನ್ನ ಕಾರು ಚಾಲಕನ ಮಗನ ಜೀವವನ್ನೇ ಬಲಿ ತೆಗೆದುಕೊಳ್ಳಲು ಸಂಚುಹೂಡಿ ತಾನು ತೋಡಿದ ಗುಂಡಿಯೊಳಗೆ ತಾನೇ ಬೀಳುವ ಕಥೆ 'ನೆರಳಿನೊಳಗಿನ ಬೆಳಕಿನಾಟ', ತನ್ನ ಕುರುಡು ಮಡಿವಂತಿಕೆಯಿಂದ ಮಗಳನ್ನು ನರ್ಸಿಂಗ್ ಕಲಿಯಲು ಬಿಡದೆ ಅವಳ ಸಾವಿಗೆ ಕಾರಣನಾದ ಅಪ್ಪನೊಬ್ಬ ನೆರೆಯಲ್ಲಿ ಕೊಚ್ಚಿಕೊಂಡು ಹೋಗುವ ಸಂದರ್ಭ ಬಂದರೂ ತನ್ನ ಹಠ ಬಿಡದೆ ಕೊನೆಯ ಕ್ಷಣದಲ್ಲಿ ಅವನ ಅಹಂಕಾರವು ಕರಗಿ ತನ್ನ ಮಗಳ ಪ್ರಾಯದ ಹುಡುಗಿಯೊಬ್ಬಳನ್ನು ರಕ್ಷಿಸುವ ಕಥೆ 'ನೆರೆ', ಹೆಂಡತಿಯನ್ನು ಕಳೆದುಕೊಂಡು ಒಂಟಿತನದ ನೋವನ್ನು ಅನುಭವಿಸುತ್ತಿರುವ ತನ್ನ ಒರಟು ಸ್ವಭಾವದ ಸಾಕು ತಂದೆಗೆ ಬುದ್ಧಿ ಕಲಿಸೋಣವೆಂದು ಅವನನ್ನು ಒಬ್ಬನನ್ನೇ ಬಿಟ್ಟು ಊರಿಗೆ ಹೋಗುವ ಮಗ-ಸೊಸೆ ತಿರುಗಿ ಬಂದು ನೋಡಿದಾಗ ತಂದೆ ಇನ್ನೊಂದು ಮದುವೆಯಾಗಿದ್ದನ್ನು ನೋಡಿ ಆಘಾತಗೊಳ್ಳುವ ಸನ್ನಿವೇಶವಿರುವ 'ನೆರಳಿನಲ್ಲಿ ಕಂಡ ಮುಖ' - ಎಲ್ಲವೂ ಓದಿನ ಸುಖ ಕೊಡುವ ಕಥೆಗಳು. ಕೊನೆಯ ನಾಲ್ಕು ಮಿನಿಕಥೆಗಳೂ ಚಿಕ್ಕ-ಚೊಕ್ಕ ವಿನೂತನ ಶೈಲಿಯ ನವಿರು ಕಥೆಗಳು.

ಗೀತಾ ಅವರ ವಸ್ತು ವೈವಿಧ್ಯ ಬೆರಗು ಹುಟ್ಟಿಸುತ್ತದೆ. ಅವರ ಕಥಾ ಪ್ರಪಂಚದ ಹರಹು ವಿಶಾಲವಾಗಿದೆ. ಪ್ರಕೃತಿಯ ದೃಶ್ಯಗಳು, ಪ್ರಾಣಿ-ಪಕ್ಷಿಗಳ ಓಡಾಟಗಳು, ಪರಿಸರಕ್ಕೆ ಮನುಷ್ಯರು ಮಾಡುವ ಹಾನಿಗಳು, ಜನಪದ ಕಲೆಗಳು, ಯಕ್ಷಗಾನ, ಕೌಟುಂಬಿಕ ಬದುಕಿನ ಚಿತ್ರಣಗಳು, ಗ್ರಾಮೀಣ ಬದುಕು, ನಗರ ಜೀವನಗಳ ಬಗ್ಗೆ ಕಂಡದ್ದನ್ನು-ಕೇಳಿದ್ದನ್ನು-ಓದಿದ್ದನ್ನು ಎಲ್ಲವನ್ನೂ ಕಥೆಯಾಗಿಸುವ ಕಲೆ ಅವರಿಗೆ ಸಿದ್ಧಿಸಿದೆ ಮಾತ್ರವಲ್ಲದೆ ತಮ್ಮ ಸುತ್ತಮುತ್ತಲ ಜಗತ್ತಿನ ವಸ್ತುಗಳನ್ನು ಮತ್ತು ವಿದ್ಯಮಾನಗಳನ್ನು ತಮ್ಮ ಸೂಕ್ಷ್ಮ ದರ್ಶಕದಂಥ ಕಣ್ಣುಗಳಿಂದ ವೀಕ್ಷಿಸಿ ಅತ್ಯಂತ ಸಣ್ಣ ವಿವರಗಳನ್ನೂ ದಾಖಲಿಸುವ ಅವರ ಸಾಮರ್ಥ್ಯ ಮೆಚ್ಚತಕ್ಕದ್ದು.

ಮೆಡಿಕಲ್ ಕಾಲೇಜು ಆರಂಭಕ್ಕೆ ಕಾರಂತರ ಕೊಡುಗೆ!

» ಪ್ರೊ. ಜಿ. ಎನ್. ಉಪಾಧ್ಯ, ಮುಂಬೈ

ಅಲ್ಲಮ ಪ್ರಭುದೇವರು ಎತ್ತಣ ಮಾಮರ ಎತ್ತಣ ಕೋಗಿಲೆ ಎತ್ತಣಿಂದೆತ್ತ ಸಂಬಂಧ ವಯ್ಯಾ ಎಂದು ಉದ್ಗಾರ ಎತ್ತಿದ್ದರು. ಶಿವರಾಮ ಕಾರಂತರ ಒಂದು ಸಾಹಸವನ್ನು ಕಂಡಾಗ ಅಲ್ಲಮನ ಈ ಮಾತು ನೆನಪಾಗುತ್ತದೆ. ಆಗ ತಾನೇ ದೇಶಕ್ಕೆ ಸ್ವಾತಂತ್ರ್ಯ ಸಿಕ್ಕ ಸಂದರ್ಭ, ನಮ್ಮ ನಾಡಿನ ಸಾಹಿತಿಯೊಬ್ಬರು ಒಂದು ಮೆಡಿಕಲ್ ಕಾಲೇಜು ನಿರ್ಮಾಣಕ್ಕೆ ಮಧ್ಯಸ್ಥಿಕೆ ವಹಿಸಿ ಅದಕ್ಕೆ ಪರವಾನಗಿ ಕೊಡಿಸುವಲ್ಲಿ ಯಶ ಕಂಡ ಘಟನೆ ಕರ್ನಾಟಕದಲ್ಲಿ ನಡೆದದ್ದು ಎಷ್ಟು ಮಂದಿಗೆ ಗೊತ್ತಿದೆಯೋ ನಾ ಕಾಣೆ.

ಸ್ವತ: ವೈದ್ಯರೂ ಶಿಕ್ಷಣ ಪ್ರೇಮಿಗಳೂ ಆಗಿದ್ದ ಡಾ.ಮಾಧವ ಪೈ ಅವರು ಮಣಿಪಾಲದಲ್ಲಿ ಒಂದು ಮೆಡಿಕಲ್ ಕಾಲೇಜು ಸ್ಥಾಪಿಸಲು ಮುಂದಾಗಿ ಕೊನೆಯ ಕ್ಷಣದಲ್ಲಿ ಅದಕ್ಕೆ ಸರಕಾರದ ಒಪ್ಪಿಗೆ ಸಿಗದೇ ಹೈರಾಣಾಗಿದ್ದರು. ಡಾ.ಪೈ ಅವರ ಆತ್ಮೀಯ ಸ್ನೇಹಿತರಾಗಿದ್ದ ಶಿವರಾಮ ಕಾರಂತರು ಈ ಸಂಗತಿಯನ್ನು ತಿಳಿದು ಛಲ ಬಿಡದೆ ಕೇಂದ್ರ ಸಚಿವರೊಬ್ಬರ ಸಹಾಯದಿಂದ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಮೂಲಕ ಮಣಿಪಾಲ ಮೆಡಿಕಲ್ ಕಾಲೇಜಿಗೆ ಬೇಕಾಗಿದ್ದ ಅನುಮತಿ ಕೊಡಿಸುವುದರಲ್ಲಿ ಯಶಸ್ವಿಯಾದರು.

ಇಂದು ಮಣಿಪಾಲದ ಹೆಸರು ಕೇಳದವರಿಲ್ಲ. ಶಿಕ್ಷಣ ಕೇಂದ್ರವಾಗಿ, ಆರೋಗ್ಯಧಾಮವಾಗಿ,ಆರ್ಥಿಕ ತಾಣವಾಗಿ ಅದರ ಹೆಸರು ಪಸರಿಸಿದೆ. ಕಳೆದ ಶತಮಾನದ ಆದಿ ಭಾಗದಲ್ಲಿ ಮಣಿಪಾಲ ಸಾಮಾನ್ಯ ಹಳ್ಳಿಯಾಗಿತ್ತು. ಇಂದು ಮಣಿಪಾಲಕ್ಕೆ ವಿಶ್ವದ ನಕಾಶೆಯಲ್ಲಿ ಅಣಿಯರ ಸ್ಥಾನಮಾನ ಪ್ರಾಪ್ತವಾಗಿದೆ. ಇದಕ್ಕೆ ಕಾರಣರಾದವರು ತೋನ್ಸೆ ಡಾ.ಮಾಧವ ಪೈ ಹಾಗೂ

ಮಣಿಪಾಲ ವೈದ್ಯಕೀಯ ಮಹಾವಿದ್ಯಾಲಯದ ಸ್ಥಾಪಕರಲ್ಲಿ ಉಪೇಂದ್ರ ಪೈ, ಡಾ.ಮಾಧವ ಪೈ, ಅನಂತ ಪೈ, ರಮೇಶ ಪೈ ಅವರ ಪಾತ್ರ ಗುರುತರವಾದುದು. ಆ ಬಳಿಕ ಪೈ ಪರಿವಾರದವರು ಮಣಿಪಾಲವನ್ನು ಕಟ್ಟಿ ಬೆಳೆಸಿದ ಪರಿಗೆ ಯಾರೂ ಬೆರಗಾಗಬೇಕು.

ಹುಚ್ಚು ಮನಸ್ಸಿನ ಹತ್ತು ಮುಖಗಳು ಶಿವರಾಮ ಕಾರಂತರ ಅವರ ಪರಿವಾರ. ಈ ಮಣಿಪಾಲದ ಅಭಿವೃದ್ಧಿಯಲ್ಲಿ, ಅಲ್ಲಿನ ಮೆಡಿಕಲ್ ಕಾಲೇಜು ಸ್ಥಾಪನೆಯಲ್ಲಿ ಖ್ಯಾತ ಸಾಹಿತಿ ಶಿವರಾಮ ಕಾರಂತರು ವಿಶೇಷವಾದ ಪಾತ್ರವನ್ನು ವಹಿಸಿದ್ದು ಅಚ್ಚರಿ ಅನಿಸಿದರೂ ಇದು ವಾಸ್ತವ.

ಕೋಟ ಶಿವರಾಮ ಕಾರಂತರು ಬರೇ ಸಾಹಿತಿಯಾಗಿ ತಮ್ಮ ಪಾಡಿಗೆ ತಾವು ಬರವಣಿಗೆ ಮಾಡಿಕೊಂಡು ಇದ್ದುಬಿಟ್ಟವರಲ್ಲ. ಅವರು ಜನಮುಖಿಯಾಗಿ ಸಮಾಜಮುಖಿಯಾಗಿ ಸಮುದಾಯದ ಹಿತಕ್ಕಾಗಿ ನಾಡಿನ ದೇಶದ ಏಳಿಗೆಗಾಗಿ ನಿರಂತರವಾಗಿ ಶ್ರಮಿಸಿದ್ದು ಈಗ ಇತಿಹಾಸ. ಉಡುಪಿಯಲ್ಲಿ ಎಂ. ಜಿ.ಎಂ ಕಾಲೇಜು ಸುರು ಮಾಡಲು ಸಾರ್ವಜನಿಕರಿಂದ ವಂತಿಗೆ ಎತ್ತಲು ಹೋದವರಲ್ಲಿ ಕಾರಂತರೂ ಒಬ್ಬರಾಗಿದ್ದರು ಎಂಬುದು ಹೆಚ್ಚಿನವರಿಗೆ ಗೊತ್ತಿಲ್ಲದ ಸಂಗತಿ.

ಮಾನವ ಸಂಸ್ಕೃತಿ ಬೆಳೆದುದಿದ್ದರೆ, ಅದಕ್ಕೆ ಕಾರಣವಾದ ಘಟನೆ ಎಷ್ಟೇ ಕಿರಿದಾಗಿದ್ದರೂ, ಅದು ಹೆಮ್ಮರವಾಗಿ ಬೆಳೆದು ಅಸಂಖ್ಯ ಜೀವಿಗಳಿಗೆ ಆಸರೆ ಕೊಡಬಲ್ಲ ವೃಕ್ಷವಾಗುವ ಸಾಧ್ಯತೆಯಿಂದ ಎಂಬ ಕಾರಂತರ ಮಾತು ಅವಲೋಕನೀಯವಾಗಿದೆ.

ಪ್ರಸಿದ್ಧ ಆತ್ಮಕಥನ. ಈ ಗ್ರಂಥದಲ್ಲಿ ಶಿವರಾಮ ಕಾರಂತರು ಮಣಿಪಾಲದಲ್ಲಿ ಮೆಡಿಕಲ್ ಕಾಲೇಜ್ ಹುಟ್ಟಿಕೊಂಡ ಬಗೆಯನ್ನು ಹೀಗೆ ನೆನಪು ಮಾಡಿಕೊಂಡಿದ್ದಾರೆ. ಅದು ಹೀಗಿದೆ. 'ಇಂದಿಗೆ ಐದೂವರೆ ದಶಕಗಳಷ್ಟು ಹಿಂದೆ ತೋನ್ಸೆ ಡಾ.ಮಾಧವ ಪೈಗಳವರಿಗೆ

ಉಡುಪಿಯಲ್ಲಿ ಒಂದು ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಹಂಬಲವಾಯಿತು. ಅವರು ಸ್ವತಃ ವೈದ್ಯರು, ವೈದ್ಯ ವೃತ್ತಿನಿರತರು.ಆದರೆ, ವೈದ್ಯ ಶಿಕ್ಷಣ ಪಡೆಯುವ ಹಂಬಲವುಳ್ಳ ನಮ್ಮ ಜಿಲ್ಲೆಯ ಅಸಂಖ್ಯರಿಗೆ ಅಂದಿನ ಮದ್ರಾಸು ಸಂಸ್ಥಾನದಲ್ಲಿ ತೀರ ಕಡಿಮೆ ಅವಕಾಶವಿತ್ತು. ಅದನ್ನು ಕಂಡ ಅವರು, 'ಕಾಸಿಗೆ ಕಾಸು ಕೂಡಿಸಿದರೆ ಕೋಟಿ ಆಗುವುದಿಲ್ಲವೇ?' ಎಂದು ನೆನೆದವರು; ನೆನೆದುದನ್ನು ಮಾಡಿದವರು. ಹೀಗಾಗಿ, ಉಡುಪಿ ಬಳಿಯ ಮಣಿಪಾಲದಲ್ಲೇ ಒಂದು ವೈದ್ಯಕೀಯ ಕಾಲೇಜನ್ನು ಸ್ಥಾಪಿಸುವ ಕನಸು ಕಂಡರು.'

ಹಳ್ಳಿಯಲ್ಲಿ ಕಾಲೇಜು

ತೋನ್ಸೆ ಮಾಧವ ಪೈ ಅವರು ಮಹತ್ವಾಕಾಂಕ್ಷಿಯಾಗಿದ್ದರು. ಸ್ಥಳೀಯ ವಿದ್ಯಾರ್ಥಿಗಳಿಗೆ ಆಗುತ್ತಿರುವ ತೊಂದರೆಯನ್ನು ಮನಗಂಡವರು. ಒಂದು ವೈದ್ಯಕೀಯ ಮಹಾವಿದ್ಯಾಲಯ ಈ ಭಾಗದಲ್ಲಿ ಸ್ಥಾಪನೆ ಆದರೆ ಅದರಿಂದ ವಿದ್ಯಾರ್ಥಿಗಳಿಗೆ ಸಾರ್ವಜನಿಕರಿಗೆ ಲಾಭವಾಗಲಿದೆ ಎಂಬ ದೂರ ದೃಷ್ಟಿಯಿಂದ ಕಾಲೇಜನ್ನು ಸುರು ಮಾಡಲು ಬೇಕಾದ ಕೆಲಸ ಕಾರ್ಯಗಳಲ್ಲಿ ತಮ್ಮನ್ನು ತೊಡಗಿಸಿಕೊಂಡರು. ಮಾಧವ ಪೈ ಅವರ ಕಾರ್ಯವೈಖರಿಯನ್ನು ಕಾರಂತರು ಹೀಗೆ ಚಿತ್ರಿಸಿದ್ದಾರೆ:

''ಆ ಮೊದಲೇ ಅವರು ಉಡುಪಿಯಲ್ಲಿ ಖಾಸಗಿ ಮಹಾತ್ಮಾ ಗಾಂಧಿ ಕಾಲೇಜನ್ನು ತೆರೆಯುವಲ್ಲಿ ತೊಡಗಿಯೂ ಆಗಿತ್ತು. ಸಾರ್ವಜನಿಕರ ನೆರವಿಗಾಗಿ ಭಿಕ್ಷೆಯೆತ್ತಲು ಹೋದ ಒಂದೆರಡು ಸಂದರ್ಭಗಳಲ್ಲಿ, ನಾನೂ ಅವರ ಜತೆಗೆ ಹೋದುದುಂಟು. ಅವರ ಅಣ್ಣ ಉಪೇಂದ್ರ ಪೈಗಳು, ಆ ಅಣ್ಣನ ಮಕ್ಕಳಾದ ಅನಂತ ಮತ್ತು ರಮೇಶ ಪೈಗಳು ಜತೆಗಿದ್ದರು. ಹಾಗೆ ಭಿಕ್ಷೆಯೆತ್ತುವ ಕೆಲಸ ಎಷ್ಟು ಕಷ್ಟದ್ದೆಂದು ಅವರಿಗೆ ತಿಳಿದಿತ್ತು.' ಉಡುಪಿಯಲ್ಲಿಎಂ. ಜಿ. ಎಂ ಕಾಲೇಜು ಆರಂಭಿಸಿದ ಸಂದರ್ಭದಲ್ಲಿ ಡಾ.ಪೈ ಅವರು ಪಟ್ಟ ಕಷ್ಟವನ್ನು ಕಾರಂತರು ಕಣ್ಣಿಗೆ ಕಟ್ಟುವಂತೆ ಚಿತ್ರಿಸಿದ್ದಾರೆ. ಆ ಯೋಜನೆಯಲ್ಲಿ ಕಾರಂತರು ಸಹ ಭಾಗಿಯಾದುದು ವಿಶೇಷ.

ವೈದ್ಯ ವಿದ್ಯೆಯ ಅಭ್ಯರ್ಥಿಗಳ ಹಿರಿಯರಿಂದ ಹಣ ಬೇಡಿದರೆ, ಈ ಕೆಲಸ ಸಾಧ್ಯವೆಂದು ಮನಗಂಡು, ಆ ಕೆಲಸಕ್ಕೆ ಹೊರಟೇಬಿಟ್ಟರು. ಸಿಂಡಿಕೇಟು ಬ್ಯಾಂಕು ಸ್ಥಾಪಕರ ಬಳಗದ ಅವರಿಗೆ ಆ ಕಾರಣದಿಂದ ವಿಶಾಲ ದಕ್ಷಿಣ ಭಾರತದಲ್ಲಿ ಖ್ಯಾತಿ ಬೆಳೆದಿತ್ತು. ಹೀಗಾಗಿ, ಅಭ್ಯರ್ಥಿಗಳ ಹಿರಿಯರಿಂದ ದಾನ ಪಡೆದು, ವೈದ್ಯಕೀಯ ಕಾಲೇಜನ್ನು ತೊಡಗುವೆನೆಂದು ಪ್ರಸಾರ ಮಾಡಿದರು. ಅನೇಕರು ಅವರನ್ನು 'ಇದು ಹುಚ್ಚು' ಎಂದು ಬೆದರಿಸಿದರೂ, ಅವರ ಕರೆಗೆ ಓಗೊಟ್ಟು ದಾನ ಕೊಡಲು ಹಲವಾರು ಮಾತಾಪಿತರು ಮುಂದೆ ಬಂದರು.

ಕಾಲೇಜು ಆರಂಭಿಸುವುದು ಅಪರಾಧ?

ಇನ್ನೇನು-ನಾಳೆ, ನಾಡಿದ್ದು ಕಾಲೇಜಿನ ಪ್ರಾರಂಭ ಉತ್ಸವ ಎಂದಾಗ ಮದ್ರಾಸಿನ ಪ್ರಭಾವಶಾಲಿ ಮಹಾನುಭಾವರಲ್ಲಿ ಒಬ್ಬರಾದ ಲಕ್ಷ್ಮಣ ಸ್ವಾಮಿ ಮೊದಲಿಯಾರರವರಿಂದ 'ಸರಕಾರದ ಅನುಮತಿ ಇಲ್ಲದೆ ಖಾಸಗಿ ವೈದ್ಯಕೀಯ ಕಾಲೇಜನ್ನು ತೊಡಗುವುದು ಅಪರಾಧ' ಎಂಬ ನೋಟೀಸು ಜಾರಿ ಆಯಿತು. ಆಗ ಆ ಪ್ರದೇಶ ಮದರಾಸು ರಾಜ್ಯದಲ್ಲಿತ್ತು.

ದಿಗಿಲುಗೊಂಡ ಮಾಧವ ಪೈಗಳು ಅಭ್ಯರ್ಥಿಗಳ ಹಿರಿಯರಿಂದ ಪಡೆದ ದಾನಗಳನ್ನು ಹಿಂದಿರುಗಿಸಬೇಕಾಯಿತು. ಕಾಲೇಜನ್ನು ತೊಡಗಲು ಸರಕಾರದ ಮನ್ನಣೆಯಿಲ್ಲದೆ ಏನೂ ಮಾಡಲಾರದ ಪರಿಸ್ಥಿತಿ ಅದು. ಈ ಸಂಗತಿ ಕಾರಂತ ಅವರನ್ನು ಸಹ ಚಿಂತೆಗೆ ಈಡು ಮಾಡಿತ್ತು. ಇದಕ್ಕೆ ಏನನ್ನಾದರೂ ಮಾಡಬೇಕು ಎನ್ನುವ ಉದ್ದೇಶ ಅವರದಾಗಿತ್ತು. 'ಈ ಘಟನೆ ಯಾಕೋ ನನ್ನನ್ನು ಎಚ್ಚರಿಸಿತು. ಆ ಅವಧಿಯಲ್ಲಿ ಮುಂಬಯಿ ಸಂಸ್ಥಾನದಲ್ಲಿ ಕರ್ನಾಟಕ ವಿಶ್ವವಿದ್ಯಾಲಯ ಸ್ಥಾಪನೆ ಆಗಿತ್ತು. ಮುಂಬಯಿ ಸರಕಾರ ಈ ವಿಶ್ವವಿದ್ಯಾಲಯಕ್ಕೆ ಅನ್ಯ ಕನ್ನಡ ಪ್ರದೇಶಗಳ ಕಾಲೇಜುಗಳ ಮನ್ನಣೆಗೆ ಅಧಿಕಾರ ನೀಡಿತ್ತು. ಈ ಹೊಳೆ ಇರುವಾಗ, ಮದ್ರಾಸು ಸರಕಾರ ವೈದ್ಯಕೀಯ ಕಾಲೇಜಿಗೆ ಮನ್ನಣೆಯನ್ನು ಕೊಡದೆ ಹೋದರೂ, ಮುಂಬಯಿ ಸರಕಾರ ಕೊಡಲು ಬಂದಿತು. ಆ ಅವಧಿಯಲ್ಲಿ ಬೆಳಗಾವಿಯ ಬಲವಂತ ದಾತಾರರವರು ಕೇಂದ್ರ ಸರಕಾರದ ಮಂತ್ರಿಗಳಾಗಿದ್ದರು. ನಾನು ನನ್ನಷ್ಟಕ್ಕೆ ಅವರನ್ನು ಭೇಟಿಯಾಗಿ ನಿಮಗೆ ಉಡುಪಿಯಲ್ಲಿ ತೆರೆಯುವ ವೈದ್ಯಕೀಯ ಕಾಲೇಜಿಗೆ ಮನ್ನಣೆ ಕೊಡುವ ಹಕ್ಕಿದೆಯಷ್ಟೆ ಎಂದು ಕೇಳಿದೆ. ಅವರು ನಿಮ್ಮವರು ಅದನ್ನು ಬಯಸಿದರೆ ಕೊಡಲು ತೊಂದರೆ ಆಗದು ಎಂದರು. ಆ ಅವಧಿಯಲ್ಲಿ ಮೊದಲ ವೈಸ್ ಚಾನ್ಸಲರಾದ ಆರ್.ಎ. ಜಹಗೀರದಾರರ ತರುವಾಯ, ಉತ್ತರ ಕರ್ನಾಟಕದ ಹಿರಿಯರಾದ ಹುಲಕೋಟಿ ಎಂಬ ಗೃಹಸ್ಥರನ್ನು, ಮುಂಬಯಿ ಸರಕಾರ ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಗಳನ್ನಾಗಿ ನೇಮಿಸಿತ್ತು. ನಾನು ಬೆಳಗಾವಿಗೆ ಹೋಗಿ, ಕೇಂದ್ರಮಂತ್ರಿ ಬಲವಂತ ದಾತಾರರನ್ನು ಕಂಡು, ಮಾತಾಡಿ, ಮುಂದೆ ಕೊಲ್ಲಾಪುರಕ್ಕೆ ಹೋದವನು, ಅಲ್ಲಿಂದ ಈ ಸಾಧ್ಯತೆಯನ್ನು ಕುರಿತು ಸಿಂಡಿಕೇಟು ಬ್ಯಾಂಕಿನ ಮೂಲಕ ಡಾ. ಮಾಧವ ಪೈಗಳಿಗೆ ತಿಳಿಸಿದೆ. ನಾನು ಊರಿಗೆ ಮರಳಿಬಂದ ಬಳಿಕ, ಒಂದು ಸುಮುಹೂರ್ತದಲ್ಲಿ ಶ್ರೀಗಳಾದ ಉಪೇಂದ್ರ ಪೈಗಳು, ಅವರ ತಮ್ಮ ಮಾಧವ ಪೈಗಳು, ಉಪೇಂದ್ರ ಪೈಗಳ ಮಕ್ಕಳಾದ ಅನಂತ ಪೈ, ರಮೇಶ ಪೈಗಳವರ ಜತೆಗೆ ಧಾರವಾಡಕ್ಕೆ ಧಾವಿಸಿದೆ. ಸಿಂಡಿಕೇಟ್ ಬ್ಯಾಂಕಿನ ಸ್ಥಾಪಕರಾದ ಪೈ ಬಂಧುಗಳು, ತಮ್ಮ ಜನರಿಂದ ಶ್ರೀ ಹುಲಕೋಟಿಯವರ ಭೇಟಿಗೆ ಅವಕಾಶ ಕಲ್ಪಿಸಿದ್ದರು. ಹಾಗಾಗಿ, ಉಡುಪಿ ಅಥವಾ ಮಣಿಪಾಲ ವೈದ್ಯಕೀಯ ಕಾಲೇಜಿನ ಸ್ಥಾಪನೆಗೆ ಕರ್ನಾಟಕ ವಿ.ವಿ.ಯು ಅನುಮತಿ ನೀಡಿತು!'(ಹುಚ್ಚು ಮನಸ್ಸಿನ ಹತ್ತು ಮುಖಗಳು, ಐದನೆಯ ಮುದ್ರಣದ ಮುನ್ನುಡಿಯಲ್ಲಿ)

ಕನಸಿಗೆ ಮರುಜೀವ

ನಿಂತೇ ಹೋಗಿದ್ದ ಡಾ. ಮಾಧವ ಪೈಗಳ ದೊಡ್ಡ ಕನಸಿಗೆ ಮರು ಜೀವ ತುಂಬಿದವರು ಕಾರಂತರು. ಆದರೂ ಅವರು ಈ ಕುರಿತು ವಿನಮ್ರವಾಗಿ ಹೇಳಿ ಕೊಂಡದ್ದು ಗಮನೀಯ ಅಂಶ. ನೆನೆಗುದಿಗೆ ಬಿದ್ದಿದ್ದ ಡಾ.ಮಾಧವ ಪೈ ಅವರ ದೊಡ್ಡ ಯೋಜನೆಗೆ ಪರಿಹಾರ ಕಂಡು ಕೊಳ್ಳಲು ನಾಡಿನ ಅನೇಕ ಕಡೆಗಳಲ್ಲಿ ಕಾಲಿಗೆ ಚಕ್ರಕಟ್ಟಿಕೊಂಡಂತೆ ಸುತ್ತಾಡಿ ಅಂತೂ ಇಂತು ಅದರಲ್ಲಿ ಯಶಸ್ವಿಯಾದದ್ದು ಕಾರಂತರ ಕೃತುಶಕ್ತಿಗೆ ಉತ್ತಮ ನಿದರ್ಶನ. ಮಣಿಪಾಲ ಮೆಡಿಕಲ್ ಕಾಲೇಜಿಗೆ ಅನುಮತಿ ಕೊಡಿಸುವಲ್ಲಿ ಕಾರಂತರು ಮುಖ್ಯ ಪಾತ್ರ ವಹಿಸಿದ್ದರೂ ಅವರು ಮಾತ್ರ ತನ್ನ



ಕೆಲಸ ನಿಮಿತ್ತ ಮಾತ್ರ ಎಂದಿರುವುದು ಅವರ ಸೌಜನ್ಯ, ದೊಡ್ಡ ಮನಸ್ಸಿಗೆ ಸಾಕ್ಷಿ. ಇಲ್ಲಿ ನನ್ನ ಪಾತ್ರ ತೀರ ಸಣ್ಣದು. ಅದು ಬರಿಯ ಒಂದು ಸಲಹೆ. ಕಾಲೇಜು ತೊಡಗಿದಾಗ ಆಗಿನ ಸ್ಥಾಪಕ ಸದಸ್ಯರು ಕೇವಲ 20-30 ರೂಪಾಯಿ ಕೊಟ್ಟರಾಯಿತು. ನಾನು ಅಂತಹ ಒಬ್ಬ ಸದಸ್ಯನಾಗಿದ್ದೆ. ಪುತ್ತೂರಿನ ಅಂಥ ಒಂದೆರಡು ಮಂದಿಯನ್ನೂ ಒದಗಿಸಿದ್ದೆ. ಮುಂದೆ ಕಾಲೇಜಿನ ನಿರ್ಮಾಣಕ್ಕೆ, ಆಸ್ಪತ್ರೆಗೆ ಸಾಕಷ್ಟು ದಾನ ಮಾಡಿದ ವ್ಯಕ್ತಿಗಳೂ ಅದರ ಸ್ಥಾಪಕ ಸದಸ್ಯರಾದರು. ಡೊನೇಶನ್ ವಿದ್ಯಾರ್ಥಿಗಳ ಹಿರಿಯರಿಗೂ ಅಂಥ ಸೌಲಭ್ಯವಿದ್ದಂತೆ ನೆನಪು. ಅಂತು, ಅಂದು ಹುಟ್ಟಿ ಬೆಳೆಯತೊಡಗಿದ ಈ ಸಂಸ್ಥೆ (ಮೆಡಿಕಲ್ ಕಾಲೇಜು ಆರಂಭದ ದಿನಾಂಕ 30.6.1953), ಮದ್ರಾಸು ಸರಕಾರದಿಂದ ಮನ್ನಣೆ ಪಡೆಯದೆ ಹೋದರೂ, ಸಾರ್ವಜನಿಕರ ದಾನದಿಂದ ಬೆಳೆದ ರೀತಿ ಒಂದು ಅದ್ಭುತ ವಿದ್ಯಮಾನ. ನಮ್ಮ ಭಾರತ ದೇಶದಲ್ಲೇ ಇಂಥ ವಿದ್ಯಮಾನವನ್ನು ಕಾಣಲಾರಿರಿ' ಎಂಬ ಕಾರಂತರ ಮಾತಿನಲ್ಲಿ ಉತ್ಪ್ರೇಕ್ಷೆ ಇಲ್ಲ.

ಶಿವರಾಮ ಕಾರಂತರು ಅಂತ:ಸಾಕ್ಷಿಯ ಮೂರ್ತ ಸ್ವರೂಪವಾಗಿದ್ದರು. ಅವರು ಬರೇ ಸಿದ್ಧಾಂತಗಳ ಪ್ರತಿಪಾದನೆಗೆ ತಮ್ಮನ್ನು ಸೀಮಿತಗೊಳಿಸಿ ಕೊಂಡವರಲ್ಲ. ಕಾರಂತರು ಆರಾಮಕುರ್ಚಿಯ ಲೇಖಕರೂ ಆಗಿರಲಿಲ್ಲ. ಅವರು ಬದುಕಿಗೆ ಬದ್ಧರಾದ ವಿಚಾರವಾದಿ ಲೇಖಕರು. ಅವರಿಗೆ ಬದುಕೇ ಧ್ಯೇಯ, ಉದ್ದೇಶವಾಗಿತ್ತು. ದೇಶ ತಿರುಗಿ ಕೋಶ ಓದಿ ಅಪಾರವಾದ ಅನುಭವವನ್ನು ಹೆಚ್ಚಿಸಿಕೊಂಡ ಅಪೂರ್ವ ಕ್ರಿಯಾಶೀಲ ಲೇಖಕ, ಚಿಂತಕ ಶಿವರಾಮ ಕಾರಂತ ಎಂಬುದು ಹೆಮ್ಮೆಯ ಸಂಗತಿ. ಕಾರಂತರ ಸೃಜನಶೀಲ ಕೃತಿಗಳಂತೆ ಬಾಳ್ವೆಗೆ ಬೆಳಕಾಗಲ್ಲ ಅವರ ಆತ್ಮಕಥನಗಳನ್ನು ನಾವು ಇವತ್ತು ಮತ್ತೆ ಮತ್ತೆ ಓದಿಕೊಳ್ಳಬೇಕಾದ ಅಗತ್ಯವಿದೆ.

ರೇಡಿಯೋ ಕಿಯಾಸ್ಕ್ 1940!

» ರಾಘವೇಂದ್ರ ರಾಯಲಪಾಡು

ನೆನಪು

ಕೋಲಾರ ನಗರದ ಹೃದಯಭಾಗದಲ್ಲಿರುವ ಸರ್ವಜ್ಞ ಪಾರ್ಕ್, ಸೋಮೇಶ್ವರ ಮತ್ತು ಕೋಲಾರಮ್ಮ ದೇವಸ್ಥಾನಗಳಿಗೆ ಸಮೀಪವಾಗಿದ್ದು ದಿನನಿತ್ಯ ಪ್ರವಾಸಿಗರು ಭೇಟಿ ನೀಡುವ ತಾಣ. ಸುತ್ತಲೂ ಹಲವಾರು ಸರ್ಕಾರಿ ಮತ್ತು ಖಾಸಗಿ ವಿದ್ಯಾಲಯಗಳಿರುವುದರಿಂದ ವಿರಾಮ ಸಮಯದಲ್ಲಿ ವಿದ್ಯಾರ್ಥಿಗಳೂ ಇಲ್ಲಿಗೆ ಬಂದು ಕೂರುತ್ತಾರೆ.

ಈ ಉದ್ಯಾನವನದಲ್ಲಿ ಆಕರ್ಷಕವಾದ ಆದರೆ ಹಳೆಯದೆನಿಸುವ ಕಟ್ಟಡವೊಂದು, ಶಿಥಿಲಗೊಂಡಿದ್ದರೂ ದೃಢವಾಗಿ ನಿಂತಿದೆ; ಅದರ ಎರಡೂ ಬದಿಯಲ್ಲಿ ಅಳವಡಿಸಲಾಗಿರುವ ಶಿಲಾಫಲಕವೊಂದರ ಮೇಲೆ ಶ್ರೀ ವಿ.ಆರ್. ಚಿಕ್ಕ ಚನ್ನಂಜಪ್ಪ ಶೆಟ್ಟರು, ರೇಡಿಯೋ ಕಿಯಾಸ್ಕ್ 1940 ಎಂದು ಕನ್ನಡ ಮತ್ತು ಆಂಗ್ಲಭಾಷೆಯಲ್ಲಿ ಬರೆಯಲಾಗಿದೆ. ಕಟ್ಟಡದ ಮೇಲ್ಭಾಗದಲ್ಲಿ, ಸಿಮೆಂಟ್ ಗಾರೆಯಲ್ಲೇ ಅಕ್ಷರ ರೂಪಿಸಿ, ರೇಡಿಯೋ ಕಿಯೋಸ್ಕ್ ಎಂದು ಇಂಗ್ಲಿಷ್‌ನಲ್ಲಿ ಬರೆದಿರುವ ಬರಹವನ್ನೂ ಕಾಣಬಹುದು.

ಏನಿದು 'ರೇಡಿಯೋ ಕಿಯಾಸ್ಕ್' ಎಂಬ ಕುತೂಹಲದಿಂದ ಫೇಸ್‌ಬುಕ್‌ನಲ್ಲಿ ಬರೆಹವೊಂದನ್ನು ಹಾಕಿದಾಗ ಇದನ್ನು ಕಂಡು ಕೇಳಿದ್ದ ಹಲವರು ತಮಗೆ ಗೊತ್ತಿದ್ದ ಮಾಹಿತಿಯನ್ನು ಆಸ್ಥೆಯಿಂದ ಹಂಚಿಕೊಂಡರು!

1895ರಲ್ಲಿ ಮಾರ್ಕೋನಿ ಪ್ರಥಮಬಾರಿಗೆ ರೇಡಿಯೋ ಸಂಕೇತಗಳನ್ನು ಒಂದಡೆಯಿಂದ ಮತ್ತೊಂದಡೆಗೆ ಕಳುಹಿಸಿ ರೇಡಿಯೋ ಸಾಧನದ ಆವಿಷ್ಕಾರಕ್ಕೆ ನಾಂದಿ ಆಡಿದ. 1936ರಲ್ಲಿ ಭಾರತದಲ್ಲಿ ಆಗಿದ್ದ ಬ್ರಿಟಿಶ್ ಸರ್ಕಾರವು ಏಐಆರ್ (ಆಲ್ ಇಂಡಿಯಾ ರೇಡಿಯೋ) ಹೆಸರಿನಲ್ಲಿ ದೇಶೀ ಹಾಗೂ ವಿದೇಶೀ ರೇಡಿಯೋ ಪ್ರಸಾರವನ್ನು ಕೈಗೊಳ್ಳುತ್ತದೆ; ಅದಕ್ಕೂ ಒಂದು ವರ್ಷ ಮುಂಚೆ, 1935ರಲ್ಲಿ 'ಆಕಾಶವಾಣಿ ಮೈಸೂರು' ಸಣ್ಣ ಮಟ್ಟದಲ್ಲಿ ಖಾಸಗಿ ರೇಡಿಯೋ ಸೇವೆಯನ್ನು ಆರಂಭಿಸಿತ್ತು.

ಆ ಕಾಲದಲ್ಲಿ ರೇಡಿಯೋ ಸೆಟ್‌ಗಳು ಜನಸಾಮಾನ್ಯರಿಗೆ ಕೈಗೆಟುಕುವ ಸ್ಥಿತಿಯಲ್ಲಿರಲಿಲ್ಲ. ಆ ಸಂದರ್ಭದಲ್ಲಿ ಅಲ್ಲಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಸರಕಾರದಿಂದ ಹಾಗೂ ದಾನಿಗಳಿಂದ ಸಾರ್ವಜನಿಕ ರೇಡಿಯೋ ಕೇಂದ್ರ(ಕಿಯಾಸ್ಕ್)ಗಳ ನಿರ್ಮಾಣ ಆಯಿತು. ಈ ರೀತಿಯಾಗಿ ಸ್ಥಳೀಯವಾಗಿ ಚಿಂತಾಮಣಿ, ಬಂಗಾರಪೇಟೆಗಳಲ್ಲಿಯೂ ಈ ರೇಡಿಯೋ ಕಿಯಾಸ್ಕ್ ಆರಂಭಗೊಂಡವು.

ಹಳ್ಳಿಯ ಜನರು ಸೇರುವ ತಾಣ

ಕೋಲಾರದ ಸರ್ವಜ್ಞ ಉದ್ಯಾನವನದ ಕಿಯೋಸ್ಕ್ ಕಟ್ಟಡದ ನಾಲ್ಕೂ ಬದಿಯಲ್ಲಿ ಧ್ವನಿವರ್ಧಕಗಳನ್ನು ಅಳವಡಿಸಲಾಗಿತ್ತು. ಬಹು ವರ್ಷಗಳ ತನಕ, ನಿತ್ಯ ಪ್ರಸಾರವಾಗುತ್ತಿದ್ದ ಕನ್ನಡ ವಾರ್ತೆಗಳನ್ನು ಕೇಳಲು ಇಲ್ಲಿ ಜನರು ಸೇರುತ್ತಿದ್ದರು. ಅಲ್ಲದೆ ರೇಡಿಯೋ ಸಿಲೋನ್‌ನಿಂದ ನಿತ್ಯ ಬಿತ್ತರಗೊಳ್ಳುತ್ತಿದ್ದ ಚಿತ್ರಗೀತೆಗಳು ಹಾಗೂ ಬುಧವಾರಗಳಂದು ಪ್ರಸಾರಗೊಳ್ಳುತ್ತಿದ್ದ ಜನಪ್ರಿಯ ಬಿನಾಕಾ ಗೀತ್ ಮಾಲಾ ಕೇಳಲೆಂದು ನೆರೆಯ ಹಳ್ಳಿಗಳ ಜನರೂ ಇಲ್ಲಿಗೆ ಬರುತ್ತಿದ್ದರು ಎಂದು ಕೆಲವರು ಹಿರಿಯರು ನೆನಪು ಮಾಡಿಕೊಂಡರು. ಸುತ್ತಮುತ್ತಲಿನ ಅಂಗಡಿ ಕಚೇರಿಗಳಲ್ಲಿನ ಜನರು ತಮ್ಮ ತಮ್ಮ ಕಾರ್ಯಗಳನ್ನು ಮಾಡುತ್ತಲೇ ರೇಡಿಯೋದಿಂದ ಪ್ರಸಾರವಾಗುತ್ತಿದ್ದ ಚಿತ್ರಗೀತೆಗಳಿಗೆ ಕಿವಿಯಾಗುತ್ತಿದ್ದರು. ಉದ್ಯಾನವನದಲ್ಲಿ ವಾರಕ್ಕೊಮ್ಮೆ ವಾದ್ಯಗೋಷ್ಠಿಯನ್ನು ಏರ್ಪಡಿಸಲಾಗುತ್ತಿತ್ತು. ಆಗ ಉದ್ಯಾನವನದ ತುಂಬೆಲ್ಲಾ ಜನರು ನೆರೆಯುತ್ತಿದ್ದರು. ಈಗಲೂ ಸ್ಥಿರವಾಗಿ ನಿಂತಿರುವ ರೇಡಿಯೋ ಕೇಂದ್ರದತ್ತ ಕಣ್ಣಗಲಿಸಿ, ಕಿವಿಗೆ ಕೈಯಿಟ್ಟು ಏನಾದರೂ ಕೇಳಿಸೀತೆ ಎಂದು ಕ್ಷಣ ನಿಲ್ಲುವಂತೆ ಆಗುತ್ತದೆ ಎನ್ನುತ್ತಾರೆ ಅವರು.

ಮೊದಲ ಚುನಾವಣೆಯ ಫಲಿತಾಂಶ

1951ನೆಯ ಇಸವಿಯಲ್ಲಿ ಜರುಗಿದ ಮೊದಲ ಸಾರ್ವತ್ರಿಕ ಚುನಾವಣೆಗಳ ಫಲಿತಾಂಶಗಳನ್ನು ಆಲಿಸಲು ಸರ್ವಜ್ಞ ಉದ್ಯಾನವನದಲ್ಲಿ ಜಾತ್ರೆಗೆ ಸೇರುವ ತೆರದಲ್ಲಿ ಜನರು ನೆರೆದಿದ್ದರು ಎಂದು ಕೆಲವರು ತಮ್ಮ ಅನುಭವವನ್ನು ಸ್ಮರಿಸಿಕೊಂಡರು. 1980ರ ದಶಕದಲ್ಲಿ ದೇಶದಲ್ಲಿ ದೂರದರ್ಶನ ಪ್ರಸಾರ ಆರಂಭಗೊಂಡಾಗ ಈ ರೇಡಿಯೋ ಕಿಯಾಸ್ಕ್‌ನಲ್ಲಿ

ಇಪ್ಪತ್ತನೆಯ ಶತಮಾನದಲ್ಲಿ, ಕೆಲವು ದೊಡ್ಡ ಊರುಗಳಲ್ಲಿ, ಸಾರ್ವಜನಿಕ ಉದ್ಯಾನವನದ ಬಳಿಯೋ, ಮೈದಾನದ ಬಳಿಯೋ, ಜನರು ಸೇರಿ ರೇಡಿಯೋದಲ್ಲಿ ಬಿತ್ತರವಾಗುತ್ತಿದ್ದ ಸುದ್ದಿಗಳನ್ನು ಕೇಳುವ ವ್ಯವಸ್ಥೆಯನ್ನು ಮಾಡಲಾಗುತ್ತಿತ್ತು!

ದೂರದರ್ಶನ ಉಪಕರಣವನ್ನು ಅಳವಡಿಸಲಾಯಿತು; ಒಂದು ಪಾರ್ಶ್ವದಲ್ಲಿ ಅದಕ್ಕಾಗಿ ಒಂದು ಷಟರ್ ಹಾಕಿ ವ್ಯವಸ್ಥೆಯನ್ನು ಕಲ್ಪಿಸಲಾಯಿತು. ಸಂಜೆ 7ರಿಂದ 9ರವರೆಗೆ ಪ್ರಸಾರವಾಗುತ್ತಿದ್ದ ಕನ್ನಡ ಕಾರ್ಯಕ್ರಮಗಳನ್ನು ಹಾಗೂ ಶನಿವಾರ, ಭಾನುವಾರಗಳಂದು ಬಿತ್ತರವಾಗುತ್ತಿದ್ದ ಕನ್ನಡ ಚಲನಚಿತ್ರಗಳನ್ನು ನೋಡಲು ನಗರದ ಜನರೇ ಅಲ್ಲದೆ ಅಕ್ಕಪಕ್ಕದ ಗ್ರಾಮಗಳ ಜನರೂ ಇಲ್ಲಿ ಸೇರುತ್ತಿದ್ದರಂತೆ. 1984ರಲ್ಲಿ ಆಗಿನ ಪ್ರಧಾನಮಂತ್ರಿಗಳಾಗಿದ್ದ ಇಂದಿರಾಗಾಂಧಿಯವರ ಹತ್ಯೆಯಾದ ಸಂದರ್ಭದಲ್ಲಂತೂ ವಾರ್ತೆಗಳನ್ನು ಕೇಳಲು ರೇಡಿಯೋ ಕಿಯಾಸ್ಕ್ ಮುಂದೆ ಸಾವಿರಾರು ಜನರು ಸೇರಿ ನೂಕುನುಗ್ಗಲಾಗಿತ್ತು ಎಂದು ಅಂದು ಅಲ್ಲಿ ಸೇರಿದ್ದ ಹಿರಿಯ ಸಾಹಿತಿಗಳೊಬ್ಬರು ಸ್ಮರಿಸಿಕೊಂಡರು.

85 ವರ್ಷಗಳೇ ಸಂದಿದ್ದರೂ ಈ ಪುಟ್ಟ ಕಟ್ಟಡ ಗಟ್ಟಿಮುಟ್ಟಾಗಿದೆ; ಇದೆ ಮೇಲ್ಭಾಗದಲ್ಲಿ ಗಿಡ ಮರಗಳು ಬೆಳೆದಿದ್ದು, ಇಂದು ಅದು ಜನರ ಆಸಕ್ತಿಯ ಕೇಂದ್ರವಾಗಿ ಉಳಿದಿಲ್ಲದೇ ಇರುವುದರ ಪ್ರತೀಕ ಎನಿಸಿದೆ; ಸ್ವತಂತ್ರಪೂರ್ವ ಕಾಲದ ಈ ಕಟ್ಟಡ ಅಂದಿನ ಕಾಮಗಾರಿಕೆ, ಸಾಮಗ್ರಿಗಳ ಗುಣಮಟ್ಟ ಮತ್ತು ಅಂದಿನ ಕೆಲಸಗಾರರ ಶ್ರದ್ಧೆ, ಕೌಶಲ್ಯ, ಬದ್ಧತೆಗಳ ಸಾಕ್ಷಿಯಾಗಿ, ಸಂದು ಹೋದ ಕಾಲಘಟ್ಟವೊಂದರ ಅನನ್ಯ ಸಾಕ್ಷಿಯಾಗಿ ಉಳಿದುಕೊಂಡಿದೆ.

ಕವಿಕಣ

ಸಮಯವಿಲ್ಲ

» ಚಂದ್ರಶೇಖರ ಹೆಗಡೆ

ಅಲ್ಲಮನಾಗಲು ಯಾರಿಗೂ ಸಮಯವಿಲ್ಲ
ಕಾಲಬುಡದಲ್ಲೇನಿದೆಯೊ ಕಾಲ ನಿಲ್ಲುವುದಿಲ್ಲ
ಕಟ್ಟಿಕೊಂಡ ಬುತ್ತಿಯ ಉಣಲು ಹೊತ್ತು ಉಳಿದಿಲ್ಲ
ದುಡಿಯುವುದ್ಯಾತಕೋ ಮಡಿಯುವುದ್ಯಾತಕೋ
ಆದಿ ಮಧ್ಯಾಂತ್ಯ ತಿಳಿದಿಲ್ಲ॥
ಪಕ್ಕದಲ್ಲಿ ಸತ್ತರೂ ಹೊರಳುವ ಕಂಗಳಿಲ್ಲ
ಯಾರು ಹೆತ್ತರೂ, ತುಂಬಿಸಿಕೊಳ್ಳುವ ಕೈಗಳಿಲ್ಲ
ಮಗಳಿಗೆ ಮುತ್ತಿಡಬೇಕೆಂದರೂ
ನಂಬಿದ ಕಾಲ ಜೊತೆಗಿಲ್ಲ
ಹೆತ್ತವಳ ಮಡಿಲಿಗೊರಬೇಕೆಂದು ಕೇಳಿದರೂ ಬಿಡುವುದಿಲ್ಲ॥

ಮರಣ ಬಂದರೆ ಶರಣಾಗಲು ಮನಸಿಲ್ಲ
ಈಡೇರಿಸಲೇಬೇಕೆನ್ನುವ ಕನಸುಗಳು ಎಲ್ಲಿವೆಯೋ ಗೊತ್ತಿಲ್ಲ
ಬದುಕಿನ ಭೀಕರ ಅಲೆಗಳನ್ನೇರಿಳಿಯಲು ಕಸುವಿಲ್ಲ
ಮುಂದಿರುವುದನ್ನು ಉಂಡರಾಯಿತೆಂದರೆ ಒಡಲುಗೊಂಡವನಿಗೆ ಹಸಿವಿಲ್ಲ॥
ಕರೆಯೋಲೆಗಳ ಹಿಂದೆ ಹೋಗಲೇಬೇಕೆನ್ನುವ ಕರುಳಿಲ್ಲ
ಕಾಣದಂತೆ ಪಾರಾಗಿಬಿಡುತ್ತದೆ ಜಾಣ ಮರುಳೆಲ್ಲ
ಸಿದ್ಧಾಂತಗಳ ಬದುಕಿನಲ್ಲಿ ಹುರುಳಿಲ್ಲ
ಬುದ್ಧನಾಗಬೇಕೆಂದರೆ ಎದ್ದುಹೋಗಬೇಕೆನ್ನುವ ಬದ್ಧತೆಯಿಲ್ಲ॥
ಮಾನ-ಪ್ರಾಣಗಳಿಗೆ ಬೆಲೆಯುಳಿದಿಲ್ಲ
ಡಾವಿಂಚಿಗೂ ಇಂದು ಕುಂಚವೇಳುವುದಿಲ್ಲ
ಮಲಗಬೇಕೆಂದರೆ ನೆಮ್ಮದಿಯ ಉಸಿರಿಲ್ಲ
ಯೋಗಸ್ಥನಾಗಬೇಕೆಂದರೆ ಯೋಗವೊಂದಿಲ್ಲ
ಸಾಕೆಂದರೆ ಅಕ್ಕಮಹಾದೇವಿಯ ಸಂತೆ ನಿಲ್ಲುವುದಿಲ್ಲ॥
ನಿಂತು ಮಾತನಾಡಿಸಬೇಕೆಂದರೆ ಕಾಲು ನಿಲ್ಲುವುದಿಲ್ಲ
ಹೆಗ್ಗಳಿಕೆ ನಮ್ಮದು ಒಂದಿನಿತೂ ಬಾಲವಿಲ್ಲ
ಮಾಗಿದವರಿಂದ ಬಲು ದೂರ; ಇಳಿಸಂಜೆ ಬೇಕಿಲ್ಲ
ನುಡಿಹಬ್ಬ ಮಾಡುವಾಸೆ ಸಂಗನಬಸವ ನಡೆಯೊಳಿಲ್ಲ

ಶಿಲಾಸಮಾಧಿಯೇ ವಿಶ್ವದ ಅದ್ಭುತ!

« ಮೊದಲ ಪುಟದಿಂದ

ಅಂತ್ಯಕ್ರಿಯೆಯ ಸಮಯದಲ್ಲಿ ಅಥವಾ ನಂತರದ ಸ್ಮರಣಾರ್ಥ ಕೂಟಗಳಲ್ಲಿ ಭೇಟಿ ನೀಡುವ ವರು ಆಹಾರ ಮತ್ತು ವೈನ್, ಮಡಕೆಗಳಲ್ಲಿ ತರುವುದು ಅಂದಿನ ರೂಢಿ. ಪ್ರಾರ್ಥನೆಯ ನಂತರ ಅವುಗಳನ್ನು ಒಟ್ಟಾಗಿ ಸೇವಿಸುತ್ತಿದ್ದರು. ಸಾವಿನ ಜಾಗದಿಂದ ಯಾವುದೇ ವಸ್ತುವನ್ನು ಮತ್ತೆ ಮನೆಗೆ ತಂದು ಮರುಬಳಕೆ ಮಾಡುವಂತಿರಲಿಲ್ಲ.ಮಣ್ಣಿನ ಪಾತ್ರೆಗಳಾದ್ದರಿಂದ ಅಗ್ಗವಾಗಿದ್ದು ಅಲ್ಲಿಯೇ ಸುಲಭವಾಗಿ ಒಡೆಯಲಾಗುತ್ತಿತ್ತು. ಈ ರೀತಿ ಒಡೆದ ಮಣ್ಣಿನ ಮಡಕೆಗಳ ದೊಡ್ಡ ರಾಶಿಯಿಂದ ಈ ಹೆಸರು!

ಸುರುಳಿಯಾಕಾರದ ತೊಂಬತ್ತೊಂಬತ್ತು ಮೆಟ್ಟಿಲುಗಳ ಮೂಲಕ ಕೆಳಗೆ ನಡೆದಂತೆ ರೋಟುಂಡಾ ಎಂದು ಕರೆಯಲ್ಪಡುವ ವೃತ್ತಾಕಾರದ ದೊಡ್ಡ ಕೋಣೆಗೆ ಪ್ರವೇಶ. ಮೃತದೇಹಗಳು ಮತ್ತು ಅವರಿಗೆ ನೀಡುವ ಕಾಣಿಕೆಗಳನ್ನು ಹಗ್ಗ ಕಟ್ಟಿ ಈ ಮೆಟ್ಟಿಲುಗಳ ಮೂಲಕ ಸಾಗಿಸಲಾಗುತ್ತಿತ್ತು. ಹಾಗೆಯೇ ಮೆಟ್ಟಿಲು ಗಳ ಮೇಲೆ ನಿಂತು ಮಧ್ಯಕೋಣೆಯಲ್ಲಿ ನಡೆಯುವ ವಿಧಿ ವಿಧಾನಗಳನ್ನು ನೋಡಲು ಅವಕಾಶ ಕಲ್ಪಿಸಿದ್ದರು. ಈ ಮಧ್ಯ ಕೋಣೆಯಲ್ಲಿ ನಾಲ್ಕು ಮಾರ್ಗಗಳಿದ್ದು ಸುತ್ತಲೂ ಒಂದಕ್ಕೊಂದು ಸಂಪರ್ಕವಿರುವ ಅನೇಕ ಕೋಣೆಗಳಿವೆ. ಮುಖ್ಯ ಸಮಾಧಿ ಕೋಣೆಯಲ್ಲಿ ಮೃತದೇಹವನ್ನು ಬ್ಯಾಂಡೇಜ್ ಸುತ್ತಿ, ರಕ್ಷಣಾ ಕವಚಗಳನ್ನು ಹಾಕಿ ಮಮ್ಮಿಗಳನ್ನಾಗಿ ಮಾಡುವ ಪ್ರಕ್ರಿಯೆ ನಡೆಯುತ್ತಿತ್ತು.

ನಂತರ ಶಿಲಾ ಪೆಟ್ಟಿಗೆಯಲ್ಲಿ ಇವುಗಳನ್ನು ಸಂರಕ್ಷಿಸಿ ಇಡಲಾಗುತ್ತಿತ್ತು.

ಗೋಡೆಯಲ್ಲಿ ಅಲಂಕಾರಿಕ ಚಿತ್ರಗಳಿದ್ದು ಪ್ರಾಚೀನ ಈಜಿಪ್ಟಿನ ದೇವರನ್ನು ರೋಮನ್ ಉಡುಪು ಮತ್ತು ಶೈಲಿಯಲ್ಲಿ ಚಿತ್ರಿಸಲಾಗಿದೆ. ಹಾಗೆಯೇ ಮರಣದ ನಂತರದ ಪಯಣ-ಬದುಕಿಗಾಗಿ ಅಗತ್ಯವಿರುವ ಆಹಾರಕ್ಕಾಗಿ ಮಣ್ಣಿನ ಪಾತ್ರೆ, ಆಭರಣಗಳು, ಇನ್ನಿತರ ವಸ್ತುಗಳನ್ನು ಇಡಲು, ಗೋಡೆಗಳಲ್ಲಿ ನಿರ್ದಿಷ್ಟ

ಜಾಗಗಳಿವೆ. ಇಲ್ಲಿರುವ ಚಿತ್ರಗಳು ಮೃತರಿಗೆ ನಂತರದ ಪಯಣದಲ್ಲಿ ಧೈರ್ಯ ತುಂಬುವ ಅನೇಕ ಸಂಕೇತಗಳನ್ನು ಹೊಂದಿದೆ. ಅಲ್ಲಲ್ಲಿ ಕಾಣಬರುವ ಕಮಲದ ಹೂವು -ಪರಿಶುದ್ಧತೆ ಮತ್ತು ಸೃಷ್ಟಿ, ಜೀರುಂಡೆ -ಹುಟ್ಟು ಹಾಗೂ ಪರಿವರ್ತನೆಗೆ ಸಂಕೇತವಾಗಿದೆ. ಕೆಲವು ಪ್ರಾಣಿಗಳಿಗೂ ಇಲ್ಲಿ ಸ್ಥಾನವಿದೆ! ಇಲ್ಲಿನ ಕಾರಕೆಲಾ ಹಾಲ್, ರೋಮನ್ ಚಕ್ರವರ್ತಿ ಕಾರಕೆಲಾನ ಕಾಲದಲ್ಲಿ ಕುದುರೆ ಜೂಜಿನಲ್ಲಿ ಗೆದ್ದ ಪ್ರತಿಷ್ಠಿತ ವ್ಯಕ್ತಿಗಳಲ್ಲದೇ ಕುದುರೆಗಳಿಗೂ ಸಮಾಧಿ ಸ್ಥಳವಾಗಿತ್ತು ಎಂದು ಅಲ್ಲಿ ಸಿಕ್ಕ ಮೂಳೆಗಳಿಂದ ಊಹಿಸಲಾಗಿದೆ. ಒಟ್ಟಿನಲ್ಲಿ ಜನರು ಮರಣಾನಂತರದ ಬದುಕಿನ ಬಗ್ಗೆ ದೃಢವಾದ ನಂಬಿಕೆ ಹೊಂದಿದ್ದರು ಎನ್ನುವುದಂತೂ ಸ್ಪಷ್ಟ! ಟ್ರೈಕ್ಲಿನಿಯಂ ಎನ್ನುವ ದೊಡ್ಡ ಕೋಣೆ, ಅಂತ್ಯಕ್ರಿಯೆ ನಂತರದ ಭೋಜನ ನಡೆಯುವ ಸ್ಥಳ. ಇಲ್ಲಿ ಕುಟುಂಬದವರು ಮತ್ತು ಪ್ರೀತಿಪಾತ್ರರು, ಮೃತರ ಸ್ಮರಣಾರ್ಥ ಭೋಜನವನ್ನು ಏರ್ಪಡಿಸುತ್ತಿದ್ದರು. ಎಲ್ಲರೂ ಸೇರಿ ಭೋಜನದಲ್ಲಿ ಪಾಲ್ಗೊಳ್ಳುವುದು ಶೋಕದ ತೀವ್ರತೆಯನ್ನು ಕಡಿಮೆ ಮಾಡುವುದರ ಜತೆ ಧಾರ್ಮಿಕ ಆಚರಣೆಯೂ ಆಗಿತ್ತು. ಈ ಭೋಜನ ಕೋಣೆ, ಕಲ್ಲಿನ ಬೆಂಚುಗಳನ್ನು ಯು ಆಕಾರದಲ್ಲಿ ಹೊಂದಿದ್ದು ಅನೇಕ ಜನರು ಕುಳಿತುಕೊಳ್ಳುವ ವ್ಯವಸ್ಥೆಯನ್ನು ಹೊಂದಿದೆ.

ಹಾಗೆ ನೋಡಿದರೆ ಕ್ಯಾಟಕಾಂಬ್, ಭೂಗತ ಶಿಲಾಸಮಾಧಿ ಸಮುಚ್ಚಯ ಎನ್ನುವುದಕ್ಕಿಂತ ಮೃತರ ಕುರಿತಾದ ಗೌರವ, ಮರಣಾನಂತರದ ಬದುಕಿನ ಬಗ್ಗೆ ಜನರ ನಂಬಿಕೆಗಳು, ಅಂದಿನ ಜನಜೀವನ-ಸಂಸ್ಕೃತಿ ಇವೆಲ್ಲವನ್ನು ಕಲಾತ್ಮಕವಾಗಿ ಪ್ರಸ್ತುತಪಡಿಸಿರುವ ಒಂದು ಶಿಲಾಸ್ಮಾರಕ ಎನ್ನುವುದೇ ಸೂಕ್ತ. ವರ್ಷಗಟ್ಟಲೇ ಅಪಾರ ಪರಿಶ್ರಮ, ಸಂಪನ್ಮೂಲ ಬಳಸಿ ಭೂಮಿಯ ಮೇಲೆ ಬೃಹತ್ ಕಲ್ಲು ಜೋಡಿಸಿ ಪಿರಮಿಡ್, ಭೂತಳದಲ್ಲಿ ಶಿಲಾಪದರ ಕೊರೆದು ಸಮಾಧಿ ನಿರ್ಮಾಣ ಇವೆಲ್ಲ ಕಂಡು ಬೆರಗಾದರೂ, ಇಲ್ಲಿನ ಬದುಕಿಗಿಂತ ಸಾವಿನ ನಂತರದ ಬದುಕೇ ಮುಖ್ಯವಾಗಿತ್ತೇ ಎಂಬ ಪ್ರಶ್ನೆಯೂ ಮೂಡಿತು!

ಮಧ್ಯಮ ಮಾರ್ಗ ಪ್ರವರ್ತಕ ತಥಾಗತ ಬುದ್ಧ

« ಮೊದಲ ಪುಟದಿಂದ

ಯಾವ ಬಾಹ್ಯ ಆಶ್ರಯವನ್ನೂ ಅವಲಂಬಿಸಬೇಡ. ಸತ್ಯ ಪ್ರದೀಪವನ್ನು ಭದ್ರವಾಗಿ ಹಿಡಿದುಕೊ, ಸತ್ಯವನ್ನೇ ಆಶ್ರಯವಾಗಿ ಹಿಡಿದುಕೊ ಮತ್ತು. ಎಲೈ ಆನಂದ! ಯಾರು ಈಗಲಾಗಲಿ ಅಥವಾ ನನ್ನ ಮರಣಾನಂತರವಾಗಲಿ ತಮಗೆ ತಾವೇ ದೀಪವಾಗಿ ತಮಗೆ ತಾವೇ ಆಶ್ರಯರಾಗಿರುವರೊ. ಯಾವ ಹೊರಗಿನ ಆಶ್ರಯವನ್ನೂ ಪಡೆಯುವುದಿಲ್ಲವೂ. ಆದರೆ ಸತ್ಯವನ್ನೇ ತಮ್ಮ ಬೆಳಕಾಗಿ, ತಮ್ಮ ಆಶ್ರಯವಾಗಿ ಭದ್ರವಾಗಿ ಹಿಡಿದುಕೊಳ್ಳುವರೊ. ತಮಗಿಂತ ಬೇರೆಯಾದ ಯಾವ ಆಶ್ರಯವನ್ನೂ ಬಯಸುವುದಿಲ್ಲವೊ ಅವರೇ, ನನ್ನ ಭಿಕ್ಷುಗಳಲ್ಲಿ ಅತ್ಯುನ್ನತ ಸ್ಥಿತಿಗೇರುವವರು. ಆದರೆ ಅವರಲ್ಲಿ ಕಲಿಯುವ ಹಂಬಲವಿರಬೇಕು''.

ಬುದ್ಧ ಮುಖ್ಯವಾಗುವುದು ಆತ ಜನಸಾಮಾನ್ಯರ ಆಡುಭಾಷೆಯಲ್ಲಿ ತನ್ನ ಉಪದೇಶವನ್ನು ಮಾಡಿರುವುದಕ್ಕಾಗಿ. ಬ್ರಾಹ್ಮಣರ ಕಂದಾಚಾರವನ್ನು ಆತ ನಿರ್ದಾಕ್ಷಿಣ್ಯವಾಗಿ ಖಂಡಿಸುತ್ತಾನೆ. ಆದರೆ ಬ್ರಹ್ಮಜ್ಞಾನವನ್ನಲ್ಲ. ಇದಕ್ಕೆ ಧಮ್ಮಪದದ ಬ್ರಾಹ್ಮಣ ವಗ್ಗದಲ್ಲಿ ಅನೇಕ ಉದಾಹರಣೆಗಳು ಸಿಗುತ್ತವೆ.

ಝಾಯಿಂ ವಿರಜಮಾಸೀನಂ ಕತಕಿಚ್ಚಮನಾಸವಂ ।
ಉತ್ತಮತ್ಥಮ್ ಅನುಪ್ಪತ್ಥಂ ತಮಹಂ ಬ್ರೂಮಿ ಬ್ರಾಹ್ಮಣಂ ॥ (ಬ್ರಾ.ವ.-386)

'ಯಾವನು ಧ್ಯಾನ ಮಾಡುವವನೋ, ನಿರ್ಮಲನೂ ದೋಷವಿಲ್ಲದವನೂ ಆಗಿ ಆಸನದಲ್ಲಿ ಕುಳಿತಿರುವನೋ, ಯಾವನು ಕೃತಕೃತ್ಯನಾಗಿ ಯಾವ ಆಸ್ರವಗಳೂ ಇಲ್ಲದೆ, ಉತ್ತಮಾರ್ಥವನ್ನು ಪಡೆದುಕೊಂಡಿರುವನೋ ಆತನನ್ನು ನಾನು ಬ್ರಾಹ್ಮಣನೆಂದು ಕರೆಯುತ್ತೇನೆ' ಎಂದಿದ್ದಾನೆ.

ಪ್ರಪಂಚದ ಮೊದಲ ಧರ್ಮ ಸುಧಾರಕ ಬುದ್ಧ.

» ಬಿ.ಕೆ.ಮೀನಾಕ್ಷಿ, ಮೈಸೂರು

ಎಲ್ಲರ ದೋಸೆಯೂ ಒಂದೇ ಬಣ್ಣ!

ತಿಂಡಿಪೋತರಿಗೆ ರುಚಿರುಚಿ ತಿನಿಸುಗಳ ಕನಸು ಬೀಳುತ್ತಲೇ ಇರುತ್ತದೆ! ಬೆಣ್ಣೆ ಹಾಕಿದ ಮಸಾಲೆ ದೋಸೆಗಳು ಎಲ್ಲರ ತಟ್ಟೆಯಲ್ಲೂ ಒಂದೇ ಬಣ್ಣದಲ್ಲಿ ರಾರಾಜಿಸುವ ಒಂದು ಹೊಟೇಲ್‌ನಲ್ಲಿ ದೋಸೆ ತಿಂದ ಅನುಭವ ಇದು.

ಕರಾವಳಿಯ ಕಡೆಗೆ ಪ್ರವಾಸ ಹೋಗಿದ್ದೆವು. ಶಿವಮೊಗ್ಗದ ಮಾರ್ಗವಾಗಿ ಹೋಗಬೇಕೆಂಬುದು ನಮ್ಮೆಲ್ಲರ ಇಚ್ಛೆಯಾಗಿತ್ತು. ಆದರೆ ಡ್ರೈವರ್ ನಮಗೆ ಅರ್ಥವಾಗದ ಕಾರಣಗಳನ್ನು ಹೇಳಿ ಅವರಿಗೆ ಇಷ್ಟವಾದ ಅಥವಾ ಸುಲಭವಾದ ಮಾರ್ಗದಲ್ಲೇ ಕರೆದುಕೊಂಡು ಬಂದರು. ಮಂಗಳೂರನ್ನು ಹಾದು ಹೋಗುವಾಗ ಸಿಕ್ಕ ಸಿಕ್ಕ ಸಣ್ಣ ಪುಟ್ಟ ಊರುಗಳ ಹೆಸರುಗಳನ್ನು ಓದಿಕೊಳ್ಳುತ್ತಾ ಸಾಗುತ್ತಿದ್ದೆವು.

ಯಾವುದಾದರೊಂದು ಊರು ಸಿಕ್ಕರೆ, ಆ ಊರನ್ನು ಅಂಟಿಸಿಕೊಂಡು ತಮ್ಮ ಹೆಸರನ್ನು ಬರೆದುಕೊಳ್ಳುವ ಸಾಹಿತಿಗಳ ಹೆಸರು ನನಗೆ ನೆನಪಾಗುತ್ತಿತ್ತು. ಉದಾಹರಣೆಗೆ, ಹೆಬ್ರಿ ಸಿಕ್ಕಿತು; ಮಂಡ್ಯದ ಸಾಹಿತಿ ಪ್ರದೀಪಕುಮಾರ್ ನೆನಪಾದರು. ಪೆರ್ಲ ಸಿಕ್ಕಿತು. ಆಗ ವಸಂತಕುಮಾರ್ ಪೆರ್ಲ ಎಂಬ ಲೇಖಕರ ನೆನಪಾಯಿತು. ದಾರೇಶ್ವರ ಸಿಕ್ಕಿತು, ಅನುರಾಧಾ ಎಂಬ ಪ್ರಸಿದ್ಧ ಗಾಯಕಿ ನೆನಪಾದರು. ಬ್ರಹ್ಮಾವರ ಸಿಕ್ಕಿತು. ಸದಾಶಿವ ಎಂಬ ಉತ್ತಮ ನಟರ ನೆನಪಾಯಿತು. ಕುಮಟಾ ಸಿಕ್ಕಿತು, ಖ್ಯಾತ ನಟಿ ಪದ್ಮ ನೆನಪಾದರು. ಪುತ್ತೂರು, ಗಾಯಕ ನರಸಿಂಹನಾಯಕರನ್ನು ನೆನಪಿಸಿತು. ಗೋಕರ್ಣದಿಂದ ವಾಪಸ್ಸು ನಾವು ಬರಬೇಕಾದರೆ ಕೋಟ ಸಿಕ್ಕಿತು; ಶಿವರಾಮ ಕಾರಂತರ ಊರು. ಮುಂದೆ ಕಮಲಶಿಲೆಗೆ ಹೊರಟೆವು.

ಕಮಲಶಿಲೆಯಲ್ಲಿ ಪೂರ್ಣಿಮಾ ಕಮಲಶಿಲೆ ಎಂಬ ಲೇಖಕಿ ನೆನಪಾದರು. ನಂತರ ಶಂಕರನಾರಾಯಣ ಸಿಕ್ಕಿತು. ವಿದ್ಯಾಭೂಷಣರು ಹಾಡಿದ, 'ಯಾವ ನಿಧಿಯು ಮಿಗಿಲೋ ಧ್ವಜಪುರ ವಾಸನ ಸನ್ನಿಧಿಗಿಂತ ನೆನಪಾಗಿ ಅದನ್ನೇ ಗುನುಗುತ್ತಾ, ಈ ದೇವಸ್ಥಾನವನ್ನು ನೋಡಲು ಹೋದೆವು. ಕಣ್ಣಿಗೆ ಹಬ್ಬ, ಮನಸ್ಸಿಗೆ ತೃಪ್ತಿ, ಆನಂದವುಂಟಾಯಿತು.

ಅಲ್ಲಿಂದ ಮುಂದೆ ಉಡುಪಿಯ ಕಡೆಗೆ ನಮ್ಮ ಪಯಣ. ಕೇವಲ ಕೆಲವೇ ನಿಮಿಷಗಳಲ್ಲಿ ಹಾಲಾಡಿ ಸಿಕ್ಕಿಬಿಡಬೇಕೆ? ಲೇಖಕ ಶಶಿಧರ ಹಾಲಾಡಿ ಅವರ ಊರು ಬಂತು ಅಂತ ಮಾತನಾಡಿಕೊಂಡೆವು. ಕಳೆದ ಬಾರಿ ಹಾಲಾಡಿ ಅಂತ ಬೋರ್ಡು ಓದಿಕೊಂಡು ಹೋಗಿದ್ದೆವು. ಈಗ ಇಳಿಯೋಣ ಅಂದುಕೊಳ್ಳುತ್ತಲೇ ನೆನಪಾಯಿತು, 'ಹಾಲಾಡಿಯ ದೋಸೆ ಹೋಟೆಲ್!' ಶಶಿಧರ ಹಾಲಾಡಿಯವರು ಇದರ ಬಗ್ಗೆ ಒಂದು ಲೇಖನವನ್ನೇ ಬರೆದಿದ್ದರು. ನಾವೂ ಈ ಹೋಟೆಲ್‌ನಲ್ಲಿ ದೋಸೆ ತಿನ್ನಲೇಬೇಕೆಂದು ನಿರ್ಧರಿಸಿ ಇಳಿದೆವು.

ಹಾಲಾಡಿಯ ಪುಟ್ಟ ಹೊಟೇಲ್, ಗುರು ಕ್ಯಾಂಟೀನ್ ಮುಂದೆ ಇಳಿದು, ಮೊದಲು ಸಾಕ್ಷಿಗೆ ಒಂದು ಫೋಟೋ ತೆಗೆಸಿಕೊಂಡೆವು. ಒಳಗೆ ಹೋಗಿ ನೋಡುತ್ತೇವೆ......ಈಷ್ಟುದ್ದ ಕ್ಯೂ ಇದೆ. ಇಲ್ಲಿ ಮಧ್ಯಾಹ್ನ ಮೂರರಿಂದ ಸಂಜೆ ಏಳು ಗಂಟೆಯ ತನಕ ಮಾತ್ರ ಬೆಣ್ಣೆ ಮಸಾಲೆ ಲಭ್ಯ; ಆದ್ದರಿಂದಲೇ ಕ್ಯೂ! ಅರ್ಧ ಗಂಟೆ ಕಾದ ಮೇಲೆ ಬೆಣ್ಣೆ ಹಾಕಿದ, ಗರಿಗರಿಯಾಗಿ ಕಾಯಿಸಿದ ದೋಸೆಗಳು ಸಿಕ್ಕವು. ಘಮಘಮಿಸುವ ದೋಸೆಯನ್ನು ತಿಂದರೆ ಎಲ್ಲಿ ಖಾಲಿಯಾಗಿಬಿಡುವುದೋ ಎಂಬ ದೂರದೃಷ್ಟಿಯಿಂದ, ನಿಧಾನವಾಗಿ ತಿನ್ನತೊಡಗಿದೆವು.

ಬೆಣ್ಣೆ ಹಾಕಿದ ಬಣ್ಣದ ದೋಸೆ

ನನಗೆ ಅದೆಷ್ಟು ಆಶ್ಚರ್ಯವಾಯಿತೆಂದರೆ, ಎಲ್ಲರ ತಟ್ಟೆಯಲ್ಲಿದ್ದ ದೋಸೆಗಳ ಬಣ್ಣವೂ ಕಿತ್ತಳೆ ಬಣ್ಣದ ಸಮವಸ್ತ್ರ ಧರಿಸಿದ್ದವು. ಒಂದೇ ಒಂದು ದೋಸೆ ಬಣ್ಣವೂ ಕಪ್ಪಾಗಲೀ, ಬೆಳ್ಳಗಾಗಲೀ ಇರಲಿಲ್ಲ. ಬಿಳಿಯ ಅಡಿಕೆ ಹಾಳೆಯ ಪ್ಲೇಟಿನಲ್ಲಿ, ಕೇಸರಿ ಬಣ್ಣದ ತ್ರಿಕೋನಾಕಾರದ ಫ್ರಾಕು ಧರಿಸಿಕೊಂಡು, ಮೇಲೆ ಬಿಳಿಯ ನವನೀತದ ಅಲಂಕಾರ ಮಾಡಿಕೊಂಡು, ಪಕ್ಕದಲ್ಲೊಂದಿಷ್ಟು ಗಟ್ಟಿಚಟ್ನಿಯ ಚೀಲ ಹಿಡಿದು, ಒಳಗೆ ಹಳದಿ ಬಣ್ಣದ ಆಲೂಗೆಡ್ಡೆಯ ಪಲ್ಯ ತುಂಬಿಕೊಂಡು ನೋಡಲೆರಡು ಕಣ್ಣು ಸಾಲದಂತೆ ನಮ್ಮ ಮುಂದೆ ಬಂದು ಕುಳಿತವು. ಈ ಕೊನೆಯಿಂದ ಆ ಕೊನೆಯವರೆಗೂ ಒಂದೇ ರೀತಿಯಲ್ಲಿ ಕಾಣುತ್ತಿದ್ದ ದೋಸೆಗಳನ್ನು ನೋಡಿ ನನಗಂತೂ ನಿಜಕ್ಕೂ ಆಶ್ಚರ್ಯವಾಯಿತು. ಎರಡು ನಿಮಿಷ ಅದರ ಸೌಂದರ್ಯವನ್ನು ನಾವೆಲ್ಲ ಕಣ್ಣಲ್ಲೇ ಸವಿದೆವು. ಬಿಸಿ ಆರಿ ತಣ್ಣಗಾಗಿಬಿಟ್ಟರೆ ಎಂಬ ಭಯದಿಂದ

ತಿನ್ನಲು ಶುರು ಹಚ್ಚಿಕೊಂಡೆವು. ಮಕ್ಕಳು ಇನ್ನೊಂದೊಂದು ಬೇಕು ಎಂದವು. ಅದಕ್ಕಾಗಿ ಇನ್ನೊಂದು ಗಂಟೆ ಕಾಯಲು ನಾವು ತಯಾರಿಲ್ಲ ಎಂದು ಕಾಫಿ ಕುಡಿದು ಆಚೆ ಬಂದೆವು. ನಮಗೆ ಮೊದಲು 'ನಿಜವಾದ ಕಾಫಿ ಬೇಕಿತ್ತು! ಅದು ಇಲ್ಲಿ ಸಿಕ್ಕಿತು!' ಕುಡಿದೆವು. ದೋಸೆ-ಕಾಫಿ ಯಾವತ್ತಿಗೂ ಎಂಥಾ ಕಾಂಬಿನೇಷನ್ ಅಲ್ವಾ? ಪ್ರಯಾಣದಲ್ಲಿ ಒಮ್ಮೊಮ್ಮೆ ಸರಿಯಾಗಿ ಊಟ ತಿಂಡಿ ಸಿಗುವುದಿಲ್ಲ. ಹೀಗೆ ಮಾರ್ಗ ಮಧ್ಯದಲ್ಲೊಂದು ಹೋಟೆಲ್ ಸಿಕ್ಕರೆ ಆನಂದವೋ ಆನಂದ!

ಹೋಟೆಲ್ ಮಾಲೀಕರನ್ನು (ಗರಿ ಗರಿ ದೋಸೆಯನ್ನು ಕಾಯಿಸುವುದು ಅವರೇ) ಮತ್ತು ಅವರ ಪತ್ನಿ ಸುಮ ಅವರನ್ನೂ ಮಾತನಾಡಿಸಿ, ಪ್ರೀತಿಯಿಂದ ಮೆಚ್ಚುಗೆ ಸೂಚಿಸಿ ಹೊರಬಂದಾಗ, ನಮ್ಮೆಲ್ಲರ ಕಣ್ಣಲ್ಲೂ ಸಂತೃಪ್ತ ಭಾವ! ತಿಂಡಿಪೋತರಿಗೆ, ಒಳ್ಳೊಳ್ಳೆಯ ಹೋಟೆಲ್ ಹುಡುಕಿ ಹೋಗುವವರಿಗೆ, ಹಾಲಾಡಿಯ ಗುರು ಕ್ಯಾಂಟೀನ್‌ನಲ್ಲಿ ಹಬ್ಬ ಕಾದಿರುತ್ತದೆ.

ಕರ್ಕಶ ಕೂಗೇ ಇವುಗಳ ಶಕ್ತಿ!

» ಶಶಿಧರಸ್ವಾಮಿ ಆರ್. ಹಿರೇಮಠ

ಕಾಕೋಳ ಗ್ರಾಮದ ವೆಂಕಟಾಪುರ ಹಾಡಿಯ ಹೊರ ವಲಯದ ಕುರುಚಲು ಕಾಡಂಚಿನ ಹೊಲದ ಅಂಚು; ಬೇಸಿಗೆಯ ದಾಹ ತಣಿಯಲು ಹಕ್ಕಿಗಳ ಗುಂಪು ಇಲ್ಲಿ ಸೇರುತ್ತವೆ. ನಾನು, ಚಂದ್ರು, ಮಾಲತೇಶ ಬಡಿಗೇರ ಅವುಗಳ ಫೋಟೋಗ್ರಫಿಗೆಂದು ಹತ್ತಿರದ ಪೊದೆಯಲ್ಲಿ ಅವಿತು ಕುಳಿತೆವು. ಸಮಯ ಜಾರುತ್ತಿತ್ತು.

ಕ್ಯಾ.. ಕ್ಯಾ ಕ್ಯಾ ಎಂಬ ಎತ್ತರದ ಧ್ವನಿಯ ಕರ್ಕಶ ಕೂಗು ಕೇಳಿಸಿತು. ಇದು ಬೂದು ಹರಟೆ ಮಲ್ಲ ಹಕ್ಕಿಯ ಕೂಗು, ನಾವು ಕ್ಯಾಮೆರಾ ಹಿಡಿದು ಸಿದ್ಧರಾಗಿ ಅತ್ತ ಬರುವ ಹಕ್ಕಿಗಳಿಗಾಗಿ ನೋಟ ಹರಿಸತೊಡಗಿದೆವು.

ದಂಪತಿ ಹಕ್ಕಿಗಳೆರಡು ಎದುರಿಗಿದ್ದ ಒಣಗಿದ ಟೊಂಗೆಯ ಮೇಲೆ ಬಂದು ಆಸೀನವಾದವು; ಏನೋ ಗಾಬರಿಗೊಂಡಂತೆ ಆ ಹಕ್ಕಿಗಳೆರಡೂ ಅಲ್ಲಿಂದ ಹಾರಿದವು, ಒಂದೇ ಒಂದು ಫೋಟೋ ಕ್ಲಿಕ್ಕಿಸಿದನಲ್ಲಾ ಎಂದು ಬೇಜಾರಿನಲ್ಲಿದ್ದವನಿಗೆ ಹತ್ತಿರದಲ್ಲಿದ್ದ ಒಣಗಿದ ಬಡ್ಡೆಯ ಮೇಲೆ ಬೂದು ಹರಟೆ ಮಲ್ಲ ಹಕ್ಕಿ ಬಂದು ಕುತು ಬಿಡೋದೆ! ತಕ್ಷಣವೇ ಫೋಟೊ ಕ್ಲಿಕ್ಕಿಸತೊಡಗಿದೆ. ಅದೇಕೋ, ಅತ್ತಣ ಗುಂಪಿನಿಂದ ಬೂದು ಹರಟೆ ಮಲ್ಲ ಹಕ್ಕಿಗಳ ಕೂಗು ಜೋರಾಗಿತು, ತಕ್ಷಣವೇ ಆ ಹಕ್ಕಿಯು ಅಲ್ಲಿಂದ ಹಾರಿ ಗುಂಪಿನ ಗೆಳೆಯರನ್ನು ಸೇರಿಕೊಂಡಿತು.

ಬೂದು ಹರಟೆ ಮಲ್ಲ ಹಕ್ಕಿಗಳನ್ನು, ತರಗೆಲೆ ಹಕ್ಕಿ, ದೊಡ್ಡ ಬೂದು ಗೀಜುಗಾರ್ಲು ಹಕ್ಕಿ, ಗೊಂಗ್ಯ ಎಂತೆಲ್ಲಾ ಕರೆಯುತ್ತಾರೆ. ಕಾಯಾಪಿಲ್ಲಾ ಎಂದು ಲಂಬಾಣಿ ಭಾಷೆಯಲ್ಲಿ ಕರೆದರೆ, ಗೆಜ್ಜಳಬಾಯ ಎಂದು ಕೊಡವರು ಕರೆಯುತ್ತಾರೆ. ಇಂಗ್ಲೀಷನಲ್ಲಿ ಲಾರ್ಜ್ ಗ್ರೇ ಬ್ಯಾಬ್ಲರ್ ಎಂದು ಕರೆದಿದ್ದಾರೆ.

ಗೊರವಂಕಕ್ಕಿಂತ ದೊಡ್ಡ, 28 ಸೆಂ.ಮಿ ಗಾತ್ರದ ಬೂದು ಮಿಶ್ರಿತ ತಿಳಿಗಂದು ವರ್ಣದ ಹಕ್ಕಿ, ಉದ್ದವಾದ ಕಂದು ವರ್ಣದ ಬಾಲ ಅದನ್ನು ಅಗಲಿಸಿದಾಗ ಬಿಳಿ ಅಂಚು ಸ್ಪಷ್ಟವಾಗಿ ಕಾಣುವದು, ಹಳದಿ ಕಣ್ಣು ಹಾಗೂ ಹಳದಿ ಕೊಕ್ಕನ್ನು ಹೊಂದಿದೆ. ವರ್ಣಿಸಲು ಹೊರಟರೆ, ಇದೇನೂ ಬಹು ಸುಂದರ ಪಕ್ಷಿ ಅಲ್ಲ; ಬಣ್ಣಗಳ ವೈವಿಧ್ಯ ಇಲ್ಲ. ತಮ್ಮ ಕರ್ಕಶ ಕೂಗಿನಿಂದಲೇ ಹೆಚ್ಚು ಪ್ರಸಿದ್ಧ. ಬಂಡೆ ಪ್ರದೇಶ, ಕುರುಚಲು ಕಾಡುಗಳ ಮರಗಳಲ್ಲಿ. ಅರಣ್ಯದಂಚಿನ ಪ್ರದೇಶಗಳಲ್ಲಿ ಸಣ್ಣ

ಗುಂಪುಗಳಲ್ಲಿ ಕಂಡುಬರುತ್ತದೆ.

ದೊಡ್ಡ ದನಿಯಲ್ಲಿ ಜೋರಾಗಿ ಕೂಗುವುದರ ಮೂಲಕ, ಪರಸ್ಪರ ಸಂಪರ್ಕದಲ್ಲಿರುತ್ತವೆ ಮತ್ತು ಒಗ್ಗಟ್ಟನ್ನು ಕಾಪಾಡಿಕೊಳ್ಳುತ್ತವೆ. ಆದ್ದರಿಂದ, ಇವುಗಳ ದೊಡ್ಡ ದನಿಯೇ ಇವುಗಳ ಶಕ್ತಿ ಎನ್ನಬಹುದು! ಇವುಗಳ ಗಲಾಟೆಯನ್ನು ಕೇಳಿದರೆ ಬಾಯಿ ಇದ್ದವನು ಗೆದ್ದ ಎಂಬ ನಾಣ್ಣುಡಿ ನೆನಪಾಗುತ್ತದೆ. ಗುಂಪಿನ ಸದಸ್ಯರು ಪರಭಕ್ಷಕಗಳಿಂದ ರಕ್ಷಿಸಿಕೊಳ್ಳಲು ಗುಂಪಾಗಿ ಸೇರುತ್ತವೆ. ಇವು ಹೆಚ್ಚಾಗಿ ತೆರೆದ ಪೊದೆ ಸಸ್ಯ ಪ್ರದೇಶಗಳಲ್ಲಿ ಕಂಡುಬರುತ್ತವೆ, ಅಲ್ಲಿ ಅವು ನೆಲದ ಮೇಲೆ ಅಥವಾ ಹತ್ತಿರದಲ್ಲಿ ಕೀಟಗಳನ್ನು ಹುಡುಕುತ್ತವೆ.

ಹೂವಿನ ಮಕರಂದ, ಹಣ್ಣು, ಬೀಜ ಹಾಗೂ ಕೀಟಗಳನ್ನು ಆಹಾರವಾಗಿ ಭಕ್ಷಿಸುತ್ತವೆ. ಸಂತಾನೋತ್ಪತ್ತಿಯು ನಿರ್ದಿಷ್ಟ ಕಾಲಮಿತಿ ಇಲ್ಲ, ವರ್ಷವಿಡೀ ಸಂತಾನೋತ್ಪತ್ತಿ ಮಾಡುತ್ತವೆ. ಮರದ ಟೊಂಗೆಗಳ ಕವಲುಗಳ ಮದ್ಯ ಬೇರು ಹುಲ್ಲು ಕಡ್ಡಿಗಳಿಂದ ಕೂಡಿದ ಬಟ್ಟಲಿನಾಕಾರದ ಗೂಡನ್ನು ಕಟ್ಟಿ 3-4 ನೀಲಿ ವರ್ಣದ ಮೊಟ್ಟೆಗಳನ್ನಿಟ್ಟು ಮರಿ ಮಾಡಿಸುತ್ತವೆ. ಅವುಗಳ ಗೂಡನ್ನು ಚಾತಕ ಪಕ್ಷಿ ಮತ್ತು ಕೋಗಿಲೆ ಚಾಣ ಹಕ್ಕಿಗಳು ತಮ್ಮ ಸ್ವಾರ್ಥಕ್ಕೆ ಉಪಯೋಗಿಸಿಕೊಳ್ಳುವುದುಂಟು! ಹರಟೆ ಮಲ್ಲ ಹಕ್ಕಿಯ ಗೂಡಿನಲ್ಲಿ ತಮ್ಮ ಮೊಟ್ಟೆಗಳನ್ನಿಟ್ಟು, ಮರಿ ಮಾಡಿಸಿಕೊಳ್ಳುವ ಇಂತಹದೊಂದು ಪ್ರಕ್ರಿಯೆ, ಪಕ್ಷಿಲೋಕದ ಇನ್ನೊಂದು ವಿಸ್ಮಯ!

ಬಡ ಮಕ್ಕಳನ್ನು ಮನೆಯಲ್ಲಿಟ್ಟುಕೊಂಡು ಸಾಕಬಹುದೇ?

Ask the Editor

• ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ವಾಣಿ ಪೈ, (ಇಮೇಲ್ ಮೂಲಕ)

- **ಭಟ್ರೇ, ನಮ್ಮ ಯಜಮಾನರು ಹೈಸ್ಕೂಲು ಮೇಷ್ಟ್ರು. ನಮಗೆ ಒಬ್ಬ ಮಗ. ನಮ್ಮ ಯಜಮಾನರು ನಮ್ಮ ಮನೆಯಲ್ಲಿ ಮೂವರು ಬಡಮಕ್ಕಳನ್ನು ಇಟ್ಟುಕೊಂಡು ಸಾಕುತ್ತಿದ್ದಾರೆ. ಅವರು ವಿದ್ಯಾಭ್ಯಾಸ ಮುಗಿಸಿ ಹೋಗುತ್ತಿದ್ದಂತೆ ಮತ್ತೆ ಬೇರೆಯವರನ್ನು ಕರೆದುಕೊಂಡು ಬರುತ್ತಾರೆ. ನನಗೆ ಇದು ಇಷ್ಟವಿಲ್ಲ. ಈ ವಿಷಯದ ಬಗ್ಗೆ ನಮ್ಮ ಮಧ್ಯೆ ಆಗಾಗ ಸಣ್ಣ-ಪುಟ್ಟ ಜಗಳ ಆಗುತ್ತಿರುತ್ತದೆ. ಬೇರೆಯವರ ಮನೆ ಮಕ್ಕಳನ್ನು ಸಾಕುವ ಅವರ ಈ ಸ್ವಭಾವವನ್ನು ನಿಲ್ಲಿಸುವುದು ಹೇಗೆ?**

-ವಾಣಿ ಅವರೇ, ನಿಮ್ಮ ಯಜಮಾನರು ನಿಜಕ್ಕೂ ಒಳ್ಳೆಯ ಕೆಲಸವನ್ನು ಮಾಡುತ್ತಿದ್ದಾರೆ. ಬಡ ಮಕ್ಕಳನ್ನು ತಮ್ಮ ಮಕ್ಕಳಂತೆ ಮನೆಯಲ್ಲಿ ಇಟ್ಟುಕೊಂಡು ಸಾಕಿ ಸಲಹುತ್ತಿರುವುದು ಶ್ಲಾಘನೀಯ. ಇದರಿಂದ ನಿಮಗೆ ತುಸು ತೊಂದರೆ ಆಗಿರಬಹುದು. ನಿಮ್ಮ ಮಗನ ಜತೆ ಆ ಬಡ ಮಕ್ಕಳನ್ನು ನೋಡಿಕೊಳ್ಳುವುದು ನಿಮಗೆ ಹೆಚ್ಚುವರಿ ಕೆಲಸವೇ. ಆದರೆ ನಿಮ್ಮ ಯಜಮಾನರ ಕಾಳಜಿ ಮತ್ತು ಕಳಕಳಿಯನ್ನು ಅರ್ಥ ಮಾಡಿಕೊಳ್ಳಿ. ಹೈಸ್ಕೂಲು ಮೇಷ್ಟ್ರಾಗಿದ್ದರೂ, ತಮ್ಮ ಸಂಪಾದನೆಯಲ್ಲಿ ಆ ಬಡ ಮಕ್ಕಳನ್ನು ತಮ್ಮ ಮನೆಯಲ್ಲಿ ಇರಿಸಿಕೊಂಡು ಅವರ ಊಟ-ತಿಂಡಿ, ಖರ್ಚುಗಳನ್ನು ನಿಭಾಯಿಸಿಕೊಂಡು ಅವರನ್ನು ಸಲಹುತ್ತಿದ್ದಾರೆಂದರೆ ಅದು ನಿಜಕ್ಕೂ ಅಸಾಮಾನ್ಯವೇ ಸರಿ.

ನಿಮ್ಮ ಯಜಮಾನರ ಈ ಧೋರಣೆಯನ್ನು ನೀವು ಪ್ರೀತಿಯಿಂದ ಬೆಂಬಲಿಸಬೇಕು. ಈ ರೀತಿ ಮನೋಭಾವದವರು ಈ ದಿನಗಳಲ್ಲಿ ಸಿಗುವುದು ತೀರ ಅಪರೂಪ. ಇದರಿಂದ ನಿಮ್ಮ ಮಗನಿಗೂ ಒಳ್ಳೆಯ ಜತೆಗಾರರು ಸಿಕ್ಕಂತಾಗುತ್ತದೆ. ನಿಮ್ಮ ಮಗ ಏಕಾಂಗಿಯಾಗಿ ಬೆಳೆಯುವ ಬದಲು ಆ ಬಡ ಮಕ್ಕಳ ಜತೆಗೆ ಬೆಳೆಯುವಂತಾಗುತ್ತದೆ. ಆತನಿಗೆ ಸಿಗುವ ಸಂಸ್ಕಾರ ಹಾಗೂ ಶಿಕ್ಷಣ ಯಾವ ಶಾಲೆಯಲ್ಲೂ ಸಿಗಲು ಸಾಧ್ಯವಿಲ್ಲ. ಬಡ ಮಕ್ಕಳ ಕಷ್ಟ ಮತ್ತು ಆಂತರ್ಯ ಏನು ಎಂಬುದು ಆತನಿಗೆ ಅರಿವಾಗುತ್ತದೆ. ತನ್ನ ತಂದೆಯ ಉದಾತ್ತ ಗುಣಗಳಿಂದ ಆತ ಉತ್ತಮ ಪ್ರೇರಣೆಯನ್ನು ಪಡೆಯುತ್ತಾನೆ. ಮನೆಯಲ್ಲಿ ಇವರೆಲ್ಲರ ಉಪಚಾರ ಮಾಡುವುದು ನಿಮಗೆ ಸ್ವಲ್ಪ ಕಷ್ಟವಾಗಬಹುದು. ಆದರೂ ನೀವು ಇದನ್ನು ಸಹಿಸಿಕೊಳ್ಳಬೇಕು. ತ್ಯಾಗದಲ್ಲಿ ಯಾವತ್ತೂ ಉತ್ತಮವಾದ ಫಲವಿದೆ.

ಕೇಂದ್ರ ಮಂತ್ರಿಯಾಗಿದ್ದ ದಿವಂಗತ ಜಾರ್ಜ್ ಫರ್ನಾಂಡಿಸ್ ಅವರು ಒಂದು ಮಾತನ್ನು ಹೇಳುತ್ತಿದ್ದರು-'ನಮಗೆ ಸಾಧ್ಯವಾದಾಗಲೆಲ್ಲ ಇತರರಿಗೆ ಎಷ್ಟು ಸಾಧ್ಯವೋ ಅಷ್ಟು ಸಹಾಯ ಮಾಡಬೇಕು' ಎಂದು. ತಮ್ಮ ಮನೆಯಲ್ಲೂ ಕಾಲೇಜಿಗೆ ಹೋಗುವ ಹತ್ತಾರು ಮಕ್ಕಳನ್ನು ಅವರು ಇಟ್ಟುಕೊಂಡಿದ್ದರು. ಕೇಂದ್ರ ರಕ್ಷಣಾ ಸಚಿವರಾಗಿದ್ದಾಗಲೂ ಅವರ ಮನೆ ವಿದ್ಯಾರ್ಥಿಗಳ ಹಾಸ್ಟೆಲ್ ಆಗಿತ್ತು. ಒಂದು ಸಂದರ್ಭದಲ್ಲಿ ಅವರ ಮನೆಯಲ್ಲಿ ಐವತ್ತಕ್ಕೂ ಹೆಚ್ಚು ವಿದ್ಯಾರ್ಥಿಗಳು ವಾಸಿಸುತ್ತಿದ್ದರು.

ನಿಮ್ಮ ಯಜಮಾನರ ದೆಸೆಯಿಂದಾಗಿ ನಿಮಗೆ ಆ ಬಡ ಮಕ್ಕಳ ಸೇವೆ ಮಾಡುವ ಒಂದು ಅಪೂರ್ವ ಅವಕಾಶ ಸಿಕ್ಕಿದೆ ಎಂದು ನೀವು ಭಾವಿಸಿದ್ದೇ ಆದರೆ, ನಿಮ್ಮ ಎಲ್ಲ ಕಷ್ಟ-ಕಾರ್ಪಣ್ಯಗಳು ನಿವಾರಣೆಯಾಗಿ ಅದೊಂದು ಅತ್ಯುತ್ತಮವಾದ ಕೆಲಸ ಎಂದು ಅನಿಸಲಾರಂಭಿಸುತ್ತದೆ. ನೀವು ಮಾಡಬೇಕಾಗಿರುವುದು ಏನೆಂದರೆ ನಿಮ್ಮ ಧೋರಣೆಯನ್ನು ಸ್ವಲ್ಪ ಬದಲಿಸಿಕೊಳ್ಳುವುದು. ನಿಮ್ಮ ಮನೆಯಲ್ಲಿ ಓದಿದ ಆ ಬಡ ಮಕ್ಕಳು ದೊಡ್ಡವರಾಗಿ, ಮುಂದೆ ತಮ್ಮ ಜೀವನದಲ್ಲಿ ಉನ್ನತ ಹುದ್ದೆಗೇರಿದರೆ ಅದರಿಂದ ನಿಮಗೆ ಸಿಗುವ ಸಮಾಧಾನ ಅಷ್ಟಿಷ್ಟಲ್ಲ. ಅವರು ಕೂಡ ಯಾವಜ್ಜೀವ ನಿಮಗೆ ಉಪಕೃತರಾಗಿರುತ್ತಾರೆ.

ಆದ್ದರಿಂದ ನೀವು ಯಜಮಾನರಿಗೆ ಸಹಕರಿಸಿದರೆ, ನೀವು ಮಾಡುವ ಕೆಲಸದಲ್ಲಿ ಇನ್ನಷ್ಟು ತೃಪ್ತಿ ಮತ್ತು ನೆಮ್ಮದಿ ಸಿಗುತ್ತದೆ. ಯಾವ ಕಾರಣಕ್ಕೂ ನಿಮ್ಮ ಮನೆಯಲ್ಲಿರುವ ಬಡ ಮಕ್ಕಳನ್ನು ಉಪೇಕ್ಷೆ ಮಾಡಬೇಡಿ. ದೇವರು ಆ ಮಕ್ಕಳ ಸ್ವರೂಪದಲ್ಲಿ ಬಂದು ನಿಮ್ಮ ಮನೆಯಲ್ಲಿ ನೆಲೆಸಿದ್ದಾನೆ ಎಂದು ಭಾವಿಸಿದರೆ ನೀವು ಮಾಡುವ ಕೆಲಸ ದೇವತಾ ಕೆಲಸ ಎಂದೆನಿಸಿಕೊಳ್ಳುತ್ತದೆ. ನಿಮಗೆ ಆ ಬಡಮಕ್ಕಳನ್ನು ನೋಡಿಕೊಳ್ಳುವ ಒಂದು ಅವಕಾಶ ಸಿಕ್ಕಿದೆ ಎಂದು ಭಾವಿಸಿ. ಆಗ ನೀವು ಎಂಥ ಪವಿತ್ರ ಕಾರ್ಯ ಮಾಡುತ್ತಿದ್ದೀರಿ ಎಂಬುದು ಅರಿವಾಗುತ್ತದೆ. ನಿಮಗೆ ಒಳ್ಳೆಯದಾಗಲಿ.

ವೀಣಾ ಸಾಗರ, ಬೆಂಗಳೂರು

- **ಸಂಪಾದಕರೇ, ನಾನು ಇಂಗ್ಲಿಷಿನಲ್ಲಿ ಸ್ವಲ್ಪ ವೀಕು. ಹೀಗಾಗಿ ಕನ್ನಡ ಪತ್ರಕರ್ತೆ ಆಗಬೇಕು ಎಂದು ನಿರ್ಧರಿಸಿದ್ದೇನೆ. ಈ ಕುರಿತು ನಿಮ್ಮ ಅಭಿಪ್ರಾಯ ಏನು?**

-ವೀಣಾ ಅವರೇ, ನಿಮ್ಮ ಇಂಗ್ಲಿಷ್ ಭಾಷಾ ಜ್ಞಾನ ಸ್ವಲ್ಪ ತುಟ್ಟಿ ಎಂದು ಹೇಳಿದ್ದೀರಿ. ಅದು ಬಹಳ ದೊಡ್ಡ ಸಮಸ್ಯೆ ಅಲ್ಲ. ನೀವು ಮನಸ್ಸು ಮಾಡಿದರೆ ಆರು ತಿಂಗಳಲ್ಲಿ ನಿಮ್ಮ ಇಂಗ್ಲಿಷ್ ಭಾಷಾ ಪ್ರೌಢಿಮೆಯನ್ನು ಜಾಸ್ತಿ ಮಾಡಿಕೊಳ್ಳಬಹುದು. ಪ್ರತಿ ದಿವಸ ಎರಡು ಗಂಟೆಗಳ ಕಾಲ, ಎರಡು ಇಂಗ್ಲಿಷ್ ಪತ್ರಿಕೆ ಹಾಗೂ ಒಂದು ಇಂಗ್ಲಿಷ್ ಪುಸ್ತಕ (ಕಾದಂಬರಿ)ಯನ್ನು ಪಕ್ಕದಲ್ಲಿ ಇಂಗ್ಲಿಷ್ - ಕನ್ನಡ ನಿಘಂಟನ್ನು ಇಟ್ಟುಕೊಂಡು ಓದಿದರೆ, ಖಂಡಿತವಾಗಿಯೂ ನೀವು ಆ ಅವಧಿಯಲ್ಲಿ ಇಂಗ್ಲಿಷ್ ಮೇಲೆ ಸಾಕಷ್ಟು ಹಿಡಿತವನ್ನು ಸಾಧಿಸಬಹುದು.

ಇಂಗ್ಲಿಷ್ ಕಬ್ಬಿಣದ ಕಡಲೆ ಅಲ್ಲ. ಯಾರು ಬೇಕಾದರೂ ಆ ಭಾಷೆಯ ಮೇಲೆ ಪ್ರಭುತ್ವ ಸಾಧಿಸಿಕೊಳ್ಳಬಹುದು. ಈ ದಿನಗಳಲ್ಲಿ ಇಂಗ್ಲಿಷ್ ಪರಕೀಯ ಭಾಷೆಯಾಗಿ ಉಳಿದಿಲ್ಲ. ಅದು ನಮ್ಮ ನಡುವಿನ ಭಾಷೆಯಾಗಿದೆ. ನಾವು ದೈನಂದಿನ ಬಳಕೆಯಲ್ಲಿ ಪ್ರಯೋಗಿಸುವ ಎಷ್ಟೋ ಪದಗಳು ಇಂಗ್ಲಿಷ್ ಪದಗಳೇ. ಸ್ವಲ್ಪಮಟ್ಟಿಗೆ ವ್ಯಾಕರಣ ಹಾಗೂ ಭಾಷಾ ಒಳರಚನೆಗಳನ್ನು ಅರ್ಥ ಮಾಡಿಕೊಂಡರೆ ಇಂಗ್ಲಿಷನ್ನು ಸುಲಭವಾಗಿ ಕಲಿಯಬಹುದು.

ಇನ್ನು ನೀವು ಕನ್ನಡ ಪತ್ರಕರ್ತೆ ಆಗಬೇಕು ಎಂದು ನಿರ್ಧರಿಸಿರುವುದರ ಬಗ್ಗೆ. ಕನ್ನಡ ಪತ್ರಕರ್ತರಾಗಲು ಇಂಗ್ಲಿಷಿನ ಜ್ಞಾನ ಇರಲೇಬೇಕು. ಯಾರಿಗೆ ಇಂಗ್ಲಿಷ್ ಭಾಷೆ ಚೆನ್ನಾಗಿ ಗೊತ್ತಿರುವುದೋ, ಅವರು ಉತ್ತಮ ಕನ್ನಡ ಪತ್ರಕರ್ತರಾಗಲು ಸಾಧ್ಯ. ನಿಮ್ಮ ಇಂಗ್ಲಿಷ್ ವೀಕ್ ಆಗಿದೆ ಎನ್ನುವ ಕಾರಣಕ್ಕೆ ನೀವು ಕನ್ನಡ ಪತ್ರಕರ್ತರಾಗಬಹುದು ಎಂದು ಯೋಚಿಸಿದ್ದರೆ ಅದು ಸರಿ ಅಲ್ಲ. ಉತ್ತಮ ಕನ್ನಡ ಪತ್ರಕರ್ತರಾಗಲು ಇಂಗ್ಲಿಷ್ ಜ್ಞಾನ ಬೇಕೇ ಬೇಕು; ಜತೆಗೆ ಕನ್ನಡದ ಜ್ಞಾನವೂ ಬೇಕು. ಪತ್ರಕರ್ತರಿಗೆ ಹೆಚ್ಚು ಹೆಚ್ಚು ಭಾಷೆ ಗೊತ್ತಿದ್ದಷ್ಟೂ ಒಳ್ಳೆಯದೇ.

ಹಾಗೆಯೇ ಒಳ್ಳೆಯ ಕನ್ನಡ ಪತ್ರಕರ್ತರಿಗೆ ಸಂಸ್ಕೃತ ಜ್ಞಾನವೂ ಬಹಳ ಮುಖ್ಯ. ನಿಮಗೆ ಸಂಸ್ಕೃತದ ಹಿನ್ನೆಲೆ ಇದ್ದರೆ ಕನ್ನಡದಲ್ಲಿ ನೀವು ತಪ್ಪು ಮಾಡುವ ಸಾಧ್ಯತೆ ತೀರ ಕಮ್ಮಿ. ನಿಮಗೆ ಉತ್ತಮ ಕನ್ನಡ ಪತ್ರಕರ್ತರಾಗಬೇಕೆಂಬ ಆಸೆ ಇದ್ದರೆ ಸಂಸ್ಕೃತ, ಇಂಗ್ಲಿಷ್, ಹಿಂದಿ ಹಾಗೂ ಇನ್ನಿತರ ಭಾಷೆಗಳನ್ನೂ ಕಲಿಯುವ ಹಾಗೂ ತಿಳಿದುಕೊಳ್ಳುವ ಪ್ರಯತ್ನವನ್ನು ಮಾಡಿ. ಆಗ ನೀವು ಯಶಸ್ವಿ ಕನ್ನಡ ಪತ್ರಿಕೆ ಆಗುವುದರಲ್ಲಿ ಸಂದೇಹವೇ ಇಲ್ಲ. ಪತ್ರಕರ್ತರಿಗೆ ಭಾಷೆ ಎನ್ನುವುದು ದೊಡ್ಡ ಅಸ್ತ್ರ. ಕಾರಣ ಅವರು ವ್ಯವಹರಿಸುವುದು ಭಾಷೆಯ ಮೂಲಕವೇ.

ರೋಹನ್ ರೊಡ್ರಿಗೀಸ್, ಮೈಸೂರು

- **ಭಟ್ರೇ, ನಾನು ಎಂಎ ಓದಿದ್ದೇನೆ. ಮನೆಯಲ್ಲಿ ತಕ್ಕಮಟ್ಟಿಗಿನ ಅನುಕೂಲವಿದೆ. ನಾನೂ ಒಂದು ಪತ್ರಿಕೆ ಆರಂಭಿಸಬೇಕೆಂದಿರುವೆ. ಆ ಮೂಲಕ ನಾನೂ ಸಂಪಾದಕನಾಗಬೇಕು ಎಂಬುದು ಆಸೆ. ನನ್ನ ಆಸೆಯನ್ನು ಈಡೇರಿಸಿಕೊಳ್ಳಲು ನಾನು ಏನು ಮಾಡಬೇಕು?**

-ರೋಹನ್ ಅವರೇ, ಜೀವನದಲ್ಲಿ ಯಾರನ್ನಾದರೂ ನಮ್ಮ ಸಲಹೆಗಳಿಂದ ಸಾಯಿಸಬೇಕೆಂದಿದ್ದರೆ, ಅವರಿಗೆ 'ಪತ್ರಿಕೆಯನ್ನು ಆರಂಭಿಸು' ಎಂದು ಹೇಳಬೇಕಂತೆ. ಯಾಕೆಂದರೆ ಆ ಸಲಹೆಯನ್ನು ಪಾಲಿಸಿ ಉದ್ಧಾರವಾಗದವರು ಬೆರಳೆಣಿಕೆ ಎಷ್ಟು ಮಂದಿ ಮಾತ್ರ. ಪತ್ರಿಕೆಯನ್ನು ಆರಂಭಿಸುವುದು ಸುಲಭ. ಆದರೆ ಅದನ್ನು ನಡೆಸಿಕೊಂಡು ಹೋಗುವುದು ಅತಿ ಕಷ್ಟ. ಈ ಜಗತ್ತಿನಲ್ಲಿ ಉತ್ಪಾದನಾ ವೆಚ್ಚಕ್ಕಿಂತ ಕಡಿಮೆ ಬೆಲೆಯಲ್ಲಿ ಮಾರುವ ಒಂದು ವಸ್ತುವಿದ್ದರೆ ಅದು ಪತ್ರಿಕೆಯೊಂದೇ. ಹದಿನೈದು ರುಪಾಯಿ ಉತ್ಪಾದನಾ ವೆಚ್ಚವಿರುವ ವಸ್ತುವನ್ನು ಐದು ರುಪಾಯಿಗೆ ಮಾರಾಟ ಮಾಡುವುದನ್ನು ಎಲ್ಲಾದರೂ ಕೇಳಿದ್ದೀರಾ? ಅಂಥ ಚಮತ್ಕಾರಗಳನ್ನು ಪತ್ರಿಕಾ ಉದ್ಯಮದಲ್ಲಿ ಮಾತ್ರ ಕಾಣಲು ಸಾಧ್ಯ.

ಹೀಗಾಗಿ ಯಾರಾದರೂ ನನ್ನ ಬಳಿ ಬಂದು, 'ನಾನು ಹೊಸ ಪತ್ರಿಕೆಯನ್ನು ಆರಂಭಿಸಬೇಕೆಂದಿದ್ದೇನೆ' ಎಂದು ಹೇಳಿದರೆ, ನಾನು ಅಂಥವರ ಆಸೆಗೆ ತಣ್ಣೀರನ್ನು ಎರಚುತ್ತೇನೆ. ಪತ್ರಿಕೆ ಮಾಡಿ ಕೈಸುಟ್ಟುಕೊಂಡು, ಯಾರೂ ಹಾಳಾಗಬಾರದು ಎಂಬುದಷ್ಟೇ ನನ್ನ ಕಾಳಜಿ.

ಈ ದೇಶದಲ್ಲಿ ಯಾರು ಬೇಕಾದರೂ ರಾಜಕೀಯ ನಾಯಕ ಆಗಬಹುದು, ಶಾಸಕ, ಸಂಸದ ಆಗಬಹುದು ಹಾಗೂ ಪತ್ರಕರ್ತರೂ ಆಗಬಹುದು. ಇವೆರಡಕ್ಕೂ ಯಾವ ಡಿಗ್ರಿ ಅಥವಾ ಅರ್ಹತೆ ಬೇಕಾಗಿಲ್ಲ. ಪತ್ರಿಕೆ ನಡೆಸುವ ತಾಕತ್ತು ಹಾಗೂ ಬರವಣಿಗೆ ಗೊತ್ತಿದ್ದರೆ ಸಾಕು. ಅವೆರಡೂ ನಿಮ್ಮಲ್ಲಿಯೇ ಇರಬೇಕೆಂದೇನೂ ಇಲ್ಲ. ಬೇರೆಯವರ ಹಣ ಹಾಗೂ ಬರೆಯಲು ಬರುವವರನ್ನು ಇಟ್ಟುಕೊಂಡು ನೀವು ಕೂಡ ಪತ್ರಿಕೆಯನ್ನು ಆರಂಭಿಸಬಹುದು. ನಿಮ್ಮ ಹಣವನ್ನು ಕಳೆದುಕೊಳ್ಳುವ, ಅದನ್ನು ತಡೆದುಕೊಳ್ಳುವ ಸಾಮರ್ಥ್ಯವಿದ್ದರೆ ಪತ್ರಿಕೆಯನ್ನು ಆರಂಭಿಸಬಹುದು. ಬೇರೆಯವರ ಹಣವನ್ನು ಖರ್ಚು ಮಾಡಿಸುವ ಕಲೆಗಾರಿಕೆ ಕರಗತವಾಗಿದ್ದರೂ ಮುಂದು ವರಿಯಬಹುದು. ಬೇರೆಯವರ ಪತ್ರಿಕೆಗಳಿಗೆ ಸಂಪಾದಕನಾಗಿ ನಿಮ್ಮ ಆಸೆಯನ್ನು ಪೂರೈಸಿಕೊಳ್ಳುವುದು ಜಾಣತನ.

ನಿಮಗೆ ಏನು ಒಳ್ಳೆಯದನ್ನು ಮಾಡಲಿ.

ವಿಘ್ನೇಶ್ ವಿ., ಚಿಕ್ಕಮಗಳೂರು

- **ಭಟ್ರೇ, ಮೊನ್ನೆ ನನ್ನ ಸ್ನೇಹಿತನ ಜತೆ ಮಾತಾಡುವಾಗ ಆತ ನಿಮ್ಮನ್ನು ತೀವ್ರವಾಗಿ ಟೀಕೆ ಮಾಡಿದ. ನನಗೆ ಅದನ್ನು ಸಹಿಸಿಕೊಳ್ಳಲು ಆಗಲಿಲ್ಲ. ನಾನು ನಿಮ್ಮನ್ನು ಭೇಟಿಯಾಗದಿದ್ದರೂ, ನಿಮ್ಮ ಬರಹಗಳಿಂದಲೇ ನಿಮ್ಮ ಬಗ್ಗೆ ತಿಳಿದುಕೊಂಡವ. ನೀವು ಇಷ್ಟು ಉತ್ತಮ ವ್ಯಕ್ತಿತ್ವವನ್ನು ಹೊಂದಿದ್ದರೂ ಜನ ನಿಮ್ಮನ್ನು ಯಾಕೆ ಟೀಕಿಸುತ್ತಾರೆ ಎಂಬುದೇ ಅರ್ಥವಾಗುವುದಿಲ್ಲ. ನಿಮ್ಮನ್ನು ಟೀಕಿಸುವವರ ವಾದ ತೀರಾ ದುರ್ಬಲ ಎಂಬುದೂ ಗೊತ್ತು. ನೀವ್ಯಾಕೆ ಈ ನಿಟ್ಟಿನಲ್ಲಿ ತಲೆ ಕೆಡಿಸಿಕೊಂಡಿಲ್ಲ? ಇಂಥವರನ್ನು ನೀವು ಹೇಗೆ ನಿಭಾಯಿಸುತ್ತೀರಿ?**

-ವಿಘ್ನೇಶ್ ಅವರೇ, ನೀವು ನನ್ನ ಪರ ಉಚಿತ ವಕಾಲತ್ ವಹಿಸಿದ್ದಕ್ಕೆ ಧನ್ಯವಾದಗಳನ್ನು ಸಮರ್ಪಿಸುತ್ತೇನೆ. ನಾವು ಯಾರನ್ನು ಇಷ್ಟಪಡುತ್ತೇವೋ ಅವರು ತಪ್ಪು ಮಾಡಿದರೂ ನಮಗೆ ಅದು ಸರಿಯಾಗಿಯೇ ಕಾಣುತ್ತದೆ. ಪ್ರಾಯಶಃ ನೀವು ನನ್ನನ್ನು ಇಷ್ಟಪಡಲು ಅದೂ ಒಂದು ಕಾರಣ ಆಗಿರಬಹುದು. ಇರಲಿ.

ಬಹುತೇಕ ಸಂದರ್ಭಗಳಲ್ಲಿ ನಮ್ಮನ್ನು ಟೀಕಿಸುವವರಿಗೆ ನಾವು ಪೂರ್ತಿ ಅರ್ಥ ಆಗಿರುವುದಿಲ್ಲ ಅಥವಾ ಅವರು ತಪ್ಪಾಗಿ ನಮ್ಮನ್ನು ಅರ್ಥೈಸಿಕೊಂಡಿರುತ್ತಾರೆ. ನಮ್ಮ ಎಲ್ಲ ಅಭಿಪ್ರಾಯಗಳು ಅಥವಾ ನಿಲುವುಗಳು ಎಲ್ಲರಿಗೂ ಸರಿಯಾಗಿಯೇ ಕಾಣಬೇಕು ಎಂದೇನೂ ಇಲ್ಲ. ಹಾಗಾದಾಗ ಟೀಕೆಗಳು ಸಹಜ. ಅಂಥ ಟೀಕೆಗಳನ್ನು ನಾವು ತಪ್ಪಾಗಿ ಭಾವಿಸಬಾರದು. ನಮ್ಮನ್ನು ಒಪ್ಪಿಕೊಳ್ಳದವರನ್ನು ವೈರಿಗಳೆಂದು ಭಾವಿಸಲೂಬಾರದು. ನಾನು ಯಾವತ್ತೂ ನನ್ನ ಟೀಕಾಕಾರರನ್ನು ಗೌರವಿಸುತ್ತೇನೆ. ಯಾವುದೇ ಫೀಸನ್ನು ಪಡೆಯದೇ ನನ್ನನ್ನು ಉಚಿತವಾಗಿ ಸರಿಪಡಿಸಿದವರಿದ್ದರೆ, ಅವರು ನನ್ನ ಟೀಕಾಕಾರರು. ಟೀಕೆಗಳನ್ನು ಸಕಾರಾತ್ಮಕವಾಗಿ ಸಹಿಸಿಕೊಳ್ಳುವುದು ಮತ್ತು ಟೀಕಾಕಾರನ್ನು ಒಪ್ಪಿಕೊಳ್ಳುವುದು ನಾವು ಅಳವಡಿಸಿಕೊಳ್ಳಬಹುದಾದ ಬಹು ದೊಡ್ಡ ಸಂಸ್ಕಾರ. ಟೀಕೆ ಹಾಗೂ ವಿರೋಧಗಳನ್ನು ಸಹಿಸಿಕೊಂಡು ವ್ಯಕ್ತಿಗಳನ್ನು ಗೌರವಿಸುವುದು ಒಂದು ಉದಾತ್ತ ಗುಣ. ಆ ಗುಣವೇ ನಮ್ಮಲ್ಲಿ ಇಲ್ಲದಿದ್ದರೆ ಹಿಪೋಕ್ರೆಟ್ ಎಂದು ಕರೆಸಿಕೊಳ್ಳುತ್ತೇವೆ.

ಇನ್ನು ನನ್ನನ್ನು ಟೀಕಿಸುವ ನಿಮ್ಮ ಸ್ನೇಹಿತರ ಕುರಿತು. ಪ್ರಾಯಶಃ ಅವರಿಗೆ ನನ್ನ ಬಗ್ಗೆ ಸರಿಯಾಗಿ ಗೊತ್ತಿರಲಿಕ್ಕಿಲ್ಲ. ಗೊತ್ತಿದ್ದರೂ ನನ್ನ ಧೋರಣೆ ಅವರಿಗೆ ಸರಿ ಅನಿಸಿರಲಿಕ್ಕಿಲ್ಲ. ಹೀಗಾಗಿ ಅವರು ನನ್ನನ್ನು ಟೀಕಿಸುತ್ತಿರಬಹುದು. ಎಷ್ಟೋ ಸಂದರ್ಭಗಳಲ್ಲಿ ನಮ್ಮ ಬಗ್ಗೆ ಸ್ವಲ್ಪವೂ ಗೊತ್ತಿಲ್ಲದವರು ಅಥವಾ ಯಾರ ಬಾಯಿಂದಲೋ ಕೇಳಿ ತಮ್ಮ ಅಭಿಪ್ರಾಯಗಳನ್ನು ರೂಢಿಸಿಕೊಂಡವರು ವಿನಾಕಾರಣ ಟೀಕಿಸುತ್ತಾರೆ. ಆಗ ಅವರ ಅಜ್ಞಾನ ಅಥವಾ ಅಲ್ಪ ತಿಳಿವಳಿಕೆಗೆ ಅನುಕಂಪ ವ್ಯಕ್ತಪಡಿಸಿ ಮುಂದೆ ಸಾಗುವುದು ಒಳ್ಳೆಯದು. ಅಂಥ ವಿಷಯಗಳ ಬಗ್ಗೆ ತಲೆಕೆಡಿಸಿಕೊಂಡು ಮೂಡು ಹಾಳು ಮಾಡಿಕೊಳ್ಳುವುದರಲ್ಲಿ ಅರ್ಥವೇ ಇಲ್ಲ. ನೀವು ನಿಮ್ಮ ಸ್ನೇಹಿತರ ಮನಸ್ಸನ್ನು ಬದಲಿಸುವ ಕೆಲಸಕ್ಕೆ ಹೋಗಬೇಡಿ. ಅವರು ಯಾವುದೇ ಅಭಿಪ್ರಾಯ ತಾಳಲು ಸ್ವತಂತ್ರರು. ನಮಗೆ ಒಳ್ಳೆಯ ಸ್ನೇಹಿತರು ಇರುವ ಹಾಗೆ, ಒಳ್ಳೆಯ ಟೀಕಾಕಾರರೂ ಇರಬೇಕು. ಅಂಥವರನ್ನು ಹೊಂದುವುದು ನಮ್ಮ ಬೆಳವಣಿಗೆ ದೃಷ್ಟಿಯಿಂದ ಒಳ್ಳೆಯದೇ. ಟೀಕಾಕಾರರಿಗೆ ನಾವೇ ವಸ್ತು ಎಂದಾದಾಗ, ಅವರಿಗೆ ಟೀಕಿಸಲು ಅನುವು ಮಾಡಿಕೊಡಬೇಕು. How much easier it is to be critical than to be correct ಎಂಬ ಮಾತನ್ನು ನೀವು ಕೇಳಿರಬಹುದು.

ಜಿರಾಫೆಯನ್ನು ಆಮೆ ಟೀಕಿಸಿದರೆ, ಅದನ್ನು ತುಳಿಯಲು ಜಿರಾಫೆ ಹೋಗುವುದಿಲ್ಲ. ಆಮೆ ತನ್ನ ದೃಷ್ಟಿಯ ನೇರಕ್ಕೆ ವರದಿ ಮಾಡುತ್ತಿದೆ ಎಂದು ಭಾವಿಸಿ ಸುಮ್ಮನಾಗುತ್ತದೆ. ಆಮೆ ಎಷ್ಟೇ ತನ್ನ ಅಂಟೆನಾವನ್ನು ಎತ್ತರಿಸಿದರೂ ಜಿರಾಫೆಯ ಎತ್ತರಕ್ಕೆ ನಿಲುಕುವುದಿಲ್ಲ.

ಜೆ. ವೀರೇಂದ್ರ, ಸಿಂಪಿ, ದಾವಣಗೆರೆ

- **ಭಟ್ರೇ, ನಾನು ಎರಡನೇ ವರ್ಷದ ಡಿಗ್ರಿ ಓದುತ್ತಿದ್ದೇನೆ. ನನಗೆ ಜೋಕ್ ಪುಸ್ತಕಗಳೆಂದರೆ ಬಹಳ ಇಷ್ಟ. ಆದರೆ ನನ್ನ ಸಾಹಿತ್ಯ ಮಿತ್ರನೊಬ್ಬ, 'ಜೋಕ್ ಪುಸ್ತಕಗಳನ್ನು ಓದಬಾರದು, ಮಾರ್ಕ್ಸ್ ಸಾಹಿತ್ಯವನ್ನು ಓದಿದರೆ ಎಲ್ಲ ಸಾಹಿತ್ಯದ ಬಾಗಿಲುಗಳು ತೆರೆದುಕೊಳ್ಳುತ್ತವೆ. ನಮ್ಮ ಯೋಚನಾ ಕ್ರಮ ಬದಲಾಗುತ್ತದೆ. ಯಾವತ್ತೂ ಗಂಭೀರ ಸಾಹಿತ್ಯವನ್ನು ಓದಬೇಕು' ಇಂದು ಹೇಳುತ್ತಾನೆ. ಆತ ಹೇಳುವುದು ಸರಿಯಾ? ನಾನು ನನ್ನ ಓದಿನ ಕ್ರಮವನ್ನು ಬದಲಿಸಿಕೊಳ್ಳಬೇಕಾ?**

- ವೀರೇಂದ್ರ ಅವರೇ, ಈ ಸಂದರ್ಭದಲ್ಲಿ ನಿಮಗೆ ಯಾವ ಪುಸ್ತಕ ಇಷ್ಟವೋ ಆ ಪುಸ್ತಕವನ್ನು ಓದಿ, ಅದು ಜೋಕ್ ಪುಸ್ತಕವಾಗಿದ್ದರೂ ಪರವಾಗಿಲ್ಲ. ಜೋಕ್ ಪುಸ್ತಕಗಳನ್ನು ಓದಬಾರದು ಎಂದೇನೂ ಇಲ್ಲ. 'ನಾನು ನನ್ನ ಓದನ್ನು ಆರಂಭಿಸಿದ್ದೇ ಜೋಕ್ ಪುಸ್ತಕಗಳಿಂದ' ಎಂದು ಖ್ಯಾತ ಪತ್ರಕರ್ತ ಹಾಗೂ ಲೇಖಕ ದಿವಂಗತ ಖುಷ್ವಂತ್ ಸಿಂಗ್ ಹೇಳಿದ್ದನ್ನು ಕೇಳಿರಬಹುದು. ಭಾರತದಲ್ಲಿ ಖುಷ್ವಂತ್ ಸಿಂಗ್ ಅವರಿಗೆ ಇದ್ದಷ್ಟು ಓದುಗರು ಬೇರೆ ಯಾವ ಲೇಖಕರಿಗೂ ಇರಲಿಲ್ಲ ಎಂಬುದು ಬೇರೆ ಮಾತು. ಖುಷ್ವಂತ್ ಸಿಂಗ್ ಅವರು ಹತ್ತಕ್ಕೂ ಹೆಚ್ಚು ಜೋಕ್ ಪುಸ್ತಕಗಳನ್ನು ಬರೆದಿದ್ದೂ ಗಮನಾರ್ಹ.

ನಿಮ್ಮ ಸ್ನೇಹಿತರು ಏನೇ ಹೇಳಲಿ ನಿಮಗೆ ಇಷ್ಟವಾದ ಕೃತಿಗಳನ್ನು ಓದಿ. ನೀವು ಓದುತ್ತಾ ಓದುತ್ತಾ ಹೋದಂತೆ ನಿಮ್ಮ ಓದಿನ ಕ್ರಮವೇ ನಿಮಗೆ ಯಾವ ಪುಸ್ತಕವನ್ನು ಓದಬೇಕು ಎನ್ನುವುದನ್ನು ತಿಳಿಸಿಕೊಡುತ್ತಾ ಹೋಗುತ್ತದೆ. ಆರಂಭದಲ್ಲಿ ಕೈಗೆ ಸಿಕ್ಕಿದ ನಿಮ್ಮ ಅಭಿರುಚಿಗೆ ಅನುಗುಣವಾದ ಕೃತಿಗಳನ್ನು ಓದುವುದು ಒಳ್ಳೆಯದೇ. ಅದಾದ ನಂತರ ನಾವು ಎಂಥ ಕೃತಿಗಳನ್ನು ಓದಬೇಕು ಎನ್ನುವುದು ನಮ್ಮ ಓದಿನ ಅಭ್ಯಾಸಗುಣ ನಮಗೆ ತಿಳಿಸಿಕೊಡುತ್ತದೆ. ನಮ್ಮ ಆಸಕ್ತಿ, ಓದಿನ ಕ್ರಮ ಎಲ್ಲಿದೆ ಎಂಬುದು ನಮಗೆ ಗೊತ್ತಾಗುತ್ತದೆ. ನಮ್ಮ ಓದು ನಮ್ಮ ಕೈ ಹಿಡಿದು ನಡೆಸುತ್ತ ಹೋಗುತ್ತದೆ.

ನಿಮ್ಮ ಸ್ನೇಹಿತ ಹೇಳಿದಂತೆ, 'ಮಾರ್ಕ್ಸ್ ಸಾಹಿತ್ಯವನ್ನು ಓದಿದರೆ ಎಲ್ಲ ಸಾಹಿತ್ಯದ ಬಾಗಿಲುಗಳು ತೆರೆದುಕೊಳ್ಳುತ್ತವೆ, ನಮ್ಮ ಯೋಚನೆ ಬದಲಾಗುತ್ತದೆ ಹಾಗೂ ಯಾವತ್ತೂ ಗಂಭೀರ ಸಾಹಿತ್ಯವನ್ನು ಓದಬೇಕು' ಎಂಬುದು ಶುದ್ಧ ಬೊಗಳೆ. ಮಾರ್ಕ್ಸ್ ಸಾಹಿತ್ಯ ಒಂದನ್ನೇ ಓದಿಕೊಂಡರೆ ಎಲ್ಲಾ ಬಾಗಿಲುಗಳು ತೆರೆದುಕೊಳ್ಳುವ ಬದಲು, ಕೆಲವು ಬಾಗಿಲುಗಳು ಮುಚ್ಚಿಕೊಳ್ಳುತ್ತವೆ. ಮಾರ್ಕ್ಸ್ ಸಾಹಿತ್ಯ ಎನ್ನುವುದು ಈ ದಿನಗಳಲ್ಲಿ ಅಪ್ರಸ್ತುತ. ಹಾಗಂತ ಆ ಸಾಹಿತ್ಯವನ್ನು ಓದಬಾರದು ಎಂದು ಹೇಳುವುದಿಲ್ಲ.

ಹಾಗೆ ನೋಡಿದರೆ, ಯಾವ ಸಾಹಿತ್ಯವೂ ವರ್ಜ್ಯವಲ್ಲ. ಆದರೆ ಓದಿನ ಆರಂಭಿಕ ದಿನಗಳಲ್ಲಿ ನಮಗೆ ನಾವೇ ಗೋಡೆಗಳನ್ನು ಕಟ್ಟಿಕೊಳ್ಳುವುದು, ಸಿದ್ಧಾಂತಗಳಿಗೆ ಜೋತು ಬೀಳುವುದು ಒಳ್ಳೆಯದಲ್ಲ. ಎಲ್ಲ ಸಾಹಿತ್ಯಗಳಿಂದಲೂ ಹೀರಿಕೊಳ್ಳುವ ಉತ್ತಮ ಅಂಶಗಳು ಇದ್ದೇ ಇರುತ್ತವೆ. ಜೋಕ್ ಪುಸ್ತಕಗಳನ್ನೂ ಓದಿ, ಗಂಭೀರ ಸಾಹಿತ್ಯವನ್ನೂ ಓದಿ. ನಿಮ್ಮ ಓದು ನಿಮಗೆ ಗುರುವಾಗುತ್ತದೆ.